# THE BOOK WAS DRENCHED

## DAMAGE BOOK

UNIVERSAL LIBRARY
OU_200614
UNIVERSAL LIBRARY

*Department of Public Instruction, Mysore.*

# PADYASARA

## PART II

WITH SHORT NOTES

# ಪದ್ಯಸಾರ

ದ್ವಿತೀಯ ಭಾಗ

ಲಘುಟಿಪ್ಪಣೀ ಸಮೇತವಾದುದು

First Edition, 2,000 Copies

BANGALORE
PRINTED AT THE GOVERNMENT PRESS
1913

# ಪೀಠಿಕೆ.

---

ಜೈನ, ಬ್ರಾಹ್ಮಣ, ವೀರಶೈವ ಕವಿಗಳ ಉದ್ಗ್ರಂಥಗಳಿಂದ ಉದ್ಧೃತವಾದ ಪದ್ಯಾವಳಿಗಳುಳ್ಳ ಈ ಪದ್ಯಸಾರದ ೨ನೆಯ ಸಂಪುಟವನ್ನು, ಸಂಗ್ರಹವಾದ ಕವಿಚರಿತ್ರೆ ಮತ್ತು ಯಥೋಚಿತವಾದ ಲಘುಟಿಪ್ಪಣಿ, ಇವುಗಳೊಡನೆ ಮುದ್ರಿಸಬೇಕೆಂದು ಮೈಸೂರು ಟೆಕ್ಸ್ಟ್‌ಬುಕ್ ಕಮಿಟಿಯು ಕನ್ನಡ ಸಬ್ ಕಮಿಟಿಯವರು ನಿಶ್ಚಯಿಸಿದ ಪ್ರಕಾರ, ಈ ಆಫೀಸಿನಲ್ಲಿ ಮೊದಲು ಕನ್ನಡ ಟ್ರಾನ್ಸ್ಲೇಟರಾಗಿದ್ದ ಮ|| ರಾ|| ಎಂ. ಲಕ್ಷ್ಮೀನಾರಣಪ್ಪನವರು ಕವಿಚರಿತೆಯನ್ನೂ ಮತ್ತು ಕೆಲವು ಪದ್ಯಗಳಿಗೆ ಟಿಪ್ಪಣಿಯನ್ನೂ ಬರೆದಿದ್ದರು. ಮಿಕ್ಕ ಪದ್ಯಗಳಿಗೂ ಟಿಪ್ಪಣಿಯನ್ನು ಬರೆದು ಗ್ರಂಥಾಂತ್ಯದಲ್ಲಿ "ಪದ್ಯಸಾರಲಘುಟಿಪ್ಪಣಿ" ಯೆಂಬ ಹೆಸರಿನಿಂದ ಮುದ್ರಿಸಿದೆ. ಕವಿಚರಿತೆಯು ಮ|| ರಾ|| ಆರ್. ನರಸಿಂಹಾಚಾರ್, ಎಂ. ಎ., ಯವರಿಂದ ರಚಿತವಾದ ಕರ್ನಾಟಕಕವಿಚರಿತೆ ಮತ್ತು ಇತರ ಗ್ರಂಥಗಳ ಆಧಾರದ ಮೇಲೆ ಬರೆಯಲ್ಪಟ್ಟಿದೆ.

ಬೆಂಗಳೂರು,
13ನೇ ಮಾರ್ಚಿ 1913.

B. VENKATACHAR,
*Kan. Translator,*
*Education Dept.*

# ವಿಷಯ ಸೂಚಿಕೆ.


| | ಗ್ರಂಥನಾಮ. | | ವಿಷಯ. | | ಪುಟಸಂಖ್ಯೆ. |
|---|---|---|---|---|---|
| 1. | ಕವಿರಾಜಮಾರ್ಗ | .. | ಕರ್ಣಾಟಕಭಾಷೆ | .... | 1 |
| 2. | ಧರ್ಮನಾಥಪುರಾಣ | .. | ಕವಿತಾಪ್ರಶಂಸೆ | .... | 5 |
| 3. | ರಾಮಪಟ್ಟಾಭಿಷೇಕ | ... | ಸಮುದ್ರವರ್ಣನೆ | .... | 11 |
| 4. | ಅಜಿತನಾಥಪುರಾಣ | | ವಿಜಯಾರ್ಧಾದ್ರಿ ವರ್ಣನೆ | .... | 15 |
| 5. | ಮಲ್ಲಿನಾಥಪುರಾಣ | .. | ವೀತಶೋಕಪುರ ವರ್ಣನೆ | .... | 17 |
| 6. | ಗಿರಿಜಾಕಲ್ಯಾಣ | | ಉದ್ಯಾನ ವರ್ಣನೆ | .... | 22 |
| 7. | ಅನಂತನಾಥಪುರಾಣ | . | ಆಸ್ಥಾನ ವರ್ಣನ | .... | 26 |
| 8. | ನೇಮಿನಾಥಪುರಾಣ | .. | ಕೃಷ್ಣನ ಬಾಲಲೀಲೆ | .... | 30 |
| 9. | ಚಿಕ್ಕದೇವರಾಜವಿಜಯ | .. | ವಿದ್ಯಾಭ್ಯಾಸ | .... | 33 |
| 10 | ಕಾದಂಬರಿ (ಪೂರ್ವಭಾಗ) | .. | ಶುಕನಾಸನ ಹಿತೋಪದೇಶ | .... | 37 |
| 11. | ಕುಸುಮಾವಳಿ | ... | ಶರದೃತು ವರ್ಣನ | .... | 41 |
| 12. | ಚಿಕ್ಕದೇವರಾಜವಿಜಯ | .... | ಚಂದ್ರೋದಯ ವರ್ಣನೆ | .... | 43 |
| 13. | ಪುಷ್ಪದಂತಪುರಾಣ | ... | ಜೈತ್ರಯಾತ್ರೆ | .... | 47 |
| 14. | ನೇಮಿನಾಥಪುರಾಣ | ... | ಚಾರುದತ್ತಚರಿತ್ರಂ | .... | 52 |
| 15. | ಜಯನೃಪಕಾವ್ಯ | ... | ಕಾನನ ವರ್ಣನ | ... | 58 |
| 16. | ಪಾರ್ಶ್ವನಾಥಪುರಾಣ | .... | ಮದಗಜವರ್ಣನೆ | .... | 61 |
| 17. | ಕಮಲಾಚಲಮಾಹಾತ್ಮ್ಯ | .. | ತಪೋವನ ವರ್ಣನೆ | .... | 65 |
| 18. | ಶಬರಶಂಕರವಿಲಾಸ | .... | ಅರ್ಜುನನ ತಪಸ್ಸು | .... | 69 |
| 19. | ಗದಾಯುದ್ಧ | ... | ಗದಾಯುದ್ದ | .... | 72 |
| 20. | ವಿಕ್ರಮಾರ್ಜುನವಿಜಯ | .... | ಕರ್ಣಾರ್ಜುನ ಸಂಗ್ರಾಮ | .... | 77 |
| 21. | ಜಗನ್ನಾಥವಿಜಯ | .... | ಶಿಶುಪಾಲ ವಧೆ | .... | 82 |
| 22. | ಕುಸುಮಾವಳಿ | .... | ಹೇಮಂತ ಋತು ವರ್ಣನೆ | .... | 89 |
| 23. | ಅರ್ಧನೇಮಿಪುರಾಣ | .... | ವಾಮನಾವತಾರದ ಕಥೆ | .... | 92 |

| | ಗ್ರಂಥನಾಮ. | ವಿಷಯ. | ಪುಟಸಂಖ್ಯೆ. |
|---|---|---|---|
| 24. | ಕಬ್ಬಿಗರಕಾವ .... | ನಗರ ಪ್ರವೇಶ .... | 95 |
| 25. | ಚಂದ್ರಪ್ರಭಪುರಾಣ .... | ವಸಂತಋತು ವರ್ಣನೆ .... | 98 |
| 26. | ವರ್ಧಮಾನಪುರಾಣ .... | ವನ ವರ್ಣನೆ .... | 102 |
| 27. | ಆದಿಪುರಾಣ .... | ವನ ವಿಹಾರಂ .... | 105 |
| 28. | ಧರ್ಮಪರೀಕ್ಷೆ .... | ದಧಿಮುಖನಶಿರಂ ಪತ್ತಿದ ಕಥೆ | 110 |
| 29. | ಲೀಲಾವತಿ .... | ಘೋಷ ವರ್ಣನೆ .... | 121 |
| 30. | ಅಭಿನವಕುಮಾರಚರಿತೆ .... | ಮಾತಂಗಕನ ಇಷ್ಟಸಿದ್ಧಿ .... | 125 |
| 31. | ಶಾಂತೀಶ್ವರಪುರಾಣ .. | ಗ್ರೀಷ್ಮಋತು ವರ್ಣನೆ .... | 132 |
| 32. | ಡಿಟೋ . . | ಸೂರ್ಯೋದಯ ವರ್ಣನೆ . .. | 135 |
| 33. | ವೃಷಭೇಂದ್ರವಿಜಯ .. | ಕೋಳೂರು ಕೊಡಗೂಸಿನ ಕಥೆ ... | 138 |
| 34. | ರಾಜಶೇಖರವಿಲಾಸ . | ವರ್ಷಋತು ವರ್ಣನ .... | 144 |
| 35. | ಪಂಪರಾಮಾಯಣ .. | ಸೀತಾ ಸ್ವಯಂವರಂ .... | 149 |
| 36. | ಶಾಂತಿಪುರಾಣ .... | ಖೇಚರ ರಾಜ್ಯವೈಭವ .... | 155 |
| 37. | ಧರ್ಮಪರೀಕ್ಷೆ . . | ಅನ್ಯಮತಖಂಡನಂ .... | 159 |
| 38. | ಅರ್ಧನೇಮಿಪುರಾಣ ... | ಸರೋವರ ವರ್ಣನ .... | 162 |
| 39. | ತ್ರಿಷಷ್ಟಿ ಪುರಾತನಚಾರಿತ್ರ .... | ಮೃಗಯಾ ವರ್ಣನ .... | 164 |
| 40. | ಕಾವ್ಯರತ್ನ (ಧರ್ಮಾಮೃತ) ... | ಜಿನದತ್ತ ಕಥೆ .... | 170 |
| 41. | ಸಮಯಪರೀಕ್ಷೆ .... | ಮೌಢ್ಯವಿಡಂಬನಂ .... | 181 |
| 42. | ಪದ್ಮರಾಜಪುರಾಣ .... | ವಸಂತೋದ್ಯಾನವರ್ಣನಂ .... | 185 |
| 43. | ಯಶೋಧರಚರಿತೆ ... | ಆತ್ಮ ಸ್ವರೂಪಂ .... | 190 |
| 34. | ಜೀವಸಂಬೋಧನೆ ... | ಧರ್ಮ ಪ್ರಶಂಸೆ .... | 193 |
| 45. | ಅಜಿತನಾಥಪುರಾಣ .... | ದೇಹಾನಿತ್ಯತೆ .... | 195 |
| 46. | ಶೃಂಗಾರಸಾರ .... | ತುಂಗಭದ್ರಾನದೀ ವರ್ಣನೆ .... | 200 |

# PADYASARA.

## *PART II.*

# ಪದ್ಯಸಾರ.

## ೨ನೆಯ ಭಾಗ.

### 1. ಕರ್ಣಾಟಕಭಾಷೆ.

ನೃಪತುಂಗನು ರಾಷ್ಟ್ರಕೂಟವಂಶದ ರಾಜನು. ಈತನು 814ರಿಂದ 877ರ ವರೆಗೆ ರಾಜ್ಯಭಾರವಮಾಡಿದಂತೆ ತಿಳಿಯಬರುತ್ತದೆ. ಈಗ ಹೈದರಾಬಾದ್ ಸೀಮೆಯಲ್ಲಿರುವ ಮಾಲ್ ಖೇಡ್ ಎಂಬುದೇ ಈತನ ರಾಜಧಾನಿಯಾಗಿದ್ದಿತೆಂದು ಹೇಳುತ್ತಾರೆ. ಈತನು 62 ವರ್ಷಕಾಲ ರಾಜ್ಯವಾಳಿ ಬಳಿಕ ತಾನಾಗಿ ರಾಜ್ಯವನ್ನು ಬಿಟ್ಟುಬಿಟ್ಟಂತೆ ತಿಳಿಯಬರುತ್ತದೆ. ಈತನು ಜೈನಮತದವನು. ಈತನ ಗುರು ಜಿನಸೇನಭಟ್ಟಾರಕರು. ಈತನು ಸಂಸ್ಕೃತದಲ್ಲಿ ಪ್ರಶ್ನೋತ್ತರಮಾಲೆಯೆಂಬ ಗ್ರಂಥವನ್ನೂ ಕನ್ನಡದಲ್ಲಿ ಕವಿರಾಜಮಾರ್ಗವೆಂಬ ಲಕ್ಷಣಗ್ರಂಥವನ್ನೂ ಬರದಿದ್ದಾನೆ. ಈ ಕನ್ನಡದ ಗ್ರಂಥದಿಂದ ಕರ್ಣಾಟಕಭಾಷಾವಿಷಯವಾದ ಈ ಪದ್ಯಗಳು ಉದ್ಧೃತವಾಗಿವೆ.

ಕಂ|| ಕಾವೇರಿಯಿಂದ ಮಾಗೋ |
ದಾವರಿವರಮಿರ್ಪ ನಾಡದಾ ಕನ್ನಡದೊಳ್ ||
ಭಾವಿಸಿದ ಜನಪದಂ ವಸು |
ಧಾವಳಯವಿಲೀನವಿಶದವಿಷಯವಿಶೇಷಂ ||೧||

ಅದಱೊಳಗಂ ಕಿಸುವೊಳಲಾ |
ವಿದಿತಮಹಾಕೊಪಣನಗರದಾ ಪುರಿಗೆಱೆಯಾ ||
ಸದಭಿಸ್ತುತಮಪ್ಪೊಂಕುಂ |
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ||೨||

ಪದನಱಿದು ನುಡಿಯಲುಂ ನುಡಿ |
ದುದನಱಿದಾರಯಲುಮಾರ್ಪರಾ ನಾಡವರ್ಗಳ್ ||
ಚದುರರ್ ನಿಜದಿಂ ಕುಱಿತೋ |
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ||೩||

ಕುಱಿತವರಲ್ಲದೆ ಮತ್ತಂ |
ಪೆಱರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ||
ಕಿಱುವಕ್ಕಳುಮಾಮೂಗರು |
ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ ||೪||

ಜಾಣರ್ಕಳಲ್ಲದವರುಂ |
ಪ್ರಾಣಿಗರಱಿಯದೆಯುಮಱಿವವೋಲಿಂಗಿತಗುಣದಾ ||
ತಾಣಮನಿಸಿಸೆಡೆವತ್ತೊಡೆ |
ಮಾಣದೆ ಪಿಡಿದದನೆ ಕೃತಿಗಳಂ ಕಡೆನುಡಿವರ್ ||೫||

ಮೃಗಪಶುಶಕುನಿಗಣಂಗಳು |
ಳಗಣಿತನಿಜಜಾತಿಜಸಿತಭಾಷೆಗಳಂದುಂ ||
ನೆಗಳ್ದಿಂತಿರೆ ನರರೊಳಮ |
ಪ್ರಗಲ್ಭವಚನಪ್ರವೃತ್ತಿ ನೆಗಳ್ಗುಂ ಸಹಜಂ ||೬||

ಗುಣಮಿದು ದೋಷಮಿದೆಂಬೀ |
ಗಣಿಪಮನೆತ್ತಱಿಗುಮಶ್ರುತಪ್ರಕೃತಿಜನಂ ||
ತೃಣಸಸ್ಯಘಾಸವಿಷಯ |
ಪ್ರಣಯುಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್ ||೭||

ಅದಱಿಂ ಪರಮಾಗಮಕೋ |
ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ||
ಮೊದಲೊಳ್ ಕಲ್ತಂಗಲ್ಲದೆ |
ಪದದೊಳ್ ಜಾಣುಂ ಬಡಂಗುಮಕ್ಕುಮ ಕೃತಿಯೊಳ್ ||೮||

ಜಡಜನಮುಮುಲ್ಲಮೋದಂ |
ತಡೆಯದೆ ಕಲ್ತುಂ ಗುರೂಪದೇಶಕ್ರಮದಿಂ ||

ನುಡಿವಲ್ಮೆಯುಳ್ಳುದೇಂ ಕ |
ಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ ||೯||

ಪ್ರತಿಭಾವತ್ತ್ವಮುಮಕೃತಕ |
ಚತುರತೆಯುಂ ಪರಮಬುಧಜನೋಪಾಸನಮುಂ ||
ಕೃತಿಪರಿಚಯಮುಮುಂ ತರ್ಕಂ |
ಪ್ರತೀತಿಯುಂ ವಾಗ್ವಿದಗ್ಧತಾನಿಪುಣತೆಯೊಳ್ ||೧೦||

ಪಸರಿಸಿದಾ ಬಗೆ ಮನಮುಂ |
ಪೊಸತಾಗಿ ನೆಗೞ್ಚಲಱಿಯನಾರಚನೆಯೊಳೇಂ ||
ಬಸನಂ ತನಗಿಸಿತಱ ಬೇ |
ವಸಮೇಂ ಕವರ್ಗವೆರಸುವೊಳರ ಕವಿಯಲ್ಲದರಂ ||೧೧||

ಬಗೆಬಗೆದು ಕೇಳ್ದು ಬುಧರೊಲ |
ವೊಗೆದಿರೆ ಹೃದಯದೊಳ್ ತಾಳ್ದ ಮನೋಹಾರಂಬೊಲ್ ||
ಸೊಗಯಿಸುವ ವಚನವಿರಚನೆ |
ನೆಗೞ್ಗುಂ ಭಾವಿಸುವೊಡದಱ ಪೆಂಪತಿಸುಲಭಂ ||೧೨||

ನೆನೆನೆನೆದು ಪೆಱರ ಮಾತುಗ |
ಳನೆ ನೆಗೞ್ದಿರೆ ಕೃತಿಯೊಳಿಡುವವಂ ನಗದ ಗುಹಾ ||
ಧ್ವನಿಯವೊಲನರ್ಥವಚನಂ |
ತನಗಾಗಿಸಲಱಿಯನುಚಿತ ವಾಕ್ಚತುರತೆಯುಂ ||೧೩||

ಕುಱಿವೆಂತು ಪೆಱರ ಬಗೆಯುಂ |
ತೆಱದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ ||
ಕಿಱಿದಱೊಳ್ ಪಿರಿದುಮರ್ಥಮ |
ನಱಿಪಲ್ ನೇರ್ಪಿವಾತನಾತನಿಂದಂ ನಿಪುಣಂ ||೧೪||

ನುಡಿಯುಂ ಛಂದದೊಳೊಂದಿರ |
ತೊಡರ್ಚಲಱಿವಾತನಾತನಿಂದಂ ಜಾಣಂ ||
ತಡೆಯದೆ ಮಹಾಧ್ವಕೃತಿಗಳ |
ನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ ||೧೫||

ಮಾತಱಿವರ್ ಕೆಲಬರ್ ಜಗ ।
ತೀತಳಗತಮನುಜರೊಳಗೆ ಮಾತಱಿವವರೊಳ್ ॥
ನೀತಿವಿದರಮಳಕವಿತಾ ।
ನೀತಿಯುತರ್ ಕೆಲರೆ ಪರಮಕವಿವೃಷಭರ್ಕಳ್ ॥೧೬॥

ಪಾಪಮಿದು ಪುಣ್ಯಮಿದು ಹಿತ ।
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ ॥
ಖೋಪಾತ್ತಮಿದೆಂದಱಿಪುಗು ।
ಮಾಪರಮಕವಿಪ್ರಧಾನರಾ ಕಾವ್ಯಂಗಳ್ ॥೧೭॥

ಲೌಕಿಕಸಾಮಯಿಕೋರುವಿ ।
ವೇಕಮುಮಭ್ಯುದಯಪರಮನಿಃಶ್ರೇಯಸಮುಂ ॥
ಪ್ರಾಕಟಮಕ್ಕುಂ ವಿದಿತಾ ।
ನೇಕಕವೀಶಪ್ರಯೋಗಪದಪದ್ಧತಿಯೊಳ್ ॥೧೮॥

ಅಧಿಕೃತಸತ್ಪುರುಷಾರ್ಥ ।
ಪ್ರಧಾನಧರ್ಮಾರ್ಥಕಾಮಮೋಕ್ಷಂಗಳವಾ ॥
ಬುಧಜನವಿವಿಕ್ತಕಾವ್ಯ ।
ಪ್ರಧಾರಿತಾರ್ಥಂಗಳಖಿಳಭುವನಹಿತಂಗಳ್ ॥೧೯॥

ಲೋಕದೊಳದಱಿಂ ಕಾವ್ಯ ।
ಶ್ರೀಕರಣೋದ್ಯುಕ್ತನಕ್ಕೆ ಕವಿ ತನ್ನಱಿವಂ ।
ತಾಕಲ್ಪಾಂತಸ್ಥಾಯಿ
ಶ್ರೀಕೀರ್ತಿವಧೂಪ್ರಧಾನವಲ್ಲಭನಕ್ಕುಂ ॥೨೦॥

## 2. ಕವಿತಾಪ್ರಶಂಸೆ.

ಈ ಭಾಗವನ್ನು ಮಧುರಕವಿಯ ಧರ್ಮನಾಥಪುರಾಣದಿಂದ ಉದ್ಧರಿಸಿ ಬರೆದಿದೆ. ಈತನು ಸುಮಾರು 1385ರಲ್ಲಿ ಇದ್ದಿರಬಹುದಾಗಿ ತಿಳಿಯುತ್ತದೆ. ಈತನ ತಂದೆಗೆ ವಿಷ್ಣು ಎಂದೂ ತಾಯಿಗೆ ನಾಗಾಂಬಿಕೆಯೆಂದೂ ಹೆಸರು. ಈತನು ಜೈನಮತದವನು. ಈತನು ಬುಕ್ಕರಾಜಸುತ ಹರಿಹರರಾಯನ ಪ್ರಧಾನನಾದ ಮುದ್ದದಂಡೇಶ್ವರನ ಪೋಷಣೆಯಲ್ಲಿದ್ದಂತೆ ಹೇಳಿಕೊಂಡಿದ್ದಾನೆ. "ಭೂನಾಥಾಸ್ಥಾನ ಚೂಡಾಮಣಿ ಮಧುರಕವೀಂದ್ರಂ" ಎಂದು ಹೇಳಿಕೊಂಡಿರುವುದರಿಂದ ಈತನು ಹರಿಹರನ ಆಸ್ಥಾನ ಕವಿಯಾಗಿದ್ದಿರಬಹುದೆಂದು ತೋರುತ್ತದೆ. ಈತನು ಧರ್ಮನಾಥಪುರಾಣವಲ್ಲದೆ ಗುಮ್ಮಟಸ್ತುತಿರೂಪವಾದ ಒಂದು ಅಷ್ಟಕವನ್ನೂ ಬರೆದಿದ್ದಾನೆ.

ಕಂ॥ ತೊಳತೊಳಗೆ ದಿಗಂಬರಮಂ ।
ಬೆಳಗುವ ರುಚಿಯಿರ್ಮವೇಸೊ ಸಕಲಜನಾಂತ ॥
ಸ್ಥಳತಮಮಂ ತಮ್ಮುದಯದೊ ।
ಳಳಿಸಿದರೆ ರವಿಗಳೆಮಗೆ ಕವಿಗಳ ವಂದ್ಯರ್ ॥೧॥

ಆದಿಕವಿ ಪಂಪನೆಂದನು ।
ವಾದಿಸಿ ವಾದಿಸಿ ವಿರೋಧಿ ವಿಪರೀತತೆಯಿಂ ॥
ದೋದೆ ವಿಲೋಮದೆ ಪೆಸರಂ ।
ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ ॥೨॥

ಬಿನ್ನಣದ ಕುಸುರಿ ಪಸರಿಸು ।
ವನ್ನಂ ಗುಣಜಾತಿಬಂಧಮೆಳವಡೆ ನೆಗಪ್ದಾ ॥
ಪೊನ್ನಂ ರನ್ನಂ ಕೂಡಿದೊ ।
ಡೆನ್ನೀ ವಾಗ್ವಧುಗೆ ಭೂಷಣಂ ಪಿರಿತುಂಟೇ ॥೩॥

ಘಳಿಲೆನೆ ವಿಬುಧರ್ ತುಷ್ಟಿಯ ।
ನೊಳಕೆಯ್ದು ಮನಃಪ್ರಸಾದಮಂ ಪಡೆವುದರಿಂ ॥
ಕಳೆಯುಂ ಚಂದ್ರಂ ಕವಿತಾ ।
ಕಳೆಯುಂ ಕವಿನಾಗಚಂದ್ರ ನಾಂತುದೆ ಸಫಲಂ ॥೪॥

ಏಮಾತೊ ನವ್ಯಕಾವ್ಯಕ |
ಲಾಮಹಿಯೊಳ್ ಬಿಡದೆ ಬೀದಿವರಿವೊಡೆ ಮೊದಲೊಳ್ ||
ನೇಮಿಯು ನೆಮ್ಮುಗೆಯಿಲ್ಲದೊ |
ಡೀಮತ್ತಿನ ಕವಿಮನೋರಥಂ ನಡೆವುದೇ ||೧೫||

ತನ್ನತೆಱುವಾಯೆ ಕೃತಿವೇ |
ಬ್ಬನ್ನಂ ನೀನಲ್ಲದಿಲ್ಲವೆಂದತಿಮುದದಿಂ ||
ಮನ್ನಿಸಿ ಸಲಹುಗೆ ಸತ್ಕವಿ |
ಜನ್ನಂ ಜಾಣೆಸೆಯುಲಿತ್ತು ನುಡಿಗಳನೆನ್ನಂ ||೧೬||

ಸರ್ವರ ಸಮ್ಮತವೆನಗಿದು |
ಗರ್ವದ ಮಾತಲ್ಲ ಶಾಸ್ತ್ರ ಲೌಕಿಕಕಳೆಯೊಳ್ ||
ಬೇರ್ವರಿವ ನೇಮಿಜನ್ನಿಮ |
ರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ||೧೭||

ಉ॥ ಚಂದದ ಬಂಧದೊಳ್ನುಡಿಯ ದೇಸಿಯ ಮುಪ್ಪಿನೊಳ್ ಪೊದೞ್ದ ಸ್ವ |
ಪೊಂದೆ ಕರಂ ರಸಂಬಡೆದು ರಂಜಿಪ ಸತ್ಕವಿತಾ ವಿಲಾಸದೊಳ್ |
ಸಂದೊಡೆ ಸಾಲ್ವುದಾವನವರಾದಿನವರ್ ಕೆಲರೆಂದು ಪಿಕ್ಕುಪೀ |
ದಂದುಗದಿಂದ ಮೇನೆಮಗ ಸಿಂಧ್ಯ ಕವೀಂದ್ರರ ವಂದ್ಯ ರಾವಗಾ ||೧೮||

ಚಂ॥ ತನಗೆ ಕವಿತ್ವದೊಳ್ನುಡಿಗಳೊಳ್ನುಡಿಯಾದ ರಸಂಗಳಿಂಪುವೆ |
ತ್ತನುವಶವಾದ ಭಾವಮತಿ ಬಂಧುರವಾದ ಪೊದೞ್ದ ರೀತಿ ನೆ |
ಟ್ಟನೆ ನೆಲೆಯಾದ ದೇಸೆ ಕಡುಮಾಸರವಾದ ಗುಣಂಗಳೋಳಿಗೊಂ |
ಡನುಗುಣವಾದ ನಂಬುಗೆ ಮನಂಬುಗೆ ಪೇೞ್ವುದು ನವ್ಯಕಾವ್ಯಮಂ ||೧೯||

ಕಂ॥ ಚತುರಕವಿಯಾದವಂ ಸ |
ತ್ಕೃತಿವೇೞ್ವುದು ತನಗಮಿತರಜನಕಂ ಸುಮನ ||
ಸ್ಸ್ಥಿತಿ ವಾಸನೆವಡೆದಿರೆ ಸ |
ನ್ನುತಮಾಲೆಯನೆತ್ತುವಂತೆ ಮಾಲಾಕಾರಂ ||೨೦||

ಕೊರ್ವಿ ಪೊಱಪೊಣ್ಮೆ ತನಿರಸ |
ಮುರ್ವೆ ಕರಂ ಕೊಂಕು ಕಿವಿವೆರಂ ನವ್ಯಗುಣಂ ||

ಪರ್ವೆ ತೆಗೆದಿಸುವ ಕಾವನ ।
ಗರ್ವಿನ ಬಿಲ್ಲಂತೆ ಕಾವ್ಯಮೇಂ ಮೋಹಿಸದೇ ॥೨೧॥

ತಿಂಗಳ ಬೆಳತಿಗೆವೆಳಗಿನೊ ।
ಳಂಗಡಲೆಸೆವಂತೆ ಬಹುಕಳಾಪರಿಣತರೊ ॥
ಳ್ದಂಗೀಕರಿಸಿದ ಕೃತಿ ಭುವ ।
ನಂಗಳೊಳೞೇರಂತೆ ಪುಡಿವುದೊಂದಚ್ಚರಿಯೆ ॥೨೨॥

ಮ॥ ತಲೆಯಂ ತೂಗಿ ಬೆರಲ್ಗಳಂ ಮಿಡಿದು ಸದ್ವಿದ್ಯರ್ ಸಭಾಮಧ್ಯದೊಳ್ ।
ಪಲಬರ್ ಸತ್ಕವಿಗಿತ್ತು ತಕ್ಕಿನ ಪೆಸರ್ ಸಲ್ವಂತೆ ನೀಚಂಗೆ ಮಾ ।
ಗ್ಬಲದಿಂ ಬಂಟನ ನಂಟನಗ್ಗಳಿಕೆಯಿಂ ದೆಗ್ಗನ್ನ ದುರ್ವೆಟ್ಟಿದ್ದ ಗಾ ।
ವಿಲನೊರ್ವಂ ಕುಡೆ ಕೊಂಡ ತೊಂಡುವಸರಂದೇಂ ಸಲ್ವುದೇ ನಿಲ್ವುದೇ ॥೨೩॥

ಕಂ॥ ತಲೆದೂಗೆ ಬುಧರ್ ಖಳನಂ ।
ತಲೆವಾಗಿಸಿ ಸಭೆಯ ನಡುವೆ ನಿಲ್ಲಗೆ ಪಾವಂ ॥
ತಲೆಗಂಡ ಪಂದೆಯಂದದೆ ।
ತಲೆಬಾಲಂಗೆಟ್ಟು ಜಗುಳ್ವ ಕಪಿಯುಂ ಕವಿಯೇ ॥೨೪॥

ತಳ್ತಳವಟ್ಟಿರಲವೆಯುವ ।
ದೊಳ್ತೊಳಗದ ಕೃತಿಯೊಳಟ್ಟಲಂಕಾರಮದೇ ॥
ವಾಷ್ಟ್ರೆ ನಡೆ ನೋಡೆ ಬಡವರ ।
ತೊತ್ತಿನ ಶೃಂಗಾರದಂತಿರೆರವಾಗಿರದೇ ॥೨೫॥

ಕತ್ತುರಿಯನೆರೆಯುಮಣ್ಗೆರ ।
ಸೋತ್ತರ ಕವಿಕೃತಿಯನಧಮಕೃತಿಗೆಣೆಯೆಂಬಂ ॥
ಗೆತ್ತಣ ಮಾತೊ ವಿದಗ್ಧರ್ ।
ಚಿತ್ತೈಸಿದೊಡಿಳೆಯೊಳುಂಟೆ ಮೂಗುಂ ಕಿವಿಯುಂ ॥೨೬॥

ಮ॥ ಕುಟಿಲಾಳಾಪದೆ ಪಿಂದೆ ಕಾಱ್ಗೆಡದು ಮುಂದಾಸತ್ಕವೀಂದ್ರರ್ಕಳು ।
ಬ್ಬುಟೆಯಂ ಕಂಡು ಕನಲ್ದು ಕೇದಗೆಯತೂಂಟಲೊಗ್ಗಂಬನೇಱಿರ್ದ ಮ ।
ರ್ಕಟನೆಂತಂತೆ ಕುನುಂಗಿ ಪಲ್ಗಿರಿದು ಬಾಯಂ ಬಿಟ್ಟು ಬೆಂಬೀೞ್ವನ।
ಕ್ಕಟ ಧಾತ್ರೀತಳದಲ್ಲಿ ದುಷ್ಕವಿಯದೇಂ ಹಾಸ್ಯಕ್ಕೆ ಪಕ್ಕಾದನೋ ॥೨೭॥

ಕಂ|| ಉತ್ತಮಮುತ್ಪಾದಕನೆನಿ |
ಪುತ್ತಮಕವಿಗಗಿಯದುಂತೆ ತಲೆಯೆತ್ತಿದೊಡೇ ||
ನುತ್ತಮನೆ ಕುಕವಿ ನಿಡುಗೊರ |
ಲೆತ್ತಲ್ ಶರಭಕ್ಕೆ ಕರಭನೆಣೆಯೆನಿಸುಗುಮೇ ||೩೮||

ಸಲೆ ನಿಲೆ ಸುಕವಿ ಸುವರ್ಣದ |
ನೆಲೆಯಱಿದೊರೆದೊರೆದು ನೋಡಿ ಬಗೆಯೊರೆಗಲ್ಲೊಳ್ ||
ತಲೆದೂಗುವಂತೆ ಸಭೆಯೊಳ್ |
ತಲೆದೂಗುವವಂ ಪರೀಕ್ಷಿಸಲ್ ಬಲ್ಲವನೇ ||೩೯||

ನವರಸರಸಿಕಂ ಸುಮನ |
ಸ್ತವನೀಯಮೆನಿಪ್ಪ ಕಾವ್ಯದತಿಶಯಮಂ ದು ||
ಷ್ಕವಿಯಱಿಯನೆಂದು ಜಱಿಯೆಂ |
ಪ್ಲವಗಕ್ಕೇವಾಪ್ತಿ ಪಾರಿಜಾತಸ್ತಬಕಂ ||೪೦||

ಪಂಡಿತರುಂ ವಿವಿಧಕಳಾ |
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ||
ಕಂಡರ್ ಕೇಳ್ವೊಡೆ ಗೊರವರ |
ಡುಂಡುಚಿಯೋ ಬೀದಿವೆಱೆಯ ಬೀರನ ಕತೆಯೋ ||೪೧||

ನೆರೆಯಱಿಯದ ಪೊರೆಯಱಿಯದ |
ಬಿರುದುಗಳೇಕೆಮಗೆ ಕೃತಿಯನೀಕ್ಷಿಸಿ ಮಿಗೆ ಮ ||
ಚ್ಚರಿಸುವ ಕವಿಯೆರ್ದೆ ಬಿಕ್ಕನೆ |
ಬಿರಿದಿರ್ದುದೆ ಬಿರುದು ಮಿಕ್ಕ ಬಿರುದುಂ ಬಿರುದೇ ||೪೨||

ಮಾಡಿದನೇಕೆಯೊ ಮೇಲಂ |
ನೋಡದೆ ಬಿದಿ ವಿಷಮುಖಫಣಿಗಣಲ್ಗಳ ಪಲ್ಲಂ ||
ರೂಡಿಸಿದ ತೇಱ್ಗೆ ಮುಳ್ಳಂ |
ನಾಡಱಿಕೆಯ ದುರ್ಜನಂಗೆ ನಿಡುನಾಲಗೆಯಂ ||೪೩||

ನ್ಯಾಯಮಿದು ಧರೆಗೆ ದುರಭಿ|
ಪ್ರಾಯದ ದುರ್ಜನನ ಮೋಱೆಯಂ ಕಂಡೊಡೆ ಥೂ ||

ಚೀಱೆಂಬು ದುಱಿ ಬಗುಳ್ವನ |
ಬಾಯೊಳಗುಗುಪೆಂಬ ನಾಡ ಗಾದೆಯು ಬಲದಿಂ ||೪೪||

ಚಂ|| ಅವರಿವರಂ ಕನಲ್ದು ಬಿಱುವಾತುಗಳಿಂ ಜಱೆದಾನೆ ಲೋಕದೊಳ್ |
ಕವಿಯೆನುತುಂತೆ ಕಂತೆವೊರೆದಂತಱಿಗಬ್ಬವನುಬ್ಬಿ ಪೇೞ್ದಸಂ |
ಭವರಸಭಾವಮಂ ಬಱಿದೆ ಬಿಬ್ಬನೆ ಬೀಗಿ ಮಹಾಕವೀಂದ್ರಮಾ |
ದವನೆಣೆಯುಪ್ಪೆನೆಂಬ ಕೊಳೆಗಬ್ಬಿಗ ನಿನ್ನಯ ಗರ್ಬಮೆಂತುಟೋ ||೪೫||

ಕಂ|| ಪೆಸರೆಸಕಟ ಪಾಲ್ಕೆಯುಂ |
ಪೊಸತೇನೆಱೆದುಂಬುದಂಬಿಲಂಗಡಮೆಂಬೀ ||
ಗಸಣಿಯೊಳೊಂದದೆ ನೆಗೞ್ದ |
ಳ್ವಸರುಂ ಮಧುರಂ ದಲವನ ಮಾತುಂ ಮಧುರಂ ||೪೬||

ಸುಧೆ ಸುರಭಿ ಸಗ್ಗ ಕಗ್ಗದ |
ಮಧು ಮಧುರ ಕವೀಂದ್ರ ಕವಿತೆ ವಸುಧಾತಲಕಂ ||
ತಧರತೆ ತನಗಾಗದವೋಲ್ |
ವಿಧಿವಿಬುಧರ್ ಮೆಚ್ಚೆ ಪೆಚ್ಚೆ ಪವಣಿಸಿ ಪಡೆದಂ ||೪೭||

ಮ|| ಗಣಿದಂಗೊಳ್ವೊಡೆ ಪಿಕ್ಕನಕ್ಕರದ ಮಾತಂತಿರ್ಕೆ ತನ್ನಾಣೆ ಗೋ |
ಸಣೆ ಸಲ್ಗಂ ಸುಕವೀಂದ್ರವೃಂದಸಭೆಯೊಳ್ ತಾನೆಂದೊಡಮ್ಮಮ್ಮ ಧಾ |
ರಣಿಯೊಳ್ ಕೇಳ್ದಱಿಯಾ ಜಡಾ ಮಧುರನಂ ಸಿರ್ಣೀತಕರ್ಣಾಟಲ |
ಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ ||೪೮||

ಕಂ|| ಬಣ್ಣಣೆಯ ಕುಸುರಿಮಾತುಗ |
ಳಣ್ಣಂದಿರ ತೆಱದಿ ನನ್ನದಿನ್ನದೆನುತ್ತಾಂ ||
ಬಣ್ಣಿಸಲಱಿಯೆಂ ಕವಿತೆಗೆ |
ಕಣ್ಣೊಲೆಯಾದುದು ಕಳಾವಿಳಾಸನ ಕಾವ್ಯಂ ||೪೯||

ಚಂ|| ಚದುರ ನೆಗೞ್ತೆ ತಂಬೆಲರ ಸೊಂಕು ಸುಧಾರಸದಿಂಪು ಬಂದ ಚೂ |
ತದ ಕೊನರಂಚೆಯಾಟವಳಿ ನೀರುತಿ ತಿಂಗಳ ಸೊಂಪು ಪುಷ್ಪಬಾ |
ಣದ ಪೊದೆ ರಾಗಸಾಗರ ಮನಂಗನ ಕೈಪಿಡಿ ನಲ್ಲಳೊಲ್ಮೆಯು |
ನ್ನದೆ ಪೆಱತೆಂಬುದೇ ಮಧುರಮಾಧವ ನಿನ್ನಯ ವಾಗ್ವಿಲಾಸಮಂ ||೫೦||

ಮದನನ ಬಿಲ್ಲ ಬಲ್ಮೆ ಬಲಿದತ್ತು ವಸಂತದ ಮೋಹನಂ ಪೊದ |
ಳ್ದುದು ಕಡುಗಾಡಿವೆತ್ತಲೆವ ತೆಂಕಣಗಾಳಿಯು ಸೋಂಕು ಸೋರ್ಕುವೆ |
ತ್ತುದು ಪುದುವಂದುದೆಂದು ನೆಲೆವೆರ್ಚಿರೆ ಭಾವರಸಂ ರಸಜ್ಞೆಯೊಳ್ |
ಮೃದುಪದವಿಟ್ಟಳಕ್ಕುಮೆನೆ ಭಾರತಿ ಬಂದು ಕಳಾವಿಳಾಸನಾ ||೫೧||

ಉ|| ಆವ ರಸಾತಿರೇಕವೊ ಕರಾಗ್ರದೊಳಾಡುವ ರಾಜಕೀರಲೀ |
ಲಾವಚನಂಗಳೋಗಡಿಸಲುಕ್ಕುವದಿಂ ಕುಡುಕೆಂದು ತಂದು ಚಂ |
ಚೂವಿವರಕ್ಕೆ ಮಾಣಿಕದ ಮುದ್ರಿಕೆಯಂ ಪಡಿಗೆತ್ತು ಭಾರತೀ |
ದೇವಿ ನಿರಂತರಂ ಸವಿವಳಾತನ ನವ್ಯವಚೋವಿಳಾಸಮಂ ||೫೨||

ಕಂ|| ಕವಿಮಧುರನ ಮಾತುಗಳೇಂ |
ಸವಿಯೊ ಮದಪ್ಲವಕೆ ಮೊಱೆವ ಮಱಿದುಂಬಿಗಳಂ ||
ತವೆ ತೊಲಗಿಸಿ ತನ್ನಯ ಮೊಱ ||
ಗವಿಯಿಂ ಮೊಗೆಮೊಗೆದು ಸುಮುಖನಾಸ್ವಾದಿಸುವಂ ||೫೩||

ಮ|| ಕವಿತಾಶ್ರೀಗೆ ಜನಾರ್ದನಂ ಪುರುಷರತ್ನಂ ಪುಷ್ಪದಂತಂ ರಿಪು |
ಪ್ರವರೋತ್ತುಂಗಗಜಾಂಕುಶಂ ಮನಸಿಜಾಕಾರಂ ಸಭಾಮಧ್ಯಲ |
ಬ್ಧವರಶ್ರೀವಿಜಯಂ ಸಮಸ್ತಸುಜನೋತ್ತಂಸಂ ಯಶಶ್ಚಂದ್ರನು |
ತ್ಸವಲೀಲಾರಥನೇಮಿಯೆಂದು ಮಧುರಂ ಪೆತ್ತಂ ಮಹಾಖ್ಯಾತಿಯಂ ||೫೪||

---

## 3. ಸಮುದ್ರವರ್ಣನೆ.

ಇಲ್ಲಿ ಕೊಟ್ಟಿರುವ ಸಮುದ್ರವರ್ಣನಾರೂಪವಾದ ಪದ್ಯಗಳು ಮಹಾಲಕ್ಷ್ಮಿಯೆಂಬ ಕವಿಯಿಂದ ರಚಿಸಲ್ಪಟ್ಟ ಶ್ರೀರಾಮಪಟ್ಟಾಭಿಷೇಕವೆಂಬ ಗ್ರಂಥದಿಂದ ಉದ್ಧೃತವಾಗಿವೆ. ಮಹಾಲಕ್ಷ್ಮಿಯು ತಾನು ಉಪಪಿಕ್ಷೇತ್ರದಲ್ಲಿದ್ದ ಚಾವಡಿರಂಗಭಟ್ಟನ ಮಗಳೆಂದೂ, ಕನ್ನಡಿತಿ ಚಂಗಳದೇವಿ ಹೇಳಿದ್ದುದರಿಂದ ಆ ಗ್ರಂಥವನ್ನು ಬರೆದಂತೆಯೂ ಹೇಳಿಕೊಂಡಿರುತ್ತಾಳೆ. ಈಕೆ ಇನ್ನಾವ ಗ್ರಂಥಗಳನ್ನು ರಚಿಸಿರುವಳೋ, ಆವ ಕಾಲದಲ್ಲಿದ್ದಳೋ ಗೊತ್ತಾಗುವುದಿಲ್ಲ. ಆದರೆ ಗ್ರಂಥಾರಂಭದಲ್ಲಿ ಷಡಕ್ಷರಿಕವಿಯನ್ನು ಸ್ತೋತ್ರಮಾಡಿರುವಳಾದುದರಿಂದ ಕ್ರಿ. ಶ. 1627ರಿಂದ ಈಚಿನವಳಾಗಿರಬೇಕೆಂದು ಹೇಳಬೇಕಾಗಿದೆ. ಈಕೆಯ ಬಂಧವು ಪ್ರೌಢವಾಗಿಯೂ ಕಾವ್ಯವು ನೀತಿಬೋಧಕವಾಗಿಯೂ ಇದೆ. ಇದುವರೆಗೆ ದೊರೆದಿರುವ ಸ್ತ್ರೀರಚಿತ ಗ್ರಂಥಗಳಲ್ಲಿ ಇದೇ ಬಹು ಪ್ರೌಢವಾದುದು.

### ವಾರ್ಧಿಕ ಷಟ್ಪದಿ.

ತಪ್ಪನೆಸಗದೆ ಪಿಂದೆ ಜಡಭರಿತನಾಗಿ ಮುಂ ।
ತಪ್ಪ ನರನಾಟಕದ ಲೀಲೆಯಂ ಬಗೆಯದ್ದೈ ।
ತಪ್ಪರಾಘವನೊಳಂತಾದೊಡಂ ಕ್ಷಮಿಸಿ ತನ್ನಂ ಕಾವ ಕರುಣಿಯೆಂದು ॥
ದಪ್ಪತೆರೆಗೈಗಳಿಂ ಮೇಣೊರ್ಮೆ ಕೂರ್ಮೆಯಿಂ ।
ದಪ್ಪಲೈದುವನೊ ಕಡಲೊಡೆಯನೆಂಬೊಲ್ ಮೀರೆ ।
ದಪ್ಪದಿರದಡಿಗಡಿಗೆ ಮಡಿಮಡಿದು ಬರ್ಪ ಪೆರ್ದೆರೆಗಳಿಂ ಕಡಲೆಸೆದುದು ॥

ಪಗೆಗಗ್ರಜರ ದೂಱಲನಿಮಿಷರ್ ನಿನ್ನೊಳೀ ।
ಬಗೆಯಱಿತು ಖೂಳರಂ ಮಡುಹಿ ಸಂಬಿದವರ್ಗೆ ।
ಸೊಗಮಿತ್ತ ನಾವುಮನಿಮಿಷರೆಮ್ಮಗ್ರಜರ್ ದ್ವೇಷಿಪರ್ ಸುಮ್ಮನಕಟಾ॥
ಬಗಿದು ವೈರಿಗಳ ನೆಮ್ಮಂ ಕಾವುದಿನ್ನು ನಂ ।
ಬುಗೆ ಪೆಱರೊಳಿಲ್ಲವೆಂದೊರೆಯೆ ರಾಘವಗೆ ಮೇ । [ಯುಂ ॥೨೬॥
ಲ್ನೆಗೆದಪುವೊ ಕಾಣೆನೆನೆ ಮಱಿಮೀನ್ಗಳಡೆಯಡೆಯೊಳದ್ದುರುಳ್ದಪುವೆಲ್ಲಿ

ಮಿಕ್ಕು ಧರ್ಮವನುಯ್ದು ಸೀತೆಯಂ ದೇವರೊಳ್ ।
ಸೊಕ್ಕಿ ನಡೆದಳವ ದಶಕಂಧರಂ ಮೇಣ್ ಪೊಱಲೊ ।
ಳೊಕ ಲಿರಬಹುದೆ ದುರ್ಯಶವಪ್ಪುದೆನಗಿದಂ ಪಾಪೆಸಗಿ ಬಿಡುವೆನೆಂದು॥

ಉಕ್ಕಿ ಮೊಱೆದೈತರ್ಪ ಶರಧಿ ತನಗೀಕಾರ್ಯ |
ತಕ್ಕುದಲ್ಲರರೆ ರಾಘವನಾಜ್ಞೆ ಪಿರಿದು ಮಱೆ | [||೫೭||
ವೊಕ್ಕವಂಗಿತ್ತನೆಂದಱಿದಳ್ಕಿ ಮರಳ್ವವೋಲಬ್ಧಿ ತಡಿವೊಡೆದು ಪೋಕುಂ||

ಹರಹರಾ ಕಾಲಮಿನ್ನೆಂತಿಹುದೊ ಸೌಭಾಗ್ಯ |
ಭರಿತನಾಗಿರ್ದಂದು ಸಕಲರೋಲೈಸಿದರ್ |
ಸುರರ ಪಾಲಾಗಲದು ಬಡತನಂ ಪೊರ್ದಿ ಭಂಗಕ್ಕಿನಿತು ಪಕ್ಕಾದೆನ್ನೈ ||
ಪೆಱಮಗಂ ಬಾನೇರ್ದ ನಱುಗಿಯರಸನನುಯ್ದು |
ಧರೆಯುತ್ತ ಸೇರ್ದಳರಸಿಯರು ಮೋರೊಂದೆಡೆಯೊ | [ಯೆಗುಂ ||೫೮||
ಳರುವರೆನಗಿಲ್ಲ ಗತಿ ನೀನೆಂದು ಹರಿಗೆ ಮೊಱೆಯಿಡುವುದೆನಲಬ್ಧಿ ಪೊ

ಕಾಕುತ್ಸ್ಥ ಕರುಣಾಬ್ಧಿಯನಿಮಿಷಾಶ್ರಯಮೆನಿಸಿ |
ಲೋಕಾವೃತಂ ಲೀಲೆವಡೆದಿರ್ಪುದೆಂಬುವಂ | [ವಂ ||
ಸಾಕಾರವಾಗಿ ತೋರ್ಪಂ ತಬ್ಧಿಯನಿಮಿಷಾಶ್ರಯಮನಿನಿಸಿ ಭೂಲೋಕ
ಪ್ರಾಕಾರಮೆನೆ ಸುತ್ತಿಕೊಂಡಿರ್ಪ ಬೞಿಕ ಖಳ |
ರೇಕಿಂತು ತಿಳಿಯುವಱಿವರೊ ಕಾಣೆನೆಂದು ತಾ | [||೫೯||
ನೇ ಕೋಪದಿಂ ಗರ್ಜಿಪಂತೆ ಬಿಡದಡಿಗಡಿಗೆ ಮೊಱೆವುದೇನಾಶ್ಚರ್ಯವೋ

ಕೊಡನಣುಗನರಸಿಗಿಂಬಿತ್ತು ನಾದೊಡಮವಂ |
ಕುಡಿದನಂದಳಿಯನೀ ರಾಘವಂ ಬಂಧಿಸಿದ | [ರಿಂ ||
ನೆಡೆಗೊಂಡುದಂ ಮಱೆದು ವಜ್ರ ಜೀವನಮನಪಹರಿಸುವಂ ಮೇಘಭಟ
ಪಡೆದುಮೆನ್ನಿಂದ ಖಿಳಸಂಪದಮನೆಂದೊದಱಿ |
ಮೃಡನೊರ್ವ ವಿಷಮನಿತ್ತೊಡೆ ವಿಷಮನೆಣಿಸನೆ | [ಪೆರ್ದನಿಗಳಿಂ ||೬೦||
ನ್ನೊಡೆಯನೆಂದಿರದೆ ಪೊಗೞ್ವವೋಲಬ್ಧಿ ಮೊಱೆವುದೋ ರೊರ್ವ ಕಿಱು

ಸತ್ಯದೊಳ್ ಶರಣರಕ್ಷಣೆಯೊಳನುನಯದೊಳುಪ |
ಕೃತ್ಯದೊಳ್ ಗಂಭೀರಭಾವದೊಳ್ ಸಾಹಸದೊ |
ಳತ್ಯಧಿಕಕೀರ್ತಿಯೊಳ್ ಸತ್ವಾತಿಶಯದೊಳನುಗತವಾಹಿನೀನಿಕರದಿಂ ||
ನಿತ್ಯಲೀಲಾವಿನೋದಂಗಳೊಳ್ ಶ್ರೀಯೊಳೌ |
ಚಿತ್ಯದಾನಂಗಳೊಳ್ ವಿಭವದೊಳ್ ದಶರಥಾ | [ ||೬೧||
ಪತ್ಯನಿಂ ಕಿಱಿಯನಲ್ಲೆಂಬಂತೆವೋಲ್ ಶರಧಿ ಘೋಷಿಸುತ್ತಿರ್ಪುದನಿಶಂ ||

ಪುತ್ರನೊರ್ವಂ ರಾಜನಣುಗಿಯೆ ಜಗನ್ಮಾತೆ ।
ಮಿತ್ರನಭವಂ ಧೂತಪಾಪೆ ತನ್ನರಸಿ ಶತ ।
ಪತ್ರನೇತ್ರಂ ಮನೆಯಳಿಯ ನೋಡೆ ಮಮ್ಮಕ್ಕಳನಗೆ ರತಿಕಾಮರ್ಕ್ಕೆಸೆ ॥
ಗೋತ್ರರಾಜಂ ಮಾವನತ್ತಿಗೆಯೆ ಪಾರ್ವತಿ ಪ ।
ವಿತ್ರನಾಂ ಮೊದಲೆ ತನಗೆಣೆಯಪ್ಪನಾವಂ ಧ । [ದುಂ ॥೬೦॥
ರಿತ್ರಿಯೊಳಗೆಂದು ಘೋಷಿಪುದೆಂಬೊಲರ್ಣವಂ ಬಾಯ್ವಿಡುತ್ತಿರ್ಪುದೆಂ

ಪಿರಿದು ರಾಷ್ಟ್ರಂ ಪ್ರಜೆಗಳನಿಮಿಷರ್ ಮಾರುತಂ ।
ಚರನಿರ್ಪನನುಸರಿಸಿ ವಾಹಿನೀಬಲಮುಂಟು ।
ಮಱೆಗೊಂಬುದೆನ್ನ ಭೂಭೃತ್ಕುಲಂ ರತ್ನಭಾಂಡಾಗಾರಮಿರ್ಪುದಿನ್ನು ॥
ಸಿರತ ಸತ್ವಾತಿಶಯಮಿರಲೇನನೆಸಗದೊಡ ।
ಮೊರೆವಹಾರುಂಟು ಪುಲ್ಗಣೆಯುಮಲ್ತೆ ಮುಳಿದೊಡಾಂ । [ ॥೬೧॥
ಸರಸಿಜಭವಾಂಡಮಂದುಬ್ಬರದೊಳಬ್ಬರಿಪ್ಪೊಲರ್ಣವಂ ಘೂರ್ಣಿಸುವುದು

ಏಸಿವಚ್ಚಗಿ ಬೇಡಿದರ್ಗೆ ಕರಿತುರಗ ಭೂ ।
ಧೇನು ನವರತ್ನ ಕನ್ಯಾಕಲ್ಪಭೂರುಹನ ।
ವೀನಪೀಯೂಷ ವಸ್ತ್ರಾಭರಣಗೇಹಸಿಜದೇಹಂಗಳಂ ಮಾಣದೆ ॥
ದಾನಮಿತ್ತಾದು ದೇಸಿರ್ಪುದೆಮಗೀಯಲೆಂ ।
ಆನೀರದಂಗಳಬ್ಧಿಯನಳ್ಕಿ ಬೇಡಿದೊಡೆ ।
ತಾನಂಜಿವನೆ ಜೀವನಂಗೊಟ್ಟನೆನೆ ಚಿತ್ರಮಲ್ತೆ ಧಾರ್ಮಿಕರ ಚರಿತಂ ॥

ಸುರರಿಗಮೃತಂ ಬೇಕೆ ಮನಮುಂಟೆ ಕಾಲಕಂ ।
ಧರಗೆ ವಿಷದೊಳ್ ಬಾಲಚಂದ್ರಂಗೆ ಪಯುಮಿಪುದೆ ।
ಶರಮುಂಟೆ ವೀರರ್ಗೆ ಕೀಲಾಲಮಸುರರ್ಗೆ ದೊರೆತುದೇ ಲಾವಣ್ಯಮಂ॥
ಸ್ಮರನಿಚ್ಛಿಪನೆ ಕುಶಮನಱಸುವರೆ ಯಮಿಗಳ್ ಘ ।
ನರಸಮಂ ಕೊಂಡರೆ ರಸಜ್ಞರುಂಟನ್ನು ಮಾ ।
ದರದೆ ತಾನೀವನೆಂದೊರೆವಂತೆ ಮೊಱೆವಂ ತೆಱತೆಱದಿಂದಬ್ಧಿರಾಜಂ॥೬೪॥

ಪೆರ್ಚಿದರ್ಮ ದಧಿಕತರಸತ್ವದಿಂ ಸತ್ವದಿಂ ।
ದುರ್ಚಿ ಮೊಯ್ಗರೆವ ರಾಜೀವಮಾ ಜೀವಮಂ ।
ಕರ್ಚಿ ಪಾಯ್ದಡಗುವ ತರಂಗದಿಂ ರಂಗದಿಂ ದೆಬ್ಬಿ ಪೆರ್ಮಾಸಿನಿಂದ ॥

ಸಾರ್ಚಿ ಮುಂಸುೞಿವ ಜಲವಾಜಿಯಿಂ ವಾಜಿಯಿಂ ।
ದಿರ್ಚಿಡಿದ ವಿದ್ರುಮವಿತಾನದಿಂ ತಾನದಿಂ ।
ಬೆರ್ಚಿ ಪರಿದೋಡುವಾನೆಗಳಿಂದ ನೆಗೞಿಂದ ನೆಗೞಿಂದಲಾಸಮುದ್ರಂ॥೧೬॥

ಪಟ್ಟುೞಿದು ಸಂಚರಿಪ ಬಾಳೆಯುಂ ಬಾಳೆಯುಂ ।
ಮುಟ್ಟವಿಸಿ ನಡೆತರ್ಪ ನಕ್ರಮುಂ ನಕ್ರಮುಂ ।
ಮೆಟ್ಟಿಬಹ ಶಕುಲಮುಂ ಶಕುಲಮುಂ ಜೆಂಬತ್ತಿ ಪರೆವ ವರಮೀನ ಮೀನಂ॥
ಬಿಟ್ಟಡಂಗುವ ಜಲಗ್ರಾಹಮುಂ ಗ್ರಾಹಮುಂ ।
ದಿಟ್ಟಿಸುತೆ ಪಿಂಜರಿವ ಕಮಠಮುಂ ಕಮಠಮುಂ ।
ಕಟ್ಟಿಸಕದಿಂ ಪಾರ್ವುಲೂಪಿಯುಮುಲೂಪಿಯುಂ ಬಣ್ಣಿಸಲ್ ನೆಱೆವರಾರ್ಕೈ॥

ಭವನಂತೆ ಗಿರಿಸುತಾಸ್ವಿತನೆಂದನಿಸಿ ಮನೋ ।
ಭವನಂತೆ ಮಕರಕೇತನನಾಗಿ ಕಮಲಸಂ।
ಭವನಂತೆ ಪೋಲ್ ಸರಸ್ವತಿಯುರಸನೆಂಬಪೆಸರಂ ಪಡೆದು ಲೋಕಮೆಱೆಯು
ಭವನಲ್ಲ ಮೇಣ್ ಮೆಯ್ಯೊಳೊಪ್ಪಿರ್ದಮಾತ್ಮಸಂ ।
ಭವನಲ್ಲ ಲಾವಣ್ಯಲೀಲೆಯಿಂದೆಸೆದಬ್ಜ ।
ಭವನಲ್ಲ ಸಕಲಭುವನಾಶ್ರಯಂ ತಾನೆನಿಸುತರ್ಣವಂ ಕಣ್ಗೊಳಿಪುದು ॥

ಅಡಿಗಡಿಗೆ ಬರ್ಪ ಬಲ್ದೆರೆಗಳೇ ರೋಗಂಗ ।
ಳೊಡನೆಬ್ಬ ಕಲ್ಲೋಲಮಾಲೆಯು ಬದರ್ಕೆ ಸಂ ।
ಗಡಿಸಿರ್ಪ ಸುೞಿಗಳೇ ರಾಗಂಗಳೇಱಿೞಿಯು ಪಿರಿತನಂ ಬಡತನ ವಲಂ ॥
ಬಡಬಾನಲಂ ಚಿಂತೆ ದುಃಖವು ಪೊನಲ್ ಬಾಷ್ಪ ।
ಗಡ ಗುಳ್ಳೆ ಜೆಳ್ನೊರೆಯೆ ಸಂತಸಂ ಸುಖವು ಮೇಲೆ ।
ಸಿಡಿವ ಸೀರ್ಪನಿಯೆನಲ್ ಶರಧಿ ಭವಶರಧಿಯುಂ ಪೋಲ್ತೆಸೆದುದಚ್ಚರಿಯನೆ॥

ಮಕರ ಕರ್ಕಟಕ ಹರಿಮಿಥುನದಿಂ ದನಿಮೇಷ ।
ನಿಕರದಿಂ ದ್ರೋಣಂ ತಿಮೀನಂಗಳಿಂದೊಪ್ಪು । [ನಿಸಿ॥
ತಕಳಂಕಮೆನೆ ಧನುಷ್ಕೋಟಿಯಿಂ ಬೆರೆದತುಳ ವೃಷಕಂ ನೆಲೆವೆನೆಯಿದೆ
ಪ್ರಕಟದಿಂ ಕುಂಭಜನ್ಮಾಪೋಶನಕೆ ಸಂದು ।
ಸಕಳಸೌಭಾಗ್ಯಸಹ ಕನ್ನೆಯುಂ ಪಡೆದಿತ್ತು ।
ಸುಕರಮೆನೆ ರಂಜಿಸಿತು ವಾರಾಶಿ ರಾಶಿರಾಶಿಯನಾಂತ ಗಗನದಂತೆ ॥೨೦॥

ತನುವಿಗತಿಹಿತಮಾಗೆ ಪೆಱತೊಂದು ಬಗೆಯಿಂ ರ |
ಸನೆಗೆ ಸವಿದೋಱಿ ದುರ್ಗಂಧಮುಂ ಪವಮಾನ |
ನಿನಗಲ್ದು ನಾಸಿಕಕೆ ಸೊಂಪೀಯೆ ಕಣ್ಗೆ ತಾನಧಿಕಗಂಭೀರಮಾಗೆ ||
ಘನಘೋಷಮಿಂಪೀಯೆ ಕಿವಿಗೆ ಸಂತಸಮಾಗೆ |
ಮನಕೆ ಮಿಂದುಂಡು ಕಾಣ್ಬಗರ್ಗನಲ್ಕರ್ಣವಂ |
ತನತನಗೆ ಮೊಱೆದೆಬ್ಬಿ ಭಂಗಸಂಗದೊಳೊಪ್ಪಿ ರಂಜಿಸುತ್ತಿರ್ಪುದೆಂದುಂ ||

---

## 4. ವಿಜಯಾರ್ಧಾದ್ರಿ ವರ್ಣನೆ.

ರನ್ನನು ಈಗ ಜಂಬುಖಂಡಿಯೆಂಬ ಸಂಸ್ಥಾನದಲ್ಲಿ ಮುಧೋಳ್ ಎಂದು ಪ್ರಸಿದ್ಧವಾದ ನಗರದಲ್ಲಿ 949ರಲ್ಲಿ ಹುಟ್ಟಿದನು. ಈತನು ಜೈನಮತದ ಬಳೆಗಾರ ಕುಲಕ್ಕೆ ಸೇರಿದವನು. ಈತನು ಅಜಿತಸೇನಾಚಾರ್ಯರ ಶಿಷ್ಯನು. ಶ್ರವಣಬೆಳ್ಗೊಳದಲ್ಲಿ ಗುಮ್ಮಟೇಶ್ವರಬಿಂಬವನ್ನು ಪ್ರತಿಷ್ಠೆ ಮಾಡಿಸಿ ಪ್ರಸಿದ್ಧನಾದ ಚಾವುಂಡರಾಯನು ಈತನ ಪೋಷಕನು. ರನ್ನನು ತೈಲಪನ ಆಸ್ಥಾನದಲ್ಲಿ 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದುಕೊಂಡನು. ಇವನು ಮೊದಲು ಸಾಮಂತರಲ್ಲಿಯೂ ಮಂಡಲೇಶ್ವರರಲ್ಲಿಯೂ ಇದ್ದು ತರುವಾಯ ಆಹವಮಲ್ಲನೆಂಬ ರಾಜನಲ್ಲಿ ಕನಕದಂಡ ಚಾಮರ ಆನೆ ಛತ್ರ ಇವೇ ಮೊದಲಾದ ಬಿರುದುಗಳನ್ನು ಪಡೆದುಕೊಂಡಂತೆ ತಿಳಿಯಬರುತ್ತದೆ. ಈತನು ಸಾಹಸಭೀಮವಿಜಯ, ಪರಶುರಾಮಚರಿತ, ಚಕ್ರೇಶ್ವರಚರಿತ, ಅಜಿತತೀರ್ಥೇಶ್ವರಪುರಾಣ ಎಂಬ ಗ್ರಂಥಗಳನ್ನು ಬರೆದನು. ಇಲ್ಲಿ ಕೊಟ್ಟಿರುವ ಪದ್ಯಗಳು ಅಜಿತತೀರ್ಥೇಶ್ವರಪುರಾಣದಿಂದ ಉದ್ಧೃತವಾದುವು

ಮ|| ಮೃದುವಾಕ್ಯಸ್ವರಗೀತನಿಸ್ವನನಟದ್ವಿದ್ಯಾಧರೀ ನಾಟ್ಯ ಸಂ |
ಪದಮುಂ ರತ್ನಮಯಪ್ರಸಿದ್ಧಶಿಖರಾಲಂಕಾರಸಿದ್ಧಾಲಯಾ |
ಸ್ಪದಮುಂ ಖೇಚರಚಕ್ರವರ್ತಿವಿಭವಪ್ರೋದ್ಭಾಸಿಯುಂ ಮೆಚ್ಚಿ ನೋ |
ಡಿದನಾ ಭೂಧರಚಕ್ರವರ್ತಿ ವಿಜಯಾರ್ಧಾದ್ರೀಂದ್ರಮುಂ ರುಂದ್ರಮುಂ ||೭||

ಕಂ|| ಇಡಿದಿರೆ ಗುಹಾಂಧಕಾರಂ |
ಪೊಡರ್ದೆಸೆದಿರೆ ಚಂದ್ರಕಾಂತಮಣಿರುಚಿ ನಗದೊಂ ||
ದೆಡೆಯೊಳ್ ಪೋಲ್ತೊಪ್ಪಿದುದೊಂ |
ದೆಡೆಯೊಳ್ ನೆಲಸಿರ್ದ ಕಾಳಮಂ ಜೊನ್ನಮುಮಂ ||೮||

ನಿಚ್ಚಂ ಪಗಲಿನ ಕಾಂತದ |
ಕಿಚ್ಚಿನಿರುಳ್ ಚಂದ್ರಕಾಂತದೊಱೆಯಂ ಪಡೆದಾ ||
ರಿಚ್ಚೆಸದರೆನಿಸಿ ಮಾಡುಗು |
ಮೆಚ್ಚರಿಯಂ ಪಗಲುಮಿರುಳು ಮಾವಿಜಯಾರ್ಧಂ ||೨೪||

ಕಲ್ಲೆನ್ನದೆ ಬೆಳೆದ ಪಸು |
ರ್ಪುಲ್ಲೆಂದಾಸೆಯೊಳ್ ಸಾರ್ದು ಮರಕತದೊಡ್ಡಂ ||
ಗಲ್ಲನೆ ಪಾಯ್ದು ಮೃಗಂಗಳ್ |
ಕಲ್ಲನೆ ಕನಲುತ್ತುಮಿರ್ಪುವಾಖಗನಗದೊಳ್ ||೨೫||

ಗಜದಂತ ಕಷಣಕಂಪಿತ |
ಕುಜಕೂಜದ್ವಿಹಗರುತಮನಾಲಿಸಿ ಸಿಂಗಂ ||
ನಿಜಗುಹೆಯಿಂ ಪೊಱಮಟ್ಟುದು |
ವಿಜಗೀಷುಗೆ ಸಂದ ಲಕ್ಷಣಂ ನಿಜಮೆ ವಲಂ ||೨೬||

ಗಜಮಸ್ತಕಮಸ್ತಿಷ್ಕದಿ |
ನಜೀರ್ಣಮಾಯ್ತೆಂದು ಲಂಘನಂಗೆಯ್ವವೊಲಾ ||
ಗಜರಿಪು ಲಂಘಿಸಿದುದು ಪವ |
ನಜವದೆ ಶಿಖರಕ್ಕೆ ಶಿಖರದಿಂ ಖಗನಗದಾ ||೨೭||

ಸ್ರೋತಸ್ಸುರುಚಿರಪುಷ್ಕರ |
ನಾತತಋಕ್ಷಂ ಗುಹಾನ್ವಿತಂ ಪ್ರಿಯವಂಶೋ ||
ಪೇತಂ ತುಂಗೋತ್ಸಂಗಸ |
ಮೇತಂ ಕರಿರಾಜನೆನಿಸುಗುಂ ಗಿರಿರಾಜಂ ||೨೮||

ವನಕರಿಕಪೋಲ ಕಣ್ಡೂ |
ಯನದಿಂದಂ ಪಾಯ್ದ ಮದಜಲಾಸಾರಸುವಾ ||
ಸನೆಯಿಂದಿತರವನಂಗಳು |
ಮನುಕರಿಸುವು ಸಪ್ತಪರ್ಣಪಾದಪವನಮಂ ||೨೯||

ಮ|| ಸುಮನಸ್ಸ್ವರಭವವಾದ್ಯದುದ್ಯದಳಿಮಾಲಾಗೀತಿಯುಂ ಮೆಚ್ಚಿ ಕೇ |
ಳೆ ಮದೋನ್ಮತ್ತಪಿಕಾಳಿ ಕೀರಮುಖವಾದ್ಯಾತೋದ್ಯಮಂ ಕೇಳ್ದು ಮೆ |
ಚ್ಚೆ ಮಯೂರೀ ನಟನಪ್ರವೃತ್ತವಿಲಸನ್ನೃತ್ಯಂಗಳಂ ಮೆಚ್ಚಿ ನೋ |
ಡೆ ಮರುಳ್ಚಿತ್ತು ಖಗಾದ್ರಿ ಚಕ್ರಧರನಂ ಸಂಗೀತಕಕ್ರೀಡೆಯಿಂ ||೩೦||

## 5. ವೀತಶೋಕ ಪುರವರ್ಣನೆ.

ಈ ವೀತಶೋಕಪುರವರ್ಣನೆಯು ಅಭಿನವಪಂಪನ ಮಲ್ಲಿನಾಥಪುರಾಣದಿಂದ ಉದ್ಧೃತವಾದುದು. ಈ ಕವಿಗೆ ನಾಗಚಂದ್ರನೆಂದು ಹೆಸರು. ಈತನು ಸುಮಾರು 1105ರಲ್ಲಿದ್ದಿರಬೇಕೆಂದು ತಿಳಿಯುಬರುತ್ತದೆ. ಈತನು ಜೈನಮತದವನು. ಪಂಪರಾಮಾಯಣವೆಂದು ಪ್ರಸಿದ್ಧವಾದ ರಾಮಚಂದ್ರಚರಿತಪುರಾಣವನ್ನೂ ಈತನೇ ಬರೆದವನು. ಈತನಿಗೆ ಅಭಿನವಪಂಪ ಎಂಬ ಬಿರುದೂ ಉಂಟು. ಈತನು ಈ ಗ್ರಂಥಗಳನ್ನು ಮಾತ್ರವೇ ಅಲ್ಲದೆ ಜಿನಮುನಿತನಯ, ಜಿನಾಕ್ಷರಮಾಲೆ ಇವೇ ಮೊದಲಾದ ಇತರಗ್ರಂಥಗಳನ್ನೂ ರಚಿಸಿದುದಾಗಿ ಪ್ರತೀತಿ ಇದೆ.

ಚಂ|| ವಿಷಯಸುಖಾಸ್ಪದಂ ವಿವಿಧರತ್ನಗೃಹೋದ್ಗತಕಾಂತಿ ಸಂತತಾ |
ಭಿಷವಣಸುಂದರಂ ಸಕಲಮಂಗಳವೇದಿಕೆ ಕಚ್ಛಕಾವತೀ |
ವಿಷಯವಿಳಾಸಿನೀತಿಳಕಮಿರ್ಪವೊಲಿರ್ಪುದು ಬಣ್ಣಿಸಲ್ಕೆ ವಾ |
ಗ್ವಿಷಯಮೆ ವೀತಶೋಕಪುರಮುಂ ಸ್ಮರರಾಜನ ರಾಜಧಾನಿಯುಂ ||೮೧||

ಕಂ|| ಅದು ಕೊಯ್ಯುದಳಕೆಯಳಕಮೆ |
ನದು ಮಿಕ್ಕುದು ಭೋಗವತಿಯ ಭೋಗಮನದು ಮೆ ||
ಚ್ಚದು ಚೈತ್ರರಥದ ಚಿತ್ರಾ |
ಸ್ಪದಮನೆನಲ್ ವೀತಶೋಕಪುರವರಮೆಸೆಗುಂ ||೮೨||

ಮ|| ಸ್ರ|| ಎಳನೀರಿಂ ನಾರಿಕೇಳಂ ಬಳಯಿಸೆ ಕದಳೀಷಂಡಮುಂ ತುಂಬಿಯುಂ ಪೂ |
ಗೊಳದಿಂ ಪೂಗದ್ರುಮಂ ಬಲ್ಸೆಱೆವಿಡಿಯೆ ಮರಾಳಂಗಳಂ ಪದ್ಮಷಂಡಂ |
ನಳಿನೀಕಾಂಡಂಗಳಿಂ ಕೂರ್ವಿಸೆ ಕನರ್ಗೊನರಿಂ ಬಾಳಚೂತದ್ರುಮಂ ಚಾ |
ಪಳಮುಂ ಪುಂಸ್ಕೋಕಿಲಕ್ಕೋಲಗಿಸೆ ಸೊಗಯಿಕುಂ ತತ್ಪುರೋದ್ಯಾನ
ಷಂಡಂ ||೮೩||

ಮ|| ಪರಿಕಾಲಿರ್ತಟಿಯೊಳ್ ಮಡಲ್ತು ಮುಗುಳಿಂ ಪೂಗೊಂಚಲಿಂ ಪುಷ್ಪವ |
ಲ್ಲರಿಗಳ್ ಪೇಱಿದ ಖಂಡನುಣ್ಬಳಿಪಿನಿಂ ಪೆಣ್ದುಂಬಿಗಳ್ ಪಾಯ್ದು ಪು |
ಷ್ಪರಸಾಸಾರದ ತುಂತುರಿಂ ದೆಱಕ ನಾಂದಾಂದೋಳಿತಾಶೋಕಮುಂ |
ಜರಿಯುಂ ಸಾರ್ವುರ್ವ ಪಲ್ಲವೋಲ್ಲಸಿತಮುಂ ಬಾಲಾತಪಭ್ರಾಂತಿಯಿಂ ||೮೪||

ಚಂ|| ನಡೆಗಲಿಸುತ್ತುಮಂಚೆಗಳ ನೋದಿಸುತುಂ ಗಿಳಿಯಂ ಪಿಕಕ್ಕೆ ಮಾ |
ಮಿಡಿಗಳನಿಕ್ಕುತುಂ ನವಿಲನಾಡಿಸುತುಂ ಪೊಣರ್ವಕ್ಕಿಯಂ ಪುಣಿ |
ಲ್ವಿಡಿದು ಬೞಲ್ವಿನಂ ತಗುಳುತುಂ ಬನದೊಳ್ ಬಿನದಂ ವಿಲಾಸಮುಂ |
ಪಡೆಯೆ ನಿರಂತರಂ ತೊಲಗದಿರ್ಪುದು ಪೌರವಿಲಾಸಿನೀಜನಂ ||೮೫||

ಕಂ|| ಬನದಿಂ ಬನಕ್ಕೆ ನನೆಯಿಂ |
ನನೆಗಲರಿಂದಲರ್ಗೆ ಮೊರೆದು ಬಿರಯಿಗಳರ್ದೆ ಪಾ ||
ವನೆ ಪಾಱಿ ಪಾಱುಗುಂ ಕಾ |
ಮನಿಕಾಮಶಿಲೀಮುಖಂ ಶಿಲೀಮುಖನಿವಹಂ ||೮೬||

ವ|| ಅಂತು ಸೊಗಯಿಸುವುಪವನೋಪಕಂಠದೊಳ್

ಕಂ|| ಕದಳೀಗರ್ಭದೆ ವಿರಚಿಸಿ |
ಮದನಂ ಕುಪ್ಪಿಗೆಯುನಲ್ಲಿ ಕುಳಿರ್ವಮರ್ದಂ ತೀ ||
ವಿದನಡಕಿಲಿಟ್ಟನವನೆನಿ |
ಸಿದುವೆಸೆವ ಸಿತೇಕ್ಷುದಂಡಮಂಡಲಿ ಬನದೊಳ್ ||೮೭||

ಮ|| ಪೊಗೞ್ವರ್ ದೇಸೆಗೆ ದೇವರಿಂದುಕಳೆಯುಂ ನಿಸ್ಸಾರಮುಂ ತಮ್ಮ ಪ |
ತ್ತಗೆಯಿಂದಂ ಪದಿನಾಱನಲ್ಲಿ ಸವಿವರ್ ತಮ್ಮಲ್ಲಿ ಪುಲ್ಗಬ್ಬನಾ |
ವಗ ಮೊಂದಂ ಸವಿವಂತೆ ತಾವೆ ಜಗಕೆಲ್ಲಂ ದೇವರೆಂಬಂತೆ ತೀ |
ವುಗುಂ ಮುತ್ತಾನಿತ ವಿಕ್ಷುಯಂತ್ರನಿನದಂ ದಿಕ್ಕಾಮಿನೀಕರ್ಣಮಂ ||೮೮||

ಉ|| ಜಾಗದ ಬಲ್ವಲಾದ ಪೊನಲಿಂ ಬೆಳೆದೊಪ್ಪುವ ನಾಳಿಕೇರದಿಂ |
ಪೂಗವನಂಗಳಿಂ ದೆಲೆಯ ಬಳ್ಳಿಗಳಿಂ ತೆಱಪಿಲ್ಲೆನಲ್ ಬೆಡಂ |
ಗಾಗೆ ಬಹಿಸ್ತಟಂ ಪುದಿದ ತಾವರೆವಳ್ಳಿಯು ತಱ್ಪಿಸಿಂ ಪಸು |
ರ್ಪಾಗೆ ನಿರಂತರಂ ಸೊಗಯಿಸಿರ್ಪುವು ಪೆರ್ಗೆಱೆಗಳ್ ನಿರಂತರಂ ||೮೯||

ಕಂ|| ಮುದ್ರಿಸಿ ದೆಸೆಯುಂ ಚೆಲ್ವ |
ನ್ಮುದ್ರಿತಮೆನೆ ತಮಗೆ ಜೀರಕೋದ್ರವನವಹಾ ||
ರಿದ್ರಕವಾಟೋತ್ಕರಮು |
ನ್ನಿದ್ರಿತಕಮಲಾಕರಂಗಳಂ ಸೊಗಯಿಸುಗುಂ ||೯೦||

ಜಳವಿಹಗ ಬಹಳ ಕೋಲಾ |
ಹಳದಿಂದೆಣ್ದೆಸೆಯೊಳಿರ್ಪ ದೆಸೆಯಾನೆಗಳಂ ||
ಜಳಕೇಳಿಗೆ ಕರೆವಂತಿರೆ |
ಜಳಖಾತಿಕೆ ಬಳಸಿ ಚೆಲ್ವನೊಳಕೊಂಡಿರ್ಕುಂ ||೯೧||

ಪರಿಖಾವಳಯಮಲಂಘ್ಯಂ |
ಪರಿವೇಷ್ಟಿಸೆ ಕಡೆಯಲೆಂದು ಪಾಲ್ಗಡಲೊಳ್ ತಂ ||

ದಿರಿಸಿದ ಮಂದರಗಿರಿಗೇಂ ।
ದೊರೆಯಾದುದೊ ಪೊನ್ನಕೋಂಟೆ ವಿಕಟಾಟ್ಟಾಳಂ ॥೯೨॥

ಮುಗಿಲಟ್ಟಳಗಳ ಹರಿನೀ ।
ಲಗಭಸ್ತಿಧ್ವಾಂತಪಟಲದೊಳ್ ಮುನ್ನೆಂದುಂ ॥
ಮುಗಿದಱಿಯದುವಾ ಪುರದೊಳ್ ।
ಮುಗಿದುವು ದಿನಕರನ ಕೈಯ ಕೆಂದಾವರೆಗಳ್ ॥೯೩॥

ಎನಿತೊಳವು ನೆಗಳ್ತೆಯ ಪುರ ।
ವನಿತುಮ ನವಯುವದಿ ನಾಪುರಂ ಗೆಲ್ದೊಡೆ ಫಃ ॥
ವಿನ ಮಟೆ ಕೊಂಡಪುವೆನೆ ಮು ।
ತ್ತಿನೋಳಿ ತೆನೆಗೊಂಡು ಪಱಿವ ಮುಗಿಲಿಂ ಸುರಿಗುಂ ॥೯೪॥

ಧನದ ಪವಣಱಿಯರೆನಿಸಿದ ।
ಧನಪತಿಗಳ್ ಪುರದ ಪರದರವರಂ ನೋಡಲ್ ॥
ಧನಪತಿ ನಿರ್ಧನನದಱಿಂ ।
ಧನಪತಿಗಾಕ್ಷೇಪವಾಚಕಂ ತನ್ನಾಮಂ ॥೯೫॥

ಕದಳಿಯ ತಮೊಳದಸುಕೆಯ ।
ಪೊದಱಿನಿಸುವನೇಕರತ್ನಮಯಭೂಮಿಗಳಿಂ ॥
ದಿದು ಗೃಹಮಿದು ಗೃಹವನ ಮಂ ।
ಬುದನಾರ್ಗಂ ನಿಟ್ಟಿಸಲ್ಕೆ ಬಾರದು ಪುರದೊಳ್ ॥೯೬॥

ವ॥ ಆ ಪುರಸ್ತ್ರೀಯ ರತ್ನಕಂಠಿಕಾಮಯಖಲೇಖಾವಿಲಾಸಮಂ ತಳೆದು.

ಕಂ॥ ಪರಿಖೆಯ ತೆರೆವೊಯ್ಲಿಂದಂ ।
ತೆರಳ್ದು ತಡಿವಿಡಿದು ತೆಕ್ಕೆಗಟ್ಟಿದ ಪೊಂದಾ ॥
ವರೆಯ ರಜದಂತೆ ನೃಪಮಂ ।
ದಿರಮಂ ಬಳಸಿರ್ದ ಪೊಮ್ಮಗಿಲ್ ಸೊಗಯಿಸುಗುಂ ॥೯೭॥

ಶರದಭ್ರಂಗಳ್ ತಳ್ತು ।
ವರಿಸಿರ್ದುವು ನೀಳನಗಮನೆನೆ ಮದಜಲಸಿ ॥

ರ್ಝರವಾರಣದಿಂ ಸೊದೆವೆಟಿ |
ದರಮನೆಯಂ ಬಳಸಿದಾನೆಸಾಲೆಗಳಸೆಗುಂ ||೯೮||

ಪೂಜಾಸಿಂಧುರಮದಧಾ |
ರಾಜಲದಿಂ ತೀವಿದಗಟಿ ತಡಿವಿಡಿವಲರ್ದಂ ||
ಭೋಜಕ್ಕೆ ವೊಗಸಿದಳಿ ನೀ |
ರಾಜನ ಕುಸುಮವನೆ ಮುಸುಱಿ ವೊರೆಯುತ್ತಿರ್ಕುಂ ||೯೯||

ವ|| ಆ ವುಗಿಲಗವನಿಯಿಂದೊಳಗೆ

ಕಂ|| ಎಳಸಿದುವು ತುಹಿನಕರಮಂ |
ಡಳಮಂ ತೀವ್ರಾತಪಕ್ಕೆ ಸುಗಿದಿನನ ಹಯಾ||
ವಳಿ ಸಂದೆಯುಮೇನೆನಿಪುವು |
ಪಳುಕಿನ ಮಂದುರದೊಳಿರ್ದ ಜಾತ್ಯಶ್ವಂಗಳ್ ||೧೦೦||

ಅರಸಿಯರ ಬಳ್ಳಿಮಾಡದ |
ಕರುಮಾಡದ ಮಾಡಮಿರ್ಕೆ ಬಾಗಿಲ್ವಾಡಂ ||
ಬರೆಯಲ್ಕೆ ಚೀರಘಟ್ಟಗ |
ಮರಿದೆನಿಪುದು ಘಟಿತರತ್ನಘಂಟಾಜಾಲಂ ||೧೦೧||

ಚಂ|| ಅಡರ್ದು ಕಟಾಕ್ಷಚಂದ್ರಿಕೆ ಪಳಂಚೆ ಗವಾಕ್ಷದ ಚಂದ್ರಕಾಂತದಿಂ |
ದುಡುಗದೆ ಸೋರ್ವ ನೀರ್ವನಿಗಳುಣ್ಮಿದ ನರ್ತನಘರ್ಮವಾರಿಯೊಳ್ |
ತಡತಡವಾಗೆ ಮಾಧವಿಮುಗುಳ್ತೊಲಿರ್ದೆಳವೆಂಡಿರಿಂದ ಮೇಲಿಂ |
ಪಡೆದುವು ಲೀಲೆಯಂ ಮಣಿಮರೀಚಿವಿಚಿತ್ರಿತನಾಟ್ಯಶಾಲೆಗಳ್ ||೧೦೨||

ಕಂ|| ಕುಂದದ ರುಚಿ ತಮಗಳವಡೆ |
ಕುಂದದ ನವನಿಧಿಗೃಹಾಳಿ ಸಿರಿಯಂ ನೋಡಲ್ ||
ಬಂದಮರ್ದಿನ ತಾಯ್ಗುಡಲೆಂ |
ಬಂದಮನುಕ್ಕಂದಮಾಗಿ ತಳ್ದೆಸೆದಿರ್ಕುಂ ||೧೦೩||

ಮಣಿಕುಟ್ಟಿಮದಿಂ ಮಣಿತೋ |
ರಣದಿಂ ಮಣಿಕಳಶದಿಂ ತಮಸ್ತೋಮನಿವಾ||
ರಣದೆಡೆಗಳಿಂ ಗೃಹಗ್ರಾ |
ಮಣಿಯನಪೇಕ್ಷಿಸವು ನೃಪಕುಮಾರಗೃಹಂಗಳ್ ||೧೦೪||

ಚಂ॥ ಗಿಳಿ ಗಿಳಿವೆಣ್ಗೆ ಪೂಗಫಳಮಂ ಕಳಹಂಸಿಗೆ ಹಂಸನಬ್ಜಕಂ ।
ದಳಮನಿಭಂ ಕರೇಣುಗೆ ಲವಂಗದಳಂಗಳನೀವ ಚಿತ್ರಮಂ ।
ತಳೆದು ವಿಳಾಸಮಂ ತಳೆದ ರಾಣಿಯವಾಸದ ಬಳ್ಳಿಮಾಡದು ।
ಜ್ಜ್ವಳಮಣಿಭಿತ್ತಿ ಚೆಲ್ವನೊಳಕೊಂಡೊಳಕೊಂಡುದಪೂರ್ವಭಿತ್ತಿಯಂ ॥

ನಯನಮನೋಹರಂ ಮನುಜನಿರ್ಮಿತಮಲ್ಲದು ಮೇರು ಸಪ್ತಭೂ ।
ಮಿಯ ನೊಳಕೊಂಡು ಸನ್ನಿಹಿತಮಾದುದು ಸನ್ನಿದಮಾದ ಭೋಗಭೂ ।
ಮಿಯ ಭವನಾಂಗಭೂಜದ ವಿಗುರ್ವಣೆ ಸಂಶಯಮೇವುದೆಂಬ ನಿ ।
ಶ್ಚಯಮನೊಡರ್ಚಿ ವಿಸ್ಮಯರಸಾಕರಮಾ ಕರುಮಾಡಮೊಪ್ಪುಗುಂ ॥೧೦೬॥

ಕರು ಕರುವಿಂಗೆ ಕಣ್ಡೆಪವಿ ಕಲ್ಪಸದೋಜೆಗೆ ನಚ್ಚಿ ನಚ್ಚುಕಂ ।
ಡರಣೆಗೆ ಮುಂಡನಂ ಮುರವೆಸಕ್ಕಪವಟ್ಟೆಪಕಕ್ಕ ಜೌವನಂ ।
ಪರಿಣತಿ ಚಿತ್ರವಿದ್ಯೆಗೆನಲಲ್ಲದೆ ಚಿತ್ರಿಸಿಕೊಂಡು ಬೇಱೆ ಬಿ ।
ತ್ತರಿಪುದು ಮೊಗ್ಗೆ ಸಪ್ತತಳರಮ್ಯಮನಾ ಧರಣೀಶಹರ್ಮ್ಯಮಂ ॥೧೦೭॥

ಉ॥ ಬಾಳತೃಣಂಗಳಿಂದೆಳಸುಗುಂ ಪಸುರ್ಗಲ್ಗಳ ಕಾಂತಿಯಂ ಮೃಗೀ ।
ಬಾಳಕನಲ್ಲಿ ಕೆಂಬರಲ ಕೆಂದಳಿರಂ ಬಿಸಿಲೆಂದು ನಟ್ಟಿರುಳ್ ।
ಮೇಳಿಸುಗುಂ ರಥಾಂಗ ಮೊಱಲಿಕ್ಕಿದ ಮುತ್ತಿನ ಸೂಸಕಂಗಳಂ ।
ಬಾಳಮೃಣಾಳಮೆಂದೆ ಕದರ್ಕಲ್ಪಗೆಗುಂ ಕಳಹಂಸಪೋತಕಂ ॥೧೦೮॥

ಕಂ॥ ನೆಲೆಮಾಡದ ಪೊಸದೇಸಿಯ ।
ನೆಲೆಮಾಡದ ಸುರವಿಮಾನಮಯ್ದಲಣಂ ಕಿ ॥
ಪ್ಪೊಲೆಯಾದುವಿವಱ ತೆಱದಿಂ ।
ನೆಲೆಯಾದುವೆ ಸಕಲಜನದ ಕಣ್ಗಂ ಮನಕಂ ॥೧೦೯॥

ಬೆರಲಂ ಪಿಡಿಯಿಪ ಪುಳಕಾಂ ।
ಕುರಮಂ ಪುಟ್ಟಿಸುವ ನೋಡೆ ತಲೆದೂಗಿಪ ಸುಂ ॥
ದರಮೆನಿಪ ಕುಸುರಿವೆಸದಿಂ ।
ದರಮನೆಮಾಳ್ಪುದು ಮಯಂಗ ಮತಿವಿಸ್ಮಯಮಂ ॥೧೧೦॥

## 6. ಉದ್ಯಾನವರ್ಣನೆ.

ಹರಿಹರನೇ ಪ್ರಾಚೀನ ವೀರಶೈವಕವಿಗಳಲ್ಲಿ ಪ್ರಬಲನಾದವನು ಈತನು ಹಂಪೆಯ ಮಾದರಸನ ಮಗನು. ಈತನು ಹಳೆಯ ಬೀಡಿನಲ್ಲಿ ನರಸಿಂಹ ಬಲ್ಲಾಳ ರಾಯನ "ಕರಣಿಕ ಕುಲತಿಲಕ" ನಾಗಿದ್ದನು. ಒಂದಾನೊಂದು ಕಾಲದಲ್ಲಿ ರಾಜನು ಈತನನ್ನು ಲೆಕ್ಕ ಕೇಳಿದಾಗ ಈತನು ಕಡಿತವನ್ನು ಬಿಟ್ಟು ಕೈಗಳನ್ನು ಒರಸಿದನೆಂದೂ, ಅದೇನೆಂದು ರಾಜನು ಪ್ರಶ್ನೆಮಾಡಲು ಪಂಪಾವಿರೂಪಾಕ್ಷದೇವಾಲಯದಲ್ಲಿ ಆರತಿಯನ್ನು ಎತ್ತಿದಾಗ ಅಲ್ಲಿಯ ಮೇಲ್ಕಟ್ಟಿನ ಬಟ್ಟೆ ಹೊತ್ತಿಕೊಂಡುದನ್ನು ಕಂಡು ತಾನು ಕೈಯಿಂದ ಒರಸಿ ಆರಿಸಿದಂತೆ ಹರಿಹರನು ನುಡಿದನೆಂದೂ, ರಾಜನು ಅದನ್ನು ವಿಚಾರಿಸಿ ನೋಡಿ ನಿಜವೆಂದು ತಿಳಿದು ಆಶ್ಚರ್ಯಗೊಂಡು ಹರಿಹರನನ್ನು, ವಿರೂಪಾಕ್ಷಾಲಯದಲ್ಲಿಯೇ ಬರೆದುಕೊಂಡಿರಬಹುದೆಂದು ಕಳುಹಿಸಿಕೊಟ್ಟಂತೆಯೂ ವೀರಶೈವಗ್ರಂಥಗಳಲ್ಲಿ ಹೇಳಿದೆ. ಈತನು ಸುಮಾರು 1165ರಲ್ಲಿದ್ದನು. ಈತನು ಗಿರಿಜಾಕಲ್ಯಾಣವೆಂಬ ಚಂಪೂಗ್ರಂಥವನ್ನೂ ಶಿವಗಣದ ರಗಳೆ, ಪಂಪಾಶತಕ, ರಕ್ಷಾಶತಕ, ಶಿವಾಕ್ಷರಮಾಲೆ, ಮುಡಿಗೆಯಷ್ಟಕ ಎಂಬ ಗ್ರಂಥಗಳನ್ನೂ ಬರೆದುದಾಗಿ ತಿಳಿಯ ಬರುತ್ತದೆ. ಈ ಉದ್ಯಾನವರ್ಣನೆಯು ಗಿರಿಜಾಕಲ್ಯಾಣದಿಂದ ಉದ್ಧೃತವಾಗಿದೆ.

ಚಂ|| ಕರವೆಸೆವೀಳೆ ಬಾಳೆ ನವಪೂಗಚಯಂ ಪನಸಾಳಿ ಶಾಳಿ ಭೂ |
ಸುರಸುರಹೊನ್ನೆ ಜಂಬು ಘನನಿಂಬಕುಳಂ ಬಕುಳಂ ಕವುಂಗು ತೆಂ |
ಗುರುತರಮಾತುಳುಂಗತತಿ ಚೂತಕುಜಾತವಶೋಕೆ ಪೂಗೊಳಂ |
ಕುರವಕ ನಕ್ತಮಾಲ ಕೃತಮಾಲ ತಮಾಲದಿ ನೊಪ್ಪುಗುಂ ಬನಂ ||೧೧೧||

ಉ|| ಅಂಕುರದಿಂ ಪ್ರವಾಳಕುಳದಿಂ ನನೆಯಿಂ ಮುಗುಳಿಂ ಪ್ರಸೂನದಿಂ |
ದಂ ಕಿಱುಗಾಯ್ಗಳಿಂ ತೊರೆದ ದೋರೆಗಳಿಂ ತನಿವಣ್ಣಪಣ್ತಿಯಿಂ |
ದಂ ಕಳಕಂಠಕೂಜಿತದಿ ನೊಪ್ಪುವ ಷಟ್ಪದವೃಂದಗಾನದಿಂ |
ದಂ ಕಡುಕೊರ್ವಿ ಚಪ್ಪರಿಪ ರಾಜಶುಕಾಳಿಯಿನಾಮ್ರ ಮೊಪ್ಪುಗುಂ ||

ಮ|| ತರದಿಂದಂ ಕುರವಾಂಕುರಪ್ರಕರದಿಂದಂ ಪಲ್ಲವಂ ಪಲ್ಲವೋ |
ತ್ಕರದಿಂದಂ ಕುಸುಮಂ ಲಸತ್ಕುಸುಮದಿಂ ಚಂಚತ್ಫಲಂ ತತ್ಫಲೋ |
ತ್ಕರದಿಂ ಚಾರುಶುಕಂ ಶುಕಾವಳಿಗಳಿಂ ಭೃಂಗಾಳಿ ಭೃಂಗಾಳಿಯಿಂ |
ಪರಪುಷ್ಟಂ ಪರಪುಷ್ಟಪೋತಕಕುಲಂ ಪೊಣ್ಮಿರ್ಪುದಿಮ್ಮಾವಿನೊಳ್ ||೧೧೩||

ಚಂ|| ಸಲೆ ಸಹಕಾರದಲ್ಲಿ ಕೆಲವಂಕುರಮುಂ ಕೆಲವಾಪ್ರಸೂನಮುಂ |
ಕೆಲವು ಫಲಂಗಳಂ ಮಿಸುಪ ಚಂಚುಗಳಿಂ ನವನಾಸಿಕಂಗಳಿಂ |

ತೊಲಗದೆ ಜಿಹ್ವೆಯಿಂ ಕರ್ದುಕಿ ಮಾಸಿಸಿ ಪೀರ್ದುರೆ ಸೊರ್ಕುತುಂ ಕರಂ |
ನಲಿಯುತೆ ನಿಂಬಿ ತೊಂಡುಗೆಡೆಯುತ್ತೆ ಪಿಕಾಳಿ ಶುಕಾಳಿಯೊಪ್ಪುಗುಂ ||

ಕಂ|| ಕಾವೆಂಗೆಂದು ವಸಂತಂ |
ಭಾವಿಸಿ ಸಮೆದಿಟ್ಟ ನೀಲದರಮನೆಯೆನಿಕುಂ ||
ಮಾವಿನ ಪೂವಿನ ಕಾವಿನ |
ಸಾವಿನ ಮೊದಲಿಂಗೆ ತೀವಿದೆಳಗಿಳ ಬಳಗಂ ||೧೧೫||

ಬಿಗಿಯಪ್ಪಿ ಪೂಗಮೆಸಿಟ್ಟಾ |
ಳಿಗಳಂ ನಸು ಮುಚ್ಚಿ ಪಕ್ಷಯುಗಮೆಳಲೆ ರಸಂ ||
ದೆಗೆವೆ ವಸಿ ನಿಮಿರೆ ನಾಲಗೆ |
ಚಿಗುರುತ್ತಿರೆ ಸಪಿದುದೊಂದು ಗಿಳಿ ತಸಿವಣ್ಣಂ ||೧೧೬||

ಎಳಸಿ ನಗೆತಂದು ಮಿಕ್ಕಾ |
ಗ್ರಳಿಸುತು ಮಿಟ್ಟಿಂತಿರಪ್ಪಿ ಮಧುರರಸಂ ವೆ ||
ಗ್ಗಳಿಸೆ ಲವಲವಿಸುತುಂ ಪ |
ಣ್ಗಳೊಳಬ್ಬದದೊಂದು ರಾಜಶುಕನತಿಭರದಿಂ ||೧೧೭||

ಅರಳಲೆ ಮೇಲಾಡುತ್ತಿರೆ |
ಭರದಿಂ ಮೊಂಗಾಯ್ಗಳೊಲೆಯೆ ಕೆಲಬಲದೊಳ್ ನಿಂ ||
ದರಗಿಳಿಯು ತೊವಳ್ನುಡಿ ಬಿ |
ತ್ತರಿಸೆ ವಸಂತನ ಕುಮಾರನೆನಿಸಿತ್ತಾಮ್ರಂ ||೧೧೮||

ತಿಳಿನೀರಿಂ ತಾವರೆಯಿಂ |
ಕಳಹಂಸೆಯಿ ನೆಸೆದುವಲ್ಲಿ ಸರಸಿಜಷಂಡಂ ||
ತಳಿರಿಂ ನನೆಯಿಂ ಪೂವಿಂ |
ಫಳದಿಂ ದೆಸೆದಿರ್ಪುದಲ್ಲಿ ಚೂತಕುಜಾತಂ ||೧೧೯||

ಪಿಕಕುಳದ ಸೊರ್ಕು ಮಧುಕರ |
ನಿಕರದ ಮದವರಗಿಳಿಗಳ ಗರ್ವಂ ನವಚೂ ||
ತಕುಜದ ಮಲ್ಲಿಯು ದಾಡಿಮ |
ನಿಕಾಯ ದಂಕುರದೆ ಪುಷ್ಪದಿಂ ಫಲದಿಂದಂ ||೧೨೦||

ಕಂ॥ ಬೇರಿಂದಂ ನೀರುಂಡಾ।
ಬೇರಿಂದಗ್ರಂಬರಂ ಫಲಂಗಳ ನೀವೆಂ ॥
ಧಾರಿಣಿ ಗೆಂಬಂತಿರೆ ಫಲ।
ಪೂರಿತಪನಸದ್ರುಮಂಗಳೆಸೆದುವು ಬನದೊಳ್ ॥೧೦೧॥

ನೀರೆಱೆದುಪಕಾರಕ್ಕೆಳ।
ನೀರಿಂ ರುಚಿವೆರಸು ತೀವಿ ವನಪಾಲಕರಂ ॥
ಪಾರುತ್ತಿರ್ಪವೊಲೆಸೆದುವು।
ಸಾರಾಯಫಲಾಳಿ ನಾಳಿಕೇರಂ ಬನದೊಳ್ ॥೧೦೨॥

ವನಲಕ್ಷ್ಮಿಗೆ ಸಕಳವಿಳಾ।
ಸಿನಿಯರ್ ಬಳದೊಳ್ಗಳಿಂದೆ ಚಾಮರವಿಕ್ಕಲ್ ॥
ತನತನಗೆ ಸಿಂದರೆನೆ ತ।
ದ್ವನದೊಳ್ ಪೊಂಬಾಳೆಯಿಂದೆ ಪೂಗಮದೆಸೆಗುಂ ॥೧೦೩॥

ಕುಸುಮಶರಂಗೆ ವಸಂತಂ।
ಪೊಸಪೊಂಗಳಸಂಗಳಲ್ಲಿ ಸಾರಭ್ಯಸುಧಾ ॥
ರಸಮಂ ತೀವಿರಿಸಿದವೋ।
ಲೆಸೆದುವು ಫಳಭಾರಮಾತುಳುಂಗವ್ರಾತಂ ॥೧೦೪॥

ಬಾಗುತೆ ಬಲಿಯುತೆ ಪೊಳದಿಸಿ।
ದಾಗುತೆ ದಳವೇಱುತಿಡಿಕಿಱಿದು ಪಿಳ್ಳುತೆ ಪ ॥
ಣ್ಣಾಗುತೆ ಕಾಯ್ಗಳ್ ಪೊಱಮಡೆ।
ಬೀಗುತ್ತುಂ ಬೆಳದುವಲ್ಲಿ ಕದಳೀಷಂಡಂ ॥೧೦೫॥

ಅಳಿಗಳ ಗಿಳಿಗಳ ಕೋಗಿಲೆ।
ಗಳ ಕಳಹಂಸಿಗಳ ಪಾರಿವಂಗಳ ಕೋಕಂ ॥
ಗಳ ಪುರುಳಿಗಳ ನವಿಲ್ಗಳ।
ಕೊಳರ್ವಕ್ಕಿಗಳೆಸೆವ ಮನದ ಬಿನದಂ ಬನದೊಳ್ ॥೧೦೬॥

ಸಲಿದು ಕೊರಲೆತ್ತಿ ಕುಕಿಲಿಱಿ।
ದುಲಿದುಱೆ ಸುೞಿದೆಳಸಿ ಬಳಸಿ ಬೞಿಸಂದು ಪಳಂ ॥

ಚಲದೊಲೆದು ಪಕ್ಕಮಂ ಬಿ ।
ರ್ಚಿ ಲಲ್ಲೆಗೆಯ್ದುತ್ತು ಪಾರಿವಂ ಪಾರಿವದೊಳ್ ॥೧೨೭॥
ಚಾರುತರಂ ನಿರ್ಮಳಜಲ ।
ಪೂರಂ ಸಾರಭ್ಯಮುದಿತಮದಮಧುಕರರ್ಝುಂ ॥
ಕಾರಂ ಹಂಸಕುಲಕ್ರೀ೦ ।
ಕಾರಂ ರಾಜೀವಭರಿತನವಕಾಸಾರಂ ॥೧೨೮॥

ಚಂ॥ ಸುರರ ನಿವಾಸದಂತನಿಮಿಷಪ್ರಕರಂ ನಭದಂತಿರಂಬುಜ ।
ಧುರ ಮಧುಮಾಸದಂತೆ ಸಿತಪಕ್ಷಯುತಂ ರಥದಂತೆ ಚಕ್ರವಿ ।
ಸ್ತರ ಮುರವೈರಿಪದ್ಮಜಾಂಡದವೊಲಾತ್ತಲಸದ್ಭುವನಾಶ್ರಯಂ ಧನು ।
ರ್ಧರನ ಕಲಾಪದಂತೆ ರಮಣೀಯಶಿಲೀಮುಖಸಂಕುಳಂ ಕೊಳಂ ॥೧೨೯॥

ಕಂ॥ ನಳಿನದ ಕರ್ಣಿಕೆಯೊತ್ತಿನೊ ।
ಳಳವಡೆ ಕಣ್ಮುಚ್ಚಿ ಮಗ್ಗುಲಿಕ್ಕಿಯುಹಸ್ರಂ ॥
ತಳರದೆ ನಿದ್ರಾಸುಖದಿಂ ।
ಕಳಹಂಸೆಯು ಮಱಗಳಿರ್ಪುವಂತಾ ಕೊಳನೊಳ್ ॥೧೩೦॥

ಉ॥ ಕಾಮನ ಬಾಣದಿಕ್ಕೆವನೆಯೋ ಭ್ರಮರಾಳಿಯ ಸತ್ರಶಾಲೆಯೋ ।
ಭೂಮಿಯದೊಂದು ಗಂಧಗುಣಮಿರ್ಪೆಡೆಯೋ ವಿಲಸತ್ಸದಾಗತಿ ।
ಪ್ರೇಮದ ಸಾರಭಂಡಳದ ತಾಣವೊ ಪೇಱಮೆಂದು ಕಾಣ್ಬವರ್ ।
ಕಾಮಿಸೆ ಮಾಲೆಗಾಱರೊಸದೋವಿದ ಪೂವಿನ ತೋಂಟವೊಪ್ಪುಗುಂ ॥

ಚಂ॥ ಸುರಗಿಯ ಕಂಪು ಸಂಪಗೆಯ ಕಂಪದಿರ್ಗಂತಿಯ ಸೋರ್ಗಂಪು ಪಾ ।
ದರಿಯಲರ್ಗಂಪು ಪಡ್ಡಳಿಯ ಕಂಬಿರವಂತಿಯ ಕಂಪು ಮೊಲ್ಲೆಯೊಂ ।
ದುಂಬವಣೆಗಂಪು ಮಲ್ಲಿಗೆಯ ಕಂಪು ಸರೋಜದ ಕಂಪು ನೀಲನೀ ।
ರರುಹದ ಕಂಪು ಕೇತಕಿಯ ಕಂಪೆಸೆಗುಂ ಸಲೆ ಪುಷ್ಪವಾಟಿಯೊಳ್ ॥

ಕಂ॥ ಬಿಗಿಯುಪ್ಪಿ ಪುಷ್ಪರಸಮಂ ।
ತೆಗೆದೀಂಟಿ ತುಳುಂಕಿ ತೂಱಿ ತೇಂಕಾಡಿ ಮನಂ ॥
ಮಿಗೆ ಸೊರ್ಕಿ ಜನುಗಿ ಜೀವಿಸಿ ।
ಮಗಮಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ ॥೧೩೩॥
ಧೃತಕಂಟಕಮಾದೊಡಮು ।
ನ್ನತಿಯಿಂ ಕೇತಕಿಯೊಳಱಗಿದುದು ಮಧುಕರನಿ ॥

ನ್ನತಿರೂಕ್ಷರಾದೊಡಂ ಸ್ನೇ |
ಹಿತರಂ ಕಾಯಲ್ಕೆ ಬರ್ಪುದೇ ಧಾರಿಣಿಯೊಳ್ ||೧೩೪||
ನನೆಯುಂ ಮುಂಡಾಡುತೆ ಬ |
ಲ್ಲನೆಯುಂ ಬಲವೆಂದು ಮುಗುಳನಾಲಿಂಗಿಸಿ ಕಂ ||
ಪಿನ ಬಿರಿಮುಗುಳಂ ಚುಂಬಿಸಿ |
ಯುನುನಯದಿಂ ದಲರನಲೆದು ತೀವಿದುವಳಿಗಳ್ ||೧೩೫||

## 7. ಆಸ್ಥಾನ ವರ್ಣನೆ.

ಜನ್ನನು, ಹೊಯ್ಸಳನಾರಸಿಂಹರಾಜನ ಕಟಕೋಪಾಧ್ಯಾಯನಾಗಿಯೂ ಸುಮನೋಬಾಣನೆಂದು ಬಿರುದುಳ್ಳವನಾಗಿಯೂ ಇದ್ದ ಕಾಶ್ಯಪಗೋತ್ರದ ಕಮ್ಮೆವಂಶದ ಶಂಕರನೆಂಬ ಜೈನಕವಿಯ ಮಗನು ಇವನ ತಾಯಿಗೆ ಗಂಗಾದೇವಿಯೆಂದು ಹೆಸರು ಈತನು ಗಂಡವಿಮುಕ್ತ ರಾಮಚಂದ್ರ ದೇವಮುನಿಯ ಶಿಷ್ಯನು ಇವನು ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿಯೂ ಅಭಿನವಶರ್ವವರ್ಮನೆಂಬ ಬಿರುದನ್ನು ಪಡೆದವನಾಗಿಯೂ ಇದ್ದ ಎರಡನೆಯ ನಾಗವರ್ಮನಲ್ಲಿ ವಿದ್ಯಾಭ್ಯಾಸಮಾಡಿದನು ಇವನು 1209ರಲ್ಲಿ ಇದ್ದುದಾಗಿ ತಿಳಿಯಬರುತ್ತದೆ. ಶಬ್ದಮಣಿದರ್ಪಣವನ್ನು ಬರೆದು ಪ್ರಖ್ಯಾತನಾದ ಕೇಶಿರಾಜನು ಈತನ ಸೋದರಳಿಯನು. ಈತನು ಚೋಳಕುಲೋದ್ಧರಣನಾದ ನರಸಿಂಹರಾಜನ ಆಸ್ಥಾನಕವಿಯಾಗಿಯೂ ದಂಡಾಧೀಶ ಮಂತ್ರಿಪದವಿಗಳನ್ನು ಅಲಂಕರಿಸಿದ್ದುದಾಗಿಯೂ ತಿಳಿಯಬರುತ್ತದೆ. ಈತನು ಧನಿಕನಾಗಿಯೂ ಉದಾರಿಯಾಗಿಯೂ ಇದ್ದನು. ಈತನಿಗೆ ಬಲ್ಲಾಳರಾಜನು ಕವಿಚಕ್ರವರ್ತಿ ಎಂಬ ಬಿರುದನ್ನು ಕೊಟ್ಟಿದ್ದನು ಇದಲ್ಲದೆ ಇವನಿಗೆ ಕವಿಭಾಳಾಕ್ಷನೆಂಬ ಬಿರುದೂ ಉಂಟು. ಈತನು ಯಶೋಧರಚರಿತೆ, ಅನಂತನಾಥಪುರಾಣ, ಸ್ಮರತಂತ್ರ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಈ ಆಸ್ಥಾನವರ್ಣನೆಯು ಅನಂತನಾಥಪುರಾಣದಲ್ಲಿ ದೊರೆಯುತ್ತದೆ

ಮ|| ನೆರವಿಲ್ಲೀ ವಿಜಿವಲ್ಲಿಗಿಂಪೆಱಗದೇಂ ಕ್ರೀಡಾತ್ರಿಲೋಕೀಧುರಂ |
ಧರ ಮಾಗೋತ್ರಮಹೀಧರದ್ರಢಿಮ ಮಾಕೂರ್ಮೋನ್ನತಾಂಸಂ ದಿಶಾ |
ಕರಿಹಸ್ತಾಯತಮಾಂಸಲಂ ಭುಜಗರಾಜದ್ರಾಘಿಮಂ ವಿಶ್ವಭೂ |
ಭರಮಂ ತಾಳ್ದಿದುದೊಂದೆ ದಕ್ಷಿಣಭುಜಾದಂಡಂ ಧರಾಧೀಶನಾ ||೧೩೬||

ಚಂ|| ಚಪಲವಿಶಾಲಲೋಚನೆ ಜಯಾಂಗನೆ ಧಾರೆಯೊಳಿರ್ದು ನೋಡಿ ಮಾ |
ನ್ನಿಪಳೆನೆ ತೀಕ್ಷ್ಣಖಡ್ಗಭಿದುರಾಭದುಲಕ್ಷಣದತ್ತಚಿತ್ತನಾ |

ನೃಪನ ಕೃಪಾಣಪಟ್ಟಿಕೆಯ ನೋಲಗಿಪಂ ವಿಕರಾಳಿಕಾಳಿಕಾ |
ಳಪನ ವಿಚಂಡಿ ಚಂಡಿವೆರಸಂತಕನುಜ್ಜ್ವಲಕಾಂತಿದಂತಕಂ ||೧೩೭||

ವ|| ಯಮದಂಡಾಶನಿಪಾತದೊಂದು ಸವಿಯಂ ಶ್ರೀಸಿಂಹಸೇನಪ್ರಭಾ |
ಪಮನುಗ್ರಾಜಿಯೊಳುಂಡು ಕಂಡು ಬಱಿಯಂ ಪ್ರಾಣೈಕಮಾತ್ರಪ್ರಸಾ |
ದಮಹಾಲಾಭದಿ ನಾತನಾಜ್ಞೆ ತಿಲಕಂ ತತ್ಕೀರ್ತಿ ಪೂಮಾಲೆ ತೇ |
ಜಮೆ ಚೂಡಾಮಣಿಯಾಗೆ ಬಾಳ್ವರಿಳೆಯೊಳ್ ವೀರಾರಿಭೂಪಾಲಕರ್ ||೧೩೮||

ಕಂ|| ತನಗೆ ಶುಭಮೆಂದ ಮಂದಿಯು |
ಮನೆಯಂಗಣದೊಳಗೆ ಪಣ್ತು ಪರ್ವಿದ ಮಂದಾ ||
ರನಮೇರು ಪಾರಿಜಾತದ |
ಬನದೊಳ್ ಸಿರಿ ಮೆಱೆವಳತ್ತ ವನಕೇಳಿಗಳಂ ||೧೩೯||

ಬಿದಿ ಕೊಟ್ಟ ಶಾಸನಂ ಸುಕೃ |
ತದ ರಾಶಿಗೆ ಬರೆದ ಲಚ್ಚಣಂ ಸಂಸೃತಿಮಾ ||
ಹದ ಸಿದ್ಧಾಂತಂ ತಾನೆಂ |
ಬುದು ಭೂಪನಮೋಘವಾಕ್ಯಮಂ ಭುವನಜನಂ ||೧೪೦||

ಆ ನೃಪಮಕರಧ್ವಜನ ಮ |
ನೋನಯನ ಮರಾಳ ಮಧುಪಕೇಳಿಗೆ ಸರಸೀ ||
ಜಾನನೆ ಕೈರವಲೋಚನೆ |
ತಾನೆ ಜಯಶ್ಯಾಮೆ ಸರಸಿಜಾಕರಮಾದಳ್ ||೧೪೧||

ವ|| ರಮಣೀಯೋಜ್ಜ್ವಳ ಸಾರವಸ್ತು ಚಯದೊಳ್ ಸೌಂದರ್ಯ ಸೌಭಾಗ್ಯಭಾ |
ಗ್ಯಮನುತ್ಪಾದಿಸಿ ಪುಟ್ಟಿ ಮಾಡೆ ಸುಕುಮಾರತ್ವಂ ತೆಮಳ್ದಪ್ಪುದೆಂ |
ದು ಮನೋಜಾತನನಂಗನಾಗಿ ಮನದಿಂದಂ ಮಾಡಿದಂ ಪೆಣ್ಣವಿ |
ಧ್ವಮನೆಂಬಂತುಟು ಗಾಡಿ ರೂಢಿಯ ಜಯಶ್ಯಾಮಾಮಹಾದೇವಿಯಾ ||೧೪೨||

ವ|| ಅಲರಂಬಂ ಶಶಿಬಿಂಬದೊಳ್ ಮಸೆದವೋಲ್ ಕೂರ್ಪಿಂಗಡರ್ಪಾದ ಕ |
ಣ್ಮಲರ್ಗಳ್ ದರ್ಪಣರತ್ನಮಂ ತಿರುಳ ಮಿಂಚಿಂದೊಪ್ಪವಿಟ್ಟಂತಿರು |
ಜ್ಜ್ವಲಿಪಾಸ್ಯಂ ಪೊಸಮುತ್ತನಾಯ್ದು ಮರ್ದಿನೊಳ್ ತೋಯ್ದಂತೆ ನೇರ್ಪಟ್ಟ ಸಿ |
ಮುರ್ಲದಂತಚ್ಚವಿ ಬೇಡಿದರ್ಗೆ ವರವೀವಂತಿರ್ದುದಾ ಕಾಂತೆಯಾ ||೧೪೩||

ವ|| ಸುಮನೋಬಾಣಮನಿಕ್ಷುಚಾಪಲತೆಯಂ ಭೃಂಗಾವಳೀಜೀವೆಯಂ |
ಚಮರೀಜಾಯತಕೇತುವಂ ನಯನದಿಂ ಭ್ರೂಲೇಖೆಯಿಂ ಬಾಸೆಗಿಂ |

ಸುಮಹದ್ವೇಣಿಯಿನಪ್ಪುಕೆಯ್ವ ಜಗಮಂ ಗೆಲ್ವನ್ನಶಸ್ತ್ರಾಧಿದೈ |
ವಮಿದೆಂದಾಗಳು ಮಾಮಹಾಸತಿಯ ರೂಪಂ ಕಾಮನಾರಾಧಿಪಂ ||೧೪೪||

ಮ|| ತಳಿರ್ಗಳ್ ಬೀೞಿಡೆ ಹಸ್ತಪಾದತಳರಾಗಶ್ರೀಗೆ ಕಣ್ಗೊಳ್ವ ಕ |
ಣ್ಗಳ ಸಿರ್ವಾಲ್ಪದ ಮಾಲೆ ಕೈರವವನಂ ಸ್ಮೇರಾಸ್ಯಬಿಂಬಕ್ಕೆ ಮುಂ |
ಗಳನೀರಾಜನಭಾಜನಂ ವಿಧು ಮರಾಳಂ ಮಂದಯಾನಕ್ರಮಂ |
ಗಳ ಕಾಲ್ಗಾಪೆನ ಬಣ್ಣಿಸಲ್ ಪವಣೆ ರೂಪಂ ಭೂಪನರ್ಧಾಂಗಿಯಾ ||೧೪೫||

ವ|| [ಇಂತಪ್ಪನಿಜಕಾಂತೆವೆರಸಾಮಹಾರಾಜಂ] ಒಡ್ಡೋಲಗಂಗೊಟ್ಟು ಕುಳ್ಳಿ
ರ್ಪಾಗಳ್,

ಚಂ|| ಪೊಳೆವೆಳತುಂತುರಂ ತುಱುಂಗೆ ಸೂಸುವ ದುಗ್ಧತರಂಗಮಾಲೆ ಕಂ |
ದಳಿರ್ಗಳೊಳಂಚೆ ಸಂಚಳಿಪನಂಗಜಜಂಗಮಕಲ್ಪವಲ್ಲಿ ಮುಂ |
ಜುಳಕರಪುಂಜಮಂ ಕೆದಱುವೈಂದವಕೋರಕಜಾಲಮೆಂಬಿನಂ |
ಬಳಸಿದುದಾ ಮಹೀಪತಿಗೆ ಚಾಮರವಿಕ್ಕುವ ಕಾಮಿನೀಜನಂ ||೧೪೬||

ಮ|| ಕ್ಷಮರಾಪ್ತರ್ ನಯಕೋವಿದರ್ ಸಕಲಶಾಸ್ತ್ರಜ್ಞರ್ ಸ್ವಕೀಯಾನ್ವಯ |
ಕ್ರಮಸಿದ್ಧರ್ ಮತಿಬುದ್ಧಿಯುದ್ಧ ರುಪಧಾಶುದ್ಧರ್ ಕುಲೀನರ್ [ನೃಪೇಂ |
ದ್ರ]ಮೃಗೇಂದ್ರಾಸನ ಪಾದವಿಷ್ಟರದೊಳಿರ್ದರ್ ಸಂದ ಪಂಚಾಂಗಮಂ |
ತ್ರಮಮಾತ್ಯಾಕೃತಿವೇಷಮಂ ತಳೆದವೋಲ್ ಪಂಚಪ್ರಧಾನೋತ್ತಮರ್ ||೧೪೭||

ಚಂ|| ಪರಿಜನಜೀವನಂ ಸಕಲದೇಶಸಮಾಹಿತವೃತ್ತಿ ಭೂತಳೇ |
ಶ್ವರಧನವೃದ್ಧಿ ರಾಜಗೃಹಧರ್ಮಕಳಾನೃಪ ಸೇವೆಯುಂ ನಿರಂ |
ತರಮಿವರೊಂದು ಕೞುವೊನೆ ಬಾಳ್ಮನೆ ಯಾನಿರೆ ಸಲ್ವುದೆಂಬಿನಂ |
ಕರಣಗಣಾಗ್ರತಸ್ಸರರ ಮಾಲೆ ಮನಕ್ಕೆಸೆದತ್ತು ಲೀಲೆಯಿಂ ||೧೪೮||

ಕಂ|| ಇವು ವಿದ್ಯಾಪರ್ವತಮೆಂ |
ಬ ವಿಳಾಸಾನ್ನತ್ಯದಿಂದೆ ಮಣಿಮಯಪೀಠೀ ||
ನಿವಹದೊಳೆಸೆದುದು ಗಡಣಂ |
ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳಾ ||೧೪೯||

ಮ||ಸ್ರ|| ಜಗತೀಶಂ ನೋೞ್ಪಿಕಣ್ಗಂ ನುಡಿವ ದನಿಗ ಮಿಂಬಾಗಿ ಕುಳ್ಳಿರ್ದರಂದೋ|
ಳಿಗಳಿಂ ದಂಡಾಧಿಪರ್ ಮಂಡಳಿಕ ರಧಿಕಸಾಮಂತ ರಂತರ್ನಿಯುಕ್ತರ್ |
ಬಗೆಕಾಱರ್ ಗಾಯಕರ್ ಪಾಠಕ ರಡಪದವರ್ ನೆತ್ತಕರ್ ವಾಂಸಕಾಱರ್ |
ನಗೆಕಾಱರ್ ವಾದ್ಯಕರ್ ಚಿತ್ರಕ ರಣುಗಿನವರ್ ಸೂಟಿವಾಳರ್ ಪಯಾಳರ್ ||

ವ|| ಮತ್ತಂ—

ಚಂ|| ಕಡುಮುಳಿಸೇಱೆ ಮಲ್ಲವೆಸರಿಂ ಗಜಮಾಂತೊಡ ಮುಱಿಗೆ ಠಾಯೆಯೊಳ್ |
ಕೆಡಪದೊಡೇಕೆ ಮಲ್ಲತನಮೊಲ್ಲದೆ ದಾನಕದೊಳ್ಪೊದಱಿದ್ದೊಡಾಂ |
ಪಿಡಿದುದೆ ಕತ್ತರಂ ಕರವಳಂ ಸಿರವಟ್ಟಣಿ ಹತ್ತಿ ಡೊಕ್ಕರಂ |
ಚಡಿಕೆ ತುಳಾಡಿ ಪೊಟ್ಟಮುಹುಹಂ ಮುಹುಡಂ ದಣಿವಟ್ಟ ಪಟ್ಟಸಂ ||೧೫೧||

ವ|| ಎಂದು ಮಲ್ಲಪಾತನಾಡಿ ಪೊಡೆಮಟ್ಟು ಕುಳ್ಳಿರ್ದ ಜಗಜಟ್ಟಿಗಳ ಗೊಂದಣ ಮೆಸೆದಿರ್ದುದಂತು ಮಲ್ಲದೆಯುಂ,

ಚಂ|| ಜಗಮನದಿರ್ಪಲಾರ್ಪ ಬಿರುದಾಂತ ಬಲಂಗಳನೆತ್ತಿ ನುಂಗಿ ಮ |
ತ್ತುಗುಱಿದ ಚೀರವರ್ತಿನಿಕರಂಗಳ ಬಾಳ್ಮೊದಲಾದ ಚಾಗದೋ |
ಲಗದ ವಿಡಂಬಡಂಬರಕೆ ಕಣ್ಣೆಲೆಯಾದ ವಿಲಾಸಮೊಪ್ಪೆ ಗ |
ದ್ದುಗೆಯೊಳಗಿರ್ದುದಗ್ಗಳಿಕೆಯುಗ್ಗದ ಪಾರ್ಥಿವಪುತ್ರಸಾರ್ಥಕಂ ||೧೫೨||
ವ|| ಅದಲ್ಲದೆಯುಂ,

ಮ|| ಬಿರುದಂ ಮೇಳೆಯದೊಳ್ ತೊಡರ್ಚಿ ಬಿರುದಂಕಂ ಮೆಚ್ಚಿ ತಂ ಸಾಚ್ಚಿ ಮು|
ಚ್ಚರದಂಕಂ ಕಳನಲ್ಲಿ ನೋಡು ಬಯಲೊಳ್ ಬೇಡೆಂದು ಕೈಯಾಣೆಯಿ |
ಟ್ಟರೆ ಸಂಕಂ ಪಱೆಗುಟ್ಟ ವಂಸವಳದಂಕಂ ಬಾಸೆಯಂ ಸಾಱಿ ಬಿ |
ತ್ತರದಿಂದಿರ್ದುದು ಮೊತ್ತದಿಂದೆ ಭೃಗುವಿದ್ಯಾಮೂರ್ತಿ ಮಾರ್ತಳ್ತಿವೊಲ್ ||
ಮತ್ತಂ—

ಮ||ಸ್ರ|| ತಲೆಯೊಳ್ ಚೌದಂತನನ್ನಾನಗೆ ಮಲೆತೊಡೆ ಮೈಹಾಳಿಯೊಳ್ದಿಗ್ಗಜಂ ಚೀ|
ಬಲಿಯೊಳ್ ಕಾಲ್ಗೋದೊಡೇಕಟ್ಟಣಕದ ಮದದೊಳ್ ಕಣ್ಬೊಲಕ್ಕಾವರೊಪ್ಪುಂ |
ಸುಲಿದೋಡಿತ್ತಾದೊಡಾ ರೋಹಕತನಮ ನೆಲೇ ಕೇಳ ಸೀಂ ನಿನ್ನ ಕೈಗೈ |
ವಲಿಯೊಳ್ ಕಲ್ತಾತನಲ್ಲಿಂ ಕುತು ಸಮಯಮನೆಂದಂಕದಾಸ್ವಾರರಿರ್ದರ್ ||೧೫೪||
ಮ|| ಅದಲ್ಲದೆಯುಂ,

ಮ|| ಖುರಮುಂ ನಾಸಿಕೆ ಸೂಸುವಂದದೆ ಬೆಡಂಗಂ ತ್ರಾಸಿನೊಳ್ ತೂಗಿದಂ |
ತಿರೆ ಲೋಹಕ್ಕೆ ನಿರಾಳಮಾಗಿ ಮೊಗಮಿತ್ತುದ್ಭಾವಮುಂ ಜಾಬುಗ |
ಲ್ಪರಿವಾ ತಾಸೆಯ ಪೈಸರಂ ಮೆಱೆವ ಚಲ್ವಂ ದೇವ ನೀಮೋಱಿ ನೋ |
ಡಿರೆ ಚಿತ್ತಂಬಡೆದಪ್ಪುವೆಂದು ಮೆಱೆದರ್ ವಾಹಂಗಳಂ ವಾಹಕರ್ ||೧೫೫||
ವ|| ಅಂತುಮಲ್ಲದೆಯುಂ,

ಮ|| ತನಿಗಂಪುಂ ಕಡುಸೊಂಪು ಮಗ್ಗಳದ ಪೆಂಪುಂ ಕೂಡೆ ಕೈವಂದ ನಂ |
ದನದಂ ತೋಲಗಮಿರ್ದುದೊರಿ ಪುರಿ ಮಾಗಾ ಬೈಸ ಜಾ ತೂ ಹಳೂ |
ವಿನವೀಸಾ ಪಿಪಸಾ ವುಘೀ ವುಘವುಘೀ ಹೋ ಜಾಗು ಬೊಲ್ಲೆಂಬ ಗೋ |
ಸನೆಯುಂ ತಾಳ್ದುದು ಗಂಡುಗೋಗಿಲೆಯ ತೊಂಡಂ ಪ್ರಾತಿಹಾರ್ಯಸ್ವನಂ||

---

## 8. ಕೃಷ್ಣನ ಬಾಲಲೀಲೆ.

ಕೃಷ್ಣನ ಬಾಲಲೀಲೆಯನ್ನು ವರ್ಣಿಸುವ ಈ ಪದ್ಯಗಳನ್ನು ಮಹಾಬಲ ಕವಿಯು ನೇಮಿನಾಥಪುರಾಣದಿಂದ ಉದ್ಧರಿಸಿದೆ. ಈ ಕವಿ ಜೈನಮತದವನು, ಭಾರದ್ವಾಜಗೋತ್ರದ ರಾಯದೇವನೆಂಬಾತನ ಮಗನು. ಇವನ ಗುರು ಮೇಘಚಂದ್ರನು. ಈತನು ಮಾಧವಚಂದ್ರನೆಂಬ ಗುರುವಿನ ಬಳಿಯಲ್ಲಿ ವಿದ್ಯಾಭ್ಯಾಸ ಮಾಡಿದಂತೆ ಕಾಣುತ್ತದೆ. ಈ ನೇಮಿನಾಥಪುರಾಣವು 1254ರಲ್ಲಿ ಹುಟ್ಟಿದುದಾಗಿ ತಿಳಿಯಬಂದಿದೆ.

ಉ|| ತೊಟ್ಟಿಲೊಳಿಟ್ಟು ತೂಪಿಱಿದು ತೂಗಿ ಸೊಡಗ್ಗುಡಿಗರ್ಪಿನಿಂದೆ ಬೊ |
ಟ್ಟಿಟ್ಟು ಬೞಿಕ್ಕೆ ಜೋಗುಳದ ಗಾವರವಾತನ ಕರ್ಣಜಾಲದೊಳ್ |
ಪುಟ್ಟಿಸೆ ಸೋಲಮಂ ನಲಿದು ನುಣ್ಬರದಿಂದಮೆ ಪಾಡಿ ತೂಂಕಡಂ |
ಪುಟ್ಟಿಸುತಂ ಯಶೋದೆ ಪರಿಪಾಲಿಸುತಿರ್ದು ಮಾಕುಮಾರನಂ ||೧೫೬||

ಕಂ|| ದಾ ಯೆನೆ ನೋಡುವ ಕರೆದ |
ಯ್ಯಾ ಯೆನಲಾರಯ್ವ ತನ್ನ ದನಿಯಂಱಿದುೞಿದರ್ ||
ಬಾಯೆನೆ ಬಾರದೆ ಮೆಯ್ಯುತ್ತಱಿ |
ದಾಯಿರವಿಂದತ್ತಲೆಸೆದ ಮತಿಯತಿಶಯಮಂ ||೧೫೭||

ಜನನಿ ನಿರೀಕ್ಷಿಸಿ ಚಿತ್ತಮ |
ನನೂನಹರ್ಷಕ್ಕೆ ಪಕ್ಕುಗುಡುತಿರಲಿರಲಿಂ ||
ತನುಗತಿಯಿಂದೇಳ್ಗೆಯು ಚಂ |
ದ್ರನ ತೆಱದಿಂ ಕೃಷ್ಣನೆಯ್ದೆ ನಿಷ್ಣಾತತೆಯಂ ||೧೫೮||

ವ|| ಪೂತನೆಯೆಂಬ ದೇವತೆ.

ಚಂ|| ಮೊಲೆಗಳೊಳೂಡಿ ಕೂಡಿ ವಿಷಮಂ ವಿಷಮಾಶಯೆ ಬಂದು ಪೊಕ್ಕು ಗೋ |
ಕುಲದಧಿನಾಥನಾಲಯಮನಲ್ಲಿಯ ಮಾನವಮಾನವೀಸಮೂ |
ಹಲಪನಮುದ್ರೆಯಂ ಪಡೆದು ಮಾಯೆಯಿನೆತ್ತಿ ತಳಂಗಳಿಂದೆ ತೊ |
ಟ್ಟಿಲ ಶಿಶುವಂ ಯಶೋದೆಯವೊಲಾಡಿಸುತಂ ಮೊಲೆಯೂಡುತಿರ್ದಮಂ ||

ಕಂ|| ಅರುಣಾಂಬು ಮೊಲೆಗಳಿಂದಂ |
ಸುರಿವನ್ನಂ ಪಿಡಿದು ಪೀಡಿಸುತ್ತುಂ ಪೀರು ||
ತ್ತಿರೆ ಬಲ್ಪಿಂ ಬೆದಱಿ ನಿಶಾ |
ಚರಿ ಬೇಗಂ ಬಿಟ್ಟು ಪೋದಳಾ ಬಾಲಕನಂ ||೧೬೦||

ಉ|| ಬಾಲಕನಂ ಬೞಿಕ್ಕಲನುಗೆಯ್ದಪೆನೆಂದು ಯಶೋದೆ ಕಂಡು ತ |
ನ್ನಾಲಯದಗ್ರದಲ್ಲಿ ಸವನಾಗಿರಿಸಿಟ್ಟ .. ... ..ಡಾ ಮಹಾ |
ಕಾಳಿಯೆನಿಪ್ಪದೇವಿ ಬಲಿಭುಕ್ಖಗರೂಪಿನೊಳೆಯ್ದೆ ವಂದು ತ |
ದ್ಬಾಲನ ಕಣ್ಗಳಂ ನಿಶಿತಚಂಚುವಿನಿಂ ದಿಱಿಯಲ್ಕೆ ಸಾರ್ವುದುಂ ||೧೬೨||

ಕಂ|| ಪೊಱಕ್ಕೈಯಿಂ ಪೊಯ್ದೊಡೆ ಬ |
ಲ್ಗಱಿಗಳ್ ಸುರಿದವಸಿಯಲ್ಲಿ ಬೀೞ್ವುದು ಮದನಾ ||
ಕಿಱುಳಂ ಚಂಚುವ ಮೊನೆಗಳ್ |
ಮುಱಿವಿನಮಿಟ್ಟೊರಸೆ ಬಿಟ್ಟು ಪೋದತ್ತಾಗಳ್ ||೧೬೩||

ವ|| ಬೞಿಕ್ಕಂ ಕೆಲವು ದಿನಕ್ಕೆ—

ಕಂ|| ಮಿಸುಗುವ ಪೊಂಗವಡಿಕೆ ಪೆಱೆ |
ನೊಸಲೊಳ್ ತಳತಳಸಿ ಪೊಳವ ಮಾಂಗಾಯು ಕಿವಿಯೊಳ್ ||
ಕುಸುರಿವೆಸನಪ್ಪ ನೂಪುರ |
ಮೆಸದಿರೆ ಪದತಳದೊಳಂದು ತಳರಡಿಯಿಡುತುಂ ||೧೬೪||

ವ|| ಅರ್ಜುನಿಯೆಂಬ ದೇವತೆ ಅರ್ಜುನಾಂಘ್ರಿಪಯುಗಳಾಕಾರದಿಂದಿರೆ ತದಂತರ
ಮಂಪೊಕ್ಕಾಡುತಿರ್ಪಲ್ಲಿ,

ಬತ್ತುವುದು ಮಾತನಡಿಯಿಂ |
ದೊತ್ತೆನಿಳಲ್ಕಿಟಲೆನುತ್ತೆ ಮುಱಿವುದು ಮವಳ ||
ತ್ತೆತ್ತಲ್ಲುಂದ ನಿವಂ ಪುರು |
ಷೋತ್ತಮನೆನ್ನಳವೆ ತೊಲೆಗಲೆನುತುಂ ಪೋದಳ್ ||೧೬೫||

ವ|| ಬೞಿಕ್ಕಂ ಕೆಲವುದಿನಕ್ಕೆ ತಾಳಜಂಘೆಯೆಂಬ ದೇವತೆ,

ಕಂ|| ತಾಳತರುವಾಗಿ ಬಾಳಕ |
ಕೇಳೀವನದಲ್ಲಿ ತೋರವಣ್ಗಳನಂತಾ ||
ಬಾಳನನಿಡೆ ಕೈಗೈಯಿಂ |
ಬಾಳನವಂ ಪಿಡಿದು ಭರದಿನಿಡಲಾ ತಾಳಂ ||೧೬೬||

ಕೆಡೆವುದು ಮದು ಭೋಂಕನೆ ಬಱ |
ಸಿಡಿಲೆಱಗಿದ ಭೂಜದಂತೆ ಗೋಪಿ ಯದಂ ಕಂ ||
ಡೆಡೆಗಲಸಿ ಬಾಗಿ ಮೊಲೆಯುಂ |
ಕುಡುತ್ತುಮಂ ದೆತ್ತಿಕೊಂಡು ಮುದ್ದಾಡಿಸುತುಂ ||೧೬೭||

ಎನ್ನಾನೆ ಯೆನ್ನ ಹೋಱಿಯಿ |
ದೆನ್ನಯೆ ಕುಲದೈವಮೆನ್ನ ಸಿಂಗಮೆನುತ್ತಿ ||
ರ್ಪನ್ನಗಮಾ ಮಹಿಜಾತಂ |
ತನ್ನಿಂದಂ ತಾನದೃಶ್ಯಮಾದತ್ತಾಗಳ್ ||೧೬೮||

ವ|| ಅಲ್ಲಿಂ ಬೞಿಕ್ಕಂ ಕೌಶಾಂಬಿಯೆಂಬ ದೇವತೆ ಕರಂ ಕೆಳರ್ದು,

ಮ|| ಬೆಳರ್ಗೆಂಪಂ ಕಿವಿ ಬೀಱಿ ಸಂಘಟಿಸುತುಂ ಬಾಯ್ವಿಟ್ಟು ಕಣ್ಣೀರ ಬೊ |
ಬ್ಬುಳಿಯಂತುರ್ವರ ಯುರ್ವೆ ಗೊಂತಱಿಡುತುಂ ಮಳ್ಳಿರ್ದ ಬಾಲಂ ಪಿಯ |
ತ್ತಳಸಮ್ಮಾರ್ಜನಿಯಂತೆ ಸಂಚರಿಸೆ ಕೋಪಾಟೋಪದಿಂ ತೊತ್ತಳಂ |
ದುಳಿಯಲ್ಕೆೞ್ತಿರೆ ರಾಸಭಾಕೃತಿಯಿನಾಗಳ್ ರೌದ್ರಮಂ ಬೀಱುತುಂ ||೧೬೯||

ಕಂ|| ತರುಣಾನದೞ ಪರಭಾಗದ |
ಚರಣಂಗಳ ನಡಸಿ ಪಿಡಿದು ತಾನಾದುವರುಂ ||
ಹರಿಯ ಖರಧರೆಯೊಳೂರ್ಪಂ |
ತಿರುಪುತ್ತೀಡಾಡಲೋಡಿ ಪೋದತ್ತಾಗಳ್ ||೧೭೦||

ವ|| ಬೞಿಕ್ಕೊಂದು ದಿವಸಂ ಕೇಶಿಯೆಂಬ ದೇವತೆ ಕರಂ ಕೆರಳ್ದು,

ಮ|| ಖುರಘಾತಕ್ಕೆ ಧರಿತ್ರಿ ಬಾಯ್ವಿಡೆ ಕುಕಿಲ್ಗೆಯ್ತಕ್ಕೆ ಕುತ್ಕೀಲಗ |
ಹ್ವರದೊಳ್ ಮಾರ್ದನಿ ಪುಟ್ಟೆ [ಸೀತ್ಕರಿಸೆ] ಕರ್ಣದ್ವಂದ್ವಮುಂ ಕಣ್ಗಳುಂ |
ದುರಿಯುಣ್ಮತ್ತಿರೆ ಕೞ್ತೆಗಳ್ ತುಱುಗಳಾವೆೞ್ತಮ್ಮಗಳ್ ಬೆರ್ಚಿ ಬೀ |
ೞ್ತಿರೆ ಭೀಷ್ಮಂ ಭಯಮುಮಂ [ನೆರಂ] ಬಡೆಯುತುಂ ತನ್ನಲ್ಲಿಗೆಯ್ತರ್ಪುದುಂ ||

ಕಂ|| ಹರಿಹರಿದದೞಧರೋತ್ತರ |
ದೆರಡುಂ ಕಟಮಂ ಕರಾಗ್ರದಿಂ ಪಿಡಿದಟ್ಟಾ ||
ಸುರಮಾಗಿ ಸೀಳ್ ಮಾಯಾ |
ಶರೀರಮಂ ಬಿಟ್ಟು ಕೇಶಿ ಕೆಟ್ಟೋಡುವುದುಂ ||೧೭೧||

ವ|| ಮತ್ತೊಂದು ದಿವಸಂ ಪ್ರತುಕೆಯೆಂಬ ನಿಶಾಚರಿ ರೌದ್ರರಥಾಕಾರಮಂ ಕೈಕೊಂಡು ಕುಮಾರನಂ ಕೊಲಲೆಂದು,

ಮ||ಸ್ರ||ತರುಣಾಂತಮಾಲಯಾಗ್ರಾವನಿಯೊಳಿರೆ ಯಥಾಸ್ವೇಚ್ಛೆಯಿಂದಾಡುತುಂ ಮೇ|
ಲ್ವರಿತರ್ಪುದ್ರೇಕದಿಂದುರ್ವರೆ ಯದಿರ್ವಿನೆಗಂ ಬರ್ಪುದಂ ಗಾಲಿಕೀಲ |
ಚ್ಚರೆಗೀಲೀ ಪಾಲವಟ್ಟಂಗಳಿಗಳವನಿತಂ ನುರ್ಗುನುರ್ಗಾಗಿಸುತ್ತುಂ |
ಪರೆವನ್ನಂ ಬಾಲಕಂ ಭಂಡಿಯನೊದೆದೊಡದಂ ಕಂಡು ಗೋಪಾಲಜಾಲಂ ||

ವ|| ಬೆಱಗಾದುದು.

## 9. ವಿದ್ಯಾಭ್ಯಾಸ.

ಈ ಪದ್ಯಗಳಲ್ಲಿ 1672ರಿಂದ 1704ರ ವರೆಗೆ ಮೈಸೂರು ಸಂಸ್ಥಾನವನ್ನಾಳಿದ ಚಿಕ್ಕದೇವರಾಜ ಒಡೆಯರವರ ವಿದ್ಯಾಭ್ಯಾಸಕ್ರಮವು ವರ್ಣಿಸಲ್ಪಟ್ಟಿರುವುದು. ಇದನ್ನು ಚಿಕ್ಕದೇವರಾಜವಿಜಯವೆಂಬ ಗ್ರಂಥದಿಂದ ಉದ್ಧರಿಸಿ ಬರೆದಿದೆ. ಈ ಗ್ರಂಥವನ್ನು ಬರೆದಾತನು ತಿರುಮಲೆಯಾರ್ಯನೆಂಬ ಶ್ರೀವೈಷ್ಣವ ಬ್ರಾಹ್ಮಣನು. ಈತನ ತಂದೆ ಅಳಹಿಯಸಿಂಗರಾರ್ಯನು, ತಾಯಿ ಸಿಂಗಮ್ಮನು. ಈತನು ಕ್ರಿ. ಶ. 1645ಕ್ಕೆ ಸರಿಯಾದ ಪಾರ್ಥಿವ ಸಂವತ್ಸರದ ಆಶ್ವಯುಜದಲ್ಲಿ ಜನಿಸಿ, 1706ರಲ್ಲಿ ಮೃತನಾದನೆಂದು ಗೊತ್ತಾಗುತ್ತದೆ. ಈತನು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಅದ್ವಿತೀಯವಾದ ಪಾಂಡಿತ್ಯವನ್ನು ಪಡೆದು ಅನೇಕಗ್ರಂಥಗಳನ್ನು ರಚಿಸಿ ರಾಜಾಸ್ಥಾನದಲ್ಲಿ ಕವಿಶ್ರೇಷ್ಠನೆನ್ನಿಸಿಕೊಂಡುದು ಮಾತ್ರವಲ್ಲದೆ, ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಸುಮಾರು 10 ವರುಷಗಳ ವರೆಗೆ ಮಂತ್ರಿಪದವಿಯನ್ನಲಂಕರಿಸಿದ್ದನು. ಈತನು ಸಂಸ್ಕೃತದಲ್ಲಿ ಅನೇಕ ದೇವಸ್ತವಗಳನ್ನೂ, ಕನ್ನಡದಲ್ಲಿ ಅಪ್ರತಿಮವೀರಚರಿತೆ ಚಿಕ್ಕದೇವರಾಜವಂಶಾವಳಿ ಚಿಕ್ಕದೇವರಾಜವಿಜಯ ಚಿಕ್ಕದೇವರಾಯಶತಕ ಚಿಕ್ಕದೇವರಾಜ ಬಿನ್ನಪ ಕರ್ಣಾಟಕ ಕೀರ್ತನೆಗಳು ಮೊದಲಾದುವನ್ನೂ ರಚಿಸಿರುವನು. ಚಿಕ್ಕದೇವರಾಜವಿಜಯವು ತನ್ಮಹಾರಾಜಚರಿತ್ರರೂಪವಾದ ಚಂಪೂಪ್ರಬಂಧವು. ಈ ಶ್ಲಾಘ್ಯವಾದ ಕಾವ್ಯದಲ್ಲಿ ಕವಿ ತನ್ನ ಸಾಮರ್ಥ್ಯವನ್ನು ಚೆನ್ನಾಗಿ ತೋರಿಸಿ ಕೊಂಡಿರುವನು.

ಕಂ॥ ಆದ್ಯತನಿಜವರ್ಣೋಚಿತ ।
ವೈದಿಕ ಸಂಸ್ಕೃತಿ ವಿಶುದ್ಧಗತಿ ನಿರ್ಮಲಚಿ ॥
ತ್ತಾದರ್ಶದೊಳನುಗೊಳಿಸಿದ ।
ನಾದರದಿಂ ದಖಿಲಕಲೆಯ ನಧ್ಯಾಪಕರಿಂ ॥೧೩೪॥

ಓದಿಸುವರೊರ್ವರ್ಗಲ್ ಬಂ ।
ದಾದರದಿಂ ಬಾಯುಗುವರನಕ್ಕರಮಂ ಕ ॥
ಲ್ತೋದುವ ನೃಪಂ ಪುರುಳಂ ।
ಭೇದಿಸಿ ಪೇಳ್ವರವ ನರಸನೊಳ್ ಬಣ್ಣಿಸಿವರ್ ॥೧೩೫॥

ಶಾ॥ ಆವಾವಕ್ಕರ ಮಾವತಾಣದೊಳ ದೆಂತೆಂತುಂ ಪ್ರಯತ್ನಂಗಳಿಂ ।
ದಾವಿರ್ಭಾವಮನಾಂತು ದಂತು ಸೊಬಗಿಂ ದುಚ್ಚಾರಣಂಗೆಯ್ದುವು ।
ತ್ತಾವರ್ಣಾವಳಿಯೊತ್ತರಂ ಬಡದೆ ನೀಡುಂ ಚಿತ್ತರಂಗೊಳ್ಳದಂ ।
ತಾವಂ ಶ್ರೀಚಿಕದೇವನಂತೆ ಪುರುಳೆಲ್ಲಂ ಪೊಣ್ಮುವಂತೋದುವಂ ॥೧೩೬॥

ಚಂ|| ಪದಪದ ದಕ್ಕರಕ್ಕರದ ವಾಕ್ಯದ ವಾಕ್ಯದ ವಿಶ್ರಮಂ ಲಯಂ |
ಪುದಿದ ಬೆಡಂಗಿನಿಂ ಪುರುಳಿದಿರ್ಚಿ ಪಳಚ್ಚನೆ ಮಿಂಚಿ ತೋಱೆ ತ |
ತ್ತದುಚಿತವಾಗಿ ಸೊಂಪು ಕಳೆ ಪೊಣ್ಮಿದಿದುಣ್ಮುವ ನುಣ್ಚರಂಗಳಿಂ |
ದೊದವೆ ರಸಂಗಳೋಜೆವಡೆದೋದುವನೀ ಚಿಕದೇವಭೂವರಂ ||೧೭೭||

ಮ|| ಪುರುಳಂ ಕೇಳ್ದದಱೊಳ್ಪನೂಹಿಸಿ ಯಪೋಹಂಗೆಯ್ದು ತಾತ್ಪರ್ಯದೊಂ |
ದಿರವಂ ನಿಚ್ಚತಗೊಂಡದಂ ಮಱೆಯದಿರ್ಪಾ ಧಾರಣಾಶಕ್ತಿಯುಂ |
ಪರರಂ ಬೋಧಿಸುವಾರ್ಪಿನೊಳ್ ತಿಳಿವಿನಂ ಸಂಕ್ಷೇಪವಿಸ್ತಾರ ಮಿಾ |
ಯೆರಡುಂ ಮಾರ್ಗಮುಮಾರ್ಗಮುಂಟೆ ಚಿಕದೇವೇಂದ್ರಂಗೆ ಕೈವಂದವೋಲ್ ||

ಮ|| ಸ್ರ|| ಅಳವಿಂದಂ ತಳ್ತ ಪೂರ್ವೋತ್ತರವೆರಡಱ ಪಕ್ಷಂಗಳೊಳ್ ಯುಕ್ತಿಜಾಲಂ |
ಗಳ ಸಾರಾಸಾರಮಂ ಸೋದಿಸಿ ಕಳೆದದಱೊಳ್ ಪೊಚ್ಚನೊಳ್ಗಟ್ಟಿಯುಂ ಕೂ |
ರ್ತೊಳಕೊಂಡಿರ್ಪೊಳ್ಪಿನಿಂ ತತ್ವದ ನೆಲೆಯಱಿತಾ ಮಾರ್ಗದಿಂದತ್ತಲಿತ್ತಲ್ |
ಪೊಳೆವೆತ್ತಂ ಪೋಗೆವಂತಿರ್ಕುಳಿಸುತೆ ಬುಧರಂ ತರ್ಕಕಂ ಚಿಕ್ಕದೇವಂ ||

ಉ|| ಕೇಳ್ದು ಪುರಾಣದರ್ಥವನಿತಂ ಬಗೆಯೊಳ್ ಬರೆದೊಂದು ಚೆಂದದಿಂ |
ತಾಳ್ದು ವಿವಿಕ್ತಿಗೆಯ್ದು ಚತುರನ್ವಿತವಿಂಶತಿತತ್ತ್ವಭೇದಮಂ |
ತೂಳ್ದು ಪರಸ್ಪರಸ್ಫುಟವಿರೋಧವಿಪರ್ಯಯ ಸಂಶಯಂಗಳಂ |
ಕೇಳ್ದರ ಚಿತ್ತಮಂ ಚಿಗುರಿಕುಂ ಚಿಕದೇವನ ಜಾಣದೆಂತುಟೋ ||೧೮೦||

ಚಂ|| ಮನುಗಳ ವಂಶದೊಳ್ ನೆಗೆಟ್ದ ರಾಯರ ವೃತ್ತಿಮೆಯಂ ನಾಳ್ದ ಕಾಲಮಂ |
ಜನಪದಭೇದಮಂ ನೆಲವೊಱಲ್ಗಳನಿತ್ತದು ಗೆಲ್ದುದಿಂತಿದಂ |
ದನಿತಱೊಳೊಂದುಮಂ ಮಱೆಯದೆಲ್ಲಮುಮಂ ನೆನೆದಿರ್ಕುಮಾವಗಂ |
ಮನುಜರೊಳಿನ್ನರುಂಟೆ ಚಿಕದೇವನಿಳೋದಿತದೇವದೇವನೇ ||೧೮೧||

ಕಲಿಯುಗವಾಳ್ದ ರಾಯರಿವರೀ ಪೆಸರೀ ಕುಲಮಿಾ ಪೊಱಲ್ಗಳೀ |
ನೆಲದೆಡೆ ಯಿಾದಿನಂ ನೆಗಟ್ದ ಕಜ್ಜಮಿದೀ ಪೊಳೆ ಪುಣ್ಯಭೂಮಿ ಪೇ |
ಗುಲ ಮನೆ ಗಟ್ಟ ಬೆಟ್ಟಗಳಿವೆಂಬುದನೀ ಚಿಕದೇವನಾ ಹಿಮಾ |
ಚಲರಘುವೀರಸೇತು ವರೆಗಂ ತಿಳಿಗುಂ ಮನವಾಱಿತ್ತಿಯೆಂಬಿನಂ ||೧೮೨||

ಶಾ|| ಜಾಣಂ ಬೀಣೆಯನೀ ಕುಮಾರಚಿಕದೇವಂ ಬಾಜಿಸುತ್ತಿರ್ಪನಂ |
ಪ್ರಾಣಂ ಬಂದುದು ಜಂತ್ರಬಿಜ್ಜೆಗೆ ಜಸಂ ಪೊಂಗಿತ್ತು ಸಂಗೀತಕಂ |
ಪೂಣಲ್ಕಾದುದು ದೇವಗಾನದಿರವಿಂಗಾ ಮೆಲ್ಲರುಂ ಚೆಲ್ಲದಿಂ |
ಪಾಣಿಪ್ರಾಂತದೊಳಾಂತು ದಿಂದುಚಿತಮಾಯ್ತಾ ವಾಣಿಯುಂ ವೀಣೆಯಂ ||

ಜಂತ್ರಂಬಾಜಿಪರಿಂದು ಜಾಣ್ಮೆದಳೆದರ್ ಶ್ರೀಯೊಂದಿದರ್ ಗಾಯಕರ್ |
ತಂತ್ರೀವಾದ್ಯದ ರಕ್ತಿ ಪಣ್ತುದಿಳೆಯೊಳ್ ಗಾಂಧರ್ವಮಾರ್ಗಕ್ರಿಯಾ |

ತಂತ್ರಂ ತಳ್ತುದು ಪಿಂತೆ ರೈವತಕರಾಯುಂ ಸೈತ್ಯದೊಳ್ ಕೇಳ್ದ ಗಾ |
ನಂ ತ್ರೈಲೋಕ್ಯಕೆ ಪರ್ವಿದತ್ತು ಚಿಕದೇವಂ ಬೀಣೆಯುಂ ಕೊಳ್ವಿನಂ॥೧೮೪॥

ಮ॥ ಅನಿತುಂ ತಂತ್ರಿಗಳಿಂದ ಮೊಂದೆ ದನಿಯುಣ್ಮಿತ್ತುಂಬಿನಂ ಕೂಡೆ ನು |
ಣ್ಣನೆ ಕಂಬುಚ್ಚಿನೊಳೀಟ್ದಿ ಪೊಂಜರಿಗೆಯುಂ ಪೋಲ್ಗಂ ಶ್ರುತಿಸ್ಫೂರ್ತಿ ಕ |
ಮ್ಮನೆ ಕಸ್ತೂರಿಯ ಕಂಪಿನಂತೆ ಕವಿಗುಂ ನಾದಂ ಸ್ವರಪ್ರಕ್ರಮಂ |
ಘನರತ್ನಾವಳಿಯಂತೆ ತೋಱೆ ಚಿಕದೇವಂ ಬಾಜಿಕಂ ಬೀಣೆಯಂ ॥೧೮೫॥

ಚಂ॥ ಬಗೆವಿಡಿ ದಾಹತಾದಿಗಮಕಂಗಳ ನೊಯ್ಯನೆ ಬೀಣೆವಾಜಿಪ |
ನ್ನೆಗಮಿರದುಣ್ಮಿ ಪಾಯ್ವ ದನಿಯೋಜೆ ಬೆಡಂಗು ತೊಡಂಕಲೊಯ್ಯರಂ |
ಬಿಗಿಪು ನಯಂ ಪೊಡರ್ಪಲಂಗು ಚಾರಿಗಳೊಂದಿರೆ ತಾನತಾನದೊಳ್ |
ನೆಗೞ್ದುದು ತಾನಮಿಂತು ಚಿಕದೇವನ ಕೈಮೆರಲೊಳ್ಪದೆಂತುಟೋ ॥೧೮೬॥

ಪವಣಱಿತಾಂತು ಬಾಜಿಸುವಿನಂ ಚಿಕದೇವನ ಬೀಣೆಯಿಂಚರಂ |
ಕಿವಿವೊಡೆವೊಕ್ಕು ಪಾಯ್ದು ಹೃದಯಾಬ್ಜಕೆ ಚೇತನವೃತ್ತಿ ಮೊತ್ತದೊಳ್ |
ಕವಿದು ತದಾತ್ಮಭಾವಮನೊಡಂಬಡಲೀ ಸಕಲಪ್ರಪಂಚಮುಂ |
ಸವಿದನಿಯಿಂದಮೋ ಸಮೆದುದೆಂಬ ವಿಕಲ್ಪದ ತೋರ್ಪುವನ್ನೆಗಂ ॥೧೮೭॥

ಅಲುಗದ ದಿಟ್ಟಿ ಯಾಡದೆವೆ ಸಂತಸದಿಂ ತೊರೆದುರ್ಕುವಾಲಿನೀ |
ರಲೆವಡದಂಗ ಮುರ್ಕೞಿಪ ಪೊಂಪುೞಿ ನುಣ್ಬನಿಗೊಂಬ ತಣ್ಬೆಮರ್ |
ಮಲರ್ದರ್ದ ಮಾಣ್ದು ಗೆಯ್ಮೆಗಳ ಪಾಯ್ಮೆಱೆವಾ ಕರಣಂಗಳಿಂದೆಯುಂ |
ನೆಲೆಸೊಗವಾಂಪರಿಂದು ಚಿಕದೇವನ ವೀಣೆಯ ನುಣ್ಚರಂಗಳಿಂ ॥೧೮೮॥

ಉ॥ ಅಂದವಿಗೋರ್ಪೈಸ ಮುದಳೊಂದಿದ ರಿಂದು ಲಯಸ್ವರಜ್ಞರಾ |
ನಂದದೊಳೀರ್ದು ಬಾಜ್ದಿರಮುವಾ ಚಿಕದೇವನ ಕೈಮೆಯೆಂತುಟೋ |
ಕಂದಳಮಿಂದು ಬೀಣೆಯೊಡೆಯಾಡುವುದಲ್ತಿದು ಹೃತ್ಸರೋಜದಾ |
ನಂದದ ನಾಡಿಯಂ ತೊನೆದು ಸೋಲಿಸಿ ಗಱ್ಕನೆ ಸೊರ್ಕನೇಱಿಕುಂ ॥೧೮೯॥

ಉ॥ ಆನಿವನಿನ್ನನೀ ಯೆಡೆ ಯಿದೇವಗೆ ಪೊೞ್ತುದು ಗೆಯ್ಮೆಯಿಂತಿದಂ |
ಬೀನೆಲೆಯೊಂದಱೊಳ್ ತಿಳಿವುದೋಱಿದ ಲೆಪ್ಪದ ಬೊಂಬೆಯಂತೊಪಲ್ |
ತಾನಿದು ನಿಲ್ಕೆ ಮೆಯ್ಮವಿರ್ಗಳಿಂದ ಸಚೇತನದಂತೆ ತೋರ್ಪರೀ |
ತಾನವಿತಾನಮಂ ಪದೆದು ಬಾಜಿಪನಂ ಚಿಕದೇವಚಂದ್ರಮಂ ॥೧೯೦॥

ಚಂ॥ ಮೊಳೆವೆಳದಪ್ಪ ಕೂಡೆ ಕೊನರೇಱುವ ನೀಳ್ವ ಪೊದಲ್ವ ಪೊಣ್ಮುವ |
ಕ್ಕಳಿಸುವ ಕೊಂಕುಗೊಳ್ವ ಪೊಳಪೋರಣಗೊಂಬ ತೊಡಲ್ವ ತೇಲ್ವ ಚಂ |
ಚಳಿಸುವ ಭಾವಮಾಂತೆಡೆಗಳೊಳ್ ನೆಲೆನಿಲ್ವ ಬೆಡಂಗಿನಿಂದ ಮೇಂ |
ಬೞೆದುವೊ ಬಾಣಿನೋಟದವೊಲೀ ಚಿಕದೇವನ ತಾನದೊಳ್ಪುಗಳ್ ॥೧೯೧॥

ಮ॥ ಒಂದೇ ತಾನಮಿದಿನ್ನಿದರ್ಕೆ ಜಗದೊಳ್ ಜೋಡಿಲ್ಲವೆಂಬನ್ನಮಾ ।
ದೊಂದಂ ಮೀಱುವುದೊಂದು ತಾನಮುದಮಂ ಮತ್ತೊಂದಿದಾಮಾನುಷಾ ।
ನಂದಂ ನೂರ್ಮಡಿಯಾಗಿ ಪೆರ್ಚೆ ಪರಮಾನಂದಾಂತಮಾದಂತಿರಾ ।
ನಂದಂ ಬಲ್ತುದು ಬಾೞಿಪಂದು ಚಿಕದೇವಂ ತಾನಸಂತಾನಮಂ ॥೧೯೨॥

ಉ॥ ಕಟ್ಟಿದ ದಟ್ಟಿಕೈದಳದ ಪೊಂಗಿಱುಗಟ್ಟಿಗೆ ರನ್ನಬಂದಿಗೋಲ್ ।
ಬಟ್ಟಿತೆನಿಪ್ಪ ಚೊಲ್ಲೆಯದ ಮಟ್ಟಿಯ ಸೀಸಕ ಮಿಟ್ಟ ನಾಮದೊ ।
ಳೊಬ್ಬಟ್ಟ ಮನಂಗೊಳಲ್ ಗರುಡಿಗೈಮೆಯೊಳೀ ಚಿಕದೇವರಾಯನಂ ।
ನಿಟ್ಟಿಪ ಜಟ್ಟಿಗರ್ ಮೆಱೆವರಲ್ಲಿಯ ಚಿತ್ತರಬೊಂಬೆಯೆಂಬಿನಂ ॥೧೯೩॥

ಚಂ॥ ಗರುಡಿಯ ಗೆಯ್ಮೆಯೊಳ್ ಬಳೆದು ಬಟ್ಟಿತೆನಲ್ ಬಿಗಿಪೇಱಿ ತಳ್ತ ಮೆ ।
ಯ್ಸಿರಿ ಕರುವಿಟ್ಟು ಕಂಡರಿಸಿ ಕುಂದಣದಿಂ ಸಮೆದಿಟ್ಟ ತಿಟ್ಟಮಂ ।
ದೊರೆಗೊಳೆ ರೇಖೆ ನೃತ್ತದಿರವಂ ನೆರವೊಂದಿರೆ ದೇಸೆಯಿಂ ಕ್ರಮಂ ।
ಬೆರಸುವನೀ ಕುಮಾರ ನೊಸದಂದಿನ ನಂದನ ಕಂದನಂದದಿಂ ॥೧೯೪॥

ಬಿಡಯದೆ ಕಂಭವೇಱಿ ಭರಿಕ್ಕೆ ಬಿಗಿವಂತಿರ ಸುತ್ತಿ ಪಾಯ್ವ ಬಿ ।
ಱೊಡಗಳನುರ್ಬಿ ಪರ್ಬಣೆಯವೋಲ್ ಬೆಣಗೊಂಡು ಪೊದಟ್ಟಿ ತೋಳ್ಗಳಿಂ ।
ಕಡುಲುಳಿವೆತ್ತು ಲಾಗಿಸುವ ಮೆಯ್ಯ ಕುಡುಮಿಂಚಿನವೋಲ್ ಪಳಂಚೆ ಸಂ ।
ಗಡಿಸಿದ ಜಟ್ಟಿಗರ್ ಗರುಡಿಗೋವಳನೀ ನೃಪನೆಂದು ವಂದಿಸರ್ ॥೧೯೫॥

ಉ॥ ಮೋಡಿಯೊಳೂಱಿ ನಿಂದಡಿಯೊಳೆರ್ಕಲಕಂ ಮುಱಿಗೊಂಬ ಮುದ್ದುಮೆಯ್ ।
ಗಾಡಿಯೊಳಿತ್ತಲತ್ತ ಲೂಲಿವೊಳ್ಮೊಗಮಾಂತಿರ ಸಂಗರಂಗಳಂ ।
ನೀಡುವ ತೋಳ್ಗಳಿಂ ನಟಿಪವೋಲ್ ಚಿಕದೇವನೃಪಾಲಕಂ ಕ್ರಮಂ ।
ಮಾಡುವ ಸೈಪಿನಿಂ ಕಳೆಗುಮೆಲ್ಲರ ದೃಷ್ಟಿಮನಶ್ರಮಂಗಳಂ ॥೧೯೬॥

ಚಂ॥ ಮಲೆತಿದಿರಾಂತು ನಿಲ್ವ ಚಿಕದೇವನ ಚೆಲ್ವಿಕೆಗೊಂಡ ತಾಣಕಂ ।
ಕಲೆದಳೆದೊಳ್ಮೊಗಂ ಕದುಬದೆಚ್ಚಿಱೊಳೊಚ್ಚತಮಿರ್ಪ ದಿಟ್ಟ ಪೊಂ ।
ಬಲಗೆಯ ಸಾರ್ಚಿಪಂತವೊಲಿದಿರ್ಚಿದ ಪೇರುರ್ದೆಯಂ ನಿರೂಪಕರ್ ।
ಬಲಿಯಿಸಿ ಚಿತ್ತದೊಳ್ ನೆನೆವರಾ ಮಧುರಾಪುರಮಲ್ಲಲೀಲೆಯಂ ॥೧೯೭॥

ಮ॥ ಪೊಳೆವೀ ಮೆಯ್ಸಿರಿಯೀ ಮನೋರಥದ ಪೆಂಪೀ ರೂಪಮೀ ರೇಖೆಯೀ ।
ಕಳೆಯೀ ಸಾಧಕದೊಪ್ಪಮೀ ಪದುಳಮೀ ಸುಯ್ದಾನಮೀ ಬಲ್ಮೆಯೀ ।
ಲುಳಿಯೀ ಬಿನ್ನಣಮೀ ಯೊಡಲ್ಮಣಿತಮೀ ಯಿಂದಾಳಮೀ ಬೀರಮೀ ।
ಚಳಕಂ ಶ್ರೀಚಿಕದೇವನೊಳ್ ಮೆಱೆಗುಮೀಗಳ್ ಪಿಂ ಪುರಾರಾತಿಯೊಳ್ ॥

## 10. ಶುಕನಾಸನ ಹಿತೋಪದೇಶ.

ಶುಕನಾಸನೆಂಬ ಮಂತ್ರಿಯು ಚಂದ್ರಾಪೀಡನೆಂಬ ರಾಜಪುತ್ರನಿಗೆ ಹೇಳಿದ ಬುದ್ಧಿವಾದರೂಪವಾದ ಈ ಹಿತೋಪದೇಶವು ಕಾದಂಬರೀಕಥೆಯಲ್ಲಿ ಒಂದು ಭಾಗವಾಗಿದೆ. ಕಾದಂಬರಿಯನ್ನು ಮೊದಲು ಬಾಣಕವಿಯು ಸಂಸ್ಕೃತದಲ್ಲಿ ಗದ್ಯರೂಪವಾಗಿ ಬರೆದನು. ಅದನ್ನು ನಾಗವರ್ಮನೆಂಬ ಜೈನ ಕವಿಯು ಚಂಪೂರೂಪವಾಗಿ ಕನ್ನಡಿಸಿದನು. ಇದರಿಂದಲೇ ಇಲ್ಲಿ ಕೊಟ್ಟಿರುವ ಪದ್ಯಗಳನ್ನು ಉದ್ಧರಿಸಿಯಿದೆ. ನಾಗವರ್ಮನು ಛಂದೋಂಬುಧಿಯೆಂಬ ಮತ್ತೊಂದು ಲಕ್ಷಣಗ್ರಂಥವನ್ನೂ ರಚಿಸಿರುವನು. ಈತನು ತಾನು ವೆಂಗಿಪಟ್ಟಣದಲ್ಲಿದ್ದ ಕೌಂಡಿನ್ಯಗೋತ್ರೋದ್ಭವನಾದ ವೆಣ್ಣಮಯ್ಯನ ಮಗನೆಂದು ಹೇಳಿಕೊಂಡಿರುತ್ತಾನೆ. ಈತನ ಕಾಲವು ಸುಮಾರು ಕ್ರಿ. ಶ. 990 ಎಂದು ಗೊತ್ತಾಗಿದೆ. ಈತನು ರಕ್ಕಸಗಂಗನ ಕಾಲದಲ್ಲಿ ಚಾವುಂಡರಾಯನಿಂದ ಪೋಷಿತನಾಗಿಯೂ ಅಜಿತಸೇನದೇವರ ಶಿಷ್ಯನಾಗಿಯೂ ಇದ್ದನೆಂದು ತಿಳಿಯಬರುತ್ತದೆ. ಈತನ ಬಂಧವು ಲಲಿತವಾಗಿಯೂ ಭಾವಗರ್ಭಿತವಾಗಿಯೂ ಹೃದಯಂಗಮವಾಗಿಯೂ ಇದೆ.

ಕಂ|| ವಿನಯಾರ್ಣವನಂ ಮಂದಾ |
ಕಿನಿ ಕೂಡಿಮುದಿಸಿಸಿ ವಿಶದದಶನದ್ಯುತಿ ತ ||
ಳ್ತವಿರತಂ ಬೆಳಗಲ್ ಮಂ |
ತ್ರನಿಧಾನಂ ನುಡಿದನಾನರೇಂದ್ರಾತ್ಮಜನಂ ||೧೯೯||

ಕಯಿಮಿದ್ದ ವಿಗೆಗಳ ಬೆಳಗಿಂ |
ಕಾಯಿದ್ದೆಸೆವ ಸಹಸ್ರಕಿರಣಸಿಂ ಭೇದಿಸಲೇ ||
ಗೆಯ್ಯುಂ ಬಾರದೆ ದಲ್ ತಮೆ |
ಮಾಯ್ದಿ ಜವ್ವನದೊಳೊಡಲೊಳಿಡಿದಿರ್ದ ತಮಂ ||೨೦೦||

ಸಿರಿಯೆಂಬ ಸೊರ್ಕು ತಿಳಿಯದು |
ಪರಿಣಾಮದಿನಂಜನಂಗಳಿಂದ ಮಾದೆಂತುಂ ||
ಪರಿಹರಿಸಲರದೆ ನಿಪ್ಪುದು |
ಪರಮೈಶ್ವರ್ಯ ಪ್ರಭೂತ ತಿಮಿರಾಂಧತ್ವಂ ||೨೦೧||

ಶಿಶಿರೋಪಚಾರದಿಂದಂ |
ವಶಮಲ್ಲದು ತೀವ್ರಮಪ್ಪ ದಾಹಜ್ವರಮಂ ||

ಕುಶಸಾಧ್ಯಮಲ್ಲದಿಂದ್ರಿಯ ।
ದಿಶಾಗಜಪ್ರಕರ ಮೆಂದುಮವಿನಯನಿಯತಂ ॥೧೦೨॥

ವಿಷಮವಿಷಂಗಳ್ಗಂ ಪ್ರತಿ ।
ವಿಷಮೆನಿಸುವ ಮಂತ್ರನಿಚಯದೊಳಮಾರ್ಗೆಂದುಂ ॥
ವಿಷಯಮೆ ಮೋಹಿಸಲಿಂತೀ ।
ವಿಷಯವಿಷಾಸ್ವಾದಮೋಹಮಂ ನಿರ್ವಿಷಯಂ ॥೧೦೩॥

ಅರಸುಗಳೊಡಂ ಪುಟ್ಟಿಱ ।
ದು ರಾಜ್ಯಸುಖಸನ್ನಿಪಾತಸಿದ್ಧಿಯ ಕಯ್ಯೊಳ್ಕಂ ॥
ಇರುಳುಂ ಪಗಲುಂ ಜಾಡ್ಯದೆ ।
ಮರವಟ್ಟಿಱುವರಲ್ಲವಂತುಂ ಭೂಪರ್ ॥೧೦೪॥

ಚಂ॥ ಪಿತೃಗಳುಪಾರ್ಜಿಸಿಟ್ಟ ಸಿರಿ ಜವ್ವನದೇೞ್ಗೆ ಪೆಱಂಗಿದಲ್ಲಸಿ ।
ಪ್ಪತಿಶಯರೂಪು ಶಕ್ತಿಗಳಿವಲ್ಲವೆ ಹಾಸಿಯು ಬಳ್ಳಿವಳ್ಳಿಸಿ ।
ಕ್ಷಿತಮಿವನೊಂದ ನೊಂದನೆ ವಿಚಾರಪೊಡುಳ್ಳ ವಿನೀತಿಗೆಲ್ಲ ಮಾ ।
ಯತನ ಮೆಸಿಪ್ಪುದೋರ್ವನೊಳಿವೆಲ್ಲ ವಿರಲ್ ಖಟಿಕೇನ ನೆಂಬುದೋ ॥೧೦೫॥

ಇರದುಯ್ವುದು ತನ್ನಿಚ್ಛೆಗೆ ।
ವರಯೌವನದಂದು ಪುರುಷನಂ ಪ್ರಕೃತಿ ರಜಂ ॥
ಬೊರೆದು ತಿರುಪುತ್ತೆ ಸುಟ್ಟಿಱ ।
ತೆರಳ್ಚ ತಱಗೆಲೆಯನುಯ್ವ ತಱದಿಂದೆತ್ತಂ ॥೧೦೬॥

ಗುರುಗಳ ವಚನಂ ನಿರ್ಮಳ ।
ತರಮಾಗಿಯು ಮಚ್ಛಸಲಿಲದಂತಿರೆ ಭವ್ಯೇ ॥
ತರನಪ್ಪನ ಕಿವಿಯೊಳ್ ಪುಗೆ ।
ಪಿರಿದೆನಿಸುವ ಕರ್ಣಶೂಲೆಯಂ ಪುಟ್ಟಿಸುಗುಂ ॥೧೦೭॥

ಚಂ॥ ವಿನಯಮನಾಗಿಸಲ್ ನೆಱೆಯನನ್ವಯಮುಂ ಶ್ರುತಮುಂ ಸ್ವಭಾವದು ।
ರ್ಜನನೆನಿಪಂಗದಂತುಟೆವಲಂ ಶಿಶಿರೈಕ ನಿಧಾನಮಪ್ಪ ಚಂ ।
ದನದೊಳೆ ಪುಟ್ಟಿ ಕಿಚ್ಚು ಸುಡದಿರ್ಪುದೆ ತತ್ಪ್ರಶಮೈಕಕಾರಣಂ ।
ವನನಿಧಿಯಾದೊಡೇ ನುರಿಯದಿರ್ಪುದೆ ದಳ್ಳಿಸಿ ಬಾಡಬಾನಲಂ ॥೧೦೮॥

ಮೊಱೆದು ಹಿತೋಪದೇಶಮನೆ ಕೇಳಲೊಡಂ ಸಿಡಿಲೇೞ್ಗೆ ಯೆಟ್ಟುವೆ ।
ಯ್ಕಱಗಿ ನಯಂ ಕಿಡಲ್ ಗಜನಿಮೀಲನದಿಂದವಧೀರಿಸುತ್ತೆ ತ ।

ಮ್ಮಱಿತಮಿದೇತಕೆಂದು ಗುರುಸಂಕುಳಮಂ ಮಱೆದಿಂತು ಮುಮ್ಮಲಂ |
ಮಱುಗಿಪರಲ್ತೆ ತಮ್ಮ ನಿಜಗರ್ವದೆ ಮಾಯ್ದು ನೃಪರ್ ಧರಿತ್ರಿಯೊಳ್ ||೯೯||

ವ|| ಅದಱಿಂ ಸದುಪದೇಶಂಗಳ್ಗೆ ನಿನ್ನೊಂದಿಗರೆ ಭಾಜನರಪ್ಪರದೆಂತೆನೆ

ಕಂ|| ತೊಳಗುವ ಚಂದ್ರಾಂಶುಗಳ್ಗಾ |
ಪಳುಕಿನ ಶಿಲೆಯೊಳಗೆ ಪೊಳೆದು ಪುಗುವಂತಿರೆ ನಿ ||
ರ್ಮಳಹೃದಯದೊಳಗೆ ಪುಗುಗುಂ |
ವಿಳಸಚ್ಛಿಷ್ಟೋಪದೇಶಗುಣನಿವಹಂಗಳ್ ||೧೦೦||

ಸ್ಥಿರೆಯಲ್ಲದವಳನತಿನಿ |
ಷ್ಠುರೆಯಂ ಭಟಖಡ್ಗಮಂಡಲೋತ್ಪಲವನದೊಳ್ ||
ತಿರುಪಾಱಡಿಯಂ ನಚ್ಚಿ ನ |
ಸಿರಿಯಂ ಭಾವಿಪುದು ಮುನ್ನಮೇ ಶುಭಕಾಮಂ ||೧೦೧||

ಮ||ಸ್ರ|| ಸುರೆಯಿಂ ಸೋರ್ಕಂ ಸುರೋರ್ವೀರುಹಕಿಸಲಯದಿಂ ರಾಗಮಂ ಕೌಸ್ತುಭಪ್ರ |
ಸ್ತರದಿಂ ನೈಷ್ಠುರ್ಯಮಂ ಪುರ್ಷಿಷಮುಪಿಷದಿಂ ಸನ್ಮೋಹಮಂ ಮುಗ್ಧ
ದೋಷಾ |
ಕರನಿಂ ವಕ್ರತ್ವಮಂ ದುಶ್ಚ್ಯವನನ ಹಯದಿಂ ವೇಗಮಂ ತಾಳ್ದಿ ಸೀರಾ |
ಕರದಿಂ ದೆತ್ತಿಂದಳಂತಾ ಸಿರಿ ಸಹಭವರಿಂ ಪೋಲ್ವುದೇಂ ಚೋದ್ಯಮಾಯ್ತೆ ||

ವಾರಿಧಿಯೊಳ್ ಮಂದರಗಿರಿ |
ಘೋರನೆ ತಿರುಗುತ್ತಿರಲ್ಕೆ ಪುಟ್ಟಿದ ಬಹು ಸಂ ||
ಸ್ಕಾರಮದಿನ್ನುಂ ಬಿಡವವೊ |
ಲೋರಂತಿರೆ ಕೂಡೆ ಲಕ್ಷ್ಮಿ ತಿಱ್ರನೆ ತಿರಿವಳ್ ||೧೦೨||

ಮ||ಸ್ರ|| ಶ್ರುತಮಂ ಕಯ್ಕೊಳ್ಳಳಾಚಾರಮನವಧರಿಸಳ್ ಸತ್ಯಮಂ ಬಾರ್ತೆಗೆಯ್ಯಳ್ |
ಮತಿಯಂ ಬಿಪ್ಪಂಡಿಪಳ್ ಲಕ್ಷಣಮನೆಣಿಸಳೌದಾರ್ಯಮಂ ಚಿಂತಿಸಳ್ ಸಂ |
ಗತಿಯಂ ವಿಶ್ವಾಸಿಸಳ್ ಸುಂದರತರವಪುವಂ ನೋಡಳಂತುಂ ವಿಶೇಷ |
ಜ್ಞತೆಯಂ ತಾನೇತಕಂಬಳ್ ಸಿರಿಯನಱಿಯುತಂ ಬಣ್ಣಿಪಂ ಗಾಂಪನಲ್ತೆ ||

ಅಕ್ಕರವೃತ್ತಂ|| ಧೀರನಪ್ಪನುಮಂ ಪ್ಯಾಸಂ ಮಾಳ್ಪಳ್ ಮರುಳಂಬಿನಂ ಪಾವಂದು
ದಾಂಟುವಳಭಿಜಾತನಂ |
ಹೀನರಿಗುಮಂದೊಪ್ಪಳುದಾನಪ್ಪನಂ ಗಳಬನಂದೇಱಿಸಳ್ ಪುರುಡಿಂ |

ಭಾರತೀಶನಂ ಸೋಂಕಳ್ ದಾನಿಯುಂ ಮುಟ್ಟಳಸ್ಪೃಶ್ಯನೆಂದು ವಿನೀತನಂ।
ದೂರದಿಂ ನೋಡಿ ಪಾತಕನಿವನೆಂದು ಪೋಗಳಿಂದಿರ ನಂಬದಿರ್ ॥೨೧೬॥

ಕಂ॥ ಎಂತೆಂತು ತೊಳಗಿ ಬೆಳಗುವ।
ಳಂತಂತತಿ ಮಲಿನಕಜ್ಜಳೋಪಮಕರ್ಮಂ॥
ಭ್ರಾಂತಿಯು ಮೊಟ್ಟಳ್ ಲಕ್ಷ್ಮೀ।
ಕಾಂತೆ ಕರಂ ಚಪಳೆ ಸೊಡರ ಕುಡಿಯುಂ ಪೋಲ್ವಳ್ ॥೨೧೭॥

ಪಿರಿಯಕ್ಕರಂ॥ ಎಸೆವ ಗುಣವೆಂಬ ಕಳಹಂಸನಿಕರಕ್ಕಕಾಲದ ಪೆರ್ಮುಗಿಲ್ ವಿಷಮೋಂ
ದ್ರಿಯಾ।
ಪ್ರಸರಮೆಂಬ ಮೃಗಪ್ರಕರಕ್ಕೆ ಗೋವಿಯಂದನಿ ಸಚ್ಚರಿತ್ರಾಂಗಳೆಂಬ।
ಮಿಸುಪ ಚಿತ್ರಕ್ಕೆ ಕಂದಿಸ ಕರ್ಪೂರಗೆ ಧರ್ಮವೆಂಬಿಂದುಮಂಡಲಕ್ಕೆ।
ಮುಸುಕುವ ಕಾಳರಾಹುವಿನ ನಾಲಗೆಯೆನಿಸಿಪ ಸಿರಿಯುಂ ಬಣ್ಣಿಪಂ ಗಾಂಪನಲ್ತೆ॥

ಕಂ॥ ಪೊಡೆದುದು ಗರ ಪತಿಕೋಪದೆ।
ಪಿಡಿದುದು ಪುಲಿ ಗಾಳಿ ಸೋಂಕಿದತ್ತು ಪಿಶಾಚಂ॥
ತೊಡರ್ದುದು ಭೂತಂ ಬನ್ನಂ।
ಬಡಿಸಿದುದೆನೆ ಸಿರಿಯೊಳರಸುಗಳ್ ಮುಯ್ಯಾಱಿಯರ್ ॥೨೧೮॥

ಚಂ॥ ಮುನಿದೊಡೆ ಭಸ್ಮವಾದಪುದು ಲೋಕಮನಲ್ ನೊಸಲೊಳ್ ತೃತೀಯಲೋ।
ಚನಮಮಗಿಂಟು ತೋಲ ಮುಱಿಯಿಂದಿದು ತೋಱಿಪುದಿಲ್ಲನುತ್ತಮಿ।
ಮನುಜರ ಗೆಯ್ತಮಂ ಬಿಸುಟು ದೇವರಮಂಬಭಿಮಾನಮಂಱಿ ಮು।
ಯ್ಯೊನೆಗಳ ನೋಱ್ಪರನ್ನರಜ ತೋಳೊಳ ಮೆಂಬಪೊಲ್ಲುರ್ವರೇಶ್ವರರ್॥೨೧೯॥

ಮ॥ ಮೊದಲೊಳ್ ತಮ್ಮನೆ ನೋಡಲಿತ್ತು ಪದದೊಳ್ ಕೈಕೊಂಡವರ್ ತಾವೆ ನೋ।
ಡಿದೊಡೋರಂತುಪಕಾರಮಂ ಮಱೆದವರ್ ಮಾತಾಡಿದರ್ಧರ್ಮರಾ।
ಜ್ಯದ ಪೆಂಪಂ ದಯೆಗೆಯ್ದವರ್ ಬೆಸಸಿದಂದಾಗಳ್ ವರಂಗೊಟ್ಟವರ್।
ಪದೆಪಿಂ ಮುಟ್ಟಿದೊಡೆಯ್ದೆ ರಕ್ಷಿಸಿದವರ್ ಭೂಪರ್ ಧರಾಚಕ್ರದೊಳ್ ॥೨೨೦॥

ವ॥ ಅದಱಿನಿಂತು ದುಷ್ಟಚೇಷ್ಟಾಸಹಸ್ರದಾರುಣಮಪ್ಪ ರಾಜ್ಯ ತಂತ್ರದೊಳೆಂತಪ್ಪನುಂ ಮೋಹಿಸದಿರ ನದುಕಾರಣದಿಂ.

ಮ॥ ಬೆಸನಂಗಳ್ ತನುವಿಚ್ಚೆ ಗುಯ್ಯು ಮದಱಿಂ ಲಕ್ಷ್ಮೀವಿಡಂಬಂ ವಿಡಂ।
ಬಿಸದಂತಾಗಿರೆ ಮಾನ್ಯರೆಲ್ಲ ತೆಱದಿಂದಂ ಪೊಕ್ಕು ನಿನ್ನಂ ಚಟೂ।
ರಿಸದಂತಾಗಿರೆ ಕಾಮಿನೀತತಿ ವಿಲಾಸಾಪಾಂಗದಿಂದಂ ಪ್ರತಾ।
ರಿಸದಂತಾಗಿರಲಾತ್ಮವಂತನನಿಸೆಂದುಂ ರಾಜವಿದ್ಯಾಧರಾ ॥

ಕಂ|| ನಗದಂತು ಜಗಂ ಗುರುಗಳ್ |
ಪೊಗಳ್ವಂತನುಜೀವಿಗಳ್ಗೆ ಶುಭಮೆಪ್ಪಂತು ||
ಬೈಗವೊಗದಂತು ನಂಟ |
ರ್ಗಗಣಿತಗುಣನೆನಿಸಿ ನಿಲ್ವುದಾಕಲ್ಪಾಂತಂ ||೧೦೩||

---

## 11. ಶರದೃತು ವರ್ಣನೆ.

ಈ ಶರದೃತು ವರ್ಣನೆಯು ದೇವಕವಿಯಿಂದ ರಚಿತವಾದ ಕುಸುಮಾವಳಿ ಯೆಂಬ ಚಂಪೂ ಗ್ರಂಥದಿಂದ ಉದ್ಧೃತವಾದುದಾಗಿದೆ. ಈ ಕವಿಯು ಶೈವನು. ಈತನು ಸುಮಾರು ಕ್ರಿ. ಶ 1200 ರಲ್ಲಿ ಇದ್ದಿರಬಹುದೆಂದು ಊಹಿಸಲ್ಪಟ್ಟಿದೆ. ಈತನಿಗೆ ಕವೀಂದ್ರೋತ್ತಂಸ, ಕೃತಿರತಿರಮಣ, ಭಾರತೀಭೂಷಣ ಎಂಬ ಬಿರುದುಗಳಿದ್ದಂತೆ ತಿಳಿಯಬರುತ್ತದೆ. ಈತನ ಬಂಧವು ಪ್ರೌಢವಾಗಿಯೂ ಸಿಂಗರ್ಗಳವಾಗಿಯೂ ಗಂಭೀರವಾಗಿಯೂ ಇದೆ.

ಮ|| ಜಳವಹಗುಳ್ಳುವು ಬಿಲ್ಲನಲ್ ಕಱೆದು ಮೇಘಶ್ರೇಣಿ ಮತ್ತಂ ಪಯಃ |
ಕುಳಮಂ ವಾರಿಧಿಯೊಳ್ ತರಲ್ ತಡಯುದಾದಂ ಪೋದುದಂಬುದದಿಂ |
ಮಱೆಗಾಲಂ ಪೆಜಪಿಂಗೆ ಬಂದುದು ಶರತ್ಕಾಲಂ ಲಸತ್ಕುಟ್ಮಳಾ |
ಕುಳರೋಮಾಂಚದ ಸಾಲನೆತ್ತುತು ಮುದಂಚನ್ಮಾಳತೀಗಾತ್ರದೊಳ್ ||

ಕಂ|| ಇರದೆ ವರುಷಾಬ್ದಕುಳವೋ |
ಸರಿಸಲ್ ಕಣ್ಬಡೆದವೋಲ್ ಕರಂ ಕುಡೆಯ್ದುಂ ||
ದುರಥಾಂಗ ಮೊಂದಿದುವು ರಾ |
ಗರಸದ ಬಿಂದುದ್ವಯಂ ಪಳಂಚಿದ ತೆಱದಿಂ ||೧೦೪||

ಚಂ|| ವಿಳಸಿತಮಪ್ಪಲಂಕರಣಶಾಸ್ತ್ರದವೋಲ್ ದೆಸೆಗಳ್ ಪ್ರಸನ್ನಮಂ |
ತಳೆದು ಪೊದಟ್ಟುವಾರುಚಕಭೂಷೆಯವೋಲ್ ನೆಲೆಗೊಂಡು ಕಂಠದೊಳ್ |
ತೊಳೆವ ಪಯಃಪ್ರವಾಹಮಯಮಾಯ್ತು ನದೀತತಿ ಸತ್ಕವೀಂದ್ರನು |
ಜ್ವಳಕವಿತಾಳಿವೋಲ್ ಮೃದುಪದನ್ಯಸನೋಚಿತಮಾಯ್ತು ಳಾತಳಂ ||೧೦೫||

ಕಂ|| ವರಚಂದನ ಚರ್ಚಾಪರಿ |
ಕರಮಪ್ಪ ಮನೋಜಕುಂಭಿಕುಂಭಂಗಳವೋಲ್ ||
ನೆಱೆವೆಳ್ಪಂ ಪುದಿದು ಮನೋ |
ಹರಮಾದುವು (ತಿಳಿ) ದ ನದಿಯ ಪುಳಿನ ತಳಂಗಳ್ ||೧೦೬||

ವನರುಹಷಂಡದ ವಾರಿಯು ।
ತನಿಗೊಬ್ಬುಗೆ ತೊಲಗಿ ತಿಳಿಯೆ ತತ್ಪದದೊಳ್ ತಾಂ ॥
ಇನಮುಖ ವೀಕ್ಷಣಾತುರತೆಯಿ ।
ನೆನಸುಂ ನಿಮಿರ್ದಂತೆ ತೋರಿದುವು ಜಲಜಂಗಳ್ ॥೧೧೭॥

ಉ॥ ಜಾತಿವಿಳಾಸವೊಪ್ಪೆ ನಡೆತಂದ ನುದಗ್ರಶರನ್ಮಹೀಶ ನಿಂ ।
ದಾತತಲೀಲೆಯಿಂ ಗಗನಲಕ್ಷ್ಮಿಗೆ ಪೇೞಲಡರ್ತ್ತು ನೀಳ್ದು ದಾ ।
ಖ್ಯಾತಿಯ ದುಗ್ಧವಾರಿಸಿಧಿಯೆಂಬಿನ ಮಂಬರಮಂ ಪೊದೞ್ದು ಶು ।
ಭ್ರಾತುಳಶೋಭೆಯಿಂ ಪೊಗೆದು ದಾಗಳೆ ಶಾರದನೀರದೋತ್ಕರಂ ॥೧೧೮॥

ಶಾ॥ ಹೇಮಂತಂಬರವಿರ್ದ (ಶೀತ) ಭಯದಿಂ ದಟ್ಟಿ ಶರನ್ನೀರದ ।
ಸ್ತೋಮಂ ಪೋಗಿರುತಿರ್ಪ್ಪುದೀಗಳೆನಲುದ್ಯನ್ಮಿತ್ರನಸಸ್ಥಾನದಿಂ ।
ತಾಮೆಟ್ಟಿಂದು ಮರಾಳ ಜಾಲಮೆನಸುಂ ಪೊರ್ದಿತ್ತು ಪುಂಡ್ರಾಂಬುಜೋ ।
ದ್ದಾಮ ಶ್ರೀಯ ವಿಳಾಸಮಂ ದ್ವಿಗುಣಿಸುತ್ತಬ್ಜಾಕರಶ್ರೇಣಿಯೊಳ್ ॥೧೧೯॥

ಕಂ॥ ತಾರೆಗಳ ಬಳಗಿದವನಿಗೆ ।
ಬೇರಿಳಿಯುತ್ತಿರ್ದ್ದುದೆಂಬಿನಂ ಬಳ್ಸರಿಗಳ್ ॥
ಘೋರೆನೆ ಸುರಿದುವು ಶಾರದ ।
ನೀರದದಿಂ ತಿರುಗಿ ತೆೞತೆೞಂಬೊಳೆಯುತ್ತುಂ ॥೧೨೦॥

ಮಿಸುಪಾಗಸ ಮೆಂಬರ್ಣ್ನವ ।
ದಸದಳದೌರ್ವಾನಳ ಪ್ರಭಾವಳಿಪಾಳೀ ॥
ನಸಮಾಜ ಮಿದೆನೆ ಮಿಗೆ ಸೊಗ ।
ಯಿಸಿತು ಶರತ್ಸಮಯ ದೆಸೆವ ಬಿಸಿಲುಂ ಮಿಂಚೆಯುಂ ॥೧೨೧॥

ಮ॥ ವಿಳಸನ್ಮೌಕ್ತಿಕಯುಕ್ತದಿಂ ಪೊಗೆದು ಮುನ್ನಂ ವಾರ್ಧಿಯೊಳ್ ತಂದ ತ ।
ಜ್ಜಳಮಂ ತಾಂ ನೞೆ ಧಾತ್ರಿಯೊಳ್ ಕಱೆದು ಮತ್ತಂ ತತ್ಪಯೋಜವ್ರಜಂ ।
ಬೞಿಯೊಳ್ ಕಣ್ಗೊಳಿಪಂದದಿಂದೆ ಕಱೆಯುತ್ತಿರ್ದ್ದಪ್ಪುದಾ ಶುಕ್ತಿಜಂ ।
ಗಳನೆಂಬಂತೆ ಸಮಂತು ಸೋರ್ದ್ದುವು ಪೊದೞ್ದೀರಂತೆ ವಾರ್ಬಿಂದುಗಳ್ ॥

ಕಂ॥ ಶರದಭ್ರಮೆಂಬ ಶುಭ್ರಾಂ ।
ಬುರುಹಮೃಣಾಳಂಗಳೆನಿಸಿ ಕಣ್ಗೊಳಿಸುತ್ತುಂ ॥
ಸುರಿದುವು ನಿರಂತರಂ ಬೆ ।
ಳ್ಸರಿಗಳ್ ಸಂಗಳಿಸಿ ವಿಪುಳವಿಪುಳಾಂತರದೊಳ್ ॥೧೨೨॥

## 12. ಚಂದ್ರೋದಯ.

ತಿರುಮಲಯ್ಯಂಗಾರ್ಯನ ಚಿಕ್ಕದೇವರಾಜವಿಜಯದಿಂದ ಉದ್ಧೃತವಾದುದು.
(9ನೆಯ ವಿದ್ಯಾಭ್ಯಾಸಕ್ರಮವ ನೋಡು.)

ಉ|| ಆಗಸಮೆಂಬಶೋಕೆ ತಳಿರಾಂತುದೊ ಕೆಂಗುಡಿತಳ್ತುದೋ ನಭ|
ಸ್ಸಾಗರದೊಳ್ ವಿಹಾಯಸರಮಾಪತಿ ಪೊನ್ನಡೆಯುಟ್ಟನೋ ವಿಯ|
ನ್ನಾಗಮದಭ್ರಗೈರಿಕರಜಂಗಳೊಳದ್ದಿದೊ ತಾನಿದೆಂಬಿನಂ|
ಬೈಗಿನ ಸಂಜೆಗೆಂಪು ಬಳೆದತ್ತೊಡನೊಂದೆ ಮನೋಜನೋಜದೊಳ್ ||೧೩೪||

ಮ|| ಅನಿಲಾಧ್ವಾಂಬುಧಿಬಾಡಬಂ ಗಗನವನ್ಯಾದಾವ ಮಭ್ರಾಂಜನಾ|
ವನಿಭೃದ್ಗೈರಿಕಸಾನು ವಿಷ್ಣುಪದಕಾಳಿಂದೀಹ್ರದೋತ್ಫುಲ್ಲ ಕೋ|
ಕನದ ಶ್ರೇಣಿ ವಿಯದ್ವರಾಹತನುಲಿಪ್ತಾರಕ್ತ ಜಂಬಾಲಮೆಂ|
ಬಿನಮೇಂ ತಳ್ತುದೊ ಸಂಜೆಗೆಂಪದಟಕ್ರಾಂತಾನುರಾಗೋದಯಂ ||೧೩೫||

ಸ್ರ|| ಜೃಂಭತ್ಕೋಕೀವಿಯೋಗಾನಲವಿಸ್ಫುರಚ್ಛಿಖಾಜಾಲ ಮುತ್ತಾಲ ನೃತ್ತಾ |
ರಂಭಕ್ಷುಭ್ಯದ್ಗಿರೀಶಪ್ರಚುರತರಜಟಾಮಾಲ ಮಾಶಾಂಗನಾ ಕೌ|
ಸುಂಭಾರಕ್ತೋತ್ತರೀಯಂ ಮಸಗಿತು ರಜನೀದ್ರಾವಿಡೀಗಂಡಪಾಳೀ|
ಶುಂಭತ್ಸಿಂದೂರಕಂ ಸಾಂಧ್ಯರುಚಿರವಿಕರೋತ್ಕೃತ್ತ ಮಂದೇಹರಕ್ತಂ||

ಕಂ|| ದಿನವಣಿಜಂ ದಿನಮಣಿಯುಂ|
ಜನಮುಖಿವಂತೀಯೆ ಚರಮಭೂಭೃತ್ತಿಂಗಾ||
ತನುಮದ ನೊಡನಪಲಪಿಸ|
ಲ್ಕನುಗೆಟ್ಟೇ ನುಟ್ಟನೋ ಕಷಯಾಂಬರಮಂ ||೧೩೬||

ಮ|| ಬಳೆಗುಂ ತತ್ಕ್ಷಣಶಾಂತಸಾಂಧ್ಯರುಚಿವಹ್ನಿಜ್ವಾಲಾಧೂಮ್ಯಾಂಗಮುಂ|
ಜ್ಜ್ವಳಸಂಧ್ಯಾಂಬುರಸಾಲ ಪಲ್ಲವ ನವಗ್ರಾಸಾತಿಮೇದಸ್ವಿಕೋ|
ಕಿಳಬೃಂದಂ ರಜನೀಮುಖಾರುಣನವಾಸೃಕ್ಪಾನದೃಪ್ತಾಸುರಾ|
ವಳಿ ತಾನೆಂಬಿನ ಮುಬ್ಬಿ ಜಬ್ಬಿ ಜಗಮಂ ಧ್ವಾಂತಂ ಸಮಂತನ್ನೆಗಂ||೧೩೭||

ಶಾ|| ಕಾಳಿಂದೀಜಲದಿಂದಮೇಂ ತೊಳೆದನೋ ತಣ್ಪಿಟ್ಟನೋ ಕಾಡಿಗ|
ಲ್ದೂಳಿಂ ಕತ್ತುರಿಯಿಂದ ಮಣ್ಪಿಡಿದನೋ ಬಚ್ಚಿಟ್ಟು ಕಾಪಿಟ್ಟನೋ|
ನೀಳಪ್ರಾವರಣಾಂಶುಕಾಂತದೊಳಂಭೋಜೋದ್ಭವಂ ನನ್ನಿಯಿಂ|
ಬಾಳಾಪಕ್ಕೆಡೆಯಾಗಿ ಮೂಜಗಮದೇ ನೊಪ್ಪಿತ್ತು ಪೆರ್ಮರ್ಬಿನಿಂ ||೧೩೮||

ಮ|| ಜಲಮೆಲ್ಲಂ ಯಮುನಾಂಬು ನೀರರುಹಮೆಲ್ಲಂ ಫುಲ್ಲನೀಲೋತ್ಪಲಂ|
ನೆಲನೆಲ್ಲಂ ವಿಪಿನಸ್ಥಲಂ ತರುಗಳೆಲ್ಲಂ ತಳ್ತ ಕದರ್ಗಳೆಯುಂ|

ಳೈಲರೆಲ್ಲಂ ವಿಕಚಾತಸೀಸುವ ಮಿಳಾಭೃತ್ತಲ್ಲವಾಕಜ್ಜಲಾ |
ಚಲ ಮಶ್ಮ ವ್ರಜಮೆಲ್ಲಮಿಂದ್ರಮಣಿಬೃಂದಂ ಲೋಕಮೆಲ್ಲಂ ತಮಂ ||೨೪೦||

ಕಂ|| ಉಂಟಲ್ಲೆಂಬೀ ಯೆರಡಱ |
ಗೆಂಟಂ ಪರಿಹರಿಸಿ ಮೂರನೆಯ ಪೊಸಮೆಗೆಯುಂ ||
ಗಂಟಕ್ಕಿ ನಿರ್ವಿಶೇಷದೊ |
ಳಂಟಿಪುದೀಜಗಮನಮಮ ತಿಮಿರಾದ್ವೈತಂ ||೨೪೧||

ಕಂ|| ದಿನಮಣಿಯನಱಸಲೆಂದಜ |
ನೆನಿತಾನುಂ ತುಳ್ಕೆ ಪರಿವ ಜಲಧಿಯ ಜಲಮಂ ||
ದೆನೆ ಕರ್ಗತ್ತಲೆ ತಳ್ತಿರೆ |
ಯನುಕರಿಸಿತು ನೊರೆಯ ಸಿರಿಯ ನೊಡನುಡುನಿಕರಂ ||೨೪೨||

ಚಂ|| ಚಟುಲತಮಸ್ಸಮೂಹಮನಿಸಗ್ಗದ ಪೆರ್ದೆರೆ ಪಾಱೆ ತಾರೆಗಳ್ |
ಸ್ಫುಟತರಮಾಗೆ ನೋಡಲಮರೇಂದ್ರನಲರ್ಚಿದ ಕಣ್ಗಳಂತೆವೋಲ್ |
ನಟಪೊಡೆ ನಾಡೆ ಮೂಡದೆಸೆವಣ್ಗುಲಮಿಂ ನೆಲೆಸಂಜೆಯೆಂಬ ನೂ |
ವಟದರೆ ಜಾಱೆ ತುಂಬುವೆಱೆದೋಱೆ ಪಳಚ್ಚನ ಮಿಂಚಿತನ್ನಗಂ ||೨೪೩||

ಎಸೆದುದು ಸಂಜೆಗೆಂಪೆನಿಪ ಕಾವನ ಚೂಳಿಯ ದೊಳ ದಾಟಿಗಂ |
ಮುಸುಕುವ ಮರ್ಚಿಸಿಪ್ಪಿಡುವ ಬಾಣತುಪಾಕದ ಧೂಮದಂಬುರ್ಗಗಂ |
ಮಿಸುಪಱಿಲೆಂಬರಲ್ಗಣೆಗ ಮುಟ್ಕಿದ ಕಲ್ಲೆರ್ದೆವೆಣ್ಗಳೊಡ್ಡನಾ |
ರ್ದಿಸೆ ಯುರಗೊಂತು ಪೊಣ್ಮುವ ಪಿರಂಗಿಯ ಗುಂಡೆನ ಚಂದ್ರಮಂಡಲಂ ||

ಮ|| ಅಲರ್ವಿಲ್ಲಂ ಮುಳಿದಂಬುಜಾತಶರಮಂ ಕೂರ್ಗೆಯ್ದು ಮಾಲೋಕಮಂ |
ಗೆಲಲ ಬೆರ್ಟಿದ್ದು ತೆರಳ್ವಿನಂ ಮಘವದಾಶಾಕನ್ಯೆ ನಕ್ಷತ್ರಸಂ |
ಕುಲಲಾಜೋತ್ಕರಮಂ ಕರಂ ತಳಿದು ಜೀವಂಜೀವಸಂರಾವಮಂ |
ಗಲಗಾನಂ ಬೆರಸೆತ್ತುವಾರತಿಯ ಚೆಂಬೊಂದಟ್ಟೆಯೋ ಚಂದ್ರನೋ ||೨೪೫||

ಚಂ|| ಸ್ಮಿತಮುಖದೊಳ್ ಮಹೋನ್ನತಿಯನಾಂತುದಯಾಚಲಶೃಂಗಮೆಂಬ ಮಾ |
ರುತಿ ಕುಡೆ ತಳ್ತ ಮೊಬ್ಬುಮರ ಬಿಂದುಗಳಿಂದದೆ ಸಾಂದ ತಾರಕಾ |
ತತಿ ಪೊಗರೇಱೆ ಸಾಂಧ್ಯರುಚಿವಲ್ಕಲಭಾಸುರ ಸಭ್ರಜಾನಕೀ |
ಪತಿ ತಳೆದಿರ್ಪ ಬೈತಲೆಯ ನುಣ್ಮಣಿಯಂತೆಸೆದತ್ತು ಚಂದ್ರಮಂ ||೨೪೬||

ಮ|| ಜನತಾಹ್ಲಾದಮನೀವುದಚ್ಚರಿಯೆ ಚಂದ್ರಂ ಶಿಷ್ಟಕಾಂತಾನುರಂ |
ಜನಮಂ ಮಾಳ್ಪುದು ಪೆರ್ಚೆ ರಾಜನಮಳಶ್ರೀಕಾಂತನಾಗಿರ್ಪುದುಂ |

ಘನಮೇ ಪೇೞ್ ವಿಧು ಸತ್ವಮಾಗಮದೊಳೇ ಸಂದಿರ್ಪುದಾರಯ್ಯೆ ನೀಂ |
ತನಮೇ ತಾಂ ದ್ವಿಜರಾಜನಬ್ಜನರಿದೇ ದೃಕ್ಕಪ್ಪುದಂ ಶೌರಿಯಾ ||೧೪೭||

ಕಂ|| ನೀಗಲ್ ಸಂಧ್ಯಾರಾಗರ |
ಜೋಗುಣಮುಮನಳುರ್ವ ತಮಮುಮಂ ದ್ವಿಜರಾಜಂ ||
ಬೇಗದೆ ನಿರ್ಮಲವಿಷ್ಣುಪ |
ದಾಗಮದಿಂ ಪಡೆದ ಸತ್ತ್ವಮೆನಿಸಿತು ಜೊನ್ನಂ ||೧೪೮||

ಚಂ|| ಪಿಂಗೆ ಪರಿವೞ್ಕೆ ಪೊೞ್ಕೆ ಪೊಸಜೊನ್ನದ ಬಲ್ಸರಿ ಹೇಮಗರ್ಭನೊ |
ಲ್ದುಗಿಸುವ ಪಾದ್ಯದೋಜೆಯುನೊಡಂಬಡೆ ತಾರೆಗಳರ್ಚೆಪೊಳ್ಳರ |
ಲ್ವೊಗರಡೆದೊಪ್ಪೆ ಚಂದ್ರ ನೆಸೆದತ್ತು ದಯಾವನಿಭೃತ್ತ್ರಿವಿಕ್ರಮಂ |
ನೆಗಪಿದ ಪಾದದುಂಗುಟದ ಬಟ್ಟುಗುರಂಬಿನ ಮಂಬರಾಗ್ರದೊಳ್ ||೧೪೯||

ಕಂ|| ಖಂಡಪರಶುಗಳವಿಲ್ಲದ |
ತಾಂಡವದಿಂ ಬವಣಿಯೇಱಿ ಯೊಡನದ ನಿಱಿಪಲ್ ||
ಪಿಂಡುವ ನಿಂಬೆಯಪಂಣ್ ವಿಧು |
ಮಂಡಲಮೆಳಜೊನ್ನಮುಱಿವ ಸೀರ್ಪೊನಲೆನಿಕುಂ ||೧೫೦||

ಘನಸತ್ತ್ವಂ ವಿಷ್ಣುಪದಾ |
ರ್ಚನೆಗೆಯ್ಯಲ್ ಮೂಡಮೆಟ್ಟು ಶಶಿಶಂಖದೆ ಪಾ ||
ಲ್ವೊನಲಿನಭಿಷೇಕಮಂ ಮಾ |
ಳ್ಪನಮೇಂ ಪಸರಿಸಿತೊ ಮಸಗಿ ಪೊಸಬೆಳ್ದಿಂಗಳ್ ||೧೫೧||

ತಿಂಗಳುಮೊಡನುರ್ಕುವ ಬೆ |
ಳ್ದಿಂಗಳುಮಕ್ಕುಂ ನಿರೂಪಕಾಂತಃಕರಣ ||
ಕ್ಕಿಂಗಡಲ ಕುವರಿ ತಾಂ ಪಡೆ |
ದಂಗಜಶಿಶುಗೆಱೆಯಲಿಟ್ಟ ಪಾಲ್ಬಣ್ಣೆಯುಮೋಲ್ ||೧೫೨||

ಪೆಱೆಯುಂಚೆಯ ತುಪ್ಪಟ್ಗಳೊ |
ಕಱೆಯೆರಲೆಯ ಮಲ್ಕಿನುಗುವ ನೊರೆಗಳ ಸರಿಯೋ ||
ನೆಱೆ ಬಿರಯಿಯ ಕೂರ್ನೋಟದೆ |
ಪಱಿದಿಂದುವಿನುಗುವ ಸೊದೆಯೊ ಜೊನ್ನದ ಪೊನಲೋ ||೧೫೩||

ಮ॥ ಸ॥ ದೆಸೆವೆಣ್ಗಳ್ಗಂಕುಶಂ ಭಾನುವಿರಹಿನಯನೇಂದೀವರಪ್ರೋಲ್ಲಸ ।
ದ್ಬಿಸಿನೀಬೃಂದಕ್ಕೆ ರುಕ್ಕಿಂಗದಿರುಣಿವಱವಿಂಡಿಂಗೆ ತಾಂ ಘೃಷ್ಟಿಕೋಕ ।
ಪ್ರಸರಂ ಸೀಯಲ್ ಮಯೂಖಂ ಖಲಜನದ ಪದದ್ವಂದ್ವಬಂಧಕ್ಕೆ ಮೋಣ ರ ।
ಶ್ಮಿ ಸಮುದ್ರಂಗೇಱ್ಗೆ ನಾರಾಯಣನ ನಯನದಾಲೋಕಮಾದತ್ತು ಜ್ಯೋತ್ಸ್ನಂ॥

ಚಂ॥ ಬಗೆದುದೊ ತಿಂಗಳಿಂಗೊಳದೊಳೇನಸಿತೋತ್ಪಲ ಮಿಂದುನಾರದಂ ।
ಮಿಗದೊವಲುಟ್ಟನೋ ಶಶಿಹಿಮಾಚಲದಲ್ಲಿ ತಮಾಲಭೂರುಹಂ।
ಚಿಗುರ್ದದೊ ಕಾಗಿನುಳ್ಳುಡೆಯನಾಂತುದೊ ಚಂದ್ರಬಲಂ ಸಿತಾಂಶುಹಂ।
ಸಗರುತದೊಳ್ ತೊಡಂಕಿದುದೊ ಶೈವಲಮುಂಚಿನಮಾಯ್ತು ಲಾಂಛನಂ॥೧೫೫॥

ಕಂ॥ ನುಂಗಲೊಡರ್ಚಿದ ರಾಹುವೆ ।
ನಿಂಗದಿರಂ ನುಂಗೆ ತೋರ್ಕುಮವೊಲೋದರದೊಳ್ ॥
ಸಂಗತಮಿದುವೆಂತಲ್ಲದೊ ।
ಡೇಂ ಗಗನದೊಳರಲೆಯಾಲವೊಲಗಳು ಮೊಳವೇ ॥೧೫೬॥

ದಿನದಿನಮು ಮುಂಬುಜಾಂಬಕ ।
ನಿನಬಿಂಬಾವಾಸಜನಿತಘನತಾಪ....
....ವಿಧುಬಿಂಬದೊಳ್ ।
ರ್ದನುಗೊಳಸುಗುಮೞಿಯುದೇಕಿದಂ ಕಱಿಯೆಂಬರ್ ॥೧೫೭॥

ಯೋಗಿನುತಂ ರವಿಬಿಂಬದೊ ।
ಳಾಗಿರೆ ಹರಿ ಕಱಿಯನೆಮದೊಳಾವಂ ಮದನಂ ॥
ಭೋಗಿನುತಂ ವಿಧುಬಿಂಬದೊ ।
ಳಾಗನೆ ಪಿತನಂತೆ ಸುತಸಿದೇ ಸಚ್ಛರಿಯೋ ॥೧೫೮॥

## 13. ಜೈತ್ರಯಾತ್ರೆ.

ಈ ಜೈತ್ರಯಾತ್ರೆಯನ್ನು ಮಾಡಿದವನು ಪದ್ಮರಾಜನ ಮಗನಾದ ಮಹಾ ಪದ್ಮನೆಂಬ ಯುವರಾಜನು. ಈ ಕಥೆಯು 19ನೆಯ ತೀರ್ಥಕರನಾದ ಪುಷ್ಪದಂತನ ಪುರಾಣದಲ್ಲಿರುವುದು ಇದನ್ನು ರಚಿಸಿದ ಮಹಾಕವಿಯು ಗುಣವರ್ಮನು. ಈತನು ಜೈನನು. ಈ ಕವಿ ಚಂದ್ರನಾಥಾಷ್ಟಕವನ್ನೂ ಬರೆದಿರುವನು. ಈತನ ಬಂಧವು ಪ್ರೌಢವಾಗಿಯೂ ಶಬ್ದಾಲಂಕಾರಭರಿತವಾಗಿಯೂ ಇದೆ. ಈತನ ಪೋಷಕನೇ ಶಾಂತಿವರ್ಮಪ್ರಭು ; ಗುರುವೇ ಮುನಿಚಂದ್ರನು. ಈತನು ಸುಮಾರು ಕ್ರಿ. ಶ. 1235 ರಲ್ಲಿದ್ದನೆಂದು ತೋರುತ್ತದೆ ಈತನಿಗೆ ಗುಣಾಬ್ಜವನಕಲಹಂಸ, ಕವಿತಿಲಕ, ಕಾವ್ಯಸತ್ಕಳಾರ್ಣವಮೃಗಲಕ್ಷ್ಮ ಎಂಬ ಬಿರುದುಗಳಿದ್ದುವೆಂದು ತಿಳಿಯಬರುತ್ತದೆ. ಪುಷ್ಪದಂತ ಪುರಾಣವನ್ನು ಮೊದಲು ಗಣಧರಾದಿ ಮಹಾಮುನಿ ಸತ್ಕವೀಶ್ವರರು ಮಾಡಿದ್ದಂತೆಯೂ. ಅದನ್ನೇ ತಾನು ಕನ್ನಡಮಾಡಿದಂತೆಯೂ ಹೇಳಿಕೊಂಡಿದಾನೆ.

ಕಂ|| ಕನಕಾದ್ರಿಯನೆಳಸುವ ನೂ।
ತನಚಂದ್ರಿಕೆಯಂತಿರೆಳಸೆ ದಶನದ್ಯುತಿಗಳ್ ॥
ಜನಪತಿಯಂ ನುಡಿದಂ ಮೆ।
ಲ್ಲನೆ ಮುಕುಳಿತಕರಸರೋಜನಾಯುವರಾಜಂ ॥೨೫೯॥

ಮ|| ಪೊಡರ್ವತ್ಯುದ್ಧತರಾಜವಂಶವನಮಂ ನಿರ್ಮೂಲಿಸಲ್ ಪೋಪಮೊಂ ।
ಬೊಡದಂ ಮುನ್ನಮೆ ನಿಮ್ಮ ವಿಕ್ರಮದ ವಹ್ನಿಜ್ವಾಲೆ ತಳ್ತಿರ್ದುದಾ ।
ಪಡಿಮಾತಿರ್ಕೆ ಭವತ್ಪ್ರತಾಪಕಥೆಯಂ ಪ್ರತ್ಯಂತಭೂಚಕ್ರದೊಳ್ ।
ಬಿಡೆಕೇಳ್ವಾಗ್ರಹಮಾಯ್ತುನುಗ್ರಹಿಪುದೆನ್ನಂ ದೇವ ಕಾರುಣ್ಯದಿಂ ॥೨೬೦॥

ವ|| ಎಂದು ವಿನಯೋಕ್ತಿಯನೆ ಮುಂದಿಟ್ಟು ನುಡಿಯೆ.

ಮ|| ವಿಹಿತಂ ಕ್ಷತ್ರಿಯನಂದನಂಗೆ ದಿಟಮೆಂತುಂ ನೀತಿಯೊಳ್ ದುಷ್ಟನಿ।
ಗ್ರಹ ಶಿಷ್ಟಪ್ರತಿಪಾಲನಂಗಳದಱಿಂ ನಿನ್ನುದ್ಯಮಂ ಮಾಣಿಪಾ।
ಗ್ರಹಮಂ ಪುಟ್ಟಿಸುವಂತುಟಲ್ತು ಬಿಜಯಂಗೆಯ್ದುಪ್ಪುಕೆಯ್ ನೀಂ ಮಹಾ।
ಮಹಿಪಶ್ರೀಗೆಡೆಯಾಗಿ ವಿಶ್ರುತಜಯಶ್ರೀಯಂ ಯಶಶ್ರೀಯುಮಂ ॥೨೬೧॥

ವ|| ಎಂದು ಬೀಱ್ಕೊಡಲೊಡಂ ಆತ್ಮಭವನಕ್ಕೆ ಬಿಜಯಂಗೆಯ್ದು ಶುಭಮುಹೂರ್ತದೊಳ್.

ಕಂ॥ ನೆರಪಲ್ವೇೞ್ದಿಂ ಕೃತರಿಪು।
ನರೇಂದ್ರಭಂಗಮನುದಗ್ರಜಯತುಂಗಮನು॥
ದ್ಧರಿಪ ಭಟಸಂಗಮಂ ಚಾ।
ತುರಂಗಮಂ ನಿಜಬಳಾಧಿಪತಿಗೆ ಕುಮಾರಂ ॥೧೬೨॥

ವ॥ ಆ ಪ್ರಸ್ತಾವದೊಳ್,

ಮ॥ ಪರಮಾಚಾಳನೃಪಾಳಜಾಳ ಕುಳನಾಶೋತ್ಪಾತ ನಿರ್ಘಾತಮಾ।
ತರಮಂ ವಿಕ್ರಮನಾಟಕಾಭಿನಯನಾಂದೀ ಮಂಗಳಾತೋದ್ಯ ಹೃ।
ದ್ಯರವಂ ತಾನೆನೆ ಘೂರ್ಣಿಸಿತ್ತು ವಿಲಸತ್ಸೌವರ್ಣಕೋಣಾಹತಿ।
ಸ್ಫುರಿತಂ ಶ್ರೀಯುವರಾಜದೇವವಿಜಯಪ್ರಸ್ಥಾನಭೇರೀರವಂ ॥೧೬೩॥

ಚಂ॥ ಬೆದಱಿದುದಭ್ರಮಾರ್ಗಮಣಿ ಮೊಟ್ಟಜೆಗೆಟ್ಟುದು ಪುಂಡರೀಕಮು।
ಬ್ಬಿದುದು ಕುಮುದಂ ತಡಂಗೆಡೆದು ದಂಜನ ಮುಕ್ಕುಱುಗಿತ್ತು ವಾಮನಂ।
ಬಿದಿರ್ದುದು ಪುಷ್ಪದಂತ ಮತಿವಿಹ್ವಲಮಾದುದು ಸಾರ್ವಭೌಮಮುಂ।
ದದಿರ್ದುದು ಸುಪ್ರತೀಕ ಮಿಂದಾಲಿಸಿ ತತ್ಪಟಹಪ್ರಣಾದಮಂ ॥೧೬೪॥

ವ॥ ಅಂತು ವಿಜಯಪ್ರಯಾಣದುಂದುಭಿಧ್ವಾನ ಮೆಸೆಯಲೊಡಂ.

ಮ॥ ಸ್ರ॥ ಮದಧಾರಾವೃಷ್ಟಿ ಕಂಪಲ್ಮಸಗಿಸೆ ನೆಲನಂ ಘೋಷಘಂಟಾಗಮಂ ದಿ।
ಗ್ರದನಿಶ್ರೋತ್ರಕ್ಕೆ ಸಂಪಾದಿಸೆ ಬಧಿರತೆಯಂ ಪುಷ್ಪಕಾನದ್ಧನಾನಾ।
ಕದಳೀಜಾಳಾಂಬರಂ ರಂಜಿಸೆ ಘನಪಥಮಂ ಬಂದುದಂದನ್ಯಚಕ್ರ।
ಕ್ಕಿದು ಕಲ್ಪಾಂತಾಭ್ರಮೆಂಬಂ ತುದಿತರಿಪುಮನೋದೈನ್ಯಮುಗ್ರೇಭಸೈನ್ಯಂ॥

ಮ॥ ಸ್ರ॥ ಜವದಿಂ ಸೌಪರ್ಣನಂ ಮಾರುತಸುತನನೂನಾನ್ವಯಶ್ರೀಯಿನುಚ್ಚೈ।
ಶ್ರವಮಂ ಸೂರ್ಯಾಶ್ವಮಂ ಮಾರ್ದಿ ನಮರಧನುರ್ಜ್ಯೋತಿಯಂ ಪಂಚರತ್ನ।
ಚ್ಛವಿಯಿಂ ಕೀೞ್ಮಾೞ್ಪ ಸಲ್ಲಕ್ಷಣಗುಣನಿಧಿಗಳ್ ಪಲ್ಲಣಂಗಟ್ಟಿ ಬಂದಿ।
ರ್ದುವು ಹೇಷಾಘೋಷವಿದ್ರಾವಿತರಿಪುಮಹಿಭೃಚ್ಚಾತುರಂಗಂ ತುರಂಗಂ॥

ಮ॥ ಸ್ರ॥ ಪರಚಕ್ರಕ್ಷ್ಮಾಗಳೀಪಲ್ಮೊಱೆದನೆ ಜವನೆಂಬಂತತಿಸ್ಫಾರಚೀತ್ಕಾ।
ರರವಂ ದಿಕ್ಪಾಲರಂ ಕೇಳಿಸೆ ವಿನಿಹಿತಸೂತಂ ಪ್ರಪೂರ್ಣಾಸ್ತ್ರಜಾತಂ।
ಗುರುಚಕ್ರಕ್ಷುಣ್ಣಮಾರ್ಗಂ ಸಮಧಿಕರಥಿಸಂಸರ್ಗ ಮುದ್ಯತ್ಪತಾಕಾಂ।
ಬರ ಮುಗ್ರಾಡಂಬರಂ ಬಂದುದು ವಿಧೃತಮಹಾವಾಜಿಯೂಥಂ ವರೂಥಂ॥

ಚಂ॥ ಮಣಿಯದೆ ಬಂದು ಗೊಂದಣಿಸಿದಡ್ಡಣದೊಡ್ಡಣದುರ್ಬುರ್ ಬಿಲ್ಲ ಬಿ।
ಲ್ಲಣಿಯ ತೆರಳ್ಕೆ ಭಾರ್ಗವರ ಮೊಗ್ಗರದೊರ್ಬುಳಿ ಕುಂತದಾಳ ತಿಂ।

ತಿಣ್ಣಿ ನೆಱೆ ತಮ್ಮ ತಮ್ಮ ಬಿರುದಂ ಪಱೆಯುಂ ಕಹಳಾರವಂಗಳುಂ।
ಪ್ರಣಿಹಿತಕೇತುಚಿಹ್ನಮುಂ ಮಿಳಾವಳಿಯುಕ್ಕೆಱಿವುತ್ತು ಮಿರ್ಪಿನಂ॥೨೮॥

ವ॥ ಅನ್ನೆಗಂ.

ಮ॥ ವಿಳಸತ್ಪುಷ್ಕರಶೀಕರಪ್ರಸರದಿಂ ಸೇಸಿಕ್ಕುತಿರ್ಪಂತೆ ಮಂ।
ಜುಳಘಂಟಾರವದಿಂದ ಮೊಲ್ದು ಪರಸುತ್ತಿರ್ಪಂತೆ ದಾನಭ್ರಮ।
ತ್ಕಳಭೃಂಗೀರವದಿಂದೆ ಗಾವರಿಸುತಿರ್ಪಂ ತುದ್ಘಮಾಂಗಲ್ಯಮಂ।
ತಳೆದೊಪ್ಪಿರ್ದುದ ನೇಱಿದಂ ದ್ವಿರದಮಂ ವ್ಯಾಳೀಭವಜ್ರಾಂಕುಶಂ॥೨೯॥

ವ॥ ಅಂತೇಱಿ ಪೊಱಮಟ್ಟು ಮನುಜೇಂದ್ರಚಂದ್ರಮಂ ಪುರಂದರದಿಶಾಭಿಮುಖನಾಗಿ ನಡೆಯೆ,

ಮ॥ ಸ್ರ॥ ಧರೆಯೆಲ್ಲಂ ಸ್ಯಂದನಾಶ್ವದ್ವಿಪಭಟನಿಳದಿಂ ವ್ಯೋಮಮೆಲ್ಲಂ ಚಳಚ್ಚಾ।
ಮರಕೇತುಚ್ಛತ್ರಶಸ್ತ್ರಪ್ರಸರದಿ ನಖಿಳಾಶಾಂತ ಮೆಲ್ಲಂ ಹಯೇಭೋ।
ತ್ಕರಹೇಷಾಬೃಂಹಿತೋನ್ಮಿಶ್ರಿತಪಟಹಕಹಳಾಶಂಖಭೇರೀ ಮೃದಂಗ।
ಸ್ವರದಿಂ ನೋರಂತೆ ತೀವಲ್ ನಡೆದುದು ಕಟಕಂ ಕಂಪಿತಕ್ಷೋಣಿಭಾಗಂ॥

ಚಂ॥ ಬಳಭರದಿಂ ನೆಲಂ ಕುಸಿದು ಶೇಷನ ಪೆರ್ವಡೆ ತಗ್ಗೆ ಕಂಠಕಂ।
ದಳಮೊಳಗೆಟ್ಟಿಡಂಗಿದುದು ಕೂರ್ಮನ ಖರ್ಪರದೆಲ್ವು ನುಗ್ಗೆ ಬೆ।
ನ್ನೊಳಗುಳಿಗಿತ್ತು ಬೆಟ್ಟುಗಳ ಮೂಲಶಿಲಾತಳಸಂಧಿ ಬಿಟ್ಟನಾ।
ಕುಳತೆಯನಾಳ್ದು ಕಿಟ್ಟಿಲೆ ಕಿಱಿಂದಲೆಯಾದುದು ಕುಗ್ಗೆ ದಿಗ್ಗಜಂ॥೩೧॥

ಮ॥ ಭರದಿಂ ಶೇಷನ ನೆತ್ತಿ ಪೊತ್ತಿ ಪೊಗೆಯಲ್ಕುಚ್ಛ್ವಾಸದಿಂದುಣ್ಮುವು।
ದ್ಧುರಧೂಮೌಘಮೊ ಮೇಣ್ ನಿಜಪ್ರಿಯತಮಂ ಸೌಂದರ್ಯಕಂದರ್ಪನೇ।
ಬ್ಬಿರ ಭೂವಲ್ಲಭೆ ಬೆನ್ನೊಳಿರ್ದ ಪದಪಿಂ ಬಂದಪ್ಪಳೋ ಪೇೞಿಮೆಂ।
ಬರಮಾತೊಪ್ಪೆ ಪೊದಟ್ಟುದೆಂದು ಬಳಪಾದೋತ್ಥಂ ರಜೋಮಂಡಳಂ॥

ಕಂ॥ ಎಡೆನೆಱೆಯದೀ ಬಲಕ್ಕಾ।
ನೆಡೆಮಾಡುವೆನೆಂದು ನೆಲನನೊದವಿಪ ತೆಱದಿಂ॥
ಕಡಲಂ ಪೀರ್ದುದು ರಜಮೇಂ।
ಪಡೆದುದೊ ಯುವರಾಜನಲ್ಲಿ ಪಡೆವಳವೆಸನಂ ॥೩೩॥

ವ॥ ತದನಂತರಂ.

ಕಂ॥ ಕರಗಿಸಿದುದು ರಜಮಂ ಚಾ।
ಮರಪವನಂ ವಾಜಿವದನವಾಯುಪತಾಕಾಂ॥

ಬರಮಾತರಿಶ್ವನನುಗತ।
ಮರುತಂ ಮತ್ತೇಭಕರ್ಣತಾಳಸಮೀರಂ ॥೧೨೪॥

ಮ॥ ಹಯಲಾಲಾಜಳಮುಂ ಮದೇಭಮದಮೂತ್ರಾಸಾರಮುಂ ರೇಣುಸಂ।
ಚಯಮುಮಂ ಮಟ್ಟಿಸಿ ಮುಂದುಗಾಣಿಸಿತು ಮುಗ್ಧಾಲೋಕಮಾಗಿರ್ದ ಸೇ।
ನೆಯ ನಧ್ವಾನದೊಳಂತದೇನನಿತಱಿಂ ಮಾಣ್ದಿರ್ದುದೇ ಯಾನಲೀ।
ಲೆಯುಮಂ ನೋಟ್ಪ ವಿಯಚ್ಚರರ್ಗೆ ತೆಱಪಂ ಮಾಡಿತ್ತು ಕರ್ಣಾನಿಲಂ ॥

ವ॥ ತದನಂತರಂ.

ಚಂ॥ ಬಳೆದುದೊ ಭೂತಳಂ ಸುರಿದುದೋ ನಭ ಮೀಂದುದೊ ದಿಕ್ತಟಂ ಬಳಂ।
ಗಳನೆನೆ ಪರ್ವಿದಾಪಡೆಯ ತೊೞ್ತುೞಿಯಿಂ ಗಿಡು ಬಳ್ಳಿ ಭೂರುಹಾ।
ವಳಿ ಪೊದೆಱುಳ್ಳ ಬಲ್ಲಡವಿ ಪೆರ್ವಯಲಾಯ್ತು ನದೀನದೌಘ ಮಾ।
ಗಳೆ ಬಱುಗಂಪಲಾಯ್ತು ಕುೞಿಯುಂ ತೆವರುಂ ಸಮವಾಯ್ತುದೆತ್ತ
ಲುಂ ॥೧೨೫॥

ವ॥ ಅಂತೆತ್ತಿ ಬರ್ಪ ವಿಕ್ರಮವಿನೋದನೆೞ್ತರವನಾಪ್ತಗುಪ್ತಚರರಿಂದ ಮ
ಱಿದು ಕೆಲದ ನೆಲದ ಮಂಡಳಿಕವರ್ಗಮೆಲ್ಲ ಮಲ್ಲಲ್ಲಿ ತಲ್ಲಣಿಸಿ.

ಚಂ॥ ಬಗೆಯದಿದಿರ್ಚಿ ಸಾವುದು ಮರುಳ್ತನ ಮುಳ್ಳುದ ನಿತ್ತು ತೆತ್ತು ಕೈ।
ಮುಗಿದು ಬದುಕುಂಕುಮಂ ಹರಣಮುಳ್ಳೊಡೆ ಹಾಡಿ ಯುಣಲ್ಕೆ ಬರ್ಪುದೊ।
ರ್ಮೆಗೆ ತಲೆಸುತ್ತುವೋಗಿ ತಲೆಯಿರ್ದೊಡೆ ಸಾಲ್ವುದು ಕಾದಿ ಸತ್ತೊಡೆ।
ತ್ತುಗುಮೆ ಸಮಸ್ತವಸ್ತುತತಿ ಸಾವುದಱಿಂ ಸರಿವೋಗಲಾಗದೇ ॥೧೨೬॥

ಚಂ॥ ನಯಮಿದು ನಮ್ಮ ನಾಡ ಗಡಿಯಂ ಪುಗದಲ್ಲಿಯೆ ಬಂದು ಮುತ್ತವ।
ಲ್ಲಿಯೆ ಬೆದಱಿಟ್ಟು ಸಂಹರಿಸದಲ್ಲಿಯೆ ರಾಜ್ಯಮನೀೞ್ದು ಕೊಳ್ಳದ।
ಲ್ಲಿಯೆ ಬೆಸಕೆಯ್ವೆಮೆಂದು ನಿಜಸಾರಧನಂಗಳ ನಟ್ಟಿ ಮುಂದೆ ಭೀ।
ತಿಯಿಸಿದಿರ್ವಂದು ಕಂಡ ರಸುವಿಟ್ಟವರೇನುಚಿತಪ್ರವೀಣರೋ ॥೧೨೭॥

ವ॥ ಅಂತವರ ಸದ್ಭಾವಮುಂ ಕೈಕೊಂಡು ಉೞಿದರಿಪುಮಂಡಲಕ್ಕೆ ನಡೆದು.

ಮ॥ ಅನತಕ್ಷತ್ರಿಯರೊತ್ತುಗೊಂಡ ಗಿರಿದುರ್ಗಕ್ಕುಗ್ರವಜ್ರಾಗ್ನಿ ಕಾ।
ನನದುರ್ಗಕ್ಕೆ ಮಹಾದವಾಗ್ನಿ ಜಲದುರ್ಗಕ್ಕುರ್ವಿದೌರ್ವಾಗ್ನಿ ಮಾ।
ರ್ಗಸದುರ್ಗಕ್ಕೆ ಬೃಹಲ್ಲಯಾಗ್ನಿಯೆನೆ ತನ್ನುದ್ವೃತ್ತಪ್ರತಾಪಾಗ್ನಿ ನೀ।
ಳ್ದನಸಂ ಪರ್ವಿ ಮಿಗುರ್ವಿಸಲ್ ನೃಪಸುತಂ ವಿಕ್ರಾಂತಮಂ ತೋಱಿದಂ ॥

ಮ॥ ಉಱದುದ್ವೃತ್ತರ ಮೊತ್ತಮಂ ತಱಿದು ಗೆಲ್ಲಂಗೊಂಡು ವೃಂದಂಗಳಂ।
ಸೆಱೆಗೊಂಡುಟ್ಟುದನೀೞ್ದುಕೊಂಡು ಬಳಮಂ ಬೆಂಕೊಂಡು ದುರ್ಗಂಗಳಂ।

ಕುಱುಪಿಂದಂ ಪರಿಮುತ್ತಿಗೊಂಡು ಪುರಮಂ ಕೈಕೊಂಡು ನಾಡರ್ಥಮಂ।
ಸೆಱೆಗೊಂಡಾಯುಕ್ಕಳಿಗೊಂಡ ನುದ್ಘಯಶಮಂ ವಿಕ್ರಾಂತಕಾಳಾನಳಂ॥೨೮೦॥

ಮ॥ ಅನಲಂ ಕಾನನಮಂ ಕಱುತ್ತಡಿಗಿಡಲ್ ಸುಟ್ಟುಂ ಬೞಿಕ್ಕಲ್ಲಿ ನೂ।
ತನಬೀಜಾಂಕುರವೃದ್ಧಿಯುಂ ನೆಗೞಿಪಂ ತುದ್ವೃತ್ತಭೂಪಾಲರಂ।
ಮುನಿಸಿಂ ಕೊಂದು ಬೞಿಕ್ಕೆ ತತ್ಪದವಿಯೊಳ್ ತದ್ವಂಶಮಂ ಧಾತ್ರಿಜೇ।
ಯೆನೆ ಸಂಸ್ಥಾಪಿಸಿ ಪದ್ಮಸೂನು ಮೆಱೆವಂ ಕೋಪಪ್ರಸಾದಂಗಳಂ॥೨೮೧॥

ಉ॥ ಆನತರಾಗಿ ಜೀವಿಸವೆ ದುಷ್ಟನೃಪರ್ ಕೆಲರೋಡಿ ಪೋಗಿ ಪಾ।
ಥೋನಿಧಿಯಲ್ಲಿ ಪೊಕ್ಕೊಡವರಂ ತಪಿಸಲ್ ಬೞಿಸಂದು ನಿಂದುದಂ।
ದಾನೃಪಸೂನುವಿಕ್ರಮಕೃಶಾನು ವವಲ್ಲದೊಡಲ್ಲಿ ಬೇಱೆ ನೀ।
ವಾರ್ಗನಸರೆಂಬರಾರೊ ಬಡವಾನಳನೆಂಬುದದೇನೊ ತೋಱಿರೇ ॥೨೮೨॥

ಚಂ॥ ಬೆವಱಿದ ರಾಜಧಾನಿ ಬೆಸಕೆಯ್ಯದ ಬಲ್ಲಿವರೊಡ್ಡು ಕಾದಿ ಸಾ।
ಯದ ಸಮರೋದ್ಧತರ್ ಕಿಡದ ಕಂಟಕರೋಡದ ಬೇಡವಟ್ಟು ಪೋ।
ಗದ ಕಲಿಗೋಂಟೆ ಸಿಲ್ಕದ ವಿರೋಧಿಕುಟುಂಬ ಮಿಱುಂಬುಗೊಂಡಡಂ।
ಗದ ಖಳರನ್ಯಮಂಡಳದೊಳಿಲ್ಲ ಕುಮಾರನಿದೇನುಮಗ್ರನೋ ॥೨೮೩॥

ಮ॥ ನೆಗೞ್ದುದ್ದಂಡತೆ ಕಂಟಕಸ್ಥಿತಿ ಸರೋಜವ್ರಾಜದೊಳ್ ರಾಜಲೀ।
ಲೆ ಗುರುಸ್ಫೂರ್ತಿ ನಭೋಗ್ರದೊಳ್ ಚಪಲತಾಸಂಗಂ ವಿಪಕ್ಷತ್ವ ಮು।
ದ್ರಿಗಳೊಳ್ ಕೋಶವಿಭೂತಿ ವಿಕ್ರಮದ ಸೊಂಪುದ್ಯಾನದೊಳ್ ಪೀನಮೊ।
ಪ್ಪುಗು ಮುರ್ವೀಶರೊಳೊಪ್ಪದಂವನಿಸಿದಂ ತನ್ನೇೞ್ಗೆಯಿಂ ಪದ್ಮಜಂ ॥

---

## 14. ಚಾರದತ್ತಚರಿತ್ರಂ.

ಈ ಚಾರದತ್ತನ ಕಥೆಯನ್ನು ಕರ್ಣಪಾರ್ಯನೆಂಬ ಕವಿಯು ರಚಿಸಿದ ನೇಮಿನಾಥಪುರಾಣವೆಂಬ ಚಂಪೂಗ್ರಂಥದಿಂದ ತೆಗೆದು ಬರೆದಿದೆ. ನೇಮಿನಾಥನು 22ನೆಯ ತೀರ್ಥಕರನು ಕರ್ಣಪಾರ್ಯನು ಮಾಳವೀಮಾಧವ ವೀರೇಶಚರಿತ ಎಂಬ ಬೇರೆ ಎರಡು ಗ್ರಂಥಗಳನ್ನೂ ಬರೆದಿರುವಂತೆ ತಿಳಿಯಬರುತ್ತದೆ. ಈತನು ಮತದಲ್ಲಿ ಜೈನನು. ಈತನಿಗೆ ಕರ್ಣಪ, ಕರ್ಣ್ಣಪ, ಕರ್ಣ್ಣಮಯ್ಯ, ಕನ್ನಮಯ್ಯ, ಕರ್ಣ್ಣಮ ಎಂಬ ನಾಮಾಂತರಗಳೂ ಅಲ್ಲಲ್ಲಿ ದೊರೆಯುತ್ತವೆ. ಇದಲ್ಲದೆ ಈತನಿಗೆ ಪರಮಜಿನಮತಕ್ಷೀರವಾರಾಶಿಚಂದ್ರ, ಭವ್ಯವನಜವನಮಾರ್ತಾಂಡ, ಸಹಜಕವಿತಾರಸೋದಯ, ಎಂಬ ಬಿರುದುಗಳಿದ್ದಂತೆ ತಿಳಿಯಬರುತ್ತದೆ. ಈತನ ಕಾಲವು ಸರಿಯಾಗಿ ತಿಳಿಯದು; ಸುಮಾರು ಕ್ರಿ. ಶ 1140ರಲ್ಲಿ ಇದ್ದನೆಂದು ಊಹಿಸಲಾಗಿದೆ. ಈ ಕವಿಯ ಬಂಧವು ಲಲಿತವಾಗಿಯೂ ಸುಬೋಧವಾಗಿಯೂ ಇದೆ.

ಚಂ|| ಬಗೆಯಲಿದಂಗದೇಶಮಿದಱೊಳ್ ಸಲೆಸಂದುದು ಚಂಪೆಯೆಂಬುದೀ |
ನಗರಮಿದಂ ನೃಪಂ ವಿಮಳವಾಹನ ಭೂಭುಜನಾಳ್ವನಿಲ್ಲಿ ವೈ |
ಶ್ಯಗಣವಿಶಿಷ್ಟನಿರ್ಪನಭಯಂ ವಿಭುಮಾನಿತ ಭಾನುದತ್ತನಾ |
ತಗೆ ನಿಜಭಾರ್ಯೆ ದೇವಿಲೆಯವರ್ ಸುಖಮಂ ತಳೆದಿರ್ದರಿರ್ಪನಂ ||೧೪೫||

ವ|| ಅಂತಿರ್ಪುದುಮಾದೇವಿಲೆ ಯೊಂದುದಿನಂ ಕನಸಿನೊಳ್ ಚಾರಣರ್ ತನಗೆ ಮಾಣಿಕಮನಿತ್ತುದಂ ಕಂಡೊಸೆದಿರೆ ಕೆಲವಾನುಂದಿವಸಕ್ಕೆ ಗರ್ಭಮಾಗಿ ನವಮಾಸಂ ನೆಱೆದು ಮಗಂಬಡೆಯೆ,

ಕಂ|| ಪುತ್ರನಚಾರಣರೀಯಲ್ |
ಪೆತ್ತೆಂ ನಾಮೀಕುಮಾರನಂ ಪ್ರಥಿತಯಶೋ ||
ವಿತ್ತನ ನದಱಿಂದೀ ವಿಭು |
ಗುತ್ತಮಮಿದು ಚಾರದತ್ತನೆಂಬಭಿಧಾನಂ ||೧೪೬||

ವ|| ಎಂದು ಪೆಸರನಿಟ್ಟೊಸಗೆಯುಂ ಮಾಳ್ಪುದುಂ ಕೆಲವಾನುಂ ಕಾಲದಿಂ ಚಾರದತ್ತ ನಕ್ಷರಾದಿ ಕಳಾಕಳಾಪದೊಳತಿಪರಿಣತನಾಗಿ,

ಕಂ|| ಪರದಂ ಮೊದಲಂ ಬೇಪ್ಪೊಡೆ |
ಪರದನೆ ಶೂರತೆಯನಪ್ಪುಕೆಯ್ಯುದ್ದಂ ಮತ್ತಂ ||
ನೆರಮಂ ಪಾರ್ವೊಡೆ ಶೂರನೆ |
ಪರಮಾರ್ಥಂ ಸ್ವಾರ್ಥಪರನವಂ ಪರಹಿತಸೇ ||೧೪೭||

ವನದುರ್ಗದೊಳೋಷಧಿಗಳ್ ।
ವನಸಿಧಿತಟದಲ್ಲಿ ತದ್ವನಾವನಿಜಂಗಳ್ ॥
ಘನಗುಹೆಯೊಳ್ ರತ್ನಂಗಳ್ ।
ಜನಿಯಿಸುಗುಂ ಸಾಹಸಾದಿಗಳ್ಗರದುಂಟೆ ॥೭೮॥

ವ॥ ಅದಱಿಂ ಸಕಳವಿದ್ಯಾನಿಪುಣನೆನಿಪ ವಣಿಗಗ್ರಣಿಗಂ ಅಕ್ಷೀಣದೋರ್ದ್ರ್ಪಿಣನಪ್ಪ ಸುಭಟಂಗಂ ಅರ್ಥಮುಮಂ ನೆರಮುಮಂ ಪಾರ್ವುದು ಕಷ್ಟಂ ಎಂದು,

ಚಂ॥ ನಿರುಪಮನಂದು ಪೇೞ್ದು ಪೊಱಮಟ್ಟಿದಾಗಳ್ ದಕ್ಷಿಣಾಶೆಯೊಳ್ ।
ಬರುತಿರೆ ಸಾರ್ಥಮೊಂದನಸಮೋದ್ಯಮತತ್ಪರನೈದೆ ಕಂಡದಂ ।
ತ್ವರಿತದಿನೈದಿವಂದು ಮುದದಿಂದದನೊಂದಿ ಸುಖಪ್ರಯಾಣದಿಂ ।
ದಿರೆ ಬೞಿಸಂದು ಬಂದರದೆ ಕೂಡಿವನಾತನೊಳಂದು ಮಾತುಳಂ ॥೭೯॥

ವ॥ ಅಂತು ಮಾತುಳನಪ್ಪಸಿದ್ಧಾರ್ಥಂ ಸಿದ್ಧಪುರುಷಾರ್ಥನಾಗಿ ಚಾರುದತ್ತನೊಡಗೂಡಿ ನಡೆವುದುಂ ಆ ಸಾರ್ಥಮಳಕಾವಿಷಯದೊಳನ್ಯಮಾರ್ಗನಿರ್ಗತಮಾಗೆ ತಮ್ಮಿರ್ವರುಮಂತೆ ನಡೆದು ಸಿಪ್ಪಾವಮಲಿ? ಎಂಬ ನದೀತೀರಮನೆಯ್ದೆವಂದಲ್ಲಿಯು ಗಂಧಯುಕ್ತಿ ಪ್ರಯೋಗ್ಯಮಾದ ಸುಗಂಧಮೂಳಿಕಗಳಂ ನೆಱೆಯಱಿಸಿಕೊಂಡು ಪೊಱೆಗಟ್ಟಿ ಪೊತ್ತು ಪಳಾಶಪುರಮಂ ಪೊಕ್ಕು ನಿಂದು,

ಕಂ॥ ಅವರಂಮುರುಗಂಧೌಷಧಿ ।
ನಿವಹಂಗಳನಲ್ಲಿ ಮಾಱಿ ನೆಱಪಿದ ಕಾರ್ಪಾ ॥
ಸವನೆತ್ತಲೊಯ್ಯೆ ವನದೊಳ್ ।
ದವಾಗ್ನಿಪೊತ್ತಲ್ಕೆ ಕೂಡೆ ಬೇಯಲ್ ಮತ್ತಂ ॥೮೦॥

ಕೇಡೆಂಬುದು ತನ್ನ ಮನಂ ।
ನೋಡಲ್ಕಾಗಿರ್ಕುಮಾದೊಡುದ್ಯಮದಿಂದ ॥
ಳ್ಕಾಡದೆ ವಿಷಾದಮತಿಯೊಳ್ ।
ಕೂಡಗೆ ನಡೆಯಲ್ ಧನಾಗಮಂ ಸಮನಿಸದೇ ॥೮೧॥

ವ॥ ಎಂದು ಬಗೆದಂದು,

ಮ॥ ಸ್ರ॥ ತರದಿಂ ಪೂರ್ವಾಪರಾಂಬೋಧಿಯೊಳೆಸೆವ ಲಸದ್ವೀಪಸಂತಾನದೊಳ್ ಸಂ ।
ಚರಿಸಲ್ಕಿರಾಱುಮಲ್ಲಂ ಸಮನಿಸಿ ಪಡೆದಂ ವಿತ್ತಮಂ ಸಂದುದತ್ತಂ ।
ನಿರುತಂ ಮೂವತ್ತೆರಱ್ಕೋಟಿಯನನುಪಮನಂತದರ್ಕಲ್ಲಿ ಕೊಂಡಂ ।
ನಿರವದ್ಯಂ ಸಾರವಸ್ತೂತ್ಕರಮನುರುಮುದಂಬೆತ್ತು ತಚ್ಚಾರುದತ್ತಂ ॥

ವ॥ ಅಂತಾತಂ ನಾವೆಯನೇಱಿ ಪಾರಾವಾರದೊಳ್ ಬರುತಿರೆ,

ಮ॥ ಸ್ರ॥ ಪ್ರಳಯಪ್ರೋದ್ಭೂತವಾತಂ ಬಳಸುವ ತೆಱದಿಂದುಗ್ರವಾತಪ್ರಘಾತಂ ।
ಬಳಸಲ್ಕಂಭೋಧಿವೀಚೀಪ್ರಚಯಮಚಲದಂತೆರ್ದು ಪರ್ಬಿರ್ದೊಡಂದು ।
ಚ್ಚಳಿಸಲ್ತನ್ನಾವೆ ಸೀಯಂ ಪಿರಿಯೆ ಮುಱಿವುದುಂ ಕೂವಕಂಬಂ ಸಮಂತಾ ।
ಕುಳಮಾಗಲ್ ವಾರಿಕರ್ ಕಂಡಕಳವುನನದಂ ನೋಡಿ ತಚ್ಚಾರುದತ್ತಂ ॥

ವ॥ ಅದಂ ಕಂಡು ಪರಿಚ್ಛೇದಿಸಿ,

ಕಂ॥ ತನಗೊಂದಿದ ಸಾವಂ ಕಂ ।
ಡೆನಸುಂ ಸೆಡೆದಿರ್ಪುದಲ್ತು ಧೀರತೆಯೆಂದಾ ॥
ಮನುಚರಿತನುಗ್ರವನಧಿಯೊ ।
ಳನಂತರಂ ಪಾಯಲಿರ್ದನಿರೆ ಸಿದ್ಧಾರ್ಥಂ ॥೧೯೪॥

ವ॥ ಕಂಡಿದಾವಸದುದ್ಯಮಂ ನಿಲ್ಲಿಮೆಂದು ಅಲ್ಲಿ ಸೆಱೆಗೆಯ್ದು ಪ್ರಮಾದವಲಗೆಯನತಿವೇಗದಿಂ ತಂದು ಸಾರ್ಚೆ ಚಾರದತ್ತನೇಱಿ ನೂಂಕುವುದುಂ ನಾವೆ ನಾವಿಕಸಮೇತ ಮರ್ದಿಪೋಗೆ ಚಾರದತ್ತನ ಪಲಗೆ ಯೊಂದು ಕುಱುವವಮಂ ಸಾರ್ವುದುಂ ಅಲ್ಲಿಂ ಪೊಱಮಟ್ಟು ........ಹೇಮಾಂಗವಿಷಯದ ರಾಜಪುರೀ ಸಮೀಪದ ತಾಪಸಾಶ್ರಮಕ್ಕೆ ಬಂದು ವಿಶ್ರಮಿಸಿರ್ಪುದುಂ ಅಲ್ಲಿಗೊರ್ಬ ಭಿಕ್ಷುಕಂ ಬಂದು,

ಮ॥ ಪರಮಾರ್ಥಂ ಧನದಿಚ್ಛೆಯುಳ್ಳಪುರುಷಂ ನಿರ್ಬಂಧದಿಂ ಸೂತವಿ ।
ಸ್ತರವಿದ್ಯಾವಿದನಪ್ಪುದಲ್ಲದೆ ವೃಥಾಯಾಸಂಗಳಿಂದಪ್ಪುದೇಂ ।
ನಿರುತಂ ಪೇಱೆನೆ ಚಾರದತ್ತನಿದುಮಂ ನೋಱ್ಪೆಂದಲೆಂದಱ್ತಿಯಿಂ ।
ಗೊರವಂಗೆಂದನದುಂಟೆ ಪೇಱಿಮೆನಲಾ ಧೂರ್ತಂ ಮಹೋತ್ಸಾಹದಿಂ ॥

ವ॥ ಆ ವಿದ್ಯಾವಿಜ್ಞತೆ ಯೆಮಗುಂಟಾದೊಡಂ ಸಹಾಯವಿಲ್ಲೆಂಬುದುಂ ಚಾರದತ್ತನಾನೆಪ್ಪೆನೆಂಬುದುಂ ಅಂತಾದೊಡೆ ಬನ್ನಿಮೆಂದೊಡಗೊಂಡುಪೋಗಿ,

ಕಂ॥ ರಸಮಂ ತರ್ಪಂ ಬಾಯೆಂ ।
ದುಸಿರ್ದೊಯ್ದಾ ಚಾರದತ್ತನಂ ತಾಪಸನ ॥
ರ್ಬಿಸುವ ವನದೊಳಗೆ ತೋಱಿದ ।
ನಸಮಾಸ್ತ್ರನಿಭಂಗೆ ರೂಪಮುಂ ಕುಟಿಲತೆಯುಂ ॥೧೯೫॥

ವ॥ ಅನಂತರಂ,

ಕಂ॥ ತರುಣನೆ ನೀಂ ಪುಗಲಂಜುವೆ ।
ಯಿರುಪೊಕ್ಕಪೆನಾನೆನುತ್ತೆ ತದ್ಭಿಕ್ಷುಕನಾ ॥

ನಿರುಪಮನಂ ನುಡಿದಾಗಳ್ ।
ಸರೋಷವೊಂಪುಗುವೆನೆಂಬುದುಂ ಪುಗಿವೆಂದಂ ॥೯೭॥

ವ|| ಅಂತು ಚಾರುದತ್ತಂ ಪುಗೆ ತಾಪಸಂ ಸಂತಸಂಬಟ್ಟೆಂದನೀನೇಣಂ ಪಿಡಿದೆ ಇೞಿದು ಬಟ್ಟಿಕ್ಕೀ ನೊರೆಯುಗುಂಡಿಯೊಳ್ ರಸಮಂ ಮುಟ್ಟದೋಸರಿಸಿ ನೀಡುವುದು; ಮತ್ತಂ ನಿನಗೆ ನೀಡಲಂದೆ ನೀಡಿದ ನೇಣಂ ಕೊಂಡು ದೃಢಮಾಗಿ ಪಿಡಿದು ಬಾ ತೆಗೆದಪ್ಪೆನೆನಲಿೞಿದು ರಸಮನಾವುಗ್ಗದಿಂ ತೆಗೆದು ನೇಣನಲ್ಲಾಡಿ......ಪಿರಿದು ಪೊೞ್ತಱಿಂ ನೇಣಬರವಂ ಕಾಣದೆ ಯಾ ಪುರಾಣಕೂಪದೊಳಾಪದಮನೆಯ್ದಿ ಯಾ ಮಹಾಪುರುಷಂ ತನ್ನೊಳಿಂತೆಂದಂ—

ಮ|| ರಸಮಂ ತಾಪಸನೆನ್ನ ನಿಕ್ಕಿ ಪಡೆದಂ ಪೇೞಾನದರ್ಕೀಕೆ ಚಿಂ ।
ತಿಸುವೆಂ ನಿಶ್ಚಯದಿಂದೆ ನಾವು ದೊರೆಕೊಂಡಿರ್ಪತ್ತಿದರ್ಕಿಲ್ಲಿ ಭಾ ।
ವಿಸಲೆಂತುಂ ಪೆಱತೊಂದುಪಾಯಮಣಮಿಲ್ಲಂ ಮತ್ತಿದರ್ಕನ್ನು ಸ ।
ನ್ಯಸನಂಬೆತ್ತು ಸಮಾಧಿಯಿಂದಸುವನೊಕ್ಕಂ ಪೊರ್ದುವೆಂ ನಾಕಮಂ ॥

ವ|| ಅಂತು ನಿಶ್ಚಯಿಸಿ ತತ್ಕೂಪಕುಕ್ಷಿನಿಕ್ಷಿಪ್ತನೊರ್ವಂ ಅಸುಮಂ ತೊಱೆಯವೇಡ ಪೊಱಮಡುವುಪಾಯಮಿರ್ದಪುದೆಂಬುದುಂ,

ಕಂ|| ಎನೆ ಚಾರುದತ್ತನೆಂದಂ ।
ನಿನಗಿಲ್ಲದುಪಾಯಮೆನಗದೆಂತಾದುದೊ ಪೇೞ್ ॥
ಚೆನಲಾತನೆಂದನಣ್ಣ ನೆ ।
ನಿನಗಾದೀನೋವು ಗೊರವನಿಂದೆನಗಾಗಲ್ ॥೯೯॥

ವ|| ಈ ಕೂಪದೊಳಿರ್ದು ತೃಷಾಪರನೆಂ ರಸಮಂ ನೀರ್ಗೆತ್ತು ಮೊಗೆಯಲೆನ್ನ ಕರಯುಗಂಗಳ್ ಕೊಳೆದಳಿದು ಬೀೞಲಿರ್ದುವು. ನಿನಗುಪಾಯಮಂ ಪೇೞ್ವೆಂ. ಈ ರಸಮನಿಂದೃಶಮಪ್ಪುಡು ಬಂದು ಕುಡಿದು ಪೋಪುದು. ಅದಱ ಬಾಲಮಂ ಪಿಡಿದು ಪೋಗೆಂದು ಕಂಠಗತಪ್ರಾಣನಾಗೆ, ಚಾರುದತ್ತನಾತಂಗೆ ಸಮಾಧಿವಡೆವುದುಂ ಉಡು ಬಂದಾರಸಮಂ ಕುಡಿವುದು ಮದಱ ಬಾಲಮಂ ಪಿಡಿದು ತೇಲುತ್ತಂ ಪುಣ್ಯವಶದಿಂ ಪೊಱಮಟ್ಟು—

ಮ|| ಇದು ಚಿತ್ರಂ ರಸಕೂಪದೊಳ್ ಪದಪಿನಿಂದಾಂ ಬಂದು ಪೊಕ್ಕಿರ್ಪುದೆ ।
ತ್ತದಯಂ ತಾಪಸನಿಕ್ಕಿ ಪೋಗೆ ಪಿರಿದೊಂದಾಪತ್ತು ಮೆತ್ತಿರ್ಪುದೆ ।
ತ್ತದಱೊಳ್ ಸದ್ಗುಣನಿರ್ದು ಬರ್ಪ ತೆಱನಂ ಪೇೞ್ದೀತನುಂ ಸತ್ತುದೆ ।
ತ್ತಿದು ಸಂಭಾವ್ಯಮೆ ಭಾವಿಸಲ್ಕಘಟಿತಂ ಮಂತಾ ಕರ್ಮನಿರ್ಮಾಪಣಂ ॥೧೦೦॥

ಕಂ॥ ಎಂದು ಸಮಭೂಮಿಯಂ ಭೂ ।
ಮಂದಿತನಂದೆಯ್ದಿ ನಡೆದು ಕಿಱಿದಂತರಮಂ ॥
ಮಂದರಧೈರ್ಯಂ ಪರಮಾ ।
ನಂದದಿ ನಾವನಧಿತೀರಮಂ ಸಾರ್ತಂದಂ ॥೩೦೧॥

ವ॥ [ಅಂತು ಸಾರ್ತಂದು ಅಲ್ಲಿರ್ದೊಂದು ಕುಜುವಮನೆಯ್ದಿ] ಕಿಱಿದಾನುಂ ಶಿಲೋಚ್ಚಯಮನೇಱಿ ನೋೞ್ಪಲ್ಲಿ ಕಾಯೋತ್ಸರ್ಗದಿನಿರ್ದ ಮುನೀಂದ್ರರಂ ಕಂಡು ಮನಂಗೊಂಡು ಬಂದು,

ಕಂ॥ ಗುರುಭಕ್ತಿಪೂರ್ವಕಂ ಸಿ ।
ರ್ಭರಭಕ್ತಿಯಿನಂದು ವಂದಿಸಿರ್ಪುದುಮಾಗಳ್ ॥
ವರಯೋಗಿ ಕೈಯನೆತ್ತಿ ।
ದುರ್ಗರುದಯೆಯಿಂ ಪರಸಿ ಸಿರುಪಮಾದರದೆಂದಂ ॥೩೦೨॥

ವ॥ ನಾವಂದಿನಪಿತಗತಿಗಳವು ; ಮಹಾ ಪುರುಷನಪ್ಪ ಚಾರುದತ್ತನೆ ನೀನೆಂದು ಸಂಭಾಷಿಸುತ್ತಿರ್ಪನ್ನೆಗಂ,

ಮ॥ ಮೃದುಘಂಟಾಕ್ವಣನಂಗಳಿಂದೆಸೆವ ಸದ್ರತ್ನಪ್ರತಾನಂಗಳಿಂ ।
ಪುದಿದೊಪ್ಪಿರ್ದ ವಿಮಾನಮಂ ಪದೆಪಿನಿಂದಂದೇಱಿ ಬಂದಂ ಮಹಾ ।
ಹೃದಯಂ ಖೇಚರನಾಪುರಾಧಿಪತಿವೋಲ್ ಸಲ್ಲೀಲೆಯಿಂ ಸದ್ಗುಣಾ ।
ಸ್ಪದನಾಗಳ್ ನುತಸಿಂಹಕೇತು ಗುರುವಂ ಕಾಣಲ್ಕೆ ಸದ್ಭಕ್ತಿಯಿಂ ॥೩೦೩॥

ವ॥ ಅಂತು ಪವನಪಥದಿನೞಿದು ಬಂದಾ ಮುನೀಶ್ವರರ ಪದಕುಶೇಶಯಂಗಳ ನತಿಸೇವ್ಯ ದಿವ್ಯಾರ್ಚನಾ ನಿಚಯದಿನರ್ಚಿಸಿ ವಿನತನಾಗಿ ಕುಳ್ಳಿರ್ಪುದುಂ........ ಆ ಸಮಯದೊಳ್,

ಕಂ॥ ದೆಸೆ ಶಕ್ರಚಾಪದಿಂದಂ ।
ಮುಸುಱಿದುದೆನೆ ಪಂಚರತ್ನರಚನಾಭರಣ ॥
ಪ್ರಸರಗಭಸ್ತಿಗಳಿಂ ರಂ ।
ಜಿಸೆ ಬಂದಂ ಕುಸುಮಶೇಖರಾಖ್ಯಂ ದಿವಿಜಂ ॥೩೦೪॥

ವ॥ ಅಂತು ಬಂದು ಆದೇವಂ ದೂರವಿರ್ದಂತೆ ಮುನ್ನಂ ಪರೋಪಕಾರವೀರರು ವಿಂಗೆಱಗಿ ತದನಂತರಮವರಂ ವಂದಿಸಿದಂ. ಬೞಿಕಂ ಸಿಂಗಕೇತುವುಂ ಕುಸುಮ ಶೇಖರದಿವಿಜನುಂ ಸ್ವಕೀಯಪರಿವಾರಸಮೇತಂ ಚಾರುದತ್ತನೊಡನೆ ನಡೆದು ಚಂಪಾ ಪುರಮನೆಯ್ದಿ ಬಹಿರುದ್ಯಾನದೊಳ್ ನಿಂದು ಚಾರುದತ್ತವಿಭು ಬಂದನೆಂದು ಆತ್ಮೀಯರು

ಬಂಧುವರ್ಗಕ್ಕಂ ತತ್ಪುರೀವರನಪ್ಪ ವಿಮಳವಾಹನಜನಾಧಿಪತಿಗಂ ನೇಮಿಸುವುದು ಮಾಜನಾಧಿನಾಥನೊಸೆದು,

ಕಂ|| ಬಸಗೆ ಮಿಗೆ ಪಸರಿಸುತ್ತಿರೆ |
ದೆಸೆದೆಸೆಯೊಳ್ ಪೊಜಲನೆಯ್ದೆ ವಂದನಮಾಲಾ ||
ಪ್ರಸರಂ ಪರ್ಬಿರೆ ಬಂದಂ |
ವಸುಧಾಧಿಪನಂದು ಚಾರದತ್ತಂಗಿದಿರಂ ||೩೦೩||

ವ|| ಅಂತು ಬರ್ಪುದು ಮಾ ಭೂಪೋತ್ತಮಂಗೆ ಚಾರದತ್ತಂ ವಿನಮಿತೋತ್ತಮಾಂಗನಾಗಿ ಪರಕೆಯನಾಂತು ಆತ್ಮೀಯಬಂಧುವರ್ಗಕ್ಕಂ ಪ್ರಮೋದದಿಂ ಪ್ರಣತನಾಗಿ ಪರಮಾಶೀರ್ವಚನಮಂ ತಳೆದು ತದನಂತರಂ ವಿಮಳವಾಹನಮಹೀಪಾಳನುಂ ಚಾರದತ್ತ ಪುರುಷೋತ್ತಮನುಂ ಪುರಾಭಿಮುಖರಾಗ,

ಮ|| ಧರೆಯೊಳ್ ಭೂಚರಸೇನೆ ಪರ್ಬಿ ಬರೆ ಮೇಗೋರಂತೆ ವಿದ್ಯಾಧರರ್ |
ಬರೆ ಮತ್ತಂತೆ ವಿಯತ್ತಳಂಪಿಡಿದು ದೇವವ್ರಾತಮಾನಂದದಿಂ |
ಬರೆ ತನ್ನಂ ಪುದಿದಂತು ಬಂದು ಪುರಮಂ ಪೊಕ್ಕಂ ಮಹೋತ್ಸಾಹದಿಂ |
ಸಿರಿವಡ್ಡಂ ವಿಭು ಚಾರದತ್ತನೆಸಯಲ್ ಮಾಂಗಲ್ಯತೂರ್ಯಸ್ವನಂ ||೩೦೬||

---

## 15. ಕಾನನ ವರ್ಣನೆ.

ಈ ಕಾನನವರ್ಣನೆಯು ಮಂಗರಸನೆಂಬ ಜೈನಕವಿಯಿಂದ ರಚಿತವಾದ ಜಯನೃಪಕಾವ್ಯದಿಂದ ಉದ್ಧೃತವಾದುದು. ಈ ಕವಿಯು ಹೊಯ್ಸಳದೇಶದ ಹೊಸ ವೃತ್ತಿಯನಾಡ ಮಧ್ಯದಲ್ಲಿರುವ ಧಾತುಪುರಿಯ ಅಥವಾ ಕಲ್ಲಹಳ್ಳಿಯ ಅಧಿಪನೆಂದೂ, ಯಾದವಾನ್ವಯ ಮಹಾಮಂಡಲೇಶ್ವರ ಚೆಂಗಾಳ್ವ ಮಹೀಪಾಲನ ಸಚಿವ ವಂಶದಲ್ಲಿ ಹುಟ್ಟಿದವನೆಂದೂ, ಮಾಧವಸುತನಾದ ವಿಜಯೇಂದ್ರನ ಮಗನೆಂದೂ ಇವನ ಗ್ರಂಥದಿಂದ ತಿಳಿಯಬರುತ್ತದೆ. ಈತನು ಪ್ರಭುರಾಜಂ ಎಂಬ ಬಿರುದನ್ನು ಪಡೆದಿದ್ದನು. ಈತನು 15ನೆಯ ಶತಮಾನದ ಅಂತ್ಯಭಾಗದಲ್ಲಿಯೂ 16ನೆಯ ಶಕಾಬ್ದದ ಆದಿಭಾಗದಲ್ಲಿಯೂ ಜೀವಿಸಿದ್ದನೆಂದು ತಿಳಿಯಬರುವುದು. ಈ ಕವಿಯಿಂದ ರಚಿತಗಳಾದ ಇತರ ಗ್ರಂಥಗಳು ನೇಮಿಜಿನೇಶಸಾಂಗತ್ಯ, ಸಂಯುಕ್ತ್ವಕೌಮುದಿ, ಪ್ರಭಂಜನಚರಿತೆ, ಶ್ರೀಪಾಲಚರಿತೆ, ಪಾಕಶಾಸ್ತ್ರ. ಈ ಕವಿಯ ಬಂಧವು ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ.

ಪರಿವರ್ಧಿನಿಷಟ್ಪದಿ.

ಎರಲೆಯ ಬೀಡೆಕ್ಕಲನ ಕೊಟಾರಂ |
ಕರಡಿಯ ಹಟ್ಟಿ ಕಡವಯೂರ್ ಚಮರಿಯ |
ಪುರಮೆಂಟಡಿಯ ಹೊಱಲ್ ಕಾಟಿಯ ಕೊಟ್ಟಂ ಖಡ್ಗಿಯ ಪಳ್ಳಿ ||
ಅರಸುಮಿಗದ ಪಟ್ಟಣ ಮೊನೆಯಮುಟ |
ಮೊರಲುಣಿಗಳ ನೆಲೆವನೆ ಯೆನಲತಿ ಬಂ |
ಧುರಮಾದುದು ಭೀಮಾರಣ್ಯಮಗಣ್ಯಮೃಗಾಳಿಶರಣ್ಯಂ ||೩೦೭||

ಸುಜ್ಜಲರಳಿ ಸಾಗಡೆ ಯುದಿಸಂಪಗೆ |
ಬೆಜ್ಜಲು ಬೆಳವ ಬಿದಿರ್ ಬೇವರಿಟ್ಟಣ |
ಸಜ್ಜರಸ ಕರಂಜೆಗೆ ಯರನೇಱಿಲಳಲೆ ಮುಱುಗ ಮತ್ತಿ ||
ಕಜ್ಜುರ ಕಕ್ಕೆ ಕಡವ ಮೊಳಗು ನವಿ |
ಲ್ವಜ್ಜೆ ಗಱುಕೆ ಸಸಿನೇಸಱ ಬೆಳಗಿಗೆ |
ವಜ್ಜಗುಡದೆ ಬೆಳದಿರಲಾ ಬಿಂಜಂ ಭೀಕರತರಮಾಯ್ತು ||೩೦೮||

ಮಱೆವೊಕ್ಕ ಮಹಾತಮಮಂ ಕೊಟ್ಟೊಡೆ |
ಕೊಱತೆಯೆನುತುಮದನರೆಯಟ್ಟುವ ಪಗ |
ಲೆಱೆಯನ ಫಲಗದಿರ್ಗಳ ಕೊರಲಂ ಪಿಡಿದೋವದೆ ತಾಂ ತಗುಳ್ವ ||

ತೆಱನೆನೆ ತಾರಾಪಥಮಂಡಲಮಂ ।
ನೆಱೆ ಪಂದರಿಸಿ ಬೆಳೆದ ನವತರುಗಳ ।
ತುಱುಗಿದ ತೊಱಲ್ಗೊಂಬಿನ ಕೆಲವು ಕವಲ್ಗೊಂಬೊಪ್ಪಿದುವು ॥೨೦೯॥

ಬೇರಿಂ ಮುನ್ನಮೆ ಪಾನಂಮಾಡಿದ ।
ನೀರಿಂ ತಮ್ಮೊಡಲೊಳ್ ತೀವಿದ ಪಸಿ ।
ತೀರದೆ ಬಾಕುಳಿತನದಿಂ ಬಾನ ಪೊಡೆಯ ಬಂಧುರಮಪ್ಪ ॥
ವಾರಿಯನೋವದೆ ತಮ್ಮಯ ಕೊನೆಯಿಂ ।
ಪೂರಿಸಿ ಯುಣಬೇಕೆನುತ ಪರಿವವೋಲ್ ।
ತಾರಾಪಥಮಂ ತವ ಚುಂಬಿಸಿದುವು ತದ್ವನತರುವಿತತಿ ॥೨೧೦॥

ಕರಡಿ ಕಡವೆ ಕಾಡೆಮ್ಮೆ ಸೊಣಗ ಮೊಲ ।
ಮರೆ ಘೂಗರಿ ಕೂರಂಗಿ ಯಳಲು ಬ ।
ಕ್ಕರಲೆ ಕೊಱವ ಮುಸು ಸಾರಗ ಸೀಱುಡು ಪೆಕ್ಕಲ ಕಪಿ ಪಂದಿ ॥
ನರಿ ಹುಲಿ ಯುಡು ತರುವಂಗಿ ಚಮರಿಮಿಗ ।
ವೆರಲುಣಿ ಯಾನೆ ಯುರಸುಮಿಗ ವೆಂಟಡಿ ।
ಯೆರಡುತಲೆಯಪಕ್ಕಿಯಿ ನೊಪ್ಪಿದುದಾ ದಾರುಣಮಪ್ಪಡವಿ ॥೨೧೧॥

ನವಶಾಖೆಯ ಕವಲೆಸೆವ ಕವಣೆಕೋಲ್ ।
ತವೆ ಸೊಗಯಿಪ ಪಲ್ಲವೆ ನಿಕುರುಂಬಂ ।
ಕವಳಿಗೆಗೆದರ್ದ ಲಸತ್ಪುಸ್ತಕಮೋದುವ ಮಱಿಗಿಳಿಯಳಿಯ ॥
ನಿವಹಂ ವಟುಸಂತತಿ ಯಾಗಲ್ಕಂ ।
ದವನಿಜದುಪರಿಮೆದೊಳಗೆ ಕುಳಿತಮುಸು ।
ವಿವಿಧನಿಗಮವೋದಿಪ ಗಡ್ಡದ ದೀಕ್ಷಿತ ನೆಂಬಂತಾಯ್ತು ॥೨೧೨॥

ಸಿಂಗಂ ಪೆಱುತಿರಲಾ ಶಿಶುವಂ ತಾ ।
ಯಂಗದಿ ತಲೆಹೊಱಟುದಯಿಪ ಸಮಯಕೆ ।
ಮುಂಗಡೆ ಯೊಂದುಮತಂಗದ ಮಱಿ ಯಿರೆ ಕಾಣುತ ಕಡುಮುಳಿದು ॥
ಜಂಗಿಸಿಯಾಪೊಡಲಿಂದದ ನವಱಿತು ।
ತುಂಗಪರಾಕ್ರಮಿಗಳ್ ಕಿಱಿದಾದೊಡೆ ।
ಪಿಂಗುವರೇ ತಮ್ಮಯ ಕೃತ್ಯವ ನವನೀಮಂಡಲದೊಳಗೆ ॥೨೧೩॥

ಎರೆಯಂ ನುಂಗುವ ಫಣಿ ಯಾಫಣಿಯಂ |
ಭರಿಕೈಯಿಂದ ಪಿಡಿವ ಮದಕರಿ ಯಾ |
ಕರಿಯಂ ಕೊಲ್ವ ಮೃಗೇಂದ್ರಂ ಮತ್ತಾ ಮೃಗಪತಿಯಂ ಸೀೞ್ವ ||
ಶರಭಂ ಶರಭನನೆತ್ತುವ ಭೀಕರ |
ವರಭೇರುಂಡಖಗಂ ತದ್ವಿಪಿನದೊ |
ೞರೆ ಕಂಡಚ್ಚರಿವಟ್ಟಂ ವಿಕ್ರಮಕೌರವಭೂಪಾಲಂ ||೨೧೪||

ಭರದಿಂ ಬಿಸುನೆತ್ತಱ ಸುರಿವಾನನ |
ಮುರಿಯನುಗುೞ್ವೊಲೆ ಮೂಗೆನ ಲೞ್ಳಯು |
ನಿರದೆ ಕರಂ ಹೊಯ್ಯುತ ಕುಕ್ಕುಱಿಸಿದ ಸಲಗಂ ತಿದಿ ಯೆನಲು ||
ಉರವಣೆಯಿಂ ಮೊದಲೆೞ್ಚು ಕೆಡಪಿಯೊಡ |
ವರಿದಾ ಬಾಲಪಿಡಿವು ಬಾಗಿದ ವನ |
ಚರನೊಪ್ಪಿದನವ ನೊಕ್ಕೈಯಿಂದೊತ್ತುವ ಕಮ್ಮರನಂತೆ ||೨೧೫||

ಮುಂದೊಂದಡೆಯೊಳ್ ಮಂದೈಸಿ ಕರಂ |
ನಿಂದು ತಮುತ್ತಿರ್ವರುಮಂ ನೋೞ್ಪ ಪು |
ಳಿಂದಿಯುರಂ ನೋಡುತ ನೃಪನಿರುಳ್ವಣ್ಗಳ ಪೊಸಕತ್ತುರಿಯು ||
ಸುಂದರಿಯುರೊ ನೀಲದ ನೀಱೆಯುರೋ |
ಇಂದೀವರಕುಸುಮದ ಕೋಮಲೆಯುರೊ |
ಚಂದದ ಹರಿಚಂದನದಬಲೆಯುರೊ ಎನುತ ಕೊಂಡಾಡಿದನು ||೨೧೬||

ಕಾರಿರುಳ್ವಣ್ಣದ ಮಯ್ ಕಾಳಿಂದಿಯ |
ನೀರಂ ತೆಗೞ್ವ ತನುಚ್ಛವಿ ನವಕ |
ಸ್ತೂರಿಯ ಪರಿಮಳಮಂ ಪೊಱಮಡಿಸುವ ತನು ತನುಸೌರಭ್ಯಂ ||
ನಾರಮದೇಭಮನೇೞಿಪ ಸುಗತಿ ಮ |
ಯೂರಲಸತ್ಪಿಂಛದ ಸುಭಗತೆಯಂ |
ದೂರೀಕರಿಪ ಕಬರಿ ಕಣ್ಗೊಪ್ಪಿದುವಾ ಬೇಡಿತಿಯರಿಗೆ ||೨೧೭||

ಕಾಡ ಕುಸುಮಮಂಜರಿಯಂ ಕಚದೊಳ್ |
ಸೂಡಿ ಮಿಗದ ಗೋರೋಚನದಣ್ಪಂ |
ತೀಡಿ ತನುವಿನೊಳು ಬಿದಿರ ಬಸಿಱ ಗಜಕುಂಭದ ಸೂಕರನ ||

ಬಾಡೆಯ ಮಣಿಹಾರವ ನುಣ್ಗೊರಲೊಳ್ |
ಜೋಡಿಸಿ ಯಸುಗೆದಳಿರ ದುಪ್ಪಟಿಯಂ |
ಪಾಡಱಿದುಟ್ಟು ಪುಳಿಂದಪುರಂಧ್ರಿಯರೊಪ್ಪವಡೆದರಲ್ಲಿ ‖೨೧೮‖

## 16. ಮದಗಜವರ್ಣನೆ.

ಇಲ್ಲಿ ಕೊಟ್ಟಿರುವ ಮದಗಜವರ್ಣನೆಯು 23ನೆಯ ತೀರ್ಥಕರನಾದ ಪಾರ್ಶ್ವನಾಥಸ್ವಾಮಿಯ ಚರಿತೆಯನ್ನು ತಿಳಿಸುವ ಪಾರ್ಶ್ವನಾಥಪುರಾಣದಿಂದ ಉದ್ಧೃತವಾಗಿದೆ. ಇದನ್ನು ರಚಿಸಿದ ಕವಿ ಪಾರ್ಶ್ವಪಂಡಿತನು. ಈತನು ಜೈನನು. ತಾನು ಈ ಗ್ರಂಥವನ್ನು ಶಕ 1144ರಲ್ಲಿ (ಕ್ರಿ. ಶ. 1222ರಲ್ಲಿ) ರಚಿಸಿದಂತೆ ಹೇಳಿಕೊಂಡಿರುತ್ತಾನೆ. ಈತನಿಗೆ ಸುಕವಿಜನ ಮನೋಹರ್ಷ ಸಸ್ಯಪ್ರವರ್ಷಂ, ವಿಬುಧಜನಮನಃ ಪದ್ಮಿನೀಪದ್ಮಮಿತ್ರಂ, ಕವಿಕುಳತಿಳಕಂ ಎಂಬ ಬಿರುದುಗಳಿದ್ದುವೆಂದು ತಿಳಿಯಬರುವುದು. ಈತನ ಬಂಧವು ಲಲಿತವಾಗಿರುವುದು.

ಕಂ‖ ಕುಂಜರಶೈಲಂ ತಸ್ನಿಂ |
ದಂ ಜಗದೊಳ್ ನೆಗೞ್ದುದೋ ಪೆಸರಿನೆಂಬವೊಲೇಂ ‖
ರಂಜಿಸಿ ಬಳೆಯುತ್ತಿರ್ದುದೊ |
ಕುಂಜರಮಾವಜ್ರಘೋಷನಾಮಸುಧಾಮಂ ‖೨೧೯‖

ಜವನನವಮನಿಸಿರ್ದ ನಿಜವಶೆ |
ಜವನನಧಕರಿಸೆ ವಿಳಯಜಳಧರಕುಳ ಘ್ಯ‖
ರವರವಮನಿೞಿಸೆ ಬೃಂಹಣನ |
ರವರಭಸಂ ಕಣ್ಗೆವಂದುದಂದು ಗಜೇಂದ್ರಂ ‖೨೨೦‖

ಉ‖ ಶ್ರೀವರಸಲ್ಲಕೀವನದ ಪಲ್ಲವಮಂ ನಲವಿಂದೆ ಮೇದು ರಾ |
ಜೀವ ಪರಾಗಪುಂಜ ಪರಿಪಿಂಜರಿತೋರುತರಂಗಸಂಘ ವೇ |
ಗಾವತಿಯಂಬುವಂ ಕುಡಿದು ನಂದನಚಂದನ ಕುಂಜರಾದ್ರಿ ಕುಂ |
ಜಾವಳಿಯೊಳ್ ವಿಹಾರಿಸಿ ವಿರಾಜಿಸುತಿರ್ಪುದು ಗಂಧಸಿಂಧುರಂ ‖೨೨೧‖

ಚಂ‖ ಕದುಪಿನ ಚಿಕ್ಕ ಪೋತ ಕರಿಣೀಗಣಮಂ ನವಪಲ್ಲವಂಗಳಂ |
ಮುದಗೊಳೆ ಮುನ್ನ ಮೇಯಿಸಿ ಬೞಿಕ್ಕದು ಮೇದು ನದೀಜಲಂಗಳಂ |
ಪದೆಪಿನೆ ಮುನ್ನ ಮೂಡಿಸಿ ಬೞಿಕ್ಕೊಲೆದಾಡಿ ಪೊದಱ್ದಶಯ್ಯೆಯೊಳ್ |
ಮದಕರಿ ಮುನ್ನ ಮೆಯ್ದಿರಿಸಿ ತಾಂ ಬೞಿಕಿರ್ಪುದು ರಮ್ಯಶಯ್ಯೆಯೊಳ್ ‖

ಕಂ|| ವಿಕಸಿತಕನಕಾಂಬುರುಹಾ |
ಧಿಕರೇಣುಕರೇಣು ಸೂಸೆ ಸೆಂದುರವೆನೆ ಮ ||
ಸ್ತಕದೊಳ್ ರಂಜಿಸುತಿರೆ ಸಲಿ |
ಲಕೇಳಿಯೊಳ್ ಲೀಲೆವಡೆದುದಾಶುಂಡಾಳಂ ||೨೩||

ನವಯೌವನಲಕ್ಷ್ಮಿಯೊಳಾ |
ಗೆ ವಿವಾಹಂ ತಿಳಕಮಿಟ್ಟವೋಲ್ ತಿಳಕೆಯುದೊ ||
ಪ್ಪುವ ಕತ್ತುರಿಯುಂ ತೊಡೆದಂ |
ತೆವೋಲರ್ಧಕಪೋಲೆ ಪುಟ್ಟಿದುದು ಗಜಪತಿಯೊಳ್ ||೨೪||

ಎರಡುಂ ಕಟಮಳಿಮಿಳಿತಂ |
ಸರೋವರಂ ಸುರಿವ ಮದಜಲಂ ನದಿಯೆನೆ ಪು ||
ಷ್ಕರವರಕರಪ್ರಣಾಳೀ |
ಪರಿಕಳಿತಂ ನೀಳಗಿರಿಗೆ ದೊರೆಯೆನಿಸಿಕುರ್ಗಂ ||೨೫||

ಗಗನೋನ್ನತಗಜದ ಮದಂ |
ತ್ರಿಗಂಡಗಳಿತಪ್ರವಾಹಮೆಸೆಗುಂ ಯಮುನಾ ||
ಪಗೆಯುಂ ಗಂಗೆಯವೋಲ್ ತ್ರಿಪ |
ಥಗೆಯೆನಿಸಿ ತ್ರಿಪ್ರವಾಹಮಂ ತಾಳ್ದುವವೋಲ್ ||೨೬||

ಆವಜ್ರಘೋಷದಾನಾಂ |
ಭೋವಿಸರ ಪಟುಪ್ರವಾಹಭರದಿಂದಂ ವೇ ||
ಗಾವತಿಯೆಂಬೀಪೆಸರಂ |
ಭಾವಿಸೆ ತತ್ಸಿಂಧು ತಳೆದುದೆನೆ ಪೊಗೞದರಾರ್ ||೨೭|

ಮ|| ಸ್ರ|| ಮದಗಂಧಕ್ಕನ್ಯವನ್ಯದ್ವಿರದನತತಿ ಬೆನ್ನಿತ್ತು ಮತ್ತೆಲ್ಲಿಯುಂ ಸಿ |
ಲ್ಲದೆ ಶಂಕೋದ್ರೇಕದಿಂದಂ ದೆಸೆಯ ಕಡೆವರಂ ಪೋದುವಾಶಾಧಿನಾಥ |
ರ್ಗೆ ದಿಟಂ ವಾಹಂಗಳಾಗಿರ್ದಪುವೆನೆ ಪಱತೇಂ ವಜ್ರಘೋಷದ್ವಿಪೇಂದ್ರ |
ಕ್ಕಿದಿರಾಂಪುನ್ಮತ್ತಹಸ್ತಿಪ್ರತತಿಯಱಸುವಂದಿಲ್ಲದಲ್ ನಾಡೊಳೆಲ್ಲಂ ||೨೮||

ಮ|| ಮದಗಂಧಂ ಪುದಿದಿರ್ದ ಕುಂಜರಕುಭೃತ್ಕುಂಜಕ್ಕೆ ವೇಗಾವತೀ |
ನದಿಗುತ್ಪಲ್ಲವ ಸಲ್ಲಕೀವನಕೆ ವನ್ಯೇಭವ್ರಜಂ ಪೊರ್ದದಿ |

ಪೊರ್ದಱಿ ನಿಷ್ಪ್ರತಿಪಕ್ಷರಾಜ್ಯಪದದೊಳ್ ತೇಜಸ್ವಿರಾಜಂ ಮನೋ |
ಮುದದಿರ್ಪಂದದಿನಿರ್ಪುದಾ ವನಗಜಂ ನಾನಾವಿನೋದಪ್ರಿಯಂ ||೨೧೯||

ಚಂ|| ಮದಜಳನೀಳಕಂಠಕಳಿತಂ ವಿಷಮಾನಳಭೀಮಲೋಚನಂ |
ಪದನತದಾನವಾರಿಗಿರಿಶಂ ಗಿರಿಜಾತವಿನೂತಕೇಳಿ ಕ |
ಣ್ಣೊಗ್ಗದವಿದಶೋಭೆಯಂ ಕುಡುತ್ತುಮಿರ್ಪುದು ನಾಗಶಿರೋವಿಭೂಷಣಂ |
ವಿದಿತಗಜಾಸುರೇಂದ್ರನನೆ ಮರ್ದಿಸಲುಗ್ರನಿಭೇಂದ್ರನಾದವೋಲ್ ||೨೨೦||

ಕಂ|| ನೀಳದ ಕಂಠಿಕೆಯಂ ಶುಂ |
ಡಾಳಶಿರೋಮಣಿಗೆ ಕಟ್ಟಿದಂತಿರೆ ಚೆಲ್ವಂ ||
ಪಾಳಿಸುತಿರ್ದುದು ಮಧುಕರ |
ಮಾಳಾಶೋಭಿತಮದೋ (?) ಸಿಬಂಧದಿನಾದಂ ||೨೨೧||

ವ|| ನದಿಯೊಳ್ ನೀರಜಗಂಧಮುಂ ಕಂಧರದೊಳ್ ಕಸ್ತೂರಿಕಾಗಂಧಮುಂ |
ಹೃದಯಾನಂದನ ನಂದನಾಂತರದೊಳುದ್ಯನ್ಮಾಳತೀಗಂಧಮುಂ |
ಮದಗಂಧಂ ಗೆಲೆ ಗಂಧಚಾರಿಣಿಯಿನುನ್ಮತ್ತಾಳಿಸಂದೋಹಸಂ |
ಮದಸಂಧಾರಿಣಿಯಿಂ ವಿರಾಜಿಸುತುಮಿರ್ಕುಂ ವಜ್ರಘೋಷದ್ವಿಪಂ ||೨೨೨||

ಕಂ|| ಕಟನಿಕಟೋತ್ಕಟಮದದಿಂ |
ಪಟುಮಧುಕರ ನಿಕರಮಧುರ ಝುಂಕಾರರವಂ ||
ಪಟುಪಟಹಮೆನಿಸೆ ನೆರೆದು ಕ |
ರಟ ಕರಿಣೀಗಣದ ಸೋಂಕಿನಿಂದೆಸೆದಿರ್ಕುಂ ||೨೨೨||

ಎಡೆಯುಡುಗದ ದಾನಿಗವ |
ರ್ಕಡೆಯುಱಿಯುತೆ ಕೊಟ್ಟು ಮಾಣ್ಬ ಮಿಕ್ಕಗಜಂಗಳ್ ||
ಪಡಿಯುಪ್ಪುವೆ ಪೇಪೆಂಬವೊ |
ಲೆಡೆಗಿಱಿದಳಿರುತಿಯಿನಾಗಜಂ ಸೊಗಯಿಸುಗುಂ ||೨೨೪||

ಮಾತಂಗದಾನವಿಭವಂ |
ಮಾತೇನಿನಿವಿರಿದದಾದೊಡಂ ಚೇತಸ್ಸಂ ||
ಪ್ರೀತಿಯುನತಿವಿಮಳವಿ |
ಜಾತಿಗೆ ಮಧುಪವ್ರಜಕ್ಕೆ ಮಾಳ್ಪುದೆ ಸಹಜಂ ||೨೨೫||

ಒದವಿದ ಮದಜಲದಿಂ ತೀ |
ವಿದನಗದಿಡುವುಗಳೊಳಯ್ದೆ ಮುಳುಗಿರೆ ಯಮುನಾ ||

ಹ್ರದದೊಳ್ ಮುಳುಂಗಿದವೊಲ್ ತೋ |
ರ್ಪುದು ನೋೞ್ಪೊಡೆ ನಾಡೆ ಚೆಲ್ವುವಡೆದು ಕರೀಂದ್ರಂ ||೩೩೬||

ಕ್ರೋಧಿನಿ ಸಮಗ್ರತರಜಯು |
ಬೋಧಿನಿ ದುರ್ವಾರವಾರಣಾಧಿಕಮದಸಂ ||
ರೋಧಿನಿ ನಗಮೃಗಸಿಕರವಿ |
ರೋಧಿನಿ ಮದಲಕ್ಷ್ಮಿಯುದಯಿಸಿತ್ತಿಭಪತಿಯೊಳ್ ||೩೩೭||

ವ|| ಆ ಸಮಯದೊಳ್,

ಕಂ|| ಬಿಸುನೆತ್ತರೊಗೆಯೆ ರದಮಂ |
ಬಿಸಮಂ ಕೀೞ್ವಂತೆ ಕಿೞ್ತು ಮತ್ತಗಜೇಂದ್ರಂ ||
ಮಸಕಮನಾಂತಿಭಕುಳಮಂ |
ಮಸಕಮನೊರಸುವವೊಲೊರಸುವುದು ನಿಜಕರಮಂ ||೩೩೮||

ಮ|| ಸ್ರ|| ವಿಳಯಾಬ್ಧಿಕ್ಷೋಭಮುಜ್ಜೃಂಭಿತಸಕಳಮದಕ್ಷೋಭಮುದ್ದೀಪ್ತಕಾಳಾ |
ನಳನಾತ್ಮೀಯಪ್ರಕೋಪಂ ಪ್ರಳಯಸಮಯತೀವ್ರಾನಿಳಂ ವೇಗಮುಚ್ಛೃಂ |
ಖಳಕಲ್ಪಾಂತಾಂತಕಂ ತಾನೆನೆ ಮಸಗಿ ಜಗಂ ಭೀತಿಗೊಳ್ವಂತು ಭೂತಾ |
ವಳಿಯುಂ ಕೊಂದತ್ತು ರಕ್ತಾರ್ಣವಮೊಗೆವಿನೆಗಂ ವಜ್ರಘೋಷದ್ವಿಪೇಂದ್ರಂ ||

ಸ್ರ|| ಕೋಡೊಳ್ ಕೋದೆತ್ತುತಂ ದಂತಿಗಳನೆ ತಿರಿಕಲ್ಲಾಡುತಂ ಬೞಿಕ್ಕೀ |
ಡಾಡುತ್ತುಂ ತುಂಗಶೈಲಂಗಳನ ಮೃಗಸಮೂಹಂಗಳಂ ಮುಟ್ಟೆ ಸೀಳ್ದೀ |
ಡಾಡುತ್ತುಂ ನೋಡಲಾರುಂ ನೆಱೆವ ಸುಭಟರಿಲ್ಲೆಂಬಿನಂ ತನ್ನ ಕಾಯ್ಪಂ |
ನೀಡುಂ ನೀಡುತ್ತುಮೆಯ್ತಂದುದು ಪವನಜವಂ ರುಂದ್ರಗಂಧದ್ವಿಪೇಂದ್ರಂ ||

## 17. ತಪೋವನ ವರ್ಣನೆ.

ಈ ತಪೋವನವರ್ಣನೆಯು ಕಮಲಾಚಲಮಾಹಾತ್ಮ್ಯವೆಂಬ ಗ್ರಂಥದಲ್ಲಿ ಅಂತರ್ಗತವಾದ ಒಂದು ಭಾಗವಾಗಿದೆ. ಅದನ್ನು ಬರೆದಾತನು ಚಿಕುಪಾಧ್ಯಾಯನೆಂಬ ಕವಿಯು. ಈತನ ಪ್ರತಿನಾಮಧೇಯವು ಅಳಸಿಂಗಾರ್ಯನು. ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾಧಿಷ್ಠಿತರಾಗಿ ಕ್ರಿ. ಶ. 1672ರಿಂದ 1704ರ ವರೆಗೆ ಮೈಸೂರು ಸಂಸ್ಥಾನವನ್ನಾಳಿ ಪ್ರಖ್ಯಾತರಾದ ಚಿಕ್ಕದೇವರಾಜ ಒಡೆಯರವರ ಕಾಲದಲ್ಲಿ ಚಿಕುಪಾಧ್ಯಾಯನು ಒಬ್ಬ ಮಂತ್ರೀಶ್ವರನಾಗಿದ್ದನು. ಈತನು ಕೌರುಕುತ್ಸ ಕುಲದಲ್ಲಿ ಜನಿಸಿದ ರಂಗಪಂಡಿತನ ಮಗನು. ಈತನು ಗದ್ಯರೂಪವಾಗಿಯೂ ಚಂಪೂರೂಪವಾಗಿಯೂ ಸಾಂಗತ್ಯದಲ್ಲಿಯೂ ಅನೇಕ ಗ್ರಂಥಗಳನ್ನು ಬರೆದಿರುವನು. ಅವುಗಳಲ್ಲಿ ಪ್ರಸಿದ್ಧವಾದವುಗಳು ವಿಷ್ಣುಪುರಾಣ, ಕಮಲಾಚಲ ಮಹಾತ್ಮ್ಯ, ಸಾತ್ವಿಕ ಬ್ರಹ್ಮವಿದ್ಯಾವಿಲಾಸವೆಂಬ ವಿಶಿಷ್ಟಾದ್ವೈತಗ್ರಂಥ. ಕಮಲಾಚಲವನ್ನು ಈಗ ಜನಗಳು ಹಿಮವದ್ಗೋಪಾಲನ ಬೆಟ್ಟವನ್ನುವರು. ಇದು ಗುಂಡ್ಲುಪೇಟೆಗೆ ನೈರುತ್ಯದಲ್ಲಿ 9 ಮೈಲು ದೂರದಲ್ಲಿರುವುದು. ಈ ಗ್ರಂಥವನ್ನು ತಾನು ರಾಜಾಜ್ಞೆಯಿಂದ ಶಕ 1603 ( ಕ್ರಿ|| ಶ|| 1681 ) ರಲ್ಲಿ ರಚಿಸಿದಂತೆ ಈ ಕೆಳಗಣ ಪದ್ಯಗಳಲ್ಲಿ ಹೇಳಿಕೊಂಡಿದಾನೆ.

ಮ|| ವಿಲಸದ್ಭಾರತವರ್ಷದೊಳ್ವಿಮಳಕಾವೇರೀನದೀತೀರಭೂ |
ತಳದೊಳ್ಪಶ್ಚಿಮರಂಗಪಣ್ಣಗರಿಯೊಳ್ ಸಾಂಮ್ರಾಜ್ಯಸಂಪತ್ತಿಯಿಂ |
ಇಳೆಯಂ ಪಾಲಿಪ ಚಿಕ್ಕದೇವಜನನಾಥಾನುಜ್ಞೆಯಿಂ ವಾರಿಜಾ |
ಚಳಮಾಹಾತ್ಮ್ಯಮನೊಳ್ಪಿನಿಂ ರಚಿಸಿದಂ ವಿದ್ವಜ್ಜನಂ ಕೇಳ್ವವೊಲ್ ||
ಪಿರಿದುಂ ರಂಜಿಸ ಶಾಲಿವಾಹಶಕದೊಳ್ವಹ್ನ್ಯಂತರಿಕ್ಷರ್ತುಚಂ |
ದ್ರಸಂಖ್ಯಾಬ್ದಮತೀತಮಾಗಿ ನಡೆವೀ ರೌದ್ರಾಶ್ವಯುಙ್ಮಾಸಭಾ |
ಸ್ವರ ಶುಕ್ಲಾಹ್ವಯಪಕ್ಷದೊಳ್ ದಶಮಿಯೊಳ್ ಗೀರ್ವಾಣಮಂತ್ರೀಶವಾ |
ಸರದಲ್ಲೀಕೃತಿ ಪೂರ್ಣಮಾಯ್ತು ಚಿಕುಪಾಧ್ಯಾಯಾಖ್ಯಮಂತ್ರೀಶನಿಂ ||

ಮ|| ಸ್ರ|| ಭರದಿಂದಂ ಚಕ್ರರಾಜಂ ಧರೆಗಿಳಿಯೆ ಲಸದ್ಗೋಮತೀನಾಮನದ್ಯು |
ತ್ತರದೊಳ್ ತಾಂ ನೇಮಿ ಬಿದ್ದಾ ವಸುಧೆಯುಪೆಸರಿಂ ನೈಮಿಶಾರಣ್ಯಮಾಯ್ತಾ |
ವರಪುಣ್ಯಕ್ಷೇತ್ರದೊಳ್ ಸನ್ನುತನಸುರಹರಂ ಮೋಕ್ಷಮಂ ಕೊಟ್ಟನುರ್ವೀ |
ಸುರಸಂಘಕ್ಕಲ್ಲಿ ತೀರ್ಥವ್ರಜಮತಿವಿಮಲಂ ವಿಶ್ರುತಂ ಪೆರ್ಚಿ ತೋರ್ಕುಂ ||

ಕಂ|| ಪುಲಿಯುಂ ಪುಲ್ಲೆಯುಮೀಕ್ಷಿಸ |
ಲಿಲಿಯುಂ ಮಾರ್ಜಾರಮುಂ ಮೃಗಾಧಿಪಕುಲಮುಂ ||

ಕಲಭಂಗಳುಮಾವನದೊಳ್ |
ನಲವಿಂ ಕೆಳಗೊಂಡು ನಿಯಮದಿಂದಂ ಮೆಱೆಗುಂ ॥೨೪೨॥

ಭಯಮಿಲ್ಲದೆ ಸತ್ವಂಗಳ್ |
ನಿಯಮದಿನಿರೆ ನೈಮಿಶಾಖ್ಯಮೆಂದಾ ಮುನಿಸಂ ॥
ಚಯಮಾವನಮಂ ಪೊಗೞುತೆ |
ರಯದಿಂದಂ ಬಂದು ನಿಂದುದಾಕಾನನದೊಳ್ ॥೨೪೩॥

ಚಂ॥ ಪುಲಹ ಪುಲಸ್ತ್ಯ ಕಾಮ ಭೃಗು ಶಂಖಪ ಪಾವಕ ಚಂತಿ ಮುಂತಿ ಮಾಂ |
ಜುಳಶತರೂಪ ಪಂಚಶಿಖಿ ಬೈಲ್ಯ ಸುವಾಹನ ಗರ್ಗ್ಯ ಧೀರಲಾಂ |
ಗಲಿ ಕುಣಿ ಭಾರ್ಗವಾಂಗಿರಸ ಲಂಬ ಸುಧಾಮ ಪರಾಶರಾತ್ರಿ ಕಾ |
ಪಿಲ ಸಮಸುಪ್ತ ಶೂಲಿ ಸಿತನಾಮಮುಖರ್ಷಿಗಳಿಪ್ಪ ತೊಗ್ಗಿನಿಂ ॥೨೪೪॥

ಕಂ॥ ಅನಲೋರ್ಧ್ವಬಾಹುಗಳ್ ಕ |
ಜ್ಞನ ಕಂಕ ಸುಹೋತ್ರ ಶೌನಕಾತ್ರಿಗಳಸಿಪಾ ॥
ಘನಮಹಿಮರ್ ಬಂದು ತಪೋ |
ವನದೊಳ್ ನೆಲಸಿರ್ದರ್ ರಬ್ಜಗರ್ಭನ ನುಡಿಯಿಂ ॥೨೪೫॥

ಪಾವನತರಮುನಿಬೃಂದಂ |
ಶ್ರೀವರನ ಸುದರ್ಶನಾಂಚಿತಾರಣ್ಯದೊಳಾ ॥
ಜೀವನಪರ್ಣಾನಿಲಕೃತ |
ಜೀವನದಿಂ ತೀವಿ ತಪಮನೆಸಗಿತ್ತಾಗಳ್ ॥೨೪೬॥

ಸ್ವರ್ಗಾಪವರ್ಗಮಂ ನೈ |
ಸರ್ಗದಿನಖಿಲರ್ಗೆ ತಾನೆ ಕೊಟ್ಟಪೆನೆಂದೇ ॥
ಭೋರ್ಗರೆವುದೊ ವನಮೆನೆ ಮುನಿ |
ವರ್ಗದ ವೇದಪ್ರಣಾದಮೊಪ್ಪುಗುಮನಿಶಂ ॥೨೪೭॥

ನಡೆವ ನುಡಿವಾ ಜನಕ್ಕಂ |
ಗಡಣದೆ ತರುಸಂಘಮಾ ತಪೋವನದೊಳ್ ತಾ ॥
ನಿಡಿದಖಿಳವಾಂಛಿತಂಗಳ |
ಕುಡುವುದು ಮುನಿವರರ ತಪದ ಮಹಿಮೆಯೊಳೊಲವಿಂ ॥೨೪೮॥

ಅಜರಾಮರತ್ವಮುಂ ತಾಂ ।
ಸೃಜಿಸುವ ವರಸಿದ್ಧರಸಕೆ ದೊರೆಯುಪ್ಪ ಸರೋ ॥
ವ್ರಜಮುದಕಂಗಳ್ ತಾಳ್ಗುಂ ।
ನಿಜದಿಂದಂ ನೈಮಿಶಾಖ್ಯವನದೊಳ್ ಸತತಂ ॥೧೪೯॥

ಕಂದಫಲಾದಿಗಳಮೃತ ।
ಸ್ಯಂದಿಗಳಾ ವನದೊಳಖಿಳಮುನಿಬೃಂದಕ್ಕಾ ॥
ನಂದಮನಾಗಿಪುವನಿಶಂ ।
ಬಂದಿದಿರೊಳ್ ನಿಂದು ತೃಪ್ತಿಯುಪ್ಪಿನೆಗಂ ದಲ್ ॥೧೫೦॥

ಮುನಿಹೋಮಧೇನುಶಿಶುಗಳ್ ।
ಮನವೊಲ್ದಾ ಪುಲಿಯ ಕರಿಯ ಶರಭದ ಮೊಲೆಯುಂ ॥
ವನದೊಳ್ ತಾಮೀಂಟೆ ತಪ್ಪೋ ।
ಘನತನುಕಂಡೂತಿಯುಂ ನಿವಾರಿಸಿ ನಲಿಗುಂ ॥೧೫೧॥

ಚಮರೀಮೃಗಮಲ್ಲಿಯ ಮುನಿ ।
ಸಮಿದಾಲಯನಿಹಿತಶೋಧನಮನೆಸಗುಗುಮಾ ॥
ಸಮನಂತರದೊಳ್ ಕಳಭಂ ।
ಹಿಮವಾರಿಯನೊಲ್ದು ಸೂಸಿ ಶುಚಿಯುಂ ಮಾಳ್ಕುಂ ॥೧೫೨॥

ಜಲಪುಷ್ಪ ಕುಶಸಮಿತ್ತಂ ।
ಕುಲಮುಂ ಮುನಿಗಳ್ಗೆ ಕಪಿಕುಲಂ ತಂದೀಗುಂ ॥
ಫಲಸಮುದಯಮುಮಂ ಪಕ್ಷಿಗ ।
ಳೊಲಿದಂತಡುಕುವುವು ತತ್ತಪೋಧನರಿದಿರೊಳ್ ॥೧೫೩॥

ಮ॥ ಫಲಮೂಲೋದಕಪರ್ಣವಾಯುಗಳ ನಾಹಾರಂಗಳಂ ಮಾಡಿ ಮಂ ।
ಜುಳದೇಹಂಗಳನಟ್ಟಿಸಲ್ ತವಸಿಗಳ್ ತಮ್ಮೊಂದು ಮಾಹಾತ್ಮ್ಯದಿಂ ।
ಬೆಳಗುತ್ತಿರ್ದ್ದಸೆಯುಂ ತಪೋಧನವರರ್ ಪೀನೋನ್ನತಾಕಾರದಿಂ ।
ನಳಿನಾಕ್ಷಾಂಘ್ರಿ ಸರೋಜನಿಸ್ಸೃತ ಮರಂದಾಸ್ವಾದದಿಂ ಪೆರ್ಚುವರ್ ॥೧೫೪॥

ಉ॥ ಕಾಯಮನೊತ್ತು ಮೆಟ್ಟಿಸಲೊತ್ತರ್ಗುವಮಾಮುನಿಸಂಘಮಲ್ಲಿ ಚಾಂ ।
ದ್ರಾಯಣಕೃಚ್ಛ್ರಮುಖ್ಯನಿಯಮಾಸನದಿಂದವರೋತು ಮಾಳ್ಪ ಯೋ ।
ಗಾಯುತವೃತ್ತಿಯೆಂಬಮೃತಸೇವೆಯೆ ಧಾರಕಮಾಗೆ ಕಾಂತಿಯುಂ ।
ಪ್ರಾಯಮುಮೊಂದುಗೂಡಿ ಪರಿಪುಷ್ಟಿಯನೈದುಗುಮಾವನಾಂತದೊಳ್ ॥೧೫೫॥

ಕಂ|| ಯಮನಿಯಮಾದಿಗಳಿಂದುಱೆ |
ಶಮಿತೇಂದ್ರಿಯರಾಗಿ ಋಷಿಗಳಿರೆ ಪುತ್ತಡದರ್ ||
ಕ್ರಮಿಸಿದೊಡಂ ತತ್ತೇಜಂ |
ದ್ಯುಮಣಿಯನಣೆಯುತ್ತುಮಿರ್ಪುವಾ ಕಾನನದೊಳ್ ||೩೫೬||

ಕೆಲವರ್ ಪಾದಾಗ್ರದೊಳಂ |
ಕೆಲರೂರ್ಧ್ವಭುಜಂಗಳಿಂದೆ ತಲೆಯಂ ನೆಲದೊಳ್ ||
ಕೆಲರೂಱಿ ತಪಮನೆಸೆವಾ |
ಸ್ಥಲದೊಳ್ ತಾಂ ಮಾಡುವರ್ ದಿವಾರಾತ್ರಿಯೊಳಂ ||೩೫೭||

ಸೆಡೆಯೆ ನಿಜಕಾಂತಿಶಿಖೆಗಳ್ |
ಮೃಡನೇತ್ರಜ್ವಾಲೆಗನ್ಯರವಿಶಿಖೆಗಳವೇಂ ||
ತುಡುಕುವುವೆ ತಮ್ಮನೆಂದಾ |
ಯೆಡೆಯೊಳ್ ಪಂಚಾಗ್ನಿಮಧ್ಯವರ್ತಿಗಳಿರ್ಪರ್ ||೩೫೮||

ವರನಾಭಿಕಂಠಪರ್ಯಂ |
ತರಮಿರ್ದುದಕದೊಳ್ ಯೋಗಸುಖದಿಂ ತೋರ್ಪರ್ ||
ಸುರುಚಿರಪುಳಕಂಗಳನಾ |
ವರಿಸದೆ ಧೃತಿವೆತ್ತು ಮುನಿಗಳಿರ್ಪರ್ ವನದೊಳ್ ||೩೫೯||

ಉ|| ಇಂತತಿಸಾತ್ವಿಕೋನ್ನತಿಯಿಂ ನಾಂತ ತರುವ್ರಜದಲ್ಲಿ ಸಂಘದಿಂ |
ಸಂತಸದಿಂದೆ ಸಂಚರಿಪ ಪಕ್ಷಿಮೃಗೌಘದೊಳಬ್ಜನಾಭನಂ |
ಚಿಂತಿಸಿ ವಾಂಛಿತಾರ್ಥಮನೆ ಪೊರ್ದುವ ಮೌನಿನಿಕಾಯದಿಂ ಕರಂ |
ಸಂತತಮೊಪ್ಪುಗುಂ ವಿಪಿನಮಾತ್ಮತಪೋಧನಮಾರ್ಯಪಾವನಂ ||೬೦||

## 18. ಅರ್ಜುನನ ತಪಸ್ಸು.

ಈಶ್ವರನಿಂದ ಪಾಶುಪತಾಸ್ತ್ರವನ್ನು ಪಡೆಯಲೆಂದು ಅರ್ಜುನನು ಘೋರವಾದ ತಪಸ್ಸನ್ನು ಮಾಡಿದ ವೃತ್ತಾಂತವನ್ನು ತಿಳಿಸುವ ಈ ಪದ್ಯಗಳು ಶಬರಶಂಕರವಿಲಾಸವೆಂಬ ಗ್ರಂಥದಿಂದ ಉದ್ಧೃತವಾಗಿವೆ. ಇದನ್ನು ಬರೆದ ಕವಿ ಷಡಕ್ಷರದೇವನು. ಈತನು ಯಳಂದೂರಲ್ಲಿ ಜನಿಸಿ ದನುಗೂರಿನ ಚಿಕ್ಕವೀರದೇಶಿಕನೆಂಬ ಶಿವಾಚಾರದ ಗುರುವಿಗೆ ಶಿಷ್ಯನಾಗಿ ವಿದ್ಯಾಭ್ಯಾಸಮಾಡಿ ಖ್ಯಾತಿಗೆ ಸಂದನು ಮತ್ತು ಬೀದರದಲ್ಲಿದ್ದ ವಿರಕ್ತಮಠಕ್ಕೆ ಅಧ್ಯಕ್ಷನಾಗಿ ಶೈವರಾಜರ ಪೋಷಣೆಯಲ್ಲಿ ಹಲವು ಗ್ರಂಥಗಳನ್ನು ಬರೆದನು. ಸಂಸ್ಕೃತ ಕರ್ಣಾಟ ಭಾಷೆಗಳೆರಡರಲ್ಲಿಯೂ ಪ್ರವೀಣನಾಗಿದ್ದನಾದುದರಿಂದ ಇವನಿಗೆ ಉಭಯಕವಿತಾವಿಶಾರದನೆಂಬ ಬಿರುದು ಸಲ್ಲುವುದು. ಈತನು ಸಂಸ್ಕೃತದಲ್ಲಿ ಕವಿಕರ್ಣರಸಾಯನ, ಶಿವಾಧಿಕ್ಯ, ಭಕ್ತಾಧಿಕ್ಯವೆಂಬ ಗ್ರಂಥಗಳನ್ನೂ, ಕನ್ನಡದಲ್ಲಿ ರಾಜಶೇಖರವಿಲಾಸ, ವೃಷಭೇಂದ್ರವಿಜಯ, ಶಬರಶಂಕರವಿಲಾಸ, ವೀರಭದ್ರದಂಡಕಗಳೆಂಬ ಗ್ರಂಥಗಳನ್ನೂ ಬರೆದನು. ರಾಜಶೇಖರವಿಲಾಸವನ್ನು ಶಕ 1579ರಲ್ಲಿ ರಚಿಸಿದಂತೆ ಆ ಕಾವ್ಯದ ಕಡೆಯಲ್ಲಿ ಹೇಳಿಕೊಂಡಿರುವುದರಿಂದ ಈ ಕವಿ ಕ್ರಿ|| ಶ|| 17ನೆಯ ಶತಮಾನದ ಆದಿ ಭಾಗದಲ್ಲಿದ್ದನೆಂದು ಹೇಳಬೇಕಾಗಿದೆ. ಈತನ ಕಾವ್ಯಗಳಲ್ಲಿ ಸಂಸ್ಕೃತಶಬ್ದಗಳು ಬಹುಳವಾಗಿದ್ದರೂ, ಅನೇಕಭಾಗಗಳು ರಸಭರಿತವಾಗಿಯೂ ಕಿವಿಗಿಂಪಾಗಿಯೂ ಇವೆ.

ಕಂ|| ವರಷಟ್ತ್ರಿಂಶತ್ತತ್ತ್ವೋ |
ಪರಿಗತನನವಿದ್ಯೆ ಪುಗದ ಶುದ್ಧಾತ್ಮನನ ||
ಕ್ಷರನನನುಪಮನನಭವನ |
ನುರುತರಚಿದಖಂಡರೂಪನಂ ಚಾನಿಸಿದಂ ||೩೬೧||

ನೆಗೆದ ಪುಳಕಾಂಕುರದ ನೆಱೆ |
ಮುಗಳ್ದಕ್ಷಿಯ ಮಿಡುಕದಂಗದಿಱದೇಱದೆ ನ ||
ಟ್ಟಗೆ ನಿಂದ ಸುಯ್ಯ ಸುೞಿಯದ |
ಬಗೆಯ ಪ್ರೊಡರ್ಪೆಸೆಯೆ ತಾಪಸಂ ತಪಮಿರ್ದಂ ||೩೬೨||

ಪೊಱಗಣ ಮಾಯಾಭ್ರಮೆಯುಂ |
ಪಱಿದಿಕ್ಕೆ ಮನೋಬ್ಜಮಂಡಲತ್ರಯದೆಡೆಯೊಳ್ ||
ಮಿಱುಗುವ ಕಱೆ ಮಱೆ ಯಿಲ್ಲದ |
ಕುಱುಪೊಂದದ ಸೂಕ್ಷ್ಮರೂಪನಂ ಜಾನಿಸಿದಂ ||೩೬೩||

ಚಂ|| ದಶವಿಧನಾದಮಂ ಪದೆದು ಕೇಳ್ವ ಸಮುಜ್ಜ್ವಳಬಿಂದುತೇಜಮಂ |
ಸ್ವಶುಭಚಿದಕ್ಷಿಯಿಂ ಬಿಡದೆ ನೋಳ್ಪ ವಿಕಾಸಿಮನೋಜ್ಞಗಂಧಮಂ ||
ಕುಶಲದೆ ಕೂರ್ತು ವಾಸಿಪ ಮಹಾಸುಖಸಂಶ್ರಯಮಧ್ಯನಾಡಿಕಾ |
ವಿಶದಮೃತಪ್ರವಾಹಮನೆ ಪೀರ್ವ ವಿಳಾಸಮಳಂಬಮಾತನೊಳ್ ||೩೬೪||

ಕಂ|| ಜ್ಞಾತೃಜ್ಞಾನಜ್ಞೇಯಯುಕ |
ತೀತನನಾದ್ಯಂತಶೂನ್ಯನಂ ಸಿರಘಪರಂ ||
ಜ್ಯೋತಿಸ್ಸ್ವರೂಪನಂ ಪ್ರ |
ಖ್ಯಾತಚಿದಾನಂದರೂಪನಂ ಚಿಂತಿಸಿದಂ ||೩೬೫||

ಚಂ|| ನೆನೆದನನಂತತತ್ತ್ವಮಯನಂ ಪರಮಾತ್ಮನನಪ್ರಮೇಯನಂ |
ಮುನಿಜನಮಾನಸಾಮಳಸರೋವರಹಂಸನ ನದ್ವಿತೀಯನಂ |
ಘನನಿಗಮಾಂತವೇದ್ಯನ ನನಾಮಯನಂ ಚಿದಚಿತ್ಪ್ರಪಂಚರಂ |
ಜನನನವಂ ತುರೀಯನನಖಂಡನಿಜೋನ್ನತಚಿತ್ಪ್ರಕಾಶನಂ ||೩೬೬||

ಮ|| ತ್ರಿದಿನಕ್ಕೊರ್ವ ಫಲಾದನಂ ನಗಬ್ಬದಾತಂಗೂಂಡುತಿಂಗಳ್ ದ್ವಿಮಾ |
ಸದೊಳಾಖುಂಡನಕೂರ್ವ ತತ್ಕಳಚಯಾಹಾರಂ ತ್ರಿಮಾಸಂ ಒಱು |
ಕ್ಕೊದವಿರ್ದತ್ತುರುಕಂದಮೂಲಸ್ವರಸಂ ನಾಲ್ಬಂಗಳೊಳ್ ಜೇರ್ಣಪ |
ರ್ಣದ ಸಂಸೇವನ ಮಾಸಪಂಚಕದೊಳಾಯಸ್ತಾತಂಗೆ ವಾತಾಶನಂ ||೩೬೭||

ಚಂ|| ಸ್ಥಿರತರಭಕ್ತಿಯೆಂಬ ಸುಧೆಯಂ ಸವಿದುಣ್ಮುತೆ ಕಂದುಕುಂದನಾ |
ಳ್ದರದೆಸೆವಂಗ ಮುರ್ವಿದ ಲಸತ್ಪುಳಕಾಂಕುರ ಮುಜ್ಜ್ವಲನ್ಮಖಾಂ |
ಬುರುಹ ಮುಳ್ದು ಸತ್ವಮಯಮಾನಸ ಮೊಪ್ಪಿರ ಚಿತ್ಸುಖಾಬ್ಧಿಯೊಳ್ |
ಕರಮವಗಾಹಮಿರ್ದ ನವ ಸೀಶ್ವರಪಾದಸರೋಜಷಟ್ಪದಂ ||೩೬೮||

ಮ| ಸ್ರ|| ತನುವೃತ್ತಂ ನೇತ್ರದೊಳ್ ನೇತ್ರದ ಬಗೆ ಮನದೊಳ್ ತನ್ಮನಂ ಬುದ್ಧಿಯೊಳ್ ಬು
ದ್ಧಿ ನಿತಾಂತಂ ಚಿತ್ತದೊಳ್ ಚಿತ್ತದ ನಿಲವದಹಂಕಾರದೊಳ್ ಸಂದಹಂಕಾ |
ರನಿಯೋಗಂ ಜೀವನೊಳ್ ಜೀವನೆ ಪರಮನೊಳಾಳ್ದೈಕ್ಯಮಂ ನಿಲ್ವಿನಂ ಬೇ |
ಱೆನಿಪಂದಂ ಪೊಂದದಾನಂದದ ನಿಧಿಯೆನಿಸಲ್ ಪಾಲ್ಪಸಿರ್ದಂ ಮುನೀಂದ್ರಂ||೩೬೯||

ಕಂ|| ಪಳುಕುಗೊಡ ದೊಳಪೊಱಗ ಪ್ರ |
ಜ್ಜ್ವಳಿಪಂತಜ್ಯೋತಿಯಂತಿರೊಳಪೊಱಗೆ ಸಮು ||
ಜ್ಜ್ವಳಿಪಂತಶಿ ಜ್ಯೋತಿಯು |
ಬೆಳಗಿನೊಳೊಡವೆರೆದು ಬೆರಸಿ ಬೆಳಗ್ವೊಲಿರ್ದಂ ||೩೭೦||

ಸ್ವಸ್ಥ ತುರೀಯಾತೀತಾ ।
ವಸೆಯನೊಳಕೊಂಡು ತೊಳಪ ಶೃಂಗಾಟಕವ ॥
ದ್ಮಸಿತನೊಳನಘನೊಳ್ ನಿರ ।
ವಸ್ಥನೊಳೊಡವೆರೆದು ಬಾಹ್ಯಮಂ ಮೆಱೆದಿರ್ದಂ ॥೩೭೧॥

ಮಱವೊಂದದೆಚ್ಚಱದ ಕ ।
ಣ್ದೆಱೆಯದ ನಿದ್ರಿಸದ ಬೆರೆಯದಗಲದ ಕರಣಂ ॥
ಪೊಱಸೂಸದೊಳಗಿರದ ಸ್ವೈ ।
ವಱಗಿನ ಸಮರಸದ ಭಾವಮಂ ರಂಜಿಸಿತೋ ॥೩೭೨॥

ಸೀನಾನೆಂಬೆರಡೞಿದುದು ।
ಮಾನಸಮಂಭೋಧಿಯಾಲಿಕಲ್ಲಾಯ್ತು ಶಿವಂ ॥
ತಾನಾದನೊ ತಾನೇ ಶಿವ ।
ನೇನಾದನೊ ಎಂಬತೆಱದಿನವನೊಪ್ಪಿರ್ದಂ ॥೩೭೩॥

## 19. ಗದಾಯುದ್ಧ.

(ಇದನ್ನು ರಚಿಸಿದ ರನ್ನನೆಂಬ ಕವಿಯ ವಿಷಯವನ್ನು 15 ನೆಯ ಪುಟದಲ್ಲಿ ನೋಡು)

ಗದಾಯುದ್ಧಕ್ಕೆ ಸಾಹಸಭೀಮವಿಜಯವೆಂದು ಮತ್ತೊಂದು ಹೆಸರು. ಕ್ರಿ. ಶ 997ರಿಂದ 1008ರವರೆಗೆ ಆಳಿದ ಆಹವಮಲ್ಲದೇವನ ಸಾಹಸಗಳನ್ನು ವರ್ಣಿಸಬೇಕೆಂದು ಕವಿಗೆ ಆಸೆಹುಟ್ಟಿದುದರಿಂದ, ಆ ಪ್ರಭುವನ್ನು ಕಥಾನಾಯಕನನ್ನಾಗಿ ಮಾಡಿ ಭೀಮನಿಗೆ ಹೋಲಿಸಿ ಹೇಳಿದೆನೆಂದು ಕವಿಯು ತಾನೆ ತನ್ನ ಕಾವ್ಯದಲ್ಲಿ ಹೇಳಿಕೊಂಡಿರುತ್ತಾನೆ. ಇದರಲ್ಲಿ ಭೀಮನು ದ್ರೌಪದಿಯ ಮುಂದೆ ಪ್ರತಿಜ್ಞೆಮಾಡಿದಂತೆ ದುರ್ಯೋಧನನ ಮುಕುಟವನ್ನೂ ತೊಡೆಗಳನ್ನೂ ಗದಾಯುದ್ಧದಲ್ಲಿ ಭಂಗಿಸಿ ಕೊಂದು ಪಟ್ಟಾಭಿಷಿಕ್ತನಾದನೆಂದು ವರ್ಣಿಸಿದೆ. ಚಂಪೂರೂಪವಾಗಿ ಬರೆದಿರುವ ಈ ಗ್ರಂಥದಲ್ಲಿ ಕವಿಯು ತನ್ನ ವಾಕ್ಪ್ರೌಢಿಮೆಯನ್ನು ಚೆನ್ನಾಗಿ ತಿಳಿಸಿರುತ್ತಾನೆ. ಇಲ್ಲಿ ಉದ್ಧೃತವಾದ ಪದ್ಯಗಳಿಂದಲೇ ಈ ಕಾವ್ಯದಲ್ಲಿ ವೀರರಸವು ತುಂಬಿತುಳುಕುತ್ತಿರುವುದೆಂದು ಗೊತ್ತಾಗದಿರಲಾರದು.

ಕಂ|| ಸ್ಥಿರಬದ್ಧಮತ್ಸರರ್ ಭೀ |
ಕರಬದ್ಧಭ್ರುಕುಟಿಘಟಿತರದ್ಭುತರಟ್ಟಾ |
ಸುರರಧಿಕಕೋಪಪಾಟಳ |
ಪರುಷೇಕ್ಷಣರೆನಿಸಿ ದೃಷ್ಟಿಯುದ್ಧಂ ಗೆಯ್ದರ್ ||೩೭೪||

ದೆಸೆ ದೇವತೆಗಳ್ಗೆ ಜಪಾ |
ಪ್ರಸೂನಮಂ ರಕ್ತಬಲಿಯುಮಂ ತಾಂ ಕುಡುವಂ ||
ತೆಸೆದಿರ್ದರ್ ಕಡೆಗಣ್ಣೊಳ್ |
ಪಸರಿಸೆ ಕಡುಗೆಂಪು ಭೀಮದುರ್ಯೋಧನರಾ ||೩೭೫||

ಉರಿಯನುಗುಳ್ವಂತೆ ಬಿಸುನೆ |
ತ್ತರನೆತ್ತಂ ಸೂಸುವಂತೆ ಬಿಚ್ಚನ ಬಿಟ್ಟ ||
ರ್ದೆರಡುಂ ಕಣ್ಗಳೊಳವರೊ |
ರ್ಬರನೊರ್ಬರ್ ನುಂಗುವಂತೆ ನೋಡಿದರೆನಸುಂ ||೩೭೬||

ಖಳದುಶ್ಶಾಸನಲೋಹಿತ |
ಜಳಮಂ ಕುಡಿದೆನಸುಮಳ್ಕಿಸಲ್ಕಾರದೆ ಕ ||

ಣೊಳ ಕಾರುವಂತೆ ಕೌರವ |
ಕುಳಾಂತಕಂ ತರಳತಾಮ್ರಲೋಚನನಾದಂ ||೩೭೭||

ಉದಯಾದ್ರಿಯು ಮಸ್ತಾದ್ರಿಯು |
ಮುದಗ್ರಕೋಪೋತ್ಕರಂಗಳಿರ್ಪಂತಿರೆ ಸೀ ||
ಳ್ದೊದವಿದ ರುನ್ನತಮೂರ್ತಿಗ ||
ಳೊಗಪಿ ಗದಾಯುಧದೆ ಭೀಮಭುಜಗಧ್ವಜರುಂ ||೩೭೮||

ಕಿಱಿಕಿಱಿದೆ ಮೆಟ್ಟಿ ಮುಂದಂ |
ಕಿಱಿಕಿಱಿದನೆ ಸಾರ್ಚಿ ತಮ್ಮ ಗದೆಗಳನಾಗಳ್ ||
ಕಿಱಿಕಿಱಿದೆ ತಿರುಪಿ ಮೂಱದೆ |
ಕಿಱಿಕಿಱಿದನೆ ತೂಂಕಿತೂಂಕಿ ನೂಂಕಿದರೆನಸುಂ ||೩೭೯||

ಎಡದಡಿಯುಂ ಪುಗಿಸುವ ಬಲ |
ದಡಿಯುಂ ಪೊಱಗಿಡುವ ವಂಡೆಯಾಸಿಕ್ಕುವ ಕೈ ||
ನಡುಗದೆಯುಂ ತಿರುಪುವ ಕಡು |
ಪಡಂಗು ರಂಜಿಸಿತು ಭೀಮದುರ್ಯೋಧನರಾ ||೩೮೦||

ಕಡುಕೆಯ್ದು ಕುತ್ತೆ ವಂಚಿಸಿ |
ಬಿಡೆಬೀಸಿದೊಡೊಡನೆ ಬೀಸಿ ನಿಮಿರ್ದಡಿಕಾಲಿ ||
ಟ್ಟಡಿಗಿಡೆ ಸಿಘಾತದಿಂ ಪೊ |
ಯ್ದಾಡಾಂಕೆಗೊಂಡಣ್ಕೆ ಕಾದಿದರ್ ಕಡುಗಲಿಗಳ್ ||೩೮೧||

ವ|| ಪದಘಾತಕ್ಕಗಿದಳ್ಕಿ ಬಳ್ಕಿ ದುದಧೋಲೋಕಂ ಭಯಂ ಮರ್ತ್ಯಲೋ |
ಕದೊಳಂ ಪೊಣ್ಮಿದುದೂರ್ಧ್ವಲೋಕದೊಳ್ ಮತ್ತಾಯ್ತುದ್ಭ್ರಾಂತಿಯೆಂ
ಬುದನೆಂಬಂತಿರೆ ಯಂತದೇಂ ಭುವನಮಂ ಪರ್ಯಾಕುಲಂ ಮಾಡಲಾ |
ರ್ತದೊ ದುರ್ಯೋಧನಭೀಮಸೇನರ ಗದಾಯುದ್ಧಂ ತ್ರಿಧಾಭ್ರಾಂತಿಯಂ ||

ಕಂ|| ಗದೆ ಗದೆಯುಂ ಘಟ್ಟಿಸೆ ಪು |
ಟ್ಟಿದ ಕೆಂಡದ ಕಿಡಿಯು ತಂಡವೆಂಟುಂದೆಸೆಯುಂ ||
ಪುದಿಯೆ ಪದಧೂಳಿ ಗಗನದೊ |
ಳೊದವೆ ಸುರರ್ ಬೆದಱೆ ಕಾದಿದರ್ ಕಡುಗಲಿಗಳ್ ||೩೮೩||

ಅಡಿಯುಂ ಕಿಱುದೊಡೆಯುಂ ಪೆ |
ರ್ದೊಡೆಯುಂ ಪೊಱವಾಱನುಡಿಯುನುರಮುಂ ಮುಯ್ವುಂ ॥
ಮುಡುಪಂ ಬೆನ್ನಂ ಕೊರಲಂ |
ನಡುನೆತ್ತಿಯನೆತ್ತಿ ಪೊಯ್ದರೊರ್ವರನೊರ್ವರ್ ॥೩೮೪॥

ತಡದಿಂ ಕಿತ್ತಡಿಯೆಂಬುದ |
ದಡಿಗಿಡೆ ಪೊಕ್ಕೊಳಗು ಪೊಱಗು ಬಲನೆಡನೆಂಬೀ ॥
ಯೆಡೆಯುಱಿದು ಮೆಯ್ಗಳಂ ಸೂಱೆ |
ತಡವಾಗದೆ ಕಾಯ್ಪು ಪೊಯ್ದರೊರ್ವರನೊರ್ವರ್ ॥೩೮೫॥

ಮ॥ ಕರಿಯುಂ ನುಂಗಿ ಕಳಿಂಗನಂ ನೂಂಕಿದ ದರ್ಪಕ್ಕೊಂದುಗೊಳ್ ಮತ್ಸರೋ |
ದರರಂ ಕೋಪದೆ ತಿಂದುದರ್ಕೆ ಪಡುಗೊಳ್ ದುಶ್ಶಾಸನೋರಸ್ಸ್ಥಳ |
ಕ್ಷರದಸ್ರಾಂಬುವ ನಾರ್ದು ಪೀರ್ದ ಮುಳಿಸಿಂಗಂ ಮಾಱುಗೊಳ್ಳೆಂದು ಮ |
ತ್ಸರದಿಂದೋವದೆ ಪೊಯ್ದನೆತ್ತಿ ಗದೆಯಂ ದುರ್ಯೋಧನಂ ಭೀಮನಂ ॥೩೮೬॥

ವ॥ ಎಂದು ಮುಟ್ಟೆ ಮೂದಲಿಸೆ,

ಮ॥ಸ್ರ॥ ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡಜೂದಂ |
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಲೋಕನಭ್ರಾಂತಿಗೆಂದೋ |
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕನ್ನೆಯಂ ನೆತ್ತಿಯಂ ಕೋ |
ಪದಿ ನೃಪಂ ದುರ್ಯಶಕ್ಕೈದೆಸೆಯುಮನುರುಗದಾದಂಡದಿಂ ಭೀಮಸೇನಂ ॥೩೮೭॥

ಚರಣಾಕ್ರಾಂತಂ ಮಹೀಮಂಡಲಮದಿರೆ ಭುಜಾಕ್ರಾಂತಮಾಶಾಗಜೇಂದ್ರೋ |
ತ್ಕರಮಾಶಾಭಿತ್ತಿಯಿಂದಂ ಪಱಿವೆಗೆಯೆ ಗದಾಕ್ರಾಂತಮುದ್ಭ್ರಾಂತ ವಿದ್ಯಾ |
ಧರಚಕ್ರಂ ಗೆಂಟುಗೆಂಟಾಗಿಲಸೆ ನಿಜವಿಮಾನಂಗಳಂ ಭೈರವಾಡಂ |
ಬರಮಾಕಲ್ಪಾಂತಕಾಲಂ ನೆಗೞ್ದುದು ಸಮರಂ ಭೀಮದುರ್ಯೋಧನೀಯಂ ॥

ಚಂ॥ ನೆಲಸಿದ ಬಿನ್ನಣಂ ಸಣಸಿ ಬಿನ್ನಣಮಂ ಗೆಲೆ ಕಾಣ್ಕೆ ಕಾಣ್ಕೆಯಂ |
ಗೆಲೆ ಜವಮಂ ಜವಂ ಗೆಲೆ ಬಲಂ ಬಲಮಂ ಗೆಲೆ ದಂಡೆ ದಂಡೆಯಂ |
ಗೆಲೆ ಮುಳಿಸುಣ್ಮಿ ಪೊಣ್ಮಿ ಮುಳಿಸಂ ಗೆಲೆ ಸತ್ತ್ವದಳುರ್ಕೆ ಸತ್ತ್ವಮಂ |
ಗೆಲೆ ಗೆಲಲಾರ್ತರಿಲ್ಲ ಕುರುಪಾಂಡುತನೂಭವರೊರ್ವರೊರ್ವರಂ ॥೩೮೯॥

ಕಂ॥ ಕುರುರಾಜಂ ವಿದ್ಯಾಧರ |
ಕರಣದೆ ನೆಗೆದಂಬರಕ್ಕೆ ಗದೆಯುಂ ಕ್ರಮದಿಂ ॥

ತಿರುಪೆ ಧರಾಚಕ್ರಂ ಕೋ ।
ವರ ಚಕ್ರಂ ತಿರಿವ ತೆಱದೆ ತಿರಿದತ್ತನಸುಂ ॥೩೯೦॥

ಛತ್ರಾಕಾರದ ಗದೆಯುಂ ।
ಚಿತ್ರವಿಧಂ ಬೀಸೆ ಗಗನದೊಳ್ ಸಿನಗೇಕ ॥
ಚ್ಛತ್ರಂ ಜಗಮೆಂದು ಮರು ।
ತ್ಪುತ್ರಂ ಗಱಿಪುವವೊಲಿರ್ದನಾ ಕುರುಪುತ್ರಂ ॥೩೯೧॥

ತೆಱಪಂ ಸಿಟ್ಟಿಸಿ ಕುರುಪತಿ ।
ಬಱಸಿಡಿಲೆಱಗುವವೊಲೆಱಗಿ ಪೊಯ್ಯಲೊಡಂ ಮೆ ॥
ಯ್ಮಱದು ಪವನಜನದೇಕೆಂ ।
ವಱಿಯುಂ ಮತಿಪಿಕಳನಾಗಿ ಮೂರ್ಛೆಗೆ ಸಂದಂ ॥೩೯೨॥

ವ॥ ಅಂತು ಮೂರ್ಛಾಗತನಾಗಿರ್ದ ಭೀಮಸೇನನಿರವಂ ಕಂಡು ಗಾಂಡೀವಿ ಕೋಪಾತುರಾಟೋಪಮಂ ತಾಳ್ದ ।

ಕಂ॥ ಎಲ್ಲಿಯು ಬಲದೇವಂ ಮೇ ।
ಣೆಲ್ಲಿಯು ಸತ್ಯವ್ಯವಸ್ಥೆ ದುರ್ಯೋಧನನಂ ॥
ಕೊಲ್ಲದಿರೆನೆಂದು ಭಾರತ ।
ಮಲ್ಲಂ ಗಾಂಡಿವಕೆ ನೇಱಿದಂ ನೆಱೆ ತಿರುವಂ ॥೩೯೩॥

ಮುಳಿದೇವಂ ಹಲಿಕೃಷ್ಣಂ ।
ಮುಳಿದೇವಂ ಧರ್ಮನಂದನಂ ಮುಳಿದೇವಂ ॥
ಮುಳಿದರ ಸಿಕ್ಕುವವಂದು ।
ಮ್ಮಳಿಸಿದರಿಱಿಯಲ್ಕೆ ನಕುಲಸಹದೇವರ್ಕಳ್ ॥೩೯೪॥

ಅರಿಗಿಂಬಾಯ್ತುಱುವಾದುದು ।
ಮರುತ್ಸುತಂಗರ್ಜುನಾದಿಗಳ್ ಮುಳಿದರ್ ಮೊ ॥
ವರುಮೆನ್ನ ನನ್ನಿಗೀಗಳ್ ।
ಪರಿಭವಮಾಯ್ತೆಂದು ಧರ್ಮಜಂ ಚಿಂತಿಸಿದಂ ॥೩೯೫॥

ಅಲರ್ದ ಹಲಧರನ ಮೊಗಮುಂ ।
ತಲೆಯುಂ ಬಾಗಿರ್ದ ಧರ್ಮತನಯುನ ಮೊಗಮುಂ ॥

ಜಲರುಹನಾಭಂ ಕಂಡೆರ್ದೆ ।
ಗಲಂಕೆ ಕಣ್ಣುರ್ವುರ್ ಜರ್ವಿದಂ ಗಾಂಡಿವಿಯುಂ ॥೩೯೬॥

ವ॥ ಆ ಪ್ರಸ್ತಾವದೊಳ್,

ಕಂ॥ ಕೆಡೆದೊಡೆ ಪವನಜನಾಹವ ।
ದೆಡೆಯೊಳ್ ಬಿದ್ದವನ ನಿಱಿಯಲಾಗದುವೆಂಬರ್ ॥
ಗಡವೆಂದಂಬರತಳದೊಳ್ ।
ಪೊಡವೀಶಂ ಗದೆಯನೆತ್ತಿ ತಿರುಪಿದನಾಗಳ್ ॥೩೯೭॥

ಇಱಿಯೆಂ ಬಿದ್ದನನೆಂಬೀ ।
ಬಿಱುಬಿಂದಂ ಬೀಸೆ ಗದೆಯ ಗಾಳಿಯ ಕೋಳ್ ॥
ಜ್ಜಱಿಸಿದುದು ಭೀಮನಂ ಮೆ ।
ಯ್ಮಱಿದವನಂ ತಂದೆಸುತರ್ಗೆ ಕೂರದರೊಳರೇ ॥೩೯೮॥

ದಾಸಿಯುಮಂ ಶೂರನುಮಂ ।
ತಾನೆಚ್ಚಱಿಕುಂ ಗದಾನಿಲಂ ಮೂರ್ಛಿತನಂ ॥
ದೀನನುಮಂ ಪಂದೆಯುಮಂ ।
ತಾನೆಚ್ಚಱಿಕಜ್ಜವಳದ ಸಾರಂ ಪವನಂ ॥೩೯೯॥

ವ॥ ಅಂತು ಮೂರ್ಛೆಯಿಂದೆಚ್ಚೆತ್ತು,

ಕಂ॥ ಪೊಡೆಯಲರಾತಂ ಬಾಗದೆ ।
ತೊಡೆಯಂ ಪೊಯ್ದೊಂದು ನೆವದೆ ನೆರನೀತಂಗೀ ॥
ಯೆಡೆಯೆಂದು ತೋಱಿಕುಡೆ ಪೊಲ ।
ಗಡದಱಿದಂ ಪರಮಪಂಡಿತಂ ಪವನಸುತಂ ॥೪೦೦॥

ಮ॥ ತಿಳಿದಾಗಳ್ ನೆರಸಿಂತುಜಿಂಪ ನೆಲನಂ ಮಾಱುದ್ದ ಕೈಯಿಂ ಧರಾ ।
ತಳದೊಳ್ ಪಾಸಿದ ತನ್ನತೀವ್ರಗದೆಯಂ ಕಂಡೆತ್ತಿ ಕೊಂಡಂಬರ ।
ಸ್ಥಳದಿಂದಂ ಸಿಡಿಲೇಱುಗೆಯೊಂದಱಿಗಿ ಪೊಯ್ವಾಗಳ್ ಗದಾದಂಡದಿಂ ।
ಮುಳಿದಿಟ್ಟಂ ಕಲಿ ಸತ್ತ್ರಿಗಂ ಕುರುಕುಭೃಚ್ಚಂಡೋರುದಂಡಗಳಂ ॥೪೦೧॥

ಕಂ॥ ಇಡೆ ತೊಡೆಯುಸುಡಿದು ನಟ್ಟನೆ ।
ಕೆಡೆಯುತ್ತುಂ ಕರ್ಚೆ ನೆಲನನಾನಿದನೆಂತುಂ ॥
ಬಿಡೆನೆಂಬ ತೆಱದೆ ಕುಲಗಿರಿ ।
ಕೆಡೆವಂದದೆ ಕೆಡೆದು ಕೌರವೇಂದ್ರಂ ಮಡಿದಂ ॥೪೦೨॥

## 20. ಕರ್ಣಾರ್ಜುನ ಸಂಗ್ರಾಮ.

ಇಲ್ಲಿ ಕೊಟ್ಟಿರುವ ಕರ್ಣಾರ್ಜುನ ಸಂಗ್ರಾಮವನ್ನು ತಿಳಿಸುವ ಪದ್ಯಗಳು, ಆದಿಪಂಪನೆಂಬ ಜೈನಬ್ರಾಹ್ಮಣಕವಿಯು ರಚಿಸಿದ ಭಾರತ ಅಥವಾ ವಿಕ್ರಮಾರ್ಜುನ ವಿಜಯವೆಂಬ ಕಾವ್ಯದಿಂದ ಉದ್ಧೃತವಾಗಿವೆ. ಪಂಪನ ಹಿರಿಯರು ವೆಂಗಿಮಂಡಲದ ವೆಂಗಿಪಳುವಿನಲ್ಲಿದ್ದರೆಂದೂ, ಕುಲದಲ್ಲಿ ಮೊದಲು ವತ್ಸಗೋತ್ರೋತ್ಪನ್ನರಾದ ಬ್ರಾಹ್ಮಣರಾಗಿದ್ದರೆಂದೂ, ಈತನ ತಂದೆಯಾದ ಅಭಿರಾಮದೇವರಾಯನ ಕಾಲದಲ್ಲಿ ಜೈನಮತವನ್ನವಲಂಬಿಸಿದರೆಂದೂ ತಿಳಿಯಬರುತ್ತದೆ. ಈ ಪಂಪಕವಿಯು ಕ್ರಿ. ಶ. 902ನೆಯ ವರ್ಷದಲ್ಲಿ ಹುಟ್ಟಿದಂತೆ ಗೊತ್ತಾಗುವದು. ಈತನು ಪುಲಿಗೆಱೆಯ ರಾಜನಾದ ಚಳುಕ್ಯವಂಶೋತ್ಪನ್ನನಾದ ಅರಿಕೇಸರಿಯ ಆಸ್ಥಾನದಲ್ಲಿ ಪಂಡಿತನಾಗಿದ್ದನು. ಈತನಿಗೆ ಕವಿತಾಗುಣಾರ್ಣವ, ಪುರಾಣಕವಿ, ಸುಕವಿಜನಮನೋಮಾನಸೋತ್ತಂಸಹಂಸ, ಸಂಸ್ಕೃತಿಮಣಿಹಾರ, ಸಂಸಾರಸಾರೋದಯ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಈತನು ತನ್ನ ಪ್ರಭುವಾದ ಅರಿಕೇಸರಿಯ ಆಜ್ಞಾನುಸಾರವಾಗಿ ಭಾರತವನ್ನು ರಚಿಸತೊಡಗಿ, ಅದರಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿರುವುದಲ್ಲದೆ, ಪಾಂಡವರ ಜನನದಿಂದ ಕೌರವ ವಧೆಯ ವರೆಗೆ ಭಾರತಕಥೆಯನ್ನು ಸಂಕ್ಷೇಪವಾಗಿ ಹೇಳಿ ಕಡೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾದಂತೆ ವರ್ಣಿಸಿರುತ್ತಾನೆ. ಕಾವ್ಯಬಂಧವು ಪ್ರೌಢವಾಗಿಯೂ, ಭಾವಗರ್ಭಿತವಾಗಿಯೂ ಇರುವುದಲ್ಲದೆ, ಇದರಲ್ಲಿ ಅಚ್ಚಗನ್ನಡಪದಗಳು ಹೆಚ್ಚಾಗಿವೆ. ವಾಗ್ಧೋರಣೆಯಲ್ಲಿ ಈತನ ಸಮಾನರಾದವರು ಇತರ ಕರ್ಣಾಟಕಕವಿಗಳೊಳಗೆ ಯಾರೂ ದೊರೆಯಲಾರರೆಂದು ಹೇಳಬಹುದು. ಪಂಪನು ಭಾರತವನ್ನು ಮಾತ್ರವಲ್ಲದೆ, ಆದಿತೀರ್ಥಕರನಾದ ಪುರುದೇವನ ಚರಿತವನ್ನು ಆದಿಪುರಾಣವೆಂಬ ಹೆಸರನ್ನಿಟ್ಟು ಲಲಿತವಾದ ಭಾಷೆಯಲ್ಲಿ ರಚಿಸಿರುತ್ತಾನೆ. ಇವೆರಡೂ ಚಂಪೂ ಗ್ರಂಥಗಳಾಗಿವೆ.

ಹರಿಣೀಪ್ಲುತಂ.

ಪಿರಿದು ಪೊರೆದಂ ನಿನ್ನಂ ದುರ್ಯೋಧನಂ ನಿನಗೆನ್ನೊಳಂ |
ಪಿರಿದು ಕಲುಷಂ ಕರ್ಣಂ ಗೊಡ್ಡಿತ್ತು ಭಾರತಮೇಂ ಬೆಸಂ |
ಪಿರಿದು ನಿಮಗಂ ರಾಗಂ ಮಿಕ್ಕಿರ್ದಗುರ್ವಿನ ಸೂನು ನಿ |
ರ್ನರಮುಱಿಯೆಯುಂ ನೋಡುತ್ತಿಂತಿರ್ದ ಯಿರ್ಪುದು ಪಾಟಿಯೇ ||೪೩||

ಕಂ|| ಎನ್ನ ಪೆಸರ್ಗೇಳ್ದು ಸೈರಿಸ |
ದನ್ನಯಂದೆಂತೀಗಳನ್ನ ರೂಪಂ ಕಂಡುಂ ||

ನಿನ್ನರಸನಣುಗದಮ್ಮನ ।
ನಿನ್ನ ತನೂಭವನ ಸಾವುಗಂಡುಂ ಮಾಣ್ಬಾ ||೪೦೪||

ಮ॥ ಭಯಮೆೞಕುೞ್ವಮನಂತುಟೊಂದದಟುವಮಂ ಪೆರ್ಮಾತುಮಂ ಭೂಪ ಧಾ ।
ತ್ರಿಯೊಳಾರಂತೆ ನೆಗೞ್ಚಿ ಮುನ್ನೆ ಬೞಿಯಂ ಕಾನೀನ ನೀನೀ ಮಹಾ ।
ಜಿಯೊಳಿಂತೇನನಗಂಜಿ ಮಾಣ್ದು ಪೞಿತೇಂ ಪೋವಂತು ಲೇಸಣ್ಣ ಸೆ ।
ಟ್ಟಿಯ ಬಳ್ಳಂ ಕಿಱಿದೆಂಬುದೊಂದು ನುಡಿಯುಂ ನೀಂ ಪಿಕ್ಕುವಂ ಮಾಡಿದ್ಯ ॥

ಕಂ॥ ಪೆಸರೆಸೆಯೆ ಬೀರಮಂ ಪಾ ।
ಡಿಸಿಯುಂ ಪೊಗೞಿಸಿಯುಮುರ್ಕಿ ಬಿಪ್ದಾಹವದೊಳ್ ।
ಕುಸಿದು ಪೆಱಪಿಂಗಿ ಪೇೞಿ ಮಾ ।
ನಸರೇ ನಿನ್ನೊೞು ವರ್ಷಮುಂ ಬಟ್ಟಪರೆ ||೪೦೫||

ವ॥ ಎಂದು ತನ್ನ ನುದ್ಘಾಟಿಸಿ ನುಡಿದರ್ಜುನನ ಪಾೞಿಯ ಪಸುಗೆಯ ನುಡಿಗೆ ಮೆಚ್ಚದೆ ದರಹಸಿತವದನಾರವಿಂದನಾಗಿ ದಶಶತಕರತನೂಜನಿಂತೆಂದಂ.

ಕಂ॥ ಎಳೆಯುಂ ಕೋೞ್ವಟ್ಟುಂ ಮುಂ ।
ಬಳೆದೊಟ್ಟುಂ ಮುಟ್ಟುಗೆಟ್ಟು ಮಿರ್ದೆಗಳ್ ಬ ॥
ೞ್ವಾಳನೆ ನುಡಿದಪುದೆ ನುಡಿವಂ ।
ತಳವುಂ ಪೆರ್ಮಾತುಮಾಯುಮುಂ ಸಿನಗಾಯ್ತು ||೪೦೬||

ಪಿತ್ಕಟ್ಟನೆಪೆದು ನಿಮ್ಮಂ ।
ನಾತ್ಕಡಿಗಳದೊಡೆ ಮದೀಯನಾಥಂ ಬೇರಂ ॥
ಬಿಷ್ಕಯನೆ ತಿಂದ ದೆವಸದೊ ।
ಳಪ್ಕಡಿದ ಬೀರ ಮಿಾಗಳೇಂ ಪೊಸತಾಯ್ತೋ ||೪೦೭||

ವ॥ ಎಂದು ಮುಟ್ಟ ಮೂದಲಿಸಿ,

ಕಂ॥ ಮತ್ತನಯನರಸನನುಜನ ।
ಸತ್ತೞಲಂ ನಿನ್ನೊಳಱಸಲೆಂದಿರ್ದೆಂ ಜ ॥
ೞ್ಕತ್ತಿರ್ದನಪ್ಪೊಡೇ ತೊದ ।
ಳತ್ತಣ ದಿನನಾಥ ನಿತ್ತ ಮೂಡುಗು ಮತ್ತೆ ||೪೦೮||

ಕಸವರದ ಸವಿಯುಮುಂ ಭಯ ।
ರಸಕದ ಸವಿಯುಮನದೆಂತು ಮಾನಱಿಯನುದಂ ॥

ವಸುಮತಿಯುಱಿವುದು ನೀಂ ಪುರು |
ಡಿಸಿ ನುಡಿದೊಡೆ ನಿನ್ನ ನುಡಿದ ಮಾತೇಱುಗುಮೇ ||೪೧೦||

ಬಿಡಲುಂ ಪ್ರಾಣಮುಮಂಬಿವು |
ಕಿಡಲಾದುವು ಜಸಮದೊಂದೆ ಕಿಡದದನಾಂ ಬ ||
ಳ್ಳಿಡಿವಿಡಿದು ನೆಗೞ್ದೆ ನಿಂತಿದಱಿಂ |
ಪೆಡೆಮಾತಂ ಮಾಡಿ ಪೇಸೆ ಕೆಮ್ಮನೆ ನುಡಿದೈ ||೪೧೧||

ಎಂದೀ ಬಾಯ್ವಾತಿನೊಳೇ |
ನೆಂದಪುದಣ್ಮಿಂ ಕಾದು ಕೊಳ್ಳೆನುತುಂ ಭೋ ||
ರೆಂದಿಸೆ ಪೊಸಮಸೆಯಂಬಿನ |
ತಂಪಲ ಜಳ್ಳುರಿಗಳಿರದೆ ಕವಿದುವು ನರನಂ ||೪೧೨||

ಗೊಣೆಗಳನುರ್ಚುವ ತಿರುಪಾ |
ಯ್ವೊಣರ್ಚಿ ತೆಗೆನೆಱಿವ ಬೇಗಮಂ ಕಾಣದೆ ಕೂ ||
ರ್ಗಣೆಗಳ ಪಂದರನೆ ನಭೋಂ |
ಗಣದೊಳ್ ಕಂಡತ್ತು ದೇವಗಣಮಿನಸುತನಾ ||೪೧೩||

ವ|| ಆಗಳ್ ಪರಸ್ಪರಭೈರವಂ ಪ್ರಳಯಭೈರವಾಕಾರಮುಂ ಕೆಯ್ಕೊಂಡು ಕಾದೆ,

ಚಂ|| ಕನಿವ ಶರಾಳಿಯುಂ ನಿಜಶರಾಳಿಗಳಟ್ಟೆ ತೆರಳ್ದು ತೂಳ್ದು ಮಾ |
ರ್ಗವಿದು ಪಳಂಚಿ ಪಾಯ್ದೊಡನೆ ಪುಟ್ಟಿದ ಕಿಚ್ಚುಳುರ್ದೆೞ್ದು ಜಾಂಡದಂ |
ತವರ ಮುಗುಮ್ರ್ ಪರ್ವೆ ಕರಮುರ್ವಿಸೆ ದಳ್ಳುರಿ ಪೆರ್ಚಿತಂದುದು ಖಾಂ |
ಡವವನದಾಹಮುಂ ನೆನೆಯಿಸಿತ್ತು ಗುಣಾರ್ಣವನಸ್ತ್ರಕೌಶಲಂ ||೪೧೪||

ವ|| ಆಗಳಂಗಾಧಿರಾಜಂ ರೌದ್ರಶರದ ಮೊನೆಗೆ ಕೆಯ್ಯಂ ನೀಡಿ,

ಕಂ|| ಆಕರ್ಣಾಂತಂ ತೆಗೆನೆಱೆ |
ದಾಕರ್ಣಿಸಿಸಲ್ಕೆ ಬಗೆದೊಡುಡುಗುಡುಗಿಸಲೀ ||
ಭೀಕರಬಾಣಮೆ ನಾದವಿ |
ವೇಕದಿ ನುರದೆಡೆಗೆ ತುಡದೆ ತಲೆಗೆಯೆ ತುಡುವಾ ||೪೧೫||

ಉರದೆಡೆಗೆ ತುಡೆ ಜಯಶ್ರೀ |
ಗಿರಲೆಡೆ ನಿನಗಪ್ಪುದಾ ಸುಯೋಧನನೊಳ್ ಶ್ರೀ ||

ಗಿರಲೆಡೆಯಪ್ಪುದು ಮೋಣ ದಿನ ।
ಕರಸುತ ತೊದಳುಂಟೆ ಬಗೆಯೆ ಸಂದೆಯಮುಂಟೇ ॥೪೧೬॥

ವ॥ ಎಂದು ಶಲ್ಯಂ ನುಡಿದ ನುಡಿಯನವಧಾರಿಸಿ ತನ್ನ ಮನದೊಳ್ ಕರ್ಣ ನಿಂತೆಂದಂ.

ಮ॥ ಅನಿತುಂ ಶಲ್ಯನ ಪೇೞ್ದ ಪಾಂಗೆ ತೊದಳಿಲ್ಲಂತಾದೊಡಾ ಶಕ್ರಪು ।
ತ್ರನನಾಂ ಕೊಂದೊಡೆ ಧರ್ಮಪುತ್ರನೃಪತಿಗಂ ತಾಯೆಂದೆ ಮುಂಕೊಂತಿ ಬಂ।
ದಿನಿಸಂ ಪ್ರಾರ್ಥಿಸಿ ಪೋದಳೆನ್ನ ನದನಾಂ ಮಾಣ್ದಿರ್ದೆ ನಿದಾಗಳೊ।
ಳ್ಪಿನ ಪೆರ್ಮಾತಿನ ನನ್ನಿ ಬನ್ನದೊಳೊತಂ ಬಟ್ಟೆಪ್ಪುದಂ ಮಾಱೆನೇ ॥೪೧೭॥
ಅಱಿಯರ್ ಪಾಂಡವರನ್ನ ನಿನ್ನು ಮಱಿಪಲ್ ಸೀಮೊಂದೊಡಂ ಚಕ್ರಿಗಾ।
ನಱಿಪಿರ್ದಂ ಪೃಥೆಯುಂ ಮಗಧೀಯಸುತರೊಳ್ ವೈಕರ್ತನಂ ನನ್ನಿಯಂ।
ನಿಱಿಸಲ್ಕಾರ್ಕಂ ಮಹೋಘಮೆಂದು ಮನದೊಳ್ ನಂಬಿರ್ದಳಿನ್ನಿಲ್ಲಿ ಪೆಂ।
ಪೆಱಕಂ ಬೆತ್ತಿರೆ ಕಾವನೆನ್ನ ನುಡಿಯಂ ಕೆಯ್ಕೊಂಡ ಕಟ್ಟಾಯಮಂ॥೪೧೮॥

ಕಂ॥ ಎಂಬುದನೆ ಬಗೆದು ಪೆಱತನ ।
ಣಂ ಬಗೆಯದೆ ಮದ್ರಪತಿಯನೆಂದಂ ಮುಂತೊ॥
ಟ್ಟಂಬನದನುಗಿದು ಕುಂದಿಸಿ ।
ದಂ ಬಯದಿಂ ಕರ್ಣನೆಂದು ಲೋಕಂ ನಗದೇ ॥೪೧೯॥

ಉಡುಗುಡುಗುಡುಗೆಂದಿಸೆ ಬಱ ।
ಸಿಡಿಲೆಱಪಂತೆಱಪ ಸರಲ ಬರವಂ ಕಂಡಾ॥
ಗಡೆ ಚಕ್ರಿ ನೆಲನೊಳ್ಕಾ ।
ರಥಂಗೆ ನರರಥಮನೊತ್ತಿದಂ ನಿಪುಣತೆಯಿಂ ॥೪೨೦॥

ಬತ್ತುವುದುಂ ಶರಮಿರದೆ ।
ಯ್ದುತ್ತೆ ಕಿರೀಟಿಯ ಕಿರೀಟಮುಂ ಕೊಱದೊಡೆ ಪ॥
ರ್ವಿತ್ತು ಭಯಮಿಂದ್ರನಂ ಮು ।
ತ್ತಿತ್ತಟಲೀಶ್ವರನ ನಾಗಳಾ ಸಂಕಟದೊಳ್ ॥೪೨೧॥

ಬಳಗಱಿಯದೆ ಕೌರವಬಳ ।
ಜಳನಿಧಿ ಬೊಬ್ಬಿಱಿದು ಮೇಲುದಂ ಬೀಸಿದೊಡು॥
ಚಳಿಸಿದ ಮಕುಟದ ಮಣಿಗಳ ।
ಪೊಳಪುಗಳಿಂದುಳ್ಕು ಮೊಟ್ಟಿದ್ದೆಂಟುಂದೆಸೆಯೊಳ್ ॥೪೨೨॥

ವ|| ಆಗಳಂಗರಾಜಂ ಶಲ್ಯಂಗೆ ಕಿನಿಸಿ ಮುಳಿಸಿನೊಳ್ ಕರ್ಣಾಗ್ರದಿಂತಪ್ಪೇಱಗಾ್ರಹಿಗಮೊರಂಟಂಗಂ ರಥಮನೆಸಗೆನೆಂದು ವರೂಥದಿಂದಿೞಿದು ಪೋಗೆ,

ಚಂ|| ಅರಿಗನ ಬಿಟ್ಟನಂಬುಗಳ ಬಲ್ಸರಿಸೋಂಕುಗುಮೇೞಿಮೆನ್ನ ತೋಳ್ |
ನೆರಮೆನಗೆನ್ನ ಬಿಲ್ಲೆ ನೆರಮೆಂದು ವರೂಥತುರಂಗಮಂಗಳಂ |
ತುರಿಪದೆ ತಾನೆ ಚೋದಿಸುತುಮಾರ್ದಿಸುತುಂ ಕಡುಕೆಯ್ದು ಕಾದೆ ಭೀ |
ಕರರಥಚಕ್ರಮಂ ಪಿಡಿದು ನುಂಗಿದಳುರ್ವರೆಯೆ ಧಾತ್ರಿ ಕೋಪದಿಂ ||೪೩

ವ|| ಅಂತು ತನ್ನಂ ಮುನ್ನಮೇಱೂಸ್ವರ ಮೊಲ್ಲಣಿಗೆಯಿಂ ಪೞಿವಂತೆ ಪಿಂದಿ ಪೞಿದ ಪಗೆಗೆ ರಥಚಕ್ರಮುಂ ನುಂಗುವುದುಂ ರಥದಿಂದಿೞಿದು ಗಾಲಿಯುನೆತ್ತುವಾಗಳ್ ಇವನನೀ ಪದನೊಳ್ ಕಡಿದೊಟ್ಟದಾಗಳ್ ಗೆಲಲಾಱೆಯೆಂದು ನುಡಿದ ಮುಕುಂದನ ನುಡಿಗೆ ಕೊಕ್ಕರಿಸಿ ಜಗದೇಕಮಲ್ಲನಿಂತೆಂದಂ.

ಮ|| ಬೞಲಮಂ ಸಾರಥಿಯಿಲ್ಲ ಮೆಯ್ಗೆ ಮಱೆಯುಂ ತಾನಿಲ್ಲದಂತೀಗಳಾ |
ನಿಱಿವಂ ನೋಡರ ಮಾತ್ರಮೊಂದನಿಸಲುಂ ಕೆಯ್ವೇೞ್ಪದೇಕೆಂದು ಮಾ |
ನಱಿಯೆಂ ಕೂರ್ಮೆಯ ಮಿಕ್ಕು ಬಂದಪುದಿದರ್ಕೇಗೆಯ್ವೆ ನೇನೆಂಬೆನಾಂ |
ಮಱೆದಂ ಮುನ್ನಿನಮೊಂದು ವ್ಯಾಮಸಿದಿಂತೇ ಕಾರಣಂ ಭೂಧರಾ ||೪೪||

ವ|| ಎಂಬುದುಮಸಿತಱಿಯದಿರ್ದೊಡಂ ಸೋದರಿಕೆಯೆ ಮಿಕ್ಕು ಬರ್ಕುಮಾಗದೆಯೆಂದು ತನ್ನಂತರ್ಗತದೊಳ್ ಬಗೆದಸುರಾಂತಕನಿಂತೆಂದಂ.

ಚಂ|| ನೆಗೞ್ದಭಿಮನ್ಯುಮಂ ಚಲದಿನಂದಿಱಿದಿಂದು ನಿಜಾಗ್ರಜಾತನಂ |
ಸುಗಿವಿನ ಮೆಚ್ಚ ಬೀರಮೊಳ್ ಬೀಗುವ ಸೂತಸುತಂಗೆ ನೀನು ಮಾ |
ಜಗೆ ಸೆಡೆದಿರ್ದೆಯಪ್ಪೊಡಿರು ಚಕ್ರನಿಘಾತದ ನಿಕ್ಕಿ ಬೀರಮುಂ |
ಮಿಗೆ ಪಣಿಚಂದಮಾಗೆ ತಱಿದೊಟ್ಟೆ ಜಯಾಂಗನೆ ಗಾಣ್ಮನಾದಪಂ ||೪೫||

ವ|| ಎಂಬನ್ನೆಗಂ ಧರಾತಳಮಾಳಱಿ ರಥದ ಗಾಲಿಯಂ ಕಿೞ್ತು ಮತ್ತಂ ರಥಮನ ಪ್ರತಿರಥನೇಱಿ ನಿಟ್ಟಾಲಿಯಾಗೆ ಮುಟ್ಟವಂದು ಕಿಡಿಗುಟ್ಟೆ ಮರ್ಮೋದ್ಘಾಟನಂಗೆಯ್ದು ಕಾದುವಾಗಳ್ ಕಪಿಧ್ವಜಂ ವನದಂತಿಯಂತೆ ಕಕ್ಷಧ್ವಜಮ ನುಡಿದು ಕಡೆವಿನ ಮೆಚ್ಚಂ

ಚಂ|| ಗಿರಿಜೆಯು ಮುನ್ನ ಕೊಟ್ಟ ನಿಶಿತಾಸ್ತ್ರಮನಂಜಲಿಕಾಸ್ತ್ರಮಂ ಭಯಂ
ಕರತರಮಾಗೆ ಕೊಂಡು ವಿಧಿಯಿಂದಭಿಮಂತ್ರಿಸಿ ಪೂಡೆ ಬಿಲ್ಲೊಳು |
ರ್ವರೆ ನಡುಗಿತ್ತಜಾಂಡ ಮೊಡೆದತ್ತು ನೆಲಂ ಪಿಡುಗಿತ್ತು ಸಪ್ತಸಾ |
ಗರ ಮುಡುಗಿತ್ತು ಸಾಹಸಮದೇಂ ಪಿರಿದೋ ಕದನತ್ರಿನೇತ್ರನಾ ||೪೬||

ಮ|| ಸ್ರ|| ಮುಳಿದೆಚ್ಚಾಗಳ್ ಮಹೋಗ್ರಪ್ರಳಯಶಿಖಿಶಿಖಾನೀಕಮಂ ವಿಸ್ಫುಲಿಂಗಂ|
ಗಳುಮಂ ಬೀಱುತ್ತು ಮೌರ್ವಜ್ವಳನರುಚಿಯುಮಂ ತಾನೆ ತೋಱುತ್ತು [ಮಾಟಂ|
ದಳುರುತ್ತುಂ ಬಂದು ಕೊಂಡಾಗಳ್ . ಗನತಳಂ ಪಾಯ್ದು ಕೆನ್ನೆತ್ತರಿಂದು|
ಚ್ಚಳಿಸುತ್ತಿರ್ಪನ್ನೆಗಂ ಬಿೞ್ದುದು ಭರದೆ ಸಿಡಿಲ್ದತ್ತ ಕರ್ಣೋತ್ತಮಾಂಗಂ||

ವ|| ಆಗಳ್,

ಕಂ|| ಕುಡುಮಿಂಚಿನ ಸಿಡಿಲುರುಳಿಯೊ|
ಳೊಡಂಬಡಂಪಡೆಯೆ ಕರ್ಣನೊಡಲಿಂದಾಗಳ್||
ನಡೆ ನೋಡೆ ನೋಡೆ ದಿನಪನೊ|
ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ||೪೮||

ಚಂ|| ನೆನೆಯದಿರಣ್ಣ ಭಾರತದೊಳಿಂಪೆಱರಾರುಮನೊಂದೆಚಿತ್ತದಿಂ|
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ದೊರೆ ಕರ್ಣನೇಱು ಕ|
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ|
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ||೪೯||

---

## 21. ಶಿಶುಪಾಲ ವಧೆ.

ಈ ಪದ್ಯಗಳು ಜಗನ್ನಾಥವಿಜಯವೆಂಬ ಚಂಪೂಗ್ರಂಥದಿಂದ ಉದ್ಧರಿಸಲ್ಪಟ್ಟವೆ. ಇದನ್ನು ಬರೆದಾತನು ರುದ್ರಭಟ್ಟನೆಂಬ ಒಬ್ಬ ಸ್ಮಾರ್ತಬ್ರಾಹ್ಮಣನು. ಈತನು ರಸಕಲಿಕೆಯೆಂಬ ಮತ್ತೊಂದು ಗ್ರಂಥವನ್ನೂ ಬರೆದಿರುವಂತೆ ಹೇಳುತ್ತಾರೆ. ಈತನು ವೀರಬಲ್ಲಾಳರಾಜನ ಕಾಲದಲ್ಲಿ ಕ್ರಿ. ಶ. 1180ರಲ್ಲಿ ಇದ್ದಿರಬೇಕೆಂದು ಊಹಿಸಲ್ಪಟ್ಟಿದೆ. ಈತನಿಗೆ ಕೃತಿಶಾರದಾಭ್ರಚಂದ್ರಾತಪ, ಕವಿರಾಜ ಎಂಬ ಬಿರುದುಗಳಿದ್ದಂತೆ ತಿಳಿಯಬರುತ್ತದೆ. ಜಗನ್ನಾಥವಿಜಯದಲ್ಲಿ ಕೃಷ್ಣನ ಜನನದಿಂದ ಬಾಣಾಸುರಕಾಳಗದವರೆಗೆ ವಿಷ್ಣುಪುರಾಣದ ಕಥೆ ಉಕ್ತವಾಗಿದೆ.

ಕಂ|| ಏಪಚ್ಚಂ ಯಮತನುಜ ಸ|
ಭಾಪೂಜೆಯೊಳಗ್ರಪೂಜೆ ಕೃಷ್ಣಂಗೆ ವಲಂ||
ಶ್ರೀಪುರುಷೋತ್ತಮನಿರ್ದ ಸ|
ಭಾಪಟಲದೊಳನ್ಯಪುರುಷನಾವಂ ಪೂಜ್ಯಂ ||೫೦||

ವ॥ ಎಂದು ಮಂದಾಕಿನೀನಂದನಂ ನುಡಿಯೆ ಕೇಳ್ದು ಶಿಶುಪಾಲಂ ದಕ್ಷಿಣದಿಕ್ಪಾಲಕನಂತೆ ಕೆರಳ್ದು ನಿಂದಿರ್ದು,

ಕಂ॥ ನೀರ್ಮಾನಸಂ ನದೀಜಂ।
ನೀರ್ಮಾನಸಸನಬಿ ಶಯನನದುಕಾರಣದಿಂ॥
ಧರ್ಮಜ ಕೇಳ್ ಭೀಷ್ಮರ ಸಹ।
ಧರ್ಮದ ಕೆಳ ಕೊಂಡು ಕೊನೆದುದೀ ಕೇಶವನಂ ॥೪೩೧॥

ಮೂರ್ಧಾಭಿಷಿಕ್ತರಿರೆ ಗೋ।
ವರ್ಧನನಂ ಪೂಜಿಸೆಂದನಱಿಯದೆ ಭೀಷ್ಮಂ॥
ವಾರ್ಧಕದಿಂ ಮತಿವಿಕಳಂ।
ಸ್ವರ್ಧುನಿಯೊಳ್ ಪುಟ್ಟಿದುದಱಿ ನತಿಜಡನಲ್ತೇ ॥೪೩೨॥

ಜ್ಞಾನಿಗಳೊಳ್ ಯೋಗಿಗಳ।
ಜ್ಞಾನಿಗಳೊಳ್ ಗೋಪರಧಿಕರದುಕಾರಣದಿಂ॥
ದೀನಂದಗೋಪಪುತ್ರಂ।
ತಾನೇನೊ ಪವಿತ್ರ ನಗ್ರಪೂಜಾಪಾತ್ರಂ ॥೪೩೩॥

ದೇವರ್ ನರದೇವರ್ ಭೂ।
ದೇವರುಮೇಂ ಪೂರ್ವದೇವನಾಂ ನೆಗಳ್ದನ್ನಿಂ॥
ದೇವಾದಿಗಳೞದರನ।
ಲ್ಕಾವಂ ಮಿಗಿಲಗ್ರಪೂಜೆಗಾನೆ ಸಮರ್ಥಂ ॥೪೩೪॥

ಬಲವಿಂದೀವೊಡೆ ಗೋವಂ।
ಗಲಗೆ ಕೊಬಿಲ್ ಕೋಡ ಕಾಳ ಕೋಲುಡೆದೋಲ್ ಕಂ॥
ಬಳ ಕಲ್ಲಿ ಚೆಲ್ಲಿ ಪೀಲಿಯ।
ತಲೆಸುತ್ತಲ್ಲದೆ ಮಹಾಗ್ರಪೂಜೆ ವಿರುದ್ಧಂ ॥೪೩೫॥

ಅಬುಧನ ಕುಲೀನನೆನ್ನದೆ।
ಕುಬುದ್ಧಿ ನೀಂ ಯಮಜ ಗೋಪನಂ ಪೂಜಿಸಲಾ॥
ವಿಬುಧಪಿತೃಸಮಿತಿ ತಣಿದಪು।
ದೆ ಬೂದಿಯೊಳ್ ಬೇಳ್ದ ಹವಿವೊಲಕ್ಕುಂ ಯಜ್ಞಂ ॥೪೩೬॥

ವ|| ಎಂದು ದಮಘೋಷಪುತ್ರಂ ವಸುದೇವಪುತ್ರನಂ ನಿರಾಕರಿಸಿ ನುಡಿಯಲಾ ಮಾತಿಂಗಜಾತಶತ್ರುವೆನಿಸಿದ ಧರ್ಮಪುತ್ರಂ ಕನಲ್ದು ಮೇರುಮಹಾದ್ರಿಯಿರ್ದೆಡೆ ಯೊಳದ್ರಿಕುಲಂ ಮೃಗರಾಜನಿರ್ದ ಕಾಂತಾರಕದಂಬದೊಳ್ ಮೃಗಗಣಂ ಸುರವಾ ರಣವಿರ್ದ ತಾಣದೊಳ್ ವಾರಣರಾಜಿ ಕಲ್ಪತರುವಿರ್ದ ವನಾಂತರದೊಳ್ ತರು ವ್ರಜಂ ಶ್ರೀರಮಣೀಶನಿರ್ದ ಸಭೆಯೊಳ್ ಧರಣೀಶರದೊಂದು ಲೆಕ್ಕಮೇ.

ಕಂ|| ಆವನ ಪದಮಂ ಧ್ಯಾನಿಸಿ |
ದೇವದ್ವಿಜರಾಜ ಮುನಿಗಳಭಿಮತರಾದರ್ ||
ಭಾವಿಸೆ ನೀಂ ದೈತೇಯಂ |
ಶ್ರೀವರ ನಿಂದ್ರಾದಿಮುನಿಗಳಿಂ ವಿಶ್ರುತನೈ ||೪೩೭||

ದೇವತ್ರಯಾದ್ಯನಪ್ಪಾ |
ದೇವಜ್ಯೇಷ್ಠಂ ಸ್ವನಾಭಿಕಮಳಭವಂ ಮಾ ||
ದೇವಂ ದ್ವಿತೀಯನೆನಿಪೀ |
ದೇವಂ ಶ್ರೀ ವಾಸುದೇವನರ್ಘ್ಯನಮೋಘಂ ||೪೩೮||

ಅಮಲಯದುವಂಶಮಿರೆ ದು |
ಷ್ಟಮನ ಮಹಾವಂಶನೆಂದು ನೀನೇತಱಿನ ||
ಗ್ಗಮೊ ಕಲ್ಪವೃಕ್ಷಮಿರೆ ಕ |
ಳ್ಳಿ ಮಹಾವೃಕ್ಷಂಗಡನಿತಱಿಂದದು ಪಿರಿದೇ ||೪೩೯||

ಬೂದಿಯೆ ವಿಭೂತಿಯಾದಂ |
ತಾದೈ ನೀಂ ಪೂರ್ವದೇವನಾ ನಾಮದ ಪೆಂ ||
ಪಾದಪುದೆ ನಿನಗೆ ವಸ್ತುಗು |
ಣೋದಯಮಿಲ್ಲದೊಡೆ ನಾಮಧಾರಕನಲ್ತೇ ||೪೪೦||

ಹರಿಗಂ ನಿನಗಂ ಹರಿಗಂ |
ಹರಿಣಂಗಂ ಹರಿಗಮುಡುಗ ಮೊರೆಯಿಡಲೆಂತಂ ||
ತಿರೆ ಹಸ್ತಿಮಶಕ ಪರ್ವತ |
ಪರಮಾಣು ಸಮುದ್ರಶೀಕರಾಂತರಮಲ್ತೇ ||೪೪೧||

ವ|| ಎಂದು ಧರ್ಮರಾಜಂ ಚೇದಿರಾಜನಂ ನುಡಿಯೆ,

ಕಂ॥ ಪಂಚಮಹಾಶಬ್ದಂ ದಿ |
ಕ್ಸಂಚಯಮಮಂ ತೀವೆ ಯಮಜನಾಜ್ಞೆಯಿನಿತ್ತಂ ||
ಕಾಂಚನಭಾಜನದಿಂ ನ |
ಕ್ತಂಚರರಿಪು ಗಗ್ರಪೂಜೆಯಂ ಸಹದೇವಂ ||೪೪೨||

ವ॥ ಅದಂ ಕಂಡು,

ಉ॥ ದಾರುಣಕೋಪವಹ್ನಿ ವಿಕಟಭ್ರುಕುಟೀಕೃತಧೂಮಲೇಖೆ ದಂ |
ಷ್ಟ್ರಾರುಚಿ ವಿಸ್ಫುಲಿಂಗನಿವಹಂ ರಸನಾಶಿಖಿ ದಳ್ಳಿಸಲ್ ಜಗ |
ನ್ಮಾರಣಹೋಮಕುಂಡಮೆನೆ ತುಂಡಗುಹಾಂತರಮರ್ಬಿಸಲ್ಕೆ ದು |
ರ್ವಾರಕಠೋರವಾಕ್ಚಟುಲಚಟತ್ಕೃತ ಮುತ್ಕಟಮಾಯ್ತು ಚೈದ್ಯನಾ ||೪೪೩||

ನಿಂದಿಸಿ ಧರ್ಮಜಪ್ರಮುಖರಂ ಮುಖರಂ ಮುಖರಂಧ್ರಘೋಷನಿಂ |
ತೆಂದನದಿರ್ಪುದೆಂ ಪ್ರಬಳನಂ ಬಳನಂ ಬಳನಂ ಬಳಾರಿಗೆ |
ಬ್ದಂದದಿನಾಕೃತಾಂತ ಶರಣಂ ಶರಣಂ ಶರಣಂ ಮುರಾರಿಗಂ |
ನಿಂದರಿವೆಂ ವಿರೋಧಿಗಳುಮಂ ಗಳಮಂಗಳಮಂ ನೆಗಚ್ಚುವೆಂ ||೪೪೪||

ಕಂ॥ ಭುವನಾಪಹಾಸ್ಯಮೆನಲ |
ರ್ಣವದೊಳ್ ನೀಂ ಮತ್ಸ್ಯನಾಗಲಾನಂದು ಸಮು ||
ದ್ಭವಿಸಿದೆನಪ್ಪೊಡದಂ ಗಾ |
ಣವಿಕ್ಕಿ ಪಿಡಿದೆನ್ನ ಬಾಣಸಕ್ಕೊಪ್ಪಿಸನೇ ||೪೪೫||

ನೀನಾದಿಕೂರ್ಮನಾದಂ |
ದಾನಱಿದೊಡೆ ಪಿಡಿದು ತಂದದಂ ಮತ್ಕ್ರೀಡೋ ||
ದ್ಯಾನಸರೋವರಸಲಿಲ |
ಸ್ಥಾನದೊಳಿರಿಸುವ ವಿನೋದದೊಳ್ ತೊಡರ್ದಿರೆನೇ ||೪೪೬||

ನೀಂ ಪೆಸರ ಪಂದಿಯಾದಂ |
ದಾಂ ಪುಟ್ಟಿದೆನಪ್ಪೊಡಂದೆ ಬೇಂಟೆಯ ನೆವದಿಂ ||
ದಂ ಪಿಡಿದು ತಂದು ಪಂದಿಗ |
ಲಂಪಿಂ ಸಂಬರಮನಱಿಯಿಸದೆ ಮಾಣ್ಬೆನೇ ||೪೪೭||

ನಗೆಗೆಡೆಯಾಗಿರೆ ಸಿಂಗದ |
ಮೊಗಮಂ ಧರಿಯಿಸಿ ನಿಶಾಟನಂ ನೀಂ ಕೊಂದೈ ||

ಪಗರಣಿಗರಲ್ಲ ದುಱಿದರ್ ।
ಮೊಗಮಂ ಪೆಱತೊಂದನೆಂತುಮೇಂ ಧರಿಯಿಪರೇ ॥೪೪೮॥

ಭೂಚಕ್ರದಾನವಂ ವೈ ।
ರೋಚನನೊಳ್ ಬೇಡುವೆಂದು ನಿನ್ನೊಳ್ ತನುಸಂ ॥
ಕೋಚಂ ಸಮನಿಸಿತುಚಿತಂ ।
ಯಾಚನೆಯೊಳ್ ನೆಗೞ್ದರ್ಗೆ ತನುಸಂಕೋಚಂ ॥೪೪೯॥

ದ್ವಿಜನೇಗೆಯ್ದುಮವಧ್ಯಂ ।
ತ್ರಿಜಗದೊಳಗೆ ನೆಗೞ್ದ ಜಾಮದಗ್ನ್ಯಕೃತಿಯಿಂ ॥
ವಿಜಿಗೀಷು ನೃಪರನಿಕ್ಕಿದೆ ।
ಭುಜಬಲಮೋ ಜಾತಿ ಬಲಮುದಂ ಮೆಚ್ಚುವರೇ ॥೪೫೦॥

ಪಾಂಬನೆಳೆದುಯ್ವೆ ನಿನ್ನ ಕು ।
ಟುಂಬಿನಿಯಂ ಕಾದೆಯಿಲ್ಲ ರಾಮೋಕ್ತಿಯಿಂ ॥
ನೀಂ ಬಟಿಕೆ ವಾಯುಪುತ್ರಕ ।
ನಿಂ ಬಱಿಯಲ್ಕಯ್ದಿ ಪಗೆಯನಿಕ್ಕುವುದರಿದೇ ॥೪೫೧॥

೮೫|| ಕೋಗಿಲೆ ಕಾಗೆಯಿಂ ಪೊರೆದ ಕಾರಣದಿಂ ಪರಪುಟ್ಟನಾದವೋ।
ಲಾಗದ ಜಾತಿಗೋವಳಿತಿ ರಕ್ಷಿಸೆ ನೀಂ ಪರಪುಟ್ಟನಾದೆ ನೋ।
ಡೀಗಳಿದರ್ಕೆ ನಿನ್ನ ತನುಕಾಷ್ಣ್ಯವೆ ಸೂಚಕವಲ್ಲದೇ ಮಹಾ।
ಯಾಗದೊಳ ಗ್ರಪೂಜೆಗೆ ವಿಜಾತಿಕರಾಗ್ರಮನೇಕೆ ನೀಡುವೈ ॥೪೫೨॥

ಸಾಸಿಗನೈ ಹರಿ ನೀಂ ಪೆ ।
ಣ್ಗೂಸಂ ವಧಿಯಿಸಿದೆ ಪಶುವನರಿದೈ ಮತ್ತಾ ॥
ದೋಸಕ್ಕೆ ಪೇಸದೀಗ ಮ ।
ಹಾಸಭೆಯೊಳ್ ಗಗ್ರಪೂಜೆಗಗ್ರಣಿಯಾದೈ ॥೪೫೩॥

ಅದಟಲೆದದೊಂದು ಬಂಡಿಯ ।
ನೊದೆದೈ ಬೇರ್ಕೊಳತ ಮತ್ತಿಯಾ ನೀಂ ಕಿತ್ತೈ ॥
ಕುದುರೆಯನೋವದೆ ಸೀಳ್ದೈ ।
ಮುದುಗತ್ತೆಯನಿಟ್ಟು ಕೆಡಪಿದೈ ಬಲ್ಲಿದನೈ ॥೪೫೪॥

ಪಾವಂ ಪಿಡಿದನಿತಱೊಳೇಂ ।
ಪಾವಡಿಗರ್ ಸುಭಟರಪ್ಪರೇ ಜಗುನೆಯ ನೀ ॥
ರ್ವಾವಂ ಪಿಡಿದನಿತಱೊಳು ।
ಗೋವಳೆಯಂ ಸುಭಟನೆಂಗುಮೋ ಹರಿ ನಿನ್ನಂ ॥೪೫೫॥

ವ॥ ಎಂದು ವಜ್ರನಿರ್ಘೋಷಘೋಷಣಂ ಚೇದಿನಾಥಂ ಜಗನ್ನಾಥನಂ ನಿರ್ಘಾಟಿಸಿ ನುಡಿದ ಸಮಯದೊಳ್.

ಮ॥ ಸಮರಸ್ಥಾನ ವಿದಲ್ತು ಪಲ್ಲಣಿಸುವೀ ವಾಜಿವ್ರಜಂ ಪಣ್ಣುವೀ ।
ಸಮದೇಭಾವಳಿ ಪೂಣ್ಕುವೀ ರಥಸಮೂಹಂ ಕೈದುಗೊಳ್ವೀ ಪದಾ ।
ತಮಿದೇಂ ಯಾದವಚೈದ್ಯಸೈನ್ಯಯುಗದೊಳ್ ಬೇಡೆಂದು ಭೀಷ್ಮಾರ್ಜುನ ।
ಪ್ರಮುಖರ್ ಮಾಣಿಸೆ ಸೈನ್ಯಮಿರ್ದುದುಭಯಂ ನಿರ್ವಾತವಾರಾಶಿವೋಲ್ ॥

ಕಂ॥ ದಶನಾಂಶುಜಾಲತತಿಯಿಂ ।
ಶಿಶುಪಾಲನ ಜೀವಪವನನಂ ತೆಗೆವಂತ ॥
ಬಿಶಯಂ ಸಕೋಪಹಸಿತಾ ।
ಸ್ಯಶರಚ್ಛದನಾಗಿ ದಾನವಂಗಿಂತೆಂದಂ ॥೪೫೬॥

ಎನಗೆ ನಿಜಜನನಿ ಕೆಯ್ಮುಗಿ ।
ದುನೂಱುಸೂೞ್ವರ ಮುಪೇಂದ್ರ ಶಿಶುಪಾಲನ ಪೊ ॥
ಲ್ಲನುಡಿಗೆ ಸೈರಿಪುದೆನಲಂ ।
ದಿನ ಮಾತಂ ಸಲಿಸಲಿನ್ನೆಗಂ ಸೈರಿಸಿದೆಂ ॥೪೫೭॥

ತೀವಿದುದು ಶಪನಶತಮಿಂ ।
ತೀವಿದು ದದಱೊಡನೆ ಚೈದ್ಯ ನಿನ್ನಾಯುಷ್ಯಂ ॥
ತೀವುಗುಮೀಗಳ್ ನಿನ್ನ ವೆ ।
ಧೂವರ್ಗದ ರೋದನಸ್ವನಂ ದಿಕ್ತಟದೊಳ್ ॥೪೫೮॥

ಮ॥ಸ್ರ॥ ಮೊದಲೊಳ್ ನಮ್ಮಿರ್ವರುಂ ಕಾದುವೊಡೆ ತಡೆವದೇ ಕನ್ನೆಗಂ ದ್ವಂದ್ವಸಂಗ್ರಾ ।
ಮದ ಕಾಲಕ್ಷೇಪಮುಂ ದುಸ್ಸಹಮೆನಗೆ ಜಯೋತ್ಕಂಠೆ ಕೈಮೀಱಿದತ್ತೆ ।
ನ್ನೆದಿರೊಳ್ ಱೋಡಾಡಿದೀ ನಾಲ್ಗೆಯುಮುಡುಗದ ಮುನ್ನಂ ಭವನ್ಮಸ್ತಕಚ್ಛೇ ।
ದದಗುರ್ವಂ ತೋರ್ಪೆನೆಂದರ್ಘ್ಯದ ತಳಿಗೆಗೆ ಕೈನೀಡಿದಂ ಕಂಜನಾಭಂ ॥

ಖರರೋಚಿರ್ಮಂಡಲಂ ಬೇಱಿದೆ ಗಗನತಳಂ ಭಾಸ್ಕರಾಭಾಸಮೆಂಬಂ ।
ತಿರೆ ಕೂರ್ಪಂ ತೋರ್ಪ ಚಕ್ರಂ ದ್ಯುತಿಕಬಳಿತದಿಕ್ಚಕ್ರಮುನ್ಮೀಲಿತೋಗ್ರಾ ।

ಸುರಚಕ್ರಂ ದೇವಕೀನಂದನನ ಕರಸರೋಜಾತದೊಳ್ ರಾಜಸೂಯಾ |
ಧ್ವರಪೂಜಾಭಾಜನವ್ಯಾಜದೆ ನೆಲಸಿದುದಂತರ್ನಿಗೂಢಪ್ರಭಾವಂ ||೪೬೧||

ಕಂ|| ನೀಂ ಬಯಸಿದಗ್ರಪೂಜೆಯು |
ಪೊಂಬರಿಯುಣಮಿದೆ ನಿಶಾಟ ಕೊಳ್ಳೆಂದು ಸರೋ ||
ಜಾಂಬಕನಿಡೆ ಶಿಶುಪಾಲಶಿ |
ರಂ ಬೆರಸಂಬರತಳಕ್ಕೆ ನೆಗೆದುದಮುತ್ರಂ ||೪೬೨||

ಮಕುಟಮಣಿ ಸೊಡರ್ಗಳನೆ ಮ |
ಸ್ತಕಸಹಿತಂ ನೆಗೆದು ತಿರುಗುವಾ ಪರಿಯುಣಮೇಂ ||
ಪ್ರಕಟಿಸಿದುದೊ ಕೃಷ್ಣನ ವಿಜ |
ಯಕಾಂತೆಗಾಕಾಶಲಕ್ಷ್ಮಿ ನಿವಳಿಪ ತೆಱದಿಂ ||೪೬೩||

ಮ|| ಶಿರವಾಕಾಶತಳಕ್ಕೆ ಪಾಱೆ ಗಳರಂಧ್ರೋದ್ದೇಶದಿಂ ಪಾಯ್ವ ನಿ |
ರ್ಝರರಕ್ತೋನ್ಮುಖಧಾರ ವಾರಿಜಭವಾಂಡಕ್ಕೆಯ್ದಲಾ ಬ್ರಹ್ಮವಿ |
ಷ್ಟರಪದ್ಮಾರುಣನಾಳದಂಡ ಮೆಸಿಸಿತ್ತಿತ್ತಟ್ಟೆ ಘೋಳಿಟ್ಟು ಉ |
ರ್ವರೆಯೊಳ್ ತೊಟ್ಟನೆ ಬಿಟ್ಟು ಬೀಳ್ವ ತೆಱದಿಂ ಬಿಟ್ಟತ್ತು ಚೇದೀಶನಾ ||೪೬೪||

ಚಂ|| ಧರೆಗಮರಾಧ್ವದಿಂ ಕೆಡೆವ ಚೈದ್ಯನ ಮೂರ್ಧದ ರತ್ನಭಾಃಪರಂ |
ಪರೆ ಕುಡುಮಿಂಚಿನಂತೆಸೆಯೆ ನಾರದನೃತ್ಯಮೆ ಕೇಕಿನೃತ್ಯಮುಂ |
ಸುರಜಯದುಂದುಭಿಧ್ವನಿ ಘನಧ್ವನಿಯುಂ ಗೆಲೆ ಪುಷ್ಪವೃಷ್ಟಿಯುಂ |
ಸುರಿದುದು ಧರ್ಮಜಂ ಪುಳಕದಿಂ ಕಡವುಳ್ಳಲರ್ದಂತಿರಿರ್ಪಿನಂ ||೪೬೫||

## 22. ಹೇಮಂತಋತು ವರ್ಣನೆ.

(ಇದು ದೇವಕವಿರಚಿತವಾದ ಕುಸುಮಾವಳಿಯಿಂದ ಉದ್ಧೃತವಾಗಿದೆ. 41ನೆಯ ಪುಟವನ್ನು ನೋಡು.)

ಚಂ|| ವಿದಳಿತಮಾಳತೀಕುಸುಮರೇಣುವ ಧೂಳಿಯನೆತ್ತಿ ಸೂಸುತುಂ |
ಪುದಿದವನೀಜರಾಜಿಯ ದಳಂಗಳನುರ್ಚಿ ಕೊಳುತ್ತು ಮಾನದೀ |
ನದನಿಕರಾಮಳೋದಕದೊಳಟ್ಟಿ ಕೊಳುತ್ತಮೆ ಬಂದ ಮನ್ಮಥೇ |
ಭದ ತೆಱದಿಂ ಹಿಮೋದಿತಮಹಾರುತನೆಯ್ದಿದುಪೊಂದು ಮಾರುತಂ ||

ಉ|| ಮಾಲತಿಯುಲ್ಲದೇವುದಿತಪ್ರಸವಾವಳಿ ಯೆಂಬವೊಲ್ ಸಮು |
ನ್ಮೀಲಿಸುತುಂ ಲತಾಕುಳದ ಪೂಗಳನುಷ್ಣಹಿಮೋಗ್ರ ಖಡ್ಗಮಂ |
ಚಾಲಿಸುತುಂ ಪರಾಧಿಪದಿಶಾನಳವಾಹಮನೇಱಿ ಬಂದುದಾ |
ಭೀಲತೆವೆತ್ತು ಮಾಗೆ ತುಹಿನಾಳಿಕಳೇವರವಾಗಿ ಬೇಗದಿಂ ||೪೬೭||

ಚಂ|| ಅನುಪಮಸಾಳಿಕೇರಫಲ ಸಂಕುಲವೊಳ್ಳಳಸೀರನಾಂತು ದಿಂ |
ಪಿನ ರಸದುರ್ಬನಾಳ್ದು ನಯಮೇಱಿದು ಇಕ್ಷುನಿಕಾಯಮುಯ್ದಭೋಂ |
ಕೆನೆ ನವಸಿಂಧುವಾರತರುಕುಟ್ಮಳಕೋಟಿಯುನಪ್ಪುಕೆಯ್ದುದೊ |
ಯ್ಯನೆ ಬದರದ್ರುಮಕ್ಕೆ ಫಲಮುಣ್ಮಿದು ದುಣ್ಮಿ ಪೊದಟ್ಟಿ ಮಾಗಿಯೊಳ್ ||

ಕಂ|| ಪೆಸರ್ವೆತ್ತ ಧಾತ್ರಿ ಮಿಗೆ ಸೀ |
ರಸಮಾದುದು ನೋಡೆ ನಾಡೆ ಧಾತ್ರೀಫಳಮಂ ||
ರಸಪೂರಮಾಪುದೆನೆ ಮಾ |
ಗೆ ಸಮಂತೇಂ ಹರಣಭರಣಕಾರ್ಯಕ್ಷಮನೋ ||೪೬೯||

ಉ|| ಕುಂದದೆ ಪೆರ್ಚಿದೊಂದ ತೆಱದಿಂ ಶಶಿಬಿಂಬ ಮಿದಾವಗಂ ಸುವೃ |
ತ್ತಂ ದೊರೆವೆತ್ತು ತೋರ್ಪು ದವಿನಾರವಿಬಿಂಬ ಮಿದೆಂಬ ಭಾವಮಾ |
ದಂ ದಿಟಮಾದುದಲ್ಲದೆ ಹಿಮಾಹಿಮಭೇದಮಿಪಟ್ಟಿ ಪೋಯ್ತು ತಾ |
ನೆಂದೊಡೆ ಬಂದ ಮಾಗೆಯ ಪೊದಟ್ಟಿ ತುಷಾರಮದೇನಪಾರಮೋ ||೪೭೦||

ಕಂ|| ಇದು ಬಿಸಿಲಿದು ಪೊಸ ಚಂದ್ರಿಕೆ |
ಯಿದು ದೀಪಿಕೆ ಯಿದು ನವೀನಮಣಿದೀಪಿಕೆಯೆಂ ||
ಬುದು ತೋಱದು ತಾನೆನೆ ಪೇ |
ಪೊದವಿದ ಮಾಗೆಯ ಹಿಮೌಘಮೇನದ್ಭುತಮೋ ||೪೭೧||

ಚಂ॥ ಮುಕುಳಿತವೃತ್ತಿಯಾಯ್ತು ಸತತಂ ಶತಪತ್ರಸಮಾಜಮಾವಗಂ ।
ವಿಕಸಿತರೂಪಮಾಯ್ತು ಕುಮುದಾವಳಿ ಕೋಕಕುಳಂ ವಿಯೋಗಮಂ ।
ವಕಪರಿಯುಕ್ತಮಾಯ್ತು ನಿಶಮಯ್ದೆ ಚಕೋರಚಯಂ ನಿರಂತರಂ ।
ಧಿಕಮುದಮಾಯ್ತು ನಲ್ಕೆ ತುಹಿನೋತ್ಕಟಮೆಂತುಟೊ ಮಾಗೆಯೇೞ್ಗೆಯೊಳ್ ॥

ಕಂ॥ ಕಱಿವ ಹಿಮವರ್ಷಪಾತದಿ ।
ನೆಱಂಕೆ ನಾಂದಟ್ದಿದಳಿಯುದೆತ್ತಂ ಪಾರಲ್ ॥
ನೆಱಿಯುದೆ ಪಾಡೞಿದಂಬುಜ ।
ದಱಿಂಬಿನೊಳ್ ಮಿಡುಕದಲ್ಲಿ ಮಾಗಯೊಳೆಲ್ಲಂ ॥೪೭೩॥

ಚಂ॥ ಜಲಧಿಪನೌರ್ವವಹ್ನಿಯುನ್ನೆ ಸಾರ್ದನಿನಂ ಸಲ ದಕ್ಷಿಣಾಯನ ।
ಸ್ಥಲದೊಳ ಪೊರ್ದಿದಂ ಶಿಖಿಯುನಾಗಳಹಾರಫಣೀಶನಿಶ್ವಸಂ ।
ತುಲನಿಟಲಾಂಬಕಾನಳನ ಸಾಗರಪಯ್ದಿದನೇಂದೂಡಾವನ ।
ಸ್ಖಲಿತಬನಿರ್ಪನಿಂತೊಗೆದ ಮಾಗೆಯ ವಿಶ್ರುತಶೀತಪಾತದೊಳ್ ॥೪೭೪॥

ಕಂ॥ ಬಗೆದಳುರ್ವ ಮಾಗೆಯ ಹಿಮ ।
ಕ್ಕಗಿದಾಗಳ ಶಶಿಯನಮರನದಿಯುಂ ಬಿಟ್ಟು ॥
ನಗಜಾತೆಯ ತನುವಂ ತಾಂ ।
ಬಿಗಿಯಪ್ಪಿರ್ದರ್ಧನಾರಿಯಾದನುಮೇಶಂ ॥೪೭೫॥

ಮ॥ ಪಱಿದಾಗಳ್ ಪನಿಪುಲ್ಲ ಬಿಂದುಗಳ ತಂದಲ್ ರೋಮರೋಮಂಗಳಂ ।
ನೆಱಿ ಸಾರುತ್ತಿರೆ ಜಾನುಮಧ್ಯಗತಮೂರ್ಧಭ್ರಾಂತಮಾಗಿಂತು ಪ ।
ಲ್ಪಱಿಗುಟ್ಟುತ್ತಮೆ ವಾನರಾಳಿ ನಡುಗುತ್ತಿರ್ದತ್ತು ಶಾಖಾಗ್ರದೊಳ್ ।
ನೆಱಿಗೆಯ್ದಂದದೆ ಮುಂಬಗಲ್ಪರ ಮದೆತ್ತಂ ಪೋಗದಾಮಾಗೆಯೊಳ್ ॥೪೭೬॥

ಚಂ॥ ಪುಡಿಯ ಹಿಮಂ ಸಮಿರ್ ಕೆದಱಿ ಮುಯ್ಮ್ಗೆ ಕೋಡಿ ಕಪಿವ್ರಜಂ ನಿಜಾ ।
ಸ್ಪದಶಿಖರೀನಿತಂಬದೊಳ್ ತಗ್ಬಳಗಂ ಕೆದಱುತ್ತು ಮಿರ್ಪ ರ ।
ನ್ನದ ಪಿರಿದಪ್ಪ ಪಾಸರ ದವಾಗ್ನಿಯ ದಳ್ಳುರಿಯೆಂದು ಪತ್ತೆ ಸಾ ।
ರ್ದುದು ತಳವಾಂ ಸಿಮಿಂಚರ್ಕಾತನ ಮಾಗೆಯ ಶೀತಮದೇಂ ಪ್ರಭೂತಮೋ ॥

ಉ॥ ಪಕ್ಕದಿಱಿಂಬಿನೊಳ್ ಮುಱಿಯುಸಿಟ್ಟು ಕುಲಾಯಮನೊತ್ತಗೊಂಡು ಮ ।
ಯ್ಯಿಕ್ಕಿ ಕೊರಲ್ ಕುನುಂಗಿ ನವಿರಗ್ರದೊಳಾಪನಿಪುಲ್ಲ ಬಿಂದುಗಳ್ ।
ತೆಕ್ಕನೆ ತೀವೆ ಮುತ್ತಿನ ವಿಹಂಗಮದಂತೆ ವಿಹಂಗಮಂಡಲಂ ।
ಮೊಕ್ಕಳಮಾಗಿ ಮಾಗೆಯೊಳಗಿರ್ದುದು ಪಾಱಿದೆ ಮುಂಬಗಲ್ವರಂ ॥೪೭೮॥

ಕಂ|| ಹಿಮಮಮರ್ದು ನಡುಗುತುಂ ಮೃಗ |
ಸಮುದಯ ಮುಚ್ಛ್ವಾಸಮಾರುತೋಷ್ಣದ ಲೋಭಂ ||
ನಿಮಿರ್ದಲ್ಲಿ ಮುಂಬಗಲ್ವರ |
ಮಮರ್ದಿರ್ಪುದು ಮೊತ್ತಮಾಗಿ ಮಾಗೆಯೊಳೆಲ್ಲಂ ||೪೭೯||

ಚಂ|| ಸಮುದಿತಶೀತಪಾತಪರಿಕಂಪಕಳೇವರಮಾಗಿ ಕಾನನೇ |
ಭಮದಿರೆ ಕಂಡು ಕಾಯ್ಪೊದವಿ ಪಾಯಲೊಡರ್ಚೆ ನಿಜಾಂಗಸಂಧಿಬಂ |
ಧಮನಿಸಿತಂ ನಿಮಿರ್ಚಲಣಮಾಱದೆ ಗರ್ಜಿಸುತಿರ್ದುದಲ್ಲಿ ಸಂ |
ಕ್ರಮಿಸಿದ ಮಾಗೆಯೊಂದು ತುಹಿನೋತ್ಕಟಸಂಕಟದಿಂ ಮೃಗಾಧಿಪಂ ||

ಸಲೆ ನೆಲೆದೋಱದಾನದಿಯ ತಣ್ಕಡುವಂ ಪೊಱಮಟ್ಟು ಕೋಟುಮು |
ಗ್ಗಲಿಸೆ ಬಿಸಿಲ್ಗೆ ಮೆಯ್ಯನಡೆಯೊಡ್ಡಿ ತದೀಯ ತಟಂಗಳಲ್ಲಿ ಯಾಂ |
ಚಿಲ ಕಡೆಗೊಂಬುಗಳ್ ತುಱುಗಿ ಬಿಟ್ಟಿವೊಲಿರ್ದುವು ಮುಂಬಗಲ್ವರಂ|
ತೊಲಗದನಾಕುಳಂ ಮೊಸಳೆಗಳ್ ನೆರೆದೊತ್ತರಮಾಗಿ ಮಾಗೆಯೊಳ್ ||೪೮೧||

ಕಂ|| ಕಡುದಣ್ಣನಾಯ್ತು ದವಶಿಖಿ |
ಕಡಲೊಳ್ ಪೊಡಕರಿಸಿದೌರ್ವಶಿಖಿ ಮೆಟ್ಗದುದಾ ||
ಮೃಡನ ನಿಟಿಲಾಕ್ಷಶಿಖಿ ಮೆ |
ಯ್ಯಡಗಿದುದೇನೆಂಬೆನಮಮ ಮಾಗೆಯ ಹಿಮಮಂ ||೪೮೨||

ಚಂ|| ನಸುಬಿಸಿಯುಪ್ಪ ನಲ್ಲುಣಿಸಿನಿಂ ಘುಸೃಣಾರ್ದ್ರವಿಲೇಪದಿಂ ವಿರಾ |
ಜಿಸುವ ಕದಂಬದಂಬುಲದಿ ನಂಚಿತಕಾಂಚನಭೂಷಣಂಗಳಿಂ|
ದಸಕದ ಶೋಣವರ್ಣವಸನಾವೃತದಿಂ ಜನಮಾಗಳಿಂತು ಜೀ|
ವಿಸಿತಿನಿತಲ್ಲದಂದುಳಿವುದೇ ಹಿಮಾದಾಗರಮಾದ ಮಾಗಿಯೊಳ್ ||೪೮೩||

## 23. ವಾಮನಾವತಾರದ ಕಥೆ.

ಈ ಕಥೆ 22ನೆಯ ತೀರ್ಥಂಕರನಾದ ನೇಮಿನಾಥನ ಚರಿತದಲ್ಲಿರುವುದು. ಈ ಗ್ರಂಥಕ್ಕೆ ಅರ್ಧನೇಮಿಪುರಾಣವೆಂಬ ಹೆಸರು ರೂಢವಾಗಿದೆ. ಇದನ್ನು ಬರೆದ ಕವಿ ನೇಮಿಚಂದ್ರನು. ಈತನು ಜೈನನು. ಕ್ರಿ. ಶ. 1172 ರಿಂದ 1219ರ ವರೆಗೆ ಆಳಿದ ವೀರಬಲ್ಲಾಳರಾಜನ ಮಂತ್ರಿಯಾಗಿದ್ದ ಸಜ್ಜೆವಳ್ಳ ಪದ್ಮನಾಭನಿಂದ ಆಜ್ಞಪ್ತನಾಗಿ ತಾನು ಈ ಗ್ರಂಥವನ್ನು ರಚಿಸಿದಂತೆ ಕವಿಯು ಹೇಳಿಕೊಂಡಿರುತ್ತಾನೆ. ಈತನು ಗ್ರಂಥದ ಮೊದಲಲ್ಲಿ "ವಸುದೇವಾಚ್ಯುತ ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ" ಎಂದು ಪ್ರತಿಜ್ಞೆಮಾಡಿ, ಬಳಿಕ ಕಂಸವಧೆಯವರೆಗೆ ಹೇಳಿ ನಿಲ್ಲಿಸಿಬಿಟ್ಟಿರುವನು. ಇದರಿಂದ ಈತನು ಅಷ್ಟರಲ್ಲಿಯೇ ಮೃತನಾಗಿರಬಹುದೆಂದೂ, ಈ ಕಾರಣದಿಂದಲೇ ಈತನ ಗ್ರಂಥಕ್ಕೆ ಅರ್ಧನೇಮಿಪುರಾಣವೆಂಬ ಹೆಸರು ಬಂದಿರಬಹುದೆಂದೂ ಊಹಿಸಬೇಕಾಗಿದೆ. ಇದಲ್ಲದೆ ಈತನು ಲೀಲಾವತಿಯೆಂಬ ಒಂದು ಶೃಂಗಾರಕಾವ್ಯವನ್ನೂ ಬರೆದಿರುವನು. ಇವೆರಡೂ ಚಂಪೂಗ್ರಂಥಗಳೇ. ಈತನ ಬಂಧವು ಗಂಭೀರವಾಗಿಯೂ ಶೃಂಗಾರರಸಭರಿತವಾಗಿಯೂ ಹೃದಯಂಗಮವಾಗಿಯೂ ಇದೆ. ಈತನ ಪ್ರತಿಭೆಯೂ ಶಬ್ದಜಾಲವೂ ಕವಿತಾಧೋರಣೆಯೂ ಅನ್ಯಾದೃಶವಾಗಿವೆ. ಈತನಿಗೆ ಆಂಗಿಕನೇಮಿಯೆಂಬ ಹೆಸರೂ, ಕವಿರಾಜಕುಂಜರ ಸಾಹಿತ್ಯವಿದ್ಯಾಧರ ಸುಕವಿಕಂಠಾಭರಣ ವಿಶ್ವವಿದ್ಯಾವಿನೋದ ಚತುರ್ಭಾಷಾಕವಿಚಕ್ರವರ್ತಿ ಮೊದಲಾದ ಬಿರುದುಗಳಿದ್ದಂತೆ ತಿಳಿಯಬರುತ್ತದೆ.

ಚಂ|| ಬಗೆಯ ಕವಿಲ್ತುಕಾಸೆ ಪೊಸಜನ್ನಿವರಂ ಶಿಖೆ ಕೋವಣಂ ಕರಂ|
ಡಗೆ ಕಿಸುವೊನ್ನ ಬಟ್ಟಗೊಡೆ ಬಾರಸನಾಮದ ಬೊಟ್ಟು ಬೊಟ್ಟನೊಳ್|
ನೆಗೆದ ಕುಶಾಂಕುರಂ ಮಿಸುಪ ಮೌಂಜಿ ಪಲಾಶದ ದಂಡು ಕುಂಡಲಂ|
ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ ಕಾಮುದಂ ||೬೪||

ವ|| ಆ ಮಾಣಿಕದಂತಪ್ಪ ಮಾಣಿ ಮಂತ್ರಿಯ ಮುಂದೆ ನಿಂದು ಮಂತ್ರಮುಂ ಪೇಳ್ದಕ್ಷತೆಯುಂ ಕೊಟ್ಟು.

ಶ್ಲೋ|| ಬಲಿಸ್ವಿಷ್ಣುರಯಂ ಕುರ್ಯಾದವಿಲಂಬಂ ಧನಂ ತವ|
ಸಮಾಕ್ಲಿಷ್ಯತಿ ಯತ್ಪಾದಂ ಪದ್ಮಾಭಾತ್ಯ್ಯತಪಸ್ತ್ರ್ಯಷಾ ||

ವ|| ಎಂದುಪಶ್ಲೋಕಿಸಿದ ವಟುವಿನ ವಾಕ್ಪಟುತ್ವಕ್ಕಂ ಬ್ರಹ್ಮವರ್ಚಸಕ್ಕಂ ಬೆಕ್ಕಸಂಬಟ್ಟು ಬಲಿ ಬಲಗೊಂಡು ಪೊಡೆವಟ್ಟು ಬೇಡಿಮೆನೆ ವಾಮನನೆಮಗೆ ಕುಳ್ಳಿರ್ದನುಷ್ಠಾನಮಂ ಮಾಡಲ್ತಕ್ಕನಿತ ನೆಮ್ಮ ಕುಳ್ತಡಿಯೊಳ್ ಮೂಱಡಿ ನೆಲನನೀವುದೆನೆ ಬಲಿ ಬೆಚ್ಚನೆ ಸುಯ್ದು ಎನಗದೃಷ್ಟವೆಯ್ದುದಿರ್ಕುಂ ಕಿಱಿದಂ ಬೇಡಿದಿರ್ ಕೊಟ್ಟೆನಳೆದುಕೊಳ್ಳಿಮೆನೆ,

ಚಂ|| ವಟು ಮರದುದ್ದವಾದ ನನಿತಲ್ಲದಲೀ ತಲೆಯುದ್ದವಾದನ|
ಕ್ಕಟ ಮದಿಲುದ್ದವಾದ ನಿವನಾವನೊ ಪೆರ್ಮರದುದ್ದವಾದ ನಿಂ|
ತುಟು ಗಿರಿಯುದ್ದವಾದ ನಿದು ವಿಸ್ಮಯಮಾ ಮುಗಿಲುದ್ದವಾದನೋ|
ವಟಮಟಗಂ ದಿಟಕ್ಕನೆ ಕರಂ ಬಳೆದಂ ಮನದಂತೆ ವಾಮನಂ ||೪೮೫||

ವ|| ಅಂತುಮಲ್ಲದೆ.

ಮ|| ಮರನಂ ಮುಟ್ಟಿದನಿಲ್ಲ ಮೇಘಘಟೆಯೊಳ್ ಕಾಲ್ಗೋದ ನಿಲ್ಲಿಲ್ಲ ಭೂ|
ಧರಮಂ ದಾಂಟಿದನಿಲ್ಲ ಬಾಂದೊಱೆಯೊಳಿಟ್ಟಂ ಕಾಲ ನಿಲ್ಲಿಲ್ಲ ಭಾ|
ಸ್ಕರನಂ ಮಾಯದ ಮಾಣಿ ಸೆಂಡೊದೆದ ನಿಲ್ಲಿಲ್ಲೆಂಬಿನಂ ನೀಡಿದಂ|
ತರದಿಂ ಪಾದಮನುರ್ವಿ ಕೊರ್ವಿ ಬಲಿಯುಂ ಗೆಲ್ವಾಮನಂ ವಾಮನಂ||೪೮೬||

ಚಂ|| ಅದೆ ಹೊಸಹೊನ್ನ ಸತ್ತಿಗೆಯುದಲ್ಲದು ರತ್ನಹಟತ್ಕಿರೀಟವ|
ಲ್ಲದು ವರವಜ್ರಕುಂಡಲವದಲ್ಲದು ಕೌಸ್ತುಭರತ್ನ ಮಂತದ|
ಲ್ಲದು ಕರಚಕ್ರವಲ್ಲದದು ನಾಭಿಸರೋಜಮೆನಲ್ ದಿನೇಶಬಿಂ|
ಬದ ನೆಲೆ ತಗ್ಗಿತಪ್ಪಿರ್ನವನುಕ್ರಮದಿಂ ಬಳೆದಂ ತ್ರಿವಿಕ್ರಮಂ ||೪೮೭||

ಮ|| ಇದು ಲೀಲೋದ್ಧೃತಭೂಕರೇಣುಕರ ಮಲ್ತಭ್ರೋತ್ಪಟೀಕೇತುವ|
ಲ್ಲಿದು ಸೂರ್ಯಾಂಬುಜನಾಳಮಲ್ತು ಶಶಿಲೋಕಾದೀಪಿಕಾಸ್ತಂಭಮ|
ಲ್ಲಿದು ತಾರಾಕುಸುಮಾವಳೀವಿಟಪ ಮಲ್ತಭ್ರಾವನೀಶೇಷಮ|
ಲ್ಲದೆನಲ್ ತಾಂ ಬಳೆಯಿತ್ತನುಕ್ರಮದಿನಾ ಪಾದಂ ಪಯೋಜಾಕ್ಷನಾ ||೪೮೮||

ಮ|| ಸ್ರ|| ತರುವಿಂದತ್ತತ್ತ ನೀಳ್ದಂ ಘನಪಟಳದಿನತ್ತತ್ತ ಮಿಕ್ಕಂ ಹಿಮೋರ್ವೀ|
ಧರದಿಂದತ್ತತ್ತ ಪೋದಂ ರವಿಯ ರಥದಿನತ್ತತ್ತ ಮೆಯ್ವೆರ್ಚಿದಂ ಸು|
ಟ್ಟುರಯಿಂದತ್ತತ್ತ ಮತ್ತಂ ಸಿಮಿರದಿರಸಿದೇನೆಂದು ಜಾತಾದ್ಭುತಂ ನೋ|
ಟ್ಪಿರ ಕಣ್ಣಂ ಚೇತಮುಂ ಕಾಲ್ಗಿಡೆ ಕಡುಜವದಿಂ ವಿಷ್ಣು ವರ್ಧಿಷ್ಣುವಾದಂ||

ಮ|| ಬಲಗೊಂಡತ್ತಮರಾದ್ರಿಗೆತ್ತಡೆಯೊಳಾ ಜ್ಯೋತಿರ್ಗಣಂ ಬಂದಿರುಳ್|
ತಲೆದೋಱಿತ್ತೆಳಮಿಂಗಳೊಂದು ದೆಸೆಯೊಳ್ ಮೆಯ್ದೋರ್ಪಿನಂ ತಪ್ತಕಂ|
ಪಳಿತಂ ಸಂದಣಿಗೊಂಡುದೊಂದು ದೆಸೆಯೊಳ್ ಸೂರ್ಯಾತಪಂ ವಿಕ್ರಿಯಾ|
ಬಳದಿಂ ತಾಂ ಬಳೆಯಲ್ಕೆ ಭಂಜಿತಮಹಾಮಂತ್ರಿಕ್ರಮಂ ತ್ರಿಕ್ರಮಂ ||೪೯೦||

ರವಿಯುಶ್ವಂ ದೆಸೆವಾಯ್ದು ಪಾಯ್ದುಱವಿನಂ ತೇರಂ ನಯುಂ ಪೆರ್ಚಿ ಬೆ|
ಱರ್ಗವಿನಂ ಚಂದ್ರನ ಬೆಳ್ಮಿಗಂ ಬೆದಱಿದಾತ್ಮಸ್ತ್ರೀಯರಂ ಪೇಱಿ ಪಾ|
ಱುವಿನಂ ತಾಂ ಪೊಲಗೆಟ್ಟು ಖೇಚರಚಯಂ ದಿಕ್ಪಾಲಕರ್ ಭೋಂಕನಂ|
ಱುವಿನಂ ವಿಷ್ಣುಕುಮಾರನೇಂ ಬಳೆದನೋ ಬ್ರಹ್ಮಾಂಡಮಂ ತಾಪಿನಂ ||೪೯೧||

ಉ॥ ಈ ವಟುವಿಂಗೆ ಮಿಂಚುವೆಳಮಿಂಚಿನ ವಾರಿದಲೇಖೆ ಮೌಂಜಿಯುಂ ।
ಕೋವಣಮಾಯ್ತು ಮುಟ್ಟಿ ರವಿಗರ್ಘ್ಯಮನೀವ ಪೊಡರ್ಪು ಮಾಯ್ದುಮಾ।
ಯಾಮಿಗ....ಂಬಗುಂಡಿಗೆಯಿ ನಾಗಸಗಂಗೆಯ ದಿವ್ಯತೋಯಮುಂ।
ತೀವುವ ಬುದ್ಧಿಯೊಳ್ ಬಗೆದು ಮುಕ್ಕಟ ಮಾಣ್ದನವಾ ಪ್ರಮಾಣಮಂ॥೪೯೨॥

ಕಂ॥ ಇಂತಪ್ಪ ಸಿತಗನೀವಟು।
ಪಿಂತಪ್ಪತಿವರ್ತಿ ಮಾಣಿಯುಂ ಕೋಡಗಮುಂ ॥
ಸಂತಮಿರಲಾರ್ಕುಮೇ ರವಿ।
ಯಂತಪ್ಪನ ಪರಿವ ಭಂಡಿಯೊಳ್ ಕಾಲ್ಗೋದಂ ॥೪೯೩॥

ಅಂಬರತಳಕ್ಕೆ ಬಳೆದು ತೆ।
ಱಂಬೊಳವಚ್ಯುತನ ಚರಣದಂಡಂ ನಕ್ಷ॥
ತ್ರಂ ಬಳಸೆ ದೀಪಮಾಲೆಯ।
ಕಂಬದವೋಲ್ ತೊಳಗಿ ಬೆಳಗುತಿರ್ದತ್ತಾಗಳ್ ॥೪೯೪॥

ಬಲಿಹರನ ಚರಣದಂಡದ।
ತಲೆಯೊಳ್ ನಿಱಿಗೊಂಡೆಳಲ್ವ ಬಾಂದೊಱೆಯೆಲರಿಂ ॥
ದೊಲೆದುದು ವಿಷ್ಣುಕುಮಾರನ।
ಗೆಲವಂ ಕಂಡಮರರೊಸೆದು ಕಟ್ಟಿದ ಗುಡಿವೋಲ್ ॥೪೯೫॥

ವಾಮನಪದಹತಿವಿದಳಿತ।
ಜೀಮೂತವಿಮುಕ್ತಬಹುಳಧಾರೆಗಳಿಂದಂ ॥
ತಾಮುನಿಜನಾಪಕಾರಕ।
ಧೂಮಧ್ವಜಮೆಯ್ದೆ ನಂದಿಪೋದತ್ತಾಗಳ್ ॥೪೯೬॥

## 24. ನಗರ ಪ್ರವೇಶ.

ಇಲ್ಲಿ ಕೊಟ್ಟಿರುವ ಪದ್ಯಗಳು ಕಬ್ಬಿಗರಕಾವವೆಂಬ ಚಂಪೂಗ್ರಂಥದೊಳ ಗಣವು. ಈ ಕಾವ್ಯವನ್ನು ಬರೆದಾತನು ಆಂಡಯ್ಯನೆಂಬ ಜೈನಕವಿಯು. ಈ ತನು ಸುಮಾರು ಕ್ರಿ. ಶ. 13ನೆಯ ಶತಮಾನದಲ್ಲಿ ಜೀವಿಸಿರಬಹುದೆಂದೂ, ಕರ್ಣಾ ಟದೇಶವನ್ನು ತನ್ನ ಕಾವ್ಯದಲ್ಲಿ ವರ್ಣಿಸಿರುವುದರಿಂದ ಈ ದೇಶದವನೆಂದೂ ಹೇಳು ತ್ತಾರೆ ಈ ಗ್ರಂಥವು ಸಂಸ್ಕೃತಪದಗಳ ಬೆರಕೆಯಿಲ್ಲದ ಕನ್ನಡದ ಪದಗಳಿಂದ ಲೇ ರಚಿತವಾಗಿದೆ. ಪೂರ್ವದ ಕವಿಗಳು "ಸಕ್ಕದಂ ಬೆರಸದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇೞಲಾಱರ್" ಎಂದು ಯಾರೋ ಆಕ್ಷೇಪಿಸಿದಂತೆಯೂ, ಅದರಿಂದ ತಾನು "ಅಚ್ಚಗನ್ನಡಂ ಬಿಗಿವ್ರೊಂದಿರೆ ಕಬ್ಬಿಗರಕಾವ ನೊಲವಿಂದೊರೆವೆಂ" ಎಂದು ಹೇಳಿಕೊಂಡಿರುತ್ತಾನೆ. ಈ ಗ್ರಂಥಕ್ಕೆ ಮದನವಿಜಯವೆಂದೂ ಸೊಬಗಿ ನಸುಗ್ಗಿಯೆಂದೂ ಬೇರೆ ಎರಡು ಹೆಸರುಗಳುಂಟು. ಕನ್ನಡ ಕಬ್ಬಿಗರಮೇಲಣ ಅಪವಾದವು ಇದರಿಂದ ಹೋಯಿತಾದುದರಿಂದ "ಕಬ್ಬಿಗರ ಕಾವ" ವೆಂದರೆ "ಕವಿ ಗಳ ರಕ್ಷಕ" ನೆಂದೂ, ಕಥಾನಾಯಕನಾದ ಮನ್ಮಥನ ಜೈತ್ರಯಾತ್ರೆಯನ್ನು ಇದರಲ್ಲಿ ಹೇಳಿರುವುದರಿಂದ "ಮದನ ವಿಜಯ" ವೆಂದೂ, ಕಾವ್ಯಗಳಲ್ಲಿ ಸೊಗ ಸನ್ನು ಪಡೆದು ಹೃದಯಂಗಮವಾಗಿರುವುದಾದುದರಿಂದ "ಸೊಬಗಿನ ಸೋನೆ" ಯೆಂದೂ ಈ ಕಾವ್ಯಕ್ಕೆ ಹೆಸರು ಒಪ್ಪತಕ್ಕುದಾಗಿದೆ.

ಮ॥ ಪಡೆಯೆಲ್ಲಂ ನಡನೋಡಿ ಮೆಚ್ಚೆ ಬಿದಿಯುಂ ನಾಣ್ಗೊಡೆ ಬೆಂಕೊಂಡವಾ।
ಕಡಲೊಳ್ ಪಟ್ಟನ ನಿಕ್ಕಿ ಮೆಟ್ಟಿದದಟಂ ಮುಕ್ಕಣ್ಣನಂ ಗೆಲ್ದನೆ।
ವ್ಮೊಡೆಯಂ ಬಂದಪನೀಗಳಿಂತೆ ನಲವಿಂದಂ ಬಳ್ಳಿಮಾಡಂಗಳೊಳ್।
ಗುಡಿಯಂ ಬೇಗದೆ ಕಟ್ಟಿಮೆಂದು ಪಡೆವಳ್ಳರ್ ಸುತ್ತಲುಂ ಸಾಱಿದರ್ ॥೪೯॥

ಕಂ॥ ಕಳಸಂ ಕನ್ನಡಿ ಗುಡಿ ಪ।
ಜ್ಜಳಿಸುವ ಮೊಗ್ಗೆದಳಿರ ತೋರಣಂ ದೆಸೆದೆಸೆಯಂ॥
ಬಳಸಿರೆ ಬಾಜಿಪ ಪಱೆ ಕ।
ಣ್ಗೊಳಿಸಿರೆ ಪೊಱಮಟ್ಟರೊಸಗೆಯಿಂ ಪೊಸವೆಣ್ಡಿರ್ ॥೫೦॥

ವ॥ ಅಂತು ಪೊಱಮಟ್ಟು ಸಿಂಗರಗಡಲ್ ಕರೆಗಣ್ಮಿದಂತೆ ಬರ್ಪ ಪೆಂಡಿರ ತಂ ಡಕ್ಕೆ ತಲೆದುಡಿಗೆಯಾಗಿ ಬೆಳ್ಗೊಡೆಯ ಕುಂಚದಡಪದ ಡವಕೆಯ ಬಿಜ್ಜಣಿಗೆಯ ಕಜ್ಜಳದ ಕನ್ನಡಿಯ ಚೆನ್ನೆಯರ್ವೆರಸು ಇಚ್ಚೆಗಾರ್ತಿ ನಡೆವಾಗಳ್.

ಕಂ॥ ಸುರಯಿಯ ಚೊಲ್ಲೆಯುಮುಂ ಪೊಸ।
ಸುರಹೊನ್ನೆಯ ಮೊಗ್ಗೆಯೆಕ್ಕ ಸರಮುಂ ಪೊಂಬಾ॥

ದರಿಯು ಕಿಱುಮೊಗುಳ ತೊಡರುಂ।
ಪರಿವಡೆದಿರೆ ಬಂದನತ್ತಯಿಂದೆ ಬಸಂತಂ ॥೪೯೯॥

ನಡೆವರಸಂಚೆಯ ತಂಡ।
ಕ್ಕೆಡೆನೆಱೆಯುದು ಪೊಡವಿ ಗಂಡುಗೋಗಿಲೆಯಣಿಗ॥
ಳ್ಗೆಡೆನೆಱೆಯು ದಿನಿತುವಾಗಸ।
ಮೊಡೆನೆಱೆಯುದು ಗಿಳಿಯುದಟಿಕೆ ದೆಸೆಯೆನಿತನಿತುಂ ॥೫೦೦॥

ವ॥ ಅಂತು ಬಂದು ಪಿರಿದಪ್ಪೊಸಗೆಯಿಂ ದಿಚ್ಚೆಗಾರ್ತಿ ಕಾವನ ನಿದಿಗೊರ್ಂಬಲ್ಲಿ.

ಕಂ॥ ಅಡಿಯಂ ಬಲ್ವಿಡಿದುವು ನು।
ಣ್ದೊಡೆಯಂ ಪಿಡಿಕಿಸಿದು ವಡದರ್ುವ ಕಾವನ ತೋಳಂ॥
ಬಿಡದಪ್ಪಿದುವಂದಾಕೆಯು।
ಕೊಡಕೆವರಂ ನಿಮಿರ್ದು ಪೊಳವ ತುಱುಗೆಮೊಗಗ್ಗಳ್ ॥೫೦೧॥

ಚಂ॥ ನಗೆಮೊಗದೊಳ್ ತೆಱಂ ಬೊಳೆದು ನುಣ್ದುಟಿಯೊಳ್ ಮೊಗಮಿಕ್ಕಿ ಗಲ್ಲದೊಳ್।
ಜಗುಳ್ದು ಕೊಡಂಕೆಯೊಳ್ ನುಸುಳ್ದು ಪೇರುರದೊಳ್ ಸುಱಿದಾಡಿ ತೋಳ್ಗಳೊಳ್।
ಸೊಗಯಿಸಿ ಸೊರ್ಕಿ ಪೊರ್ಕುಳೊಳಡಂಗಿ ತೊಳಪ್ಪುಡಿಯೊಳ್ ಸಡಿಲ್ದು ಕಾ।
ಲುಗುರ್ಗಳೊಳ್ಬೆದೆ ಮಾರ್ಪೊಳೆದು ವಾಕೆಯು ಡಾಳವುನಾಂತ ದಿಟ್ಟಿಗಳ್॥

ಕಂ॥ ನನೆಗಣೆಯುನ ಮೆಯ್ವೊಳಗಂ।
ಬಿನಿಗೊಳದೊಳ್ ಮೊದಲೆ ಮಿಳಿರ್ದು ನಗೆದಾಡಿದುವೊಂ॥
ದೆನಸುಂ ಕಡು ನೀಱೆಯು ಚೆ।
ಲ್ವೆನೆ ತೊಳಗುವ ಕಣ್ಗಳಂಬ ಪೊಸಮಿಾಂಬೊಣಗರ್ಳ್ ॥೫೦೩॥

ವ॥ ಬಟಿಕ್ಕ ಬಸಂತಂ ಮುಂತಾಗಿ ಬಂದು ಕಾಣ್ಕೆಗೊಟ್ಟು ಕಂಡ ತನ್ನ ಪಡೆಯೆಲ್ಲಮುನಳವಱಿದು ಮನ್ನಿಸಿ ನನೆವಿಲ್ಲಬಲ್ಲಹಂ ಕೈವಂದ ಮಾವೆಂಬಾನೆಯನಿಚ್ಚೆಗಾರ್ತಿವೆರಸೇಱಿ ನಡೆತಂದು ಕಂಪಿನಪೊಟಲಂ ಪೊಕ್ಕು ಬೀದಿಗೊಂಡು ಬರ್ಪಾಗಳ್.

ಕಂ॥ ನೆಗೆದ ನೆಲೆಮಾಡದೊಳ್ ಪೊಸ।
ದುಗುಲಮನೊಲವಿಂದೆ ಪೊದೆದು ನೋಡುವಳೊರ್ವಳ್॥
ಸೊಗಯಿಸಿದಳ್ ಮಿಱುಗುವ ಬೆ।
ಳ್ಮುಗಿಲಂ ಮಱೆಗೊಂಡು ನಿಂದ ಬಿಜ್ಜೋದರಿವೋಲ್ ॥೫೦೪॥

ಮುಡಿ ಜಗುಳ ನೇವುರಂ ದನಿ।
ಗುಡೆ ಬಡನಡು ಬಳ್ಕೆ ಮೇಲುದೋಸರಿಸೆ ತೊಳ॥
ಪ್ಪುಡೆ ಸಡಿಲೆ ಬಂದಳೂರ್ವಳ್।
ನಡೆ ನೋಡಿದಳಾಗಳಂತೆ ನಾಣೞಿವಿನೆಗಂ ॥೫೦೫॥

ಮ॥ ಕುರುಳೋ ತುಂಬಿಯ ಬಂಬಲೋ ತೊಡೆಗಳೋ ಪೊಂಬಾಳೆಯೋ ಕಣ್ಗಳೋ।
ನೆರೆದಂತೊಪ್ಪುವನೆಯ್ದಿಲೋ ಬೆರಲೊ ಕೂರ್ಪಾಗಿರ್ದ ಪೂಗೋಲ್ಗಳೋ।
ಕೊರಲೋ ನುಣ್ಪಳವಟ್ಟ ಕೌಂಗೊ ಪೊಸತಾಗಿರ್ದಪ್ಪುವೆಂದೆಯ್ದೆ ಗಂ।
ಧರ ತಂಡಂ ಬಣ್ಣಿಸಲ್ಪಿನಂ ನಡೆದು ಬಂದಾ ನೀೞಿನಂ ನೋಡಿದಳ್ ॥೫೦೬॥

ಉ॥ ಇಕ್ಕಿದ ರನ್ನದೋಲೆ ಪೊಸಮುತ್ತಿನ ಮೂಗುತಿ ತೋಳ ಬಂದಿ ನೀ।
ಳ್ದಿಕ್ಕಸರಂ ತೊಳಪ್ಪ ಬೆರಲುಂಗುರ ಮಿಂಚರಮಿಾವ ನೇವುರಂ।
ಚೊಕ್ಕಳವಪ್ಪ ಚೆಲ್ವನೊಳಕೊಂಡಿರೆ ಬೆಳ್ಳಿಯ ಬಳ್ಳಿಮಾಡಮಂ।
ತಕ್ಕಿನೊಳೇಱಿ ನೋಡಿದಳದೊರ್ವಳಗುರ್ವಿಪ ಕರ್ವುವಿಲ್ಲನಂ ॥೫೦೭॥

ವ॥ ಅಂತು ನೋಡುವ ಪಲತೆಱದ ಪೆಂಡಿರ ಕಣ್ಗೆ ಗಾಡಿಯುಂ ಬೀಱುತುಂ ಬಂದ ರಮಣನೆಯುಂ ಪೊಕ್ಕು ಪರಿವಡೆದ ಪಿರಿಯ ಕರುಮಾಡದ ಮುಂದಣ ಓಲಗಸಾಲೆಯೊಳ್ ಸಿಂಗರದ ಚೆನ್ನನಾಂತ ಪಟ್ಟವಣೆಯ ಮೇಲೆ ಇಚ್ಚೆಗಾರ್ತಿಯರಸು ನನೆವಿಲ್ಲಬಲ್ಲಹಂ ಕುಳ್ಳಿರಲೊಡನೆ.

ಚಂ॥ ನಿಗಳದ ಸುಣ್ಬರಂ ನೆಗೆವಿನಂ ಮಣಿಗಳ್ ಕಿವಿಗಿಂಪನೀವಿನಂ।
ಮಗಮಗಿಸುತ್ತುಮಿರ್ಪ ನಱುಸುಯ್ಗಲರ್ಕೆ ಜೆನುಂಗುತಿರ್ಪಿನಂ।
ಬಗೆಗೊಳೆ ಬಂದು ನಿಂದು ನೆರೆದಗ್ಗದ ನೀಱೆಯರೊಲ್ದು ಪರ್ವುವಾ।
ಪೊಗಳುಲಿ ಪೊಣ್ಮೆ ಬಿತ್ತರದೆ ಮುತ್ತಿನ ಸೇಸೆಯನಾಗಳಿಕ್ಕಿದರ್ ॥೫೦೮॥

ನೊಸಲೆಡೆಯಲ್ಲಿ ನೀಳ್ದ ಕುರುಳೋಳಿಗಳಯ್ಯಲನಾಡೆ ಡಾಳಮಂ।
ಪಸರಿಪ ತೋಱಮುತ್ತಿನಸರಂ ಕೊರಲೊಳ್ಪಿರಿದಾಡೆ ನಾಡೆಯುಂ।
ಮಿಸುಗುವ ಕಣ್ಣ ನುಣ್ಬೆಳಗು ಜೊನ್ನದೊಳೋರಗೆಯಾಗೆ ಸೊಂಪು ಸಂ।
ದಿಸೆ ಪೊಸರನ್ನದಾರತಿಯ ನೆತ್ತಿದ ರಗ್ಗದ ಗಾಡಿಕಾರ್ತಿಯರ್ ॥೫೦೯॥

## 25. ವಸಂತಋತು ವರ್ಣನೆ.

ಅಗ್ಗಳನೆಂಬ ಜೈನಕವಿಯು ಮೂಲಸಂಘ ದೇಶೀಯಗಣ ಪುಸ್ತಕ ಗಚ್ಛ ಕೊಂಡಕುಂದಾನ್ವಯದಲ್ಲಿ ಜನಿಸಿದನು ಈತನ ತಂದೆ ಶಾಂತೀಶನು, ತಾಯಿ ಪೋಚಾಂಬಿಕೆ, ಗುರು ಶ್ರುತಕೀರ್ತಿದೇವನು. ಈತನು ಇಂಗಳೇಶ್ವರವೆಂಬ ಊರಿನಲ್ಲಿ ಹುಟ್ಟಿದಂತೆಯೂ ರಾಜಸಭೆಯಲ್ಲಿ ಪ್ರಸಿದ್ಧಕವಿಯಾಗಿದ್ದಂತೆಯೂ ತಿಳಿಯಬರುತ್ತದೆ. ಈತನಿಗೆ ಜೈನಜನಮನೋಹರಚರಿತ, ಕವಿಕುಳಕಳಭವ್ರಾತಯೂಥಾಧಿನಾಥ, ಕಾವ್ಯನೌಕರ್ಣಧಾರ, ಭಾರತೀಭಾಳನೇತ್ರ, ಸಾಹಿತ್ಯವಿದ್ಯಾವಿನೋದ, ಜಿನಸಮಯಸರಸ್ಸರಕೇಳೀಮರಾಳ, ಸುಲಲಿತಕವಿತಾನರ್ತಕೀನೃತ್ಯರಂಗ ಎಂಬ ಬಿರುದುಗಳಿದ್ದಂತೆ ಗೊತ್ತಾಗುತ್ತದೆ ಇಲ್ಲಿ ಕೊಟ್ಟಿರುವ ವಸಂತ ಋತುವರ್ಣನೆಯು ಈ ಕವಿ ಮಾಡಿದ ಚಂದ್ರಪ್ರಭಪುರಾಣವೆಂಬ ಕಾವ್ಯದಿಂದ ಉದ್ಧೃತವಾಗಿದೆ ಈ ಕಾವ್ಯವು 8ನೆಯ ತೀರ್ಥಕರನಾದ ಚಂದ್ರಪ್ರಭನ ಚರಿತೆಯು. ಇದಕ್ಕೆ ಅಗ್ಗಳ ಲೀಲಾವತಿಯೆಂದೂ ನಾಮಾಂತರವಿರುವಂತೆ ತಿಳಿಯಬರುವುದು. ಇದನ್ನು ಅಗ್ಗಳನು ಶಕ ೧೧೧೧ರಲ್ಲಿ (ಕ್ರಿ. ಶ. ೧೧೮೯) ಬರೆದಂತೆ ಹೇಳಿಕೊಂಡಿರುವನಾದುದರಿಂದ ಈತನು ೧೧ನೆಯ ಶತಮಾನದ ಅಂತ್ಯಭಾಗದಲ್ಲಿಯೂ ೧೨ನೆಯ ಶತಾಬ್ದದ ಆದಿಭಾಗದಲ್ಲಿಯೂ ಇದ್ದನೆಂದು ಹೇಳಬೇಕಾಗಿದೆ. ಈತನ ಬಂಧವು ಪ್ರೌಢವಾಗಿಯೂ ಚಮತ್ಕಾರಿಕವಾಗಿಯೂ ಸಂಸ್ಕೃತಶಬ್ದಪುಂಜರಂಜಿತವಾಗಿಯೂ ಇದೆ.

ಮ|| ನವಪುಷ್ಪೋತ್ಕರಪಾಂಡುಚೂತಸಿವಹಂ ಶ್ವೇತಾತಪತ್ರಾಳಿ ಭೃಂ|
ಗವಧೂಝಂಕೃತಿ ಶಂಖಪೂತ್ಕೃತಿರುತಂ ಸನ್ಮಾಧವೀಕುಟ್ಮಲ |
ಸ್ತವಕಂ ಚಾಮರ ಮುದ್ಘಕೋಕಿಳರವಂ ಭೇರೀಘನಧ್ವಾನಮಾ |
ಗೆ ವಸಂತಂ ಋತುಸಾರ್ವಭೌಮವಿಭವಂ ಮುಯ್ವೆತ್ತದೇಂ ಬಂದುದೋ ||

ವ|| ಆ ಸಮಯದೊಳ್.

ಮ|| ಸರಸೀವಾರಿಯೊಳಾದಮುೞ್ದಿಕೊಳುತಂ ಮಾಣಿಕ್ಯಸಂದೋಹಪು |
ಷ್ಪರಜೋವ್ರಾತಮ ನೋವದೊಟ್ಟಿಕೊಳುತಂ ವಲ್ಲೀನಿವಾಸಂಗಳಂ |
ಪರಪುತ್ತ್ರಂ ಮಳಯಾವನೀಧರಚರಂ ತಾಂ ಬಂದುದಾ ದಾನಬಂ |
ಧುರಗಂಧಾಕುಳಭೃಂಗಮಂಗಜಗಜಂ ಬರ್ಪಂತೆ ಚೈತ್ರಾನಿಳಂ ||೫೧||

ಚಂ|| ಇನನುಱಿದಂ ವಸಂತನುಮುಮರ್ಚಿದ ನಿತ್ತಲುಮಗ್ನಿಯಿತ್ತ ಸ |
ಮ್ಮನಿಸಿದ ರಕ್ಕಸಂ ಬಱಿಕಮಾಂ ನಡುವೆಂಬವೊಲಾದು ದಾನೆ ಭಾ |
ಜನವೆನಿಸಿರ್ದನಂತಕನಡುರ್ಕೆಗೆ ಪೋ ಪೞತಾವುದೆಂಬ ದು |
ರ್ಮನದೊಳೆ ದಕ್ಷಿಣಾಶೆ ನಿಡುಸುಯ್ದವೊಲಾದುದು ದಕ್ಷಿಣಾನಿಲಂ ||೫೨||

ವ|| ಮತ್ತಂ.

ಮ|| ಮಲಯಕ್ಷ್ಮಾಧರಮೇಖಲಾಪರಿಗತಶ್ರೀಖಂಡಷಂಡಂಗಳೊಳ್ |
ನಲವಿಂದೊಂದಿ ಬೞಲ್ದ ಭೋಗಿಮಿಥುನಂಗಳ್ ಪೇರ್ದುಪೇರ್ದಾದಮು |
ಗ್ಗಲಿಸಿರ್ದಾತ್ಮಕೃಶತ್ವಮಂ ಸುರಭಿವಾತಂ ತೂಳ್ದಿಪತ್ತುದ್ಯದು |
ತ್ಕಲಿಕಾವ್ಯಾಕುಳಚೋಳಕೇರಳವಧೂನಿಶ್ವಾಸಸಂಪರ್ಕದಿಂ ||೫೧೩||

ಚಂ|| ನಿನಗೆ ವಸಂತದೂತಿವೆಸರೊಪ್ಪುವುದೆಂತೆನೆ ಮುಂತೆ ಬಂದು ಸೀ |
ನೆನಗೆ ವಸಂತನಾಗಮನಮಂ ನೆಱೆ ಸೂಚಿಸಿಕೊಟ್ಟೆಯೆಂದು ನಂ |
ದನವನಲಕ್ಷ್ಮಿ ಕೀರರವದಿಂ ಪೊಗೞ್ದಿತ್ತ ಪಸಾಯಮಚ್ಚಮು |
ತ್ತಿನ ಪೊಸಪಚ್ಚಮಂ ತಳೆದವೋಲದಮರ್ಗತ್ತೆ ಮುಗುಳ್ತುದೆತ್ತಲುಂ ||೫೧೪||

ವ|| ಅದಲ್ಲದೆಯುಂ.

ಚಂ|| ಅವಿರಳಮಾದ ಮೊಯ್ಮಸುರೆ ಪಚ್ಚೆ ದಿಪಿಂಗೆ ತಳಿರುಟ್ಟ ಪಟ್ಟೆಯೊ |
ಪ್ಪನತಿಳಕಂ ಮಧುವ್ರತಮಲರ್ಗಲಗೊಂಚಲೆ ನಂಡೆ ಕೋಕಿಲಾ |
ರವಮದು ಬೀರಮದ್ದಳೆಯ ನಿಸ್ವನಮಾಗಿರೆ ಕಟ್ಟಿ ಬಾದ ಕಂ |
ತುವ ಬಿರುದಂಪದಿಂದೆ ಕರಮೊಪ್ಪಿದುವಂದನ ಬಂದಮಾವುಗಳ್ ||೫೧೫||

ಕಂ|| ನನೆಯಂಬಿನ ಪೊದೆಯಂ ಪೂ |
ವಿನಗೊಂಚಲ್ ನೀಳ್ದ ಕರ್ಬುವಿಲ್ಲಂ ಸೆಳಗೊಂ ||
ಬನುಕರಿಸೆ ಬಾಲಚೂತಂ |
ನನೆಯಿಸಿದುದು ಚಿತ್ತಭವನ ಕೀಡಾಳವನಂ ||೫೧೬||

ಚಂ|| ರತಿಗವತಂಸಮಾದ ತಳಿರಾವ ಮರಕ್ಕೊಳ ವೆನ್ನ ಬಿಲ್ಗೆ ಸಂ |
ಗತಶರಮಾದ ಪೂಗುಡಿಗಳಾವ ಮರಕ್ಕೊಳ ವನ್ಯಪುಷ್ಪದಾ |
ಕತೆಗಗದಂಗಳಾದ ಕೊನರಾವ ಮರಕ್ಕೊಳವೆಂದು ಮನ್ಮಥಂ |
ಸ್ತುತಿಯಿಸಿ ಮಾಮರಕ್ಕೆ ಕುಜರಾಜಸಮಾಖ್ಯೆಯನಿತ್ತ ನಟ್ಟಿಯಿಂ ||೫೧೭||

ಅಱಂತೆರ್ದೆಯಾಱೆ ಪೇರ್ದು ವಿಸಿಯುಳ್ಗನಿದೆಂದಿರದೀಂಟುವೇೞ್ದ ಮ |
ಱ್ಕಿಱವುಱಿಗಳ್ಗೆ ಮುಕ್ಕುಱಿಸಿ ತಂದೆಱೆದುಂ ಗೆಳೆವಕ್ಕಿಯುಲ್ಲಮಂ |
ನೆಱೆ ಬೞಿಯಟ್ಟಿ ನಲ್ಲುಣಿಸನೂಡಿಯುಂ ಮಾಮ್ರದ ತೋರವಣ್ಗೊಳೊಂ |
ದಱ ರಸದಂತುಗಾಣದೆ ದಲೊಂದು ಶುಕಂ ಮಧುಸಮ್ಮದೋತ್ಸುಕಂ ||

ತಳಿರ್ಗಳಿನೊರ್ವರ್ ಪೂಗುಡಿಯಿನೊರ್ವರ್ ಪಸುರ್ಮಿಡಿಯಿಂದಮೊರ್ವರ್ ಕಾ |
ಯ್ಗಳಿನಿರದೊರ್ವರ್ ಪಣ್ಗಳಿನದೊರ್ವರ್ ಜನಕ್ಕೆ ಮನಃಪ್ರಮೋದಮಂ |

ಬೆಳೆಯಿಸಿ ಮೊಣ್ದುದಲ್ತು ಸವಿಯಂ ಕಿವಿಗೋಲಗಿಸಿತ್ತು ಮತ್ತೆ ಕೋ |
ಕಿಳರವದೊರ್ಮೆ ಭೃಂಗರುತದೊರ್ಮೆ ಶುಕಸ್ವರದೊರ್ಮೆ ಮಾಮರಂ ||

ಉ|| ತಾನುಗುೞುತ್ತುಮಿರ್ಪ ಪೊಸಗಂಪುಮನಿತ್ತೆ ತೆಮಳ್ದುಕೊಂಡು ಮಂ |
ದಾನಿಳನುಯ್ಯುತಿರ್ಪ ತನಿಗಂಪುಮನಿತ್ತೆ ಮರುಳ್ದು ಭೃಂಗಸಂ |
ತಾನಮುಣುತ್ತುಮಿರ್ಪ ನಱುಗಂಪುಮನಿತ್ತೆ ಗಡಂ ಪ್ರಫುಲ್ಲಮ |
ಲ್ಲೀನವಪುಷ್ಪಮೋಗರದ ಕಂಪುಗಳಾಗರಮಾಯ್ತು ಸುಗ್ಗಿಯೊಳ್ ||೫೦||

ಕಂ|| ಬನಮೆಂಬ ಮದನನೃಪನರ |
ಮನೆಯೊಳ್ ಪೊತ್ತಿಸಿದ ದೀಪಮಾಲೆಯ ಮಾಡ ||
ಕ್ಕನುರೂಪಮಾಗಿ ಪಣೆಯಿಂ |
ಕೊನೆವರೆಗಂ ಪೂತುಮೆರರೆ ಚಂಪಕನಿಕರಂ ||೫೧||

ಚಂ|| ಎಸಗೆ ಜಗತ್ತ್ರಯೀಜಯಶರಾವಳಿಗೀ ವಿಟಪೀತ್ರಯೀಪ್ರಸೂ |
ನನಿಕರವಾದುವೆಂದು ಮದನಂ ಮನದೊಳ್ ಮದವೇಱೆ ಪೇೞುವ |
ತ್ತನುಪಮಸೌರಭಂ ದೆಸೆಯನಾವರಿಪಂತು ಮರಲ್ದುರಲ್ದು ಪೂ |
ವಿನ ಪೊಸಗೊಂಚಲಂ ಕುರವಕಂ ತಿಲಕಂ ವಕುಲಂ ನಿರಾಕುಲಂ ||೫೨||

ಕಂ|| ಅಲರ ಪೊಸಗಂಪಿನಿಂ ದೆಮ |
ಗಲಂಪನಗ್ಗಲಿಸಿ ನೀನೆ ರಕ್ಷಿಪುದೆನುತುಂ ||
ಬಲವಂದೆಱಗುವ ತೆಱದಿಂ |
ಬಲವಂದೆಱಗಿದುವು ತುಂಬಿಗಳ್ ಪಾದರಿಯೊಳ್ ||೫೩||

ಪಲತೆಱದ ಕನಕಭಾಜನ |
ಕುಲದಿಂ ಜಲಜಲಿಪ ಭಾಜನಾಂಗಮಹೀಜ ||
ಕ್ಕಲಗಣಸೆನೆ ಕೊಸಗೆಸೆದುದು |
ಮಲರ್ಗಲರ್ದುರ್ಕ್ಕಲರ್ದು ಮಿಸುಪ ಪೊಸತಲರ್ಗಲರಿಂ ||೫೪||

ಬಳಸಿದ ಲತೆಗಳ್ ಶಾಖಾ |
ವಳಯೊಂದಱೊಳೊಂದು ತಾನೆ ಸುರಿವರಲಿಂ ಕ ||
ಣ್ಗೊಳಿಸಿದುವು ಚೈತ್ರದೊಳ್ ಗೊಂ |
ದಳದಿಂ ಕೋಲ್ವೊಯ್ದು ನರ್ತಿಪಬಳಾವಳಿವೋಲ್ ||೫೫||

ಬಂದ ಬಸಂತಂಗಂದರ |
ವಿಂದಿನಿ ಸೇಸಿಕ್ಕಲೆಂದು ನಗಪಿದ ಹಸ್ತ ||
ಕ್ಕೆಂ ದೊರೆವಂದುವೊ ಜಲಲವ |
ದಿಂದೆಸೆ ವುನ್ನಾಳವಿಕಚಕೋಕನದಂಗಳ್ ||೫೭೬||

ಚಂ|| ಕಿಱುವುಡುಗೊಂಡ ಬಂಡಿನೊಳಗೇಸಿ ಪೊವಟ್ಟಿಡಸಿರ್ದ ಕುತ್ತ್ರಸ|
ಱ್ಗೆಱುವದೊಳೆಯ್ದೆ ಮುಯ್ಗರೆದು ಕೇಸರದೊಳ್ ನಲವಿಂ ಪೊರಳ್ಚಿ ನೀ|
ಳ್ದೆಱಗಿದ ಕೀಱಿಸಳ್ಳೆಟಿಯುನೊಯ್ಯನೆ ಜಾಱಿ ಪರಾಗಪುಂಜದೊಳ್ |
ಪಱಿವಡಿಸಿತ್ತು ಭೃಂಗಶಿಶು ನೀರಜದೊಳ್ ನಿಜಪಾಂಸುಕೇಳಿಯಂ ||೫೭೭||

ಕಂ|| ವೃಮುಕನಕಪದ್ಮಕೋಶಾ |
ಗ್ರದೊಳಱಗಿದ ತುಂಬಿಯೆಸದುದ ಗಜರಾಜಾ ||
ಸ್ಪದಕನಕಪದ್ಮಕೋಶಾ |
ಗ್ರದ ಲಾಕ್ಷಾಮುದ್ರೆಯೆನೆ ಸರೋಜಾಕರದೊಳ್ ||೫೭೮||

ಚಂ|| ಪ್ರದಿಯೆ ಕವಿಲ್ತ ಕೇಸರದ ಪೊಸ ಮುಕುಳಿಕೆಯ ಪೀಣೆಯುಂ ಪ್ರಯಾ|
ಳದ ಗುಡಿ ನಾಗಚಂಪಕದ ಚಂಪೆಯುವಾಮ್ರದ ಕೊಂಚೆಯುಂ ತವಾ|
ಳವ ಪರಿವತ್ತ ಜೋಳಪರಿ ತಳ್ತಿದಿವುರ್ತ್ತೆಯ ಕುಪ್ಪವೊಪ್ಪಿ ತೋ|
ಱಿಪುವು ಮನೋಜರಾಜಶಿಬಿರಂಗಳಿವೆಂಬಿನೆಗಂ ವನಾಳಿಗಳ್ ||೫೭೯||

## 26. ವನ ವರ್ಣನೆ.

ಈ ವನವರ್ಣನೆಯನ್ನು 24ನೆಯ ತೀರ್ಥಕರನಾದ ವರ್ಧಮಾನನ ಅಥವಾ ಮಹಾವೀರನ ಚರಿತದಿಂದ ತೆಗೆದುಕೊಂಡಿದೆ. ಈ ವರ್ಧಮಾನಪುರಾಣವನ್ನು ಕನ್ನಡದಲ್ಲಿ ರಚಿಸಿದ ಕವಿ ಆಚಣ್ಣನು. ಈತನಿಗೆ ವಾಣೀವಲ್ಲಭ, ಪಂಚಪರಮಗುರು ಪದವಿನತ ಎಂಬ ಬಿರುದುಗಳಿದ್ದಂತೆ ತಿಳಿಯಬರುತ್ತದ. ಈತನು ಭಾರದ್ವಾಜ ಗೋತ್ರದ ಜೈನಬ್ರಾಹ್ಮಣನು, ಈತನ ತಂದೆ ಕೇಶವರಾಜನು, ತಾಯಿ ಮಲ್ಲಾಂಬಿಕೆ, ಗುರು ನಂದಿಯೋಗೀಶ್ವರನು; ಈ ಗ್ರಂಥವನ್ನು ಕವಿಯು ಕಲಚೂರ್ಯ ರಾಜಮಂತ್ರಿಯಾಗಿದ್ದ ರೇಚಣಚಮೂಪತಿಯ ಪ್ರೋತ್ಸಾಹದಲ್ಲಿದ್ದು ಬರೆದಂತೆ ತಿಳಿಯಬರುತ್ತದೆ. ಈತನಿದ್ದ ಸ್ಥಲವು ಪುಲಿಗೆರೆಯೆಂದೂ, ಈತನ ಕಾಲವು ಸುಮಾರು ಕ್ರಿ. ಶ. 1195 ಎಂದೂ ಊಹಿಸಲ್ಪಟ್ಟಿದೆ. ಈತನ ಕವಿತ್ವವು ಪ್ರಾಸಯಮಕಾದಿ ಶಬ್ದಾಲಂಕಾರಯುಕ್ತವಾಗಿ ಪ್ರೌಢವಾಗಿದೆ.

ಉ|| ನಂದನದಂದದಿಂದೆಸೆವಿನಂ ಬನಮಂ ಮನದಕ್ಕಱಿಂದ ಸಂ |
ಕ್ರಂದನಸನ್ನಿಭಂ ತ್ರಿದಿವಸನ್ನಿಭತತ್ಪುರಪಾರ್ಶ್ವದೊಳ್ ಯಶೋ |
ನಂದಿತವಿಶ್ವನಂದಿವಿಭು ಮಾಡಿಸಿದಂ ನಿಜಕೇಳಿಗೆಂದು ಮಾ |
ನಂದನಮಂದಗಂಧವಹಚೈತ್ರವಿಚಿತ್ರನಿವಾಸಮಪ್ಪುದಂ ||೫೪೦||

ಆವಗಮಬ್ಜಜಂ ಮಣಿಕರಂಡಕಮಾಲೆಯನಿಲ್ಲಿ ನೇಱಿದಂ |
ತೀವಿರಸಂಗಳಾಱುಮ ನೆನಿಪ್ಪವು ಬಿಣ್ಗೊಲೆ ಕೊಂಬುಗೊಂಬಿನೊಳ್ |
ತೀವಿರೆ ತೆಂಗು ತಾಟಿ ಬದರಿ ದಾಡಿಮಮುಂಬಟೆ ಮಾತುಳಂಗಮಿ |
ಮ್ಮಾವರನೇಱಿಲುಂಬಡಕೆ ಬಾಳೆ ಬೆಳಲ್ ಹಲಸೀಳೆ ಕಮ್ಮರಂ ||೫೪೧||

ಕಂ|| ಬಿಡದೆಱಗಿ ಕೊಂಬುಕೊಂಬಿನೊ |
ಳಡೆಗಿಱಿದರಗಿಳಿಯ ಗಱಿಯ ತುಂಪದ ಪುದುವಿಂ ||
ಪಡೆವುದು ಪಣ್ತಾಲಮಿದೆನೆ |
ಬಡಂಗನವಿರಳಿತಫಲಪರೀತಂ ಚೂತಂ ||೫೪೨||

ವ|| ಮತ್ತಮಲ್ಲಿ

ಉ|| ಪಲ್ಲವದಿಂದೆ ರಂಜಿಪ ಕುಜಂ ಪಟಿತಾವುದೊ ಭಾವಿಪಂದು ಕಂ |
ಕೆಲ್ಲಿವೊಲೆಂದು ಮುಚ್ಚಯುದಱೊಳ್ದಿರಂ ಕಡುಚೆಲ್ವುವೆತ್ತ ಸ |
ತ್ಫುಲ್ಲಶರಕ್ಕೆ ಮಿಕ್ಕ ಗಱಿಯಾಗೆ ವಿನಿರ್ಮಿಸಿ ಕರ್ವುವಿಲ್ಲದೇಂ |
ಸಿಲ್ಲದೆ ಕಂತುಮಾಡಿದನೊ ತೋಮರದುಪ್ಪರವಟ್ಟದೊಪ್ಪಮಂ ||೫೪೩||

ವ|| ಮತ್ತಂ

ಕಂ|| ವಕುಳಂ ಸಪರಿಮಳಪ್ರಸ |
ವಕುಳಂ ಸಾರಭಸಮಾಗತಭ್ರಮರಾರಾ ||
ವಕುಳಂ ಸೊಗಯಿಸಿದತ್ತೆಸೆ |
ವ ಕುಳಂಬಿತವಿಟಪಮವನಿಸಂಸ್ಥಾ ವಕುಳಂ ||೧೩೪||

ತಿಳಕಂ ವರವನಲಕ್ಷ್ಮೀ |
ತಿಳಕಂ ದತ್ತಪ್ರಿಯಾಸಮನ್ವಿತಜನಸ ||
ತ್ಪುಳಕಂ ಸುಮನಃಕಳಮಂ |
ಜಳಕಂ ತಾನಾದು ದತನುಕೀರ್ತ್ಯುಜ್ಜ್ವಳಕಂ ||೧೩೫||

ಪಾವರಿಪೂಕಂಪಿಂಗೆಱ |
ಪಾವರಿಪಳಿಗಳ ಕುಳಕ್ಕೆ ಸಿರಿವಧರಾಗೋ ||
ತ್ಪಾದಪಸಮವಾಯ್ತು ವಿಳಸ |
ತ್ಪಾದಪಜಾತಿಯೊಳದೊಂದೆ ಸುಂದರಮಲ್ತೇ ||೧೩೬||

ಉರಿಗೊಟ್ಟ ವರಗಿದೆಂಬಿನ |
ವರಗಿಳಿಗಳ ಚಂಚು ತಾಗಲೊಸರೊಡೆದೋರಂ ||
ತಿರೆ ಸುರಿವ ಪಣ್ಗಳಿಂದಮ |
ಅರನೇಱಿ ಮರಗಳಲ್ಲಿ ಸೊಗಯಿಸಿ ತೋರ್ಕುಂ ||೧೩೭||

ಚಂ|| ಸಖಿ ತವದಂತು ಬೇರ್ವಿಡಿದು ಪಣ್ಣಿರಗಂ ವನಮಯ್ದೆ ಸೇವ್ಯಮಾ |
ಯ್ತಿವಸಿಗೆ ಕೂಡೆ ಬೇರ್ವರಿದ ಬಾಳೆದಸಾಲ್ ಮಡಲಿಟ್ಟ ಕರ್ಪುರ ಪ |
ಲ್ಲವಿಸಿದಶೋಕದ ಬೞ್ಬಳರ್ದ ಮಲ್ಲಿಗ ಕಾಯ್ತಳದಂಗು ಪಣ್ತ ಬ |
ಕ್ಕರವಲಸು ತಮ್ಮ ತಮ್ಮ ಸೆವ ಮೆಯ್ಸಿರಿಯಿಂ ಸಲೆ ಬೀಜಮತ್ತಿರ್ದಿನಂ ||೧೩೮||

ಕಂ|| ಆವನದಂತರ್ಭಾಗದೊ |
ಳಾವನದಂ ನೋಡಿ ಪಿಂಗುವವೆನಸಿಸಿದ ಶೋ ||
ಭಾವಿಭವದ ಮಣಿಮಯಕೃತ |
ಕಾವನಿಧರವರದ ಕೆಲದ ತಿಳಿಗೊಳನೆಸೆಗುಂ ||೧೩೯||

ಅದು ಸುರಭಿಕುಮುದವಾಸಿತ |
ಮುದವಾಸಿತರುದ್ವಿಹಂಗಸಮ್ಮದಕಲಹಂ ||

ಮದಕಲಹಂಸದ ನಿಳಯಂ ।
ಸದನಿಳಯಂ ಶ್ರೀಪರಾಗಪಿಂಜರತೀರಂ ॥೫೪೦॥

ಕಂಜಮಲದರ್ೂಪ್ಪಿತಿನ್ನೇ ।
ಕಂಜನೊ ಹರನೆನಗೆನುತ್ತೆ ವರಮಕರಪತಾ ॥
ಕಂ ಜಡಿದು ನುಡಿವವೊಲ್ ಕೋ ।
ಕಂ ಜಳಜಾಕರದ ಕೆಲದೊಳುಲಿವುವು ನಲವಿಂ ॥೫೪೧॥

ಕ್ರೀಡಾಸರಸಿಯೊಳಳಿಗಳ್ ।
ಪಾಡುವ ಲಯಗತಿಗೆ ಕೃತಕಗಿರಿಯೊಳ್ ನವಿಲೆ ॥
ರ್ದಾಡುವುದುಂ ಪಥಿಕರ್ ನಡೆ ।
ನೋಡುವ ರೆದೆರ್ದಡಕ್ಕೆ ವಾಜಿಸುತ್ತಿರ್ಪನೆಗಂ ॥೫೪೨॥

ವ॥ ಇಂತು ಶೋಭಾನಿಶಾಂತವಾದ

ಕಂ॥ ವನವನವನತಲತೋಜ್ಜ್ವೇ ।
ವನವನವನವತನುಶಿಖಿಗಿದೆಂದು ಜಗತ್ಪ್ರಾ ॥
ವನವನವನಳವಿಳಾಸಭ ।
ವನವನವನಜಾತಪೂರ್ವಮನೆ ಮಾಡಿಸಿದಂ ॥೫೪೩॥

## 27. ವನವಿಹಾರ.

(ಈ ಪದ್ಯಗಳು ಆದಿಪಂಪನಿಂದ ರಚಿಸಲ್ಪಟ್ಟ ಆದಿಪುರಾಣಾಂತರ್ಗತವಾದವು ಗಳು ಕವಿಚರಿತೆಗೆ 77ನೆಯ ಪುಟವನ್ನು ನೋಡು.)

ಕಂ॥ ಅಳಿನಿನದದ ಮದಕೋಕಿಳ ।
ಕಳನಿನದದ ಜತಿಯೊಳಭಿನಯಂ ನೆಗೞ್ವಿನೆಗಂ ॥
ಲಳಿತಮನೇನಾಡಿಸಿದನೊ ।
ಮಳಯಾನಿಳನರ್ತಕಂ ಲತಾನರ್ತಕಿಯಂ ॥೫೪೪॥

ಮ॥ ತಳಿರೊಳ್ಗೊಂಚಿನೊಳೊಳ್ಪು ಕೋಕಿಳಕುಳಂ ಪೂಗೊಂಚಿನೊಳ್ ಪಾಡುತಿ ।
ರ್ಪಳಿವೃಂದಂ ತುಱುಗಿರ್ದ ಬಲ್ಮಿಡಿಯ ತೂಗುಂಗೊಂಚಿನೊಳ್ ಪಾಯ್ದುಱಂ ।
ಡುಳಿಸುತ್ತಿರ್ಪ ಶುಕಾಳಿ ತಮ್ಮ ಬೆಸದಿಂ ತಂತಮ್ಮ ತಾಣಾಂತರಂ ।
ಗಳೊಳಿರ್ದಂಗಜತಂತ್ರದಂತೆಸವಿನಂ ಚೆಲ್ವಾದುವಿಮ್ಮಾವುಗಳ್ ॥೫೪೫॥

ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀಱನೈ ಪುಷ್ಪಸಂ ।
ಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತ ಪ।
ಣ್ಗಳಿನೋವೋ ಪೆಱತೇನೊ ನೀನೆ ಭುವನೈಕಾರಾಧ್ಯನೈ ಭಂಗಕೋ ।
ಕಿಳಕೀರಪ್ರಿಯಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ ॥೫೪೬॥

ಕಂ॥ ಪೊಸಮಾವಿನ ಮಿಡಿಯೊಳ್ ಪ ।
ಚೆ ಸಾರಮಂ ಮಾಡುವಂತೆ ಯಿಂ ಮುತ್ತೊರ್ವಳ್ ॥
ಪಸದನದ ಬಸನಿ ನಿಜಕರ ।
ಕಿಸಲಯರುಚಿ ಪಸುರೊಳಸೆಯೆ ಮಿಡಿಯಂ ಕೊಯ್ದಳ್ ॥೫೪೭॥

ಕಂ॥ ಸಿರಿಸದ ಬಾಸಿಗಮಂ ಮಾಂ ।
ಕರಿಸುವ ನಳತೋಳ ಪಿಂಡುಗಂಕಣದ ಸರಂ ॥
ವೊರೆವಳಗಳ ಸರಮುಂ ಚ ।
ಪ್ಪರಿಸುವಿನಂ ಚೆನ್ನೆ ಪೊನ್ನೆಯರಲಂ ಕೊಯ್ದಳ್ ॥೫೪೮॥

ಪೊಸಮುತ್ತಿನ ಲಂಬಣದೊಳ್ ।
ಮುಸುಂಕಿದಂತಿಡಿಯೆ ಪೂತ ಸುರಯಿಯ ಮುಗುಳಂ ॥
ಪಸವಟ್ಟಂತೊರ್ವಳ್ ತನ ।
ಗೆ ಸರಿಗೆಗಂ ಲಂಬಣಕ್ಕಮೆಂತ್ತುಯೆ ಕೊಯ್ದಳ್ ॥೫೪೯॥

ಒದೆದ ಮೃದುತಳದ ಕೆಂಪೇಂ ।
ಪುದಿದುದೊ ಕೆಂದಳಿರನದಱ ನೂಪುರನಿನದಂ ॥
ಪುದಿದುದೊ ಮೊರೆವಳಿಗಳನೆನಿ ।
ಸಿದಶೋಕೆಯ ತಳಿರನೊರ್ವಳೞ್ತ್ತಿಯು ತಿರಿದಳ್ ॥೫೫೦॥

ಎಳಮಾವನದೊಂದೆಳಲತೆ ।
ಬಳಸಲ್ ಬಗೆದಪ್ಪುದೆಂಬಿನಂ ನಳತೋಳಿಂ ॥
ಸೆಳಗೊಂಬಂ ತೆಗೆದೊರ್ವಳ್ ।
ವಿಳಾಸವತಿ ತಿರಿದಳಾಮ್ರನವಕಿಸಲಯಮಂ ॥೫೫೧॥

ಚಂ॥ ಮುಗಮುಗಿಸಲ್ಕೆ ಮುಂದಯಿಸಿ ದಿಕ್ತಟಮಂ ಬಳಸಲ್ಕೆ ಪೇರ್ವ ತುಂ ।
ಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕೆವ ಸಾಲ್ಗುಮೆಂದು ತ ।
ಳ್ತಗಲದಲಂಪಿನಿಂ ಮಧುಮನೋಭವರ್ವ್ಯಮಮೆತ್ತಿಮಟ್ಟ್ಯ ಮ ।
ಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರೆಲ್ಲರ ಪಟ್ಟಬಂಧಮಂ ॥೫೫೨॥

ಅಕ್ಕರ ವೃತ್ತ.

ಸೊಡರ ಬೆಳಗಿನೊಳ್ ಕೊರಗುವ ಜಾಜಿಯುಂ ತುಂಬಿಯೊಳ್ ಪಗೆಗೊಂಡ ಸಂ
ಪಗೆಯುಂ।
ಮುಡಿಯೊ ಸೋಗಯಿಸಿದಗಮುರ್ತ್ತಿಯುಲಂ ಮುಪಿಯೊಳ್ ಸವನಾದ ಗೊಜ್ಜೆ
ಗೆಯುಂ॥
ನುಡಿಯಲಕ್ಕುಮ ಪೂಗಳ ಲಕ್ಕಮನಂದೆಯ್ದೆ ಕಾಮನುಡ್ಡಲಿಗೆಮಾಳ್ ।
ಮುಟ್ಟಗೆಪಿಕ್ಕಿಯುಂ ಕ್ಯಯುನತ್ತಿ ಪೂಗಳ್ದಂ ತಣಿಯನ ಮದನನುಂ ಮಲ್ಲಿ
ಗೆಯುಂ ॥

ಕಂ॥ ರತಿಗೆ ಮುಡಿಯಲ್ಕೆ ಮದನಂ ।
ಗೆ ತುಱುಂಬಲ್ಕಿರ್ದುದೆಂದು ಮಧು ಸುಱಿವ ಮಧು॥
ವ್ರತಮುಮನಲೆದಪನೆಂಬೀ ।
ಪ್ರತೀತಿಗಿರುವಂತಿಯಂತೆ ನೋಂತಲರೊಳವೇ ॥೫೫೪॥

ಪುಲ್ಲಶರಂಗಿಸುವಡೆಗಿಪ ।
ನಲ್ಲಂಬುಗಳೆನಿಸಿ ತುಱುಗಿ ಮೆಲರ್ದಲರ್ದಸೆಪೀ ॥
ಮೊಲ್ಲೆಯುಮೊಲಿಸಿದ ನಲ್ಲರ ।
ಲಲ್ಲೆಯುಮೊರಾರ ಮನಮುಮಂ ಸೋಲಿಸವೇ ॥೫೫೫॥

ಕಂಪುಗೊಳಲ್ಕುಸಿರ್ದುಸಿರಿಸಿ |
ಸಂ ಪೊಱಮಟ್ಟೆಸಳ ತುದಿಯುನೆಯ್ದುಲೊಡಂ ಮು ||
ನ್ನಂ ಪಳಯುವೆಪ್ಪ ಪೂಗಳ |
ಕಂಪಿನೊಳೇಂ ಪೊಗಟ ಪಾಟಲೀಪರಿಮಳಮಂ ||೫೫೮||

ಚಂ|| ಎಸಳ್ಗಳನೆಯ್ದೆ ಕಂಪರಿಸಿ ಮುತ್ತಿನೊಳಲ್ಲಿ ಸುವರ್ಣಚೂರ್ಣಮಂ |
ಪಸರಿಸಿ ಕೇಸರಾಕೃತಿಯೊಳಲ್ಲಿಗೆ ಕರ್ಣಿಕೆಯಂದಮಾಗ ಕೀ |
ಲಿಸಿ ಪೊಸತಪ್ಪ ಮಾಣಿಕದ ಮುಣ್ಬರಲಂ ಮಧು ಮನ್ಮಥಂಗೆ ಬ |
ಣ್ಣಿಸಿ ಸಮಂತೆ ತೋಱುವುದು ಪೂಗಳೊಳೇಂ ಸುರಹೊನ್ನೆ ಚೆನ್ನನೋ ||

ಕಂ|| ಪಡಮೊಡೆ ಕಂಪಂ ಬಣ್ಣಂ |
ಬಡೆಯುವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ ||
ಪಡೆಯುವುಱದಲರ್ಗ ಳೆರಡುಮ |
ನೊಡೆವಳದೀ ಚಂಪಕಕ್ಕೆ ಪೂಗಳ್ ದೊರೆಯೇ ||೫೫೯||

ಚಂ|| ಭುವನದೊಳಮ್ಮ ಮುಟ್ಟದಲರಾವು ಮಱಂಕಯಗಾಳಿ ಮುಟ್ಟ ಕಂ |
ಪುವುಮಸಳೊರ್ಮೆ ಪೀರಲೊಡಮಾಗಳ್ ಸೋರ್ವುವು ಕಂಪು ಸೋಂಕ ಕಂ |
ಪವು ದಳ ಮುಯ್ದೆ ಪೀರೆ ತಮದಾಗ್ಗಮ ಸಾರಭಮಂದು ಪೀರ್ದು ಪೀ |
ರ್ವಱಿದೇಂ ತೆರಂದಿರದು ಪಾಯ್ಗುವೊ ಕೇತಕಿಯೊಳ್ ಮದಾಳಿಗಳ್ ||

ಕಂ|| ಅಲರ್ದರೆಗಳಗೆಯು ಜಾದಿಯು |
ಮಲೆಪುಂ ಮಲ್ಲಿಗೆಯು ಪೊಂಕಮುಂ ಬಱಕವನಾರ್ ||
ತಲೆಯೊಳ್ ತಾಳ್ದುವರೆಂದೇ |
ನಲೆದುದೆ ಸಿಂದುರವ ತವೆದ ತನಿಗಂಪಿಂದಂ ||೫೬೦||

ಮುಕ್ಕುಳಿಸಿ ಯುುಗುಳ್ವ ಮಧುವಿಂ |
ಮಿಕ್ಕಸೆವಾವೊದಮಿದಱ ತಣ್ಗಂಪಿನೊಳೊಳ ||
ವೊಕ್ಕುದೆನೆ ಮಧುವ ಕಂಪಂ |
ಮುಕ್ಕುಳಿಸಿದ ಮಕುಳಮಾರುಮಂ ಸೊಕ್ಕಿಸದೇ ||೫೬೧||

ಮಗಮಗಿಸುವ ಕಂಪೆಸಳೊಳ |
ತಗುಳ್ದುಂ ಮೆಲ್ಪೆಸೆಯೆ ಮನಮನಳಿಗಳ ಬಳಗಂ ||

ಜಗದ ಮನದೊಡೆನೆ ಸೇವಂ ।
ತಿಗೆಗಂ ಗೊಜ್ಜಿಗೆಗಮಲ್ಲದೇನೆಱಗುಗುಮೇ ॥೫೬೨॥
ಉದಿದೆರ್ೞಪ್ಪುವುದೆಯ್ದ ತುಱುಂ ।
ಬಿದೊಡೊಪ್ಪುವುದೆಸಳ ಮೆಲ್ಪಿನಿಂದೊಪ್ಪುವುದು ॥
ಣ್ಮಿದ ತಣ್ಗಂಪಿಂದೊಪ್ಪುವು ।
ದದಱಿಂದಲರೊಳಗೆ ಗೊಜ್ಜಗೊಜ್ಜಗೆಯುವೊಲಂ ॥೫೬೩॥
ಬನದ ತಳಿರ್ ಕಳಿಕೆ ಮುಗುಳ್ ।
ನನೆ ಬಿರಿಮುಗುಳಲರಗೊಂಚಲೆಂಬಿವು ವನಜಾ ॥
ನನೆಯುರ ಪೂದುಡುಗೆಗೆ ಮ ।
ಟ್ಟನಾದುವೇಂ ಪೆಂಪೊ ಭರತನಂತಃಪುರದಾ ॥೫೬೪॥

ಚಂ॥ ಇದು ಕಡುನಾಣ ಪುತ್ತು ವಲಮಿಂ ನೆನೆಯುತ್ತಿರಮುವ್ಮನೆಂಬುದಾ ।
ಮುದು ಗುಣಮುಪ್ಪೊಳಗ ನೆನೆದಪ್ಪಿರಶೋಕಮು ಮಾಮುಕಾದದಿಂ ।
ದೊದೆದುದೊ ಕೇಸರದ್ರುಮಮು ಸಿನ್ನು ಮುಸಾನನ ಸೀಧುಪಿಂದೆ ಪೂ ।
ಬ್ಬಿದೊ ಕೃತಮಾವುದಿಂ ಮುಱಿವುದೆಮ್ಮ ಮದೋತ್ಕಟಚೇಷ್ಟಿತಂಗಳಿಂ ॥
ನನೆಗಳ ಗೊಂಚಲಿಂ ತಳಿರ ತೊಂಗಲಿನಾಡುವ ಬೆಳ್ಪಳಪ್ಪ ಕೊಂ ।
ಬಿನ ಮಿಡಿಯುಂ ತೆರಳ್ಚಿ ತಗೆದೋವದ ಕಾಯದೆ ಕೂರಕಮರ್ಗದಿಂ ।
ಸೊನ ಸುರಿವನ್ನೆಗಂ ಪಱಿದು ನೋಯಿಸಿ ಕಾಡಿದಮಿನ್ನದೊಂದುಮಂ ।
ನೆನೆಯದ ಸೀನು ಮಾಮುಸೊಡನಿರ್ದಿರವಂ ನನೆ ಬಾಳಚೂತಮೇ ॥೫೬೫॥

ಕಂ॥ ಭಂಗಿಗಳೊಳಮ್ಮೊಳಾದೀ ।
ಸಂಗಡಮಂ ನೀಮೆ ಮನದೆಗೊಂಡೆಮ್ಮಕಿಸುರ್ ॥
ಪಿಂಗುಗಗಲ್ವೆಡೆಯೊಳ್ ಕೆಳ ।
ಸಂಗಳಸುಗೆ ನಿಮೆಗಮೆಮಗಮಿಂ ಲತೆಗಳಿರಾ ॥೫೬೬॥

ವ॥ ಪದೆದುತ್ತಂಸವತಂಸಶೋಭೆಗೆ ಭವದ್ಬಾಳಪ್ರವಾಳೋಲ್ಲಸ ।
ನ್ಮೃದುಪುಷ್ಪಸ್ತಬಕಂಗಳಂ ಪಱಿದೆವಿನ್ನಾದೋಷಮಂ ಕೊಳ್ಳದ ।
ರ್ಪುರ್ದು ಕೇಳೀವನಪಾದಪಂಗಳಿರ ಚಿತ್ತಂಗೊಂಡು ಪೇಱ್ಕೊಂಡು ರಾ ।
ಗದ ನಿಮ್ಮಂ ಬಲಗೊಂಡು ಪೋಪಗುಣಮಂ ಕೊಳ್ಳಿಂ ಮನಃಪ್ರೀತಿಯಿಂ ॥

ಕಂ॥ ಬನದ ಪಡಿಯುರನನಂಗಂ ।
ನಿನಗಿತ್ತೊಡೆ ಪುಗಲಿಮೆಂಬುದೇಂ ದೋಷಮ ಚೆಃ ॥

ನೆನೆಯುವುದಂ ನಿನ್ನಿಂಚರ |
ಮನೆ ಮನದೊಳ್ ನೆನೆವೆವಾಗಳುಂ ಪರಭೃತಮೇ ||೩೯||

ಕಂ|| ಪೊಸತಲ್ತು ನಿನಗೆ ಪೂವಿನ |
ಪೊಸಗಂಪೀ ಬನದೊಳೀಮೃಗೋದ್ಭವಗಂಧಂ ||
ಪೊಸತದನೋಲಗಿಸಿದೆವಿರು |
ಕುಸುಮಾಸವರಸದೆ ತಣಿದು ಸೀನಳಿಕುಳಮೇ ||೪೦||

ಮ|| ಸ್ರ|| ಪೊಳೆಯುತ್ತಿರ್ಪಕ್ಷಿವಿಕ್ಷೇಪದ ಪೊಳೆಪುಗಳಿಂದಾನನಶ್ರೀವಿಳಾಸಂ |
ಗಳಿನಂಗೋಪಾಂಗದೊಳ್ ಸಂಗಳಿಸುವ ಪಲವುಂ ಭಂಗಿಯುಂ ಕೂಡೆ ನೀಲೋ|
ತ್ಪಳಷಂಡಂ ಪದ್ಮಷಂಡಂ ಲಲಿತವನಲತಾಷಂಡಮುಂ ತಂಡತಂಡಂ |
ಗಳಿನೀ ಬಂದಪ್ಪುವೆಂಬಂತೆಸೆದುದು ಭರತಾಂತಃಪುರಸ್ತ್ರೀಸಮೂಹಂ ||

## 28. ದಧಿಮುಖನ ಶಿರಂ ಪತ್ತಿದ ಕಥೆ.

ವೃತ್ತವಿಲಾಸನೆಂಬ ಒಬ್ಬ ಜೈನಕವಿಯು ಕನ್ನಡದಲ್ಲಿ "ಧರ್ಮಪರೀಕ್ಷೆ" ಎಂಬ ಒಂದು ಗ್ರಂಥವನ್ನು ರಚಿಸಿರುವನು. ಇಲ್ಲಿ ಕೊಟ್ಟಿರುವ ಪದ್ಯಗಳು ಅವರೊಳಗಣಿಂದ ಉದ್ಧೃತವಾಗಿವೆ. ಈ ಗ್ರಂಥವನ್ನು ಮೊದಲಲ್ಲಿ ಅಮಿತಗತಿ ಎಂಬಾತನು ಸಂಸ್ಕೃತದಲ್ಲಿ ರಚಿಸಿಯಿದ್ದಂತೆಯೂ ಅದನ್ನು ತಾನು ಕನ್ನಡಿಸಿದಂತೆಯೂ ಹೇಳಿಕೊಂಡಿರುತ್ತಾನೆ. ಇದಲ್ಲದೆ ಈತನು ಶಾಸ್ತ್ರಸಾರವೆಂಬ ಮತ್ತೊಂದು ಗ್ರಂಥವನ್ನೂ ರಚಿಸಿರುವಂತೆ ತಿಳಿಯಬರುತ್ತದೆ. ಈತನಿದ್ದ ಕಾಲವು ಸರಿಯಾಗಿ ತಿಳಿಯದು; ಸುಮಾರು ಕ್ರಿ. ಶ. 1160ರಲ್ಲಿ ಇದ್ದಿರಬಹುದೆಂದು ಇತರವೃತ್ತಾಂತದಿಂದ ಊಹಿಸಬೇಕಾಗಿದೆ. ಈತನ ಬಂಧವು ಸುಲಭವಾಗಿಯೂ ಲಲಿತವಾಗಿಯೂ ಇದೆ. ಧರ್ಮಪರೀಕ್ಷೆ ಎಂಬುದು ಚಂಪೂರೂಪವಾಗಿದೆ. ಇದರಲ್ಲಿ ಹೇಳಿರುವ ಕಥಾಸಾರವೇನೆಂದರೆ:—ವಾಯುವೇಗ ಮನೋವೇಗರೆಂಬ ರಾಜಕುಮಾರರಿಬ್ಬರು ಪೂರ್ವದಲ್ಲಿ ಪ್ರಖ್ಯಾತವಾಗಿದ್ದ ಪಾಟಲೀಪುರಕ್ಕೆ ಹೋಗಿ ಅಲ್ಲಿ ಬ್ರಹ್ಮನ ದೇವಸ್ಥಾನಾಂತರ್ಗತವಾದ ಸಭಾಭವನವನ್ನು ಎಂಟುದಿನಗಳವರೆಗೆ ಅದಕ್ಕಿರುವ ಎಂಟು ಬಾಗಿಲುಗಳಿಂದ ಎಂಟು ವಿಧವಾದ ಬೇರೆ ಬೇರೆ ವೇಷಗಳನ್ನು ದಿನಕ್ಕೊಂದರಂತೆ ಧರಿಸಿ ಪ್ರವೇಶಿಸಿ, ಅಲ್ಲಿದ್ದ ಭೇರಿಯನ್ನು ಹೊಡೆದು ಅಲ್ಲಿದ್ದ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಾರೆ. ಆಗ ಅಲ್ಲಿನ ಶಾಸ್ತ್ರಜ್ಞರಾದ ಬ್ರಾಹ್ಮಣರು ಬಂದು "ವಿದ್ವಾಂಸರಾದವರು ವಾದಾರ್ಥದಿಂದ ಬಂದು ಭೇರಿಯನ್ನು ಹೊಯ್ದು ವಾದದಲ್ಲಿ ಗೆದ್ದಲ್ಲದೆ ಸಿಂಹಾಸನದಲ್ಲಿ ಕುಳ್ಳಿರಬಾರದು" ಎಂದು ಆಕ್ಷೇಪಿಸುತ್ತಾರೆ. ಅದಕ್ಕೆ ಅವರು ಹಾಗೆಯೇ ಆಗಲಿ ಎಂದು ಕೆಳಗೆ ಕುಳಿತು ವಾದಕ್ಕುಪಕ್ರಮಿಸಿ ಸಿಕ್ಷ್ಯವೂ ನಾನಾಕಥೆಗಳನ್ನು ಹೇಳಿ ಬ್ರಾಹ್ಮಣರ ಮತವನ್ನು ನಿರಾಕರಿಸಿ ಜಯಪತ್ರವನ್ನು ಪಡೆದುಕೊಂಡು ಹೋಗುತ್ತಾರೆ.

ಕಂ|| ಭರವಶದಿಂ ಖೇಚರಭೂ |
ವರನಾದಿವಸದೊಳ ಸಖಸಮೇತಂ ಶ್ವೇತಾಂ ||
ಬರವೇಷಧಾರಿಯಾಗ |
ಚ್ಚರಿಯೆನಿಸಲ್ ಪಾಟಲೀಪುರಕ್ಕೈತಂದಂ ||೪೭೦||

ಆಪುರದಗ್ನಿಯ ಭಾಗದ |
ಗೋಪುರದಬ್ಜಜನಿವಾಸಮಂ ಪೊಕ್ಕು ಜಯ ||
ಶ್ರೀಪತಿ ದುಂದುಭಿಯಂ ಪೊ |
ಯ್ದಾಪದದೊಳ್ ಕುಳ್ಳಿದಂ ಮೃಗೇಂದ್ರಾಸನದೊಳ್ ||೪೭೧||

ಉ|| ಆಗಳವರ್ ಕರಂ ಪೊಡೆದ ದುಂದುಭಿಯುನ್ನತಘೋಷವಷ್ಟದಿ |
ಗ್ಭಾಗಮನೆಯ್ದೆ ತತ್ಪುರದ ವಿಪ್ರಜನಂ ನೆಱೆ ಕೇಳ್ದು ವೇದಶಾ |
ಸ್ತ್ರಾಗಮಕಾವ್ಯನಾಟಕ ವಿಚಕ್ಷಣದಕ್ಷರೆನಿಪ್ಪರೆಲ್ಲರುಂ |
ದಾಗಿ ಯಿಂದೇನೆನುತ್ತೆ ತಿಳಿಯಲ್ ಕಮಲಾಸನವಾಸಕ್ಕೈದಿದರ್ ||೫೭೪||

ವ|| ಅಂತು ಬಂದೊಳಗಂ ಪೊಕ್ಕು ಶ್ವೇತಾಂಬರರಂ ಕಂಡು ನೀವಾರ್? ಎತ್ತಣಿಂ ಬಂದಿರ್? ಇಲ್ಲಿ ಭೇರಿಯುಂ ಪೊಯ್ದು ಸಿಂಹಾಸನದೊಳೇಕೆ ಕುಳ್ಳಿರ್ದಿರ್? ಇಲ್ಲಿ ವಿದ್ವಾಂಸರಾದವರ್ ವಾದಾರ್ಥದಿಂ ಭೇರಿಯುಂ ಪೊಯ್ದು ವಾದಂಗೆಲ್ಲದೆ ಸಿಂಹಾಸನದೊಳ್ ಕುಳ್ಳಿರಲ್ಬಾರದೆನೆ ಆದೊಡೆ ಮಾಣಲಿ ಎಂದು ಅವರ್ ಕೆಳಗೆ ಕುಳ್ಳಿರೆ; ಮತ್ತಮಾ ವಿಪ್ರರ್ ನಿಮ್ಮ ಗುರುವಾರ್? ನೀಮೇಂಕಾರಣಂ ತಪಂ ಬಡುವಿರ್? ಎನೆ ಎಮಗಾರುಂ ಗುರುವಿಲ್ಲ, ನಮ್ಮ ತಪದ ಕಾರಣಮುಂ ಪೇೞ್ವೊಡೆ ರಜಕಚಂದನನ ಕಥೆಯನ್ನರುಳ್ವೊಡೆ ಪೇೞಲಮ್ಮೆವೆನೆ, ಆ ಕಥೆಯೆಂತೆಂದು ವಿಪ್ರರ್ ಕೇಳೆ, ಮನೋವೇಗಂ ಪೇೞ್ದಂ.

ಕಂ|| ಧರೆಗೊಪ್ಪಿಪ್ಪುರ್ಜ್ಜಯನಿಯ |
ಪುರದಧಿಪಂ ಶಾಂತನೆಂಬ ನಾತಂ ದಾಹ ||
ಜ್ವರಮಾಗಿ ವೈದ್ಯರಿಂದಂ |
ಪರಿಹರಿಸದಿರಲ್ಕೆ ನಿತ್ತರಿಸದಿಂತೆಂದಂ ||೫೭೫||

ಎನ್ನಯ ದಾಹಜ್ವರಮಂ |
ಸನ್ನುತಮಾಗಲ್ಕೆ ಬೇಗದಿಂ ಕಳಯಲೊಡಂ ||
ಮನ್ನಣೆಯಂ ಮಾಡಿಯುಮಂ |
ಗುನ್ನತಪದವಿಯನನೂನಮಾನಿಂದೀವಂ ||೫೭೬||

ಕಳಭಾಷಿಣಿವೃತ್ತ.

ಎಂದು ಡಂಗುರಿಸೆ ಕೇಳ್ದುವಣಿಗ್ವರನೂರ್ವನೈ ||
ತಂಮದಂ ಕಳಮೆಸಂದತಿಶೀತಳಮಸ್ತುಮಂ |
ತಂಮಪಂ ನದಿಯತೀರದೊಳೀಕ್ಷಿಸಿ ಬೇಗದಿಂ |
ದೆಂದು ಪೋಗಿ ರಜಕವ್ರಜಮಿರ್ದೆಡೆಗೆಯ್ದಿದಂ ||೫೭೭||

ಕಂ|| ಆರಜಕರೊಳಗೂರ್ವಂ ಸೋ |
ಶೀರಶ್ರೀಚಂದನಂ ಪ್ರಮಾಹದೆ ಬಂದಾ ||

ತೀರವುನೆಯ್ದಲ್ ತೆಗೆದದ ।
ನಾರಯ್ಯದೆ ಕಾಷ್ಠಮೆಂದು ಕಡಿವವಸರದೊಳ್ ॥೫೭೮॥

ಉ॥ ಅಲ್ಲಿಗೆ ಬಂದದಂ ಪರದನೀಕ್ಷಿಸಿ ಚಂದನವುಪ್ಪುದೆಂಬುದಂ ।
ಪುಲ್ಲನೆ ಚಿತ್ತದಿಂದಱಿದದಂ ಕಡಿವೀ ಕಡುಸೇದೆಯೇಕೆ ನೀ ।
ನೊಲ್ಲದೊಡೊಂದು ಪೊತ್ತ ಪೂರೆ ಪುಳ್ಳಿಯನೀವೆ ನಿದರ್ಕೆ ನೀಂ ಕರಂ ।
ತಲ್ಲಳವಾಗದೀವುದೆನೆ ಯಾ ರಜಕಂ ಕುಡೆ ಕೊಂಡು ಬೇಗದಿಂ ॥೫೭೯॥

ಕಂ॥ ಬಂದಾ ಪರದಂ ತೇದಾ ।
ಚಂದನಮಂ ನೃಪತಿಗೆಱೆಯೆ ದಾಪಜ್ವರವೆ ॥
ಯ್ದೊಂದೆ ನಿಮಿಷಕ್ಕೆ ಪಱಿಪಡೆ ।
ಯುಂದಾತಂಗಿತ್ತನೊಲ್ದು ಬೇಡಿದ ಪದಮಂ ॥೫೮೦॥

ವ॥ ಇಂತು ಪರೀಕ್ಷೆಯುಱಿಯದೆ ಚಂದನವನಿಂಧನವೆಂದು ಕಡಿಯುತ್ತಿರ್ದ ರಜಕನನ್ನರ್ ನಿಮ್ಮ ಸಭೆಯೊಳುಳ್ಳೊಡೆ ಪೇೞಲಕ್ಕುಮೆನೆ; ಇಂತಪ್ಪವರೆಮ್ಮ ಸಭೆಯೊಳಿಲ್ಲ; ಅಂಜದೆ ಪೇೞಿಮೆನೆ ಮನೋವೇಗಂ ಮತ್ತಮಿಂತೆಂದಂ—ಮೂರ್ಖಚತುಷ್ಟಯದ ಕಥೆಯನ್ನರುಳ್ಳೊಡೆ ಪೇೞಲಕ್ಕುಮೆನೆ, ಆ ಕಥೆಯೆಂತೆಂದು ವಿಪ್ರರ್ ಕೇಳೆ, ಮನೋವೇಗಂ ಪೇೞ್ಗುಂ.

ಚಂ॥ ಬರುತಿರೆ ಬಟ್ಟೆಯೊಳ್ ಗುರುಗಳೊರ್ವರವರ್ಗಿದಿರಾಗಿ ನಾಲ್ವರ್ ।
ತರುತವರೆಲ್ಲರೊಪ್ಪದಲೆ ಬಂದು ನಮೋಸ್ತುನೆ ಧರ್ಮವೃದ್ಧಿಯುಂ ।
ಬರದವರೊಂದೆ ಸೂಱ್ ಪರಸಿ ಪೋಗುತಿರಲ್ಕವರೆಂದರಿಂತಿವರ್ ।
ಪರಸಿದುದೊಂದೆ ಯಾರಪರಕೆ ನಮ್ಮೊಳದಾರ್ಗದೆಂತು ಪೇೞಿರೇ ॥೫೮೧॥

ಕಂ॥ ಎಂದು ವಿಚಾರಿಸುತೆಲ್ಲಂ ।
ನಿಂದಿದರ್ಗೆ ಪರಕೆ ಯೆಮಗೆ ತಮಗೆನುತುಂ ಭೋ ॥
ರೆಂದುಲಿದು ಗುದ್ದಲಾಟಿಸಿ ।
ನಿಂದು ಬೞಿಕ್ಕೆಯ್ದೆ ತಮ್ಮೊಳಂದಿಂತೆಂದರ್ ॥೫೮೨॥

ಆಗುರುಗಳ್ ಪೋಪಲ್ಲಿಗೆ ।
ಬೇಗಂ ಪರಿದೆಯ್ದಿ ಕೇಳ್ವ ಮಾಪರಕೆಯನಾ ॥
ರಾರ್ಗಿತ್ತಿರೆಮ್ಮೊಳಂದೆನು ।
ತಾಗಳ್ ಪರಿದೆಯ್ದಿ ಕೇಳ್ದರಾಮುನಿವರನಂ ॥೫೮೩॥

ವ|| ಅಂತು ಪೋಗಿ ಕೇಳ್ವುದುಂ ಮುನಿಪರಿವರ್ ಮೂರ್ಖರೆಂಬುದಂ ನಿಶ್ಚಯಿಸಿ ನಾಲ್ವರೊಳೊರ್ವಂಗೆಂದೊಡೆ ಮೂವರಿ ಮುನಿಗು ಮದಱಿಂದೆನಗೆ ಪೊಲ್ಲಮೆಯು ಕ್ಕುಮೆಂದು ವಿಚಾರಿಸಿ ಆತ್ಮರಕ್ಷಣೋಪಾಯಮಪ್ಪ ಅನುಮಾನಮಂ ಮನದೊಳ್ ಬಗೆದು ನಾಲ್ವರೊಳಾ ರತಿಮೂರ್ಖರಾದರವರ್ಗೆ ಪರಿಸಿದೆವೆಂದಾ ಮುನಿಪರತ್ತಲ್ ಪೋಗೆ ಯಾಚತುಷ್ಟಯಮೂರ್ಖರ್ಕಳುಂ

ಕಂ|| ಆಂ ಮೂರ್ಖಂ ತಾಂ ಮೂರ್ಖಂ |
ನೀಂ ಮೂರ್ಖನೆಯಲ್ಲ ನಿನ್ನ ನಾಲ್ಮಡಿಯೆನಿಸಲ್ ||
ನಾಂ ಮೂರ್ಖನೆಂದು ತಮ್ಮೊಳ |
ಗೊಂಮೊಂದೊಡೆ ರೊಂಮೆನುತ್ತೆ ಬರುತಿರೆ ಪಥದೊಳ್ ||೫೮೪||

ವ|| ಅಂತು ವಿವಾದಿಸುತ್ತೆ ಬಂದು ಬಂದು ಪುರಮನೆಯ್ದಿ ಅಲ್ಲಿಯ ಸಭೆಯುಂ ಮೇಳೈಸಿ ಎಮ್ಮ ನಾಲ್ವರೊಳಾರತಿಮೂರ್ಖರ್ ಪೇೞಿಮೆಂದೊಡವರ್ ನಿಮ್ಮ ಮೂರ್ಖತ್ವಮಂ ಪೇೞಿಮೆನೆ ಆ ನಾಲ್ವರೊಳೊರ್ವಂ ಸಭೆಗಭಿಮುಖನಾಗಿ ನಿಂದಿರ್ದಂತೆಂದಂ.

ಕಂ|| ಎನಗಿರ್ವರ್ ಪೆಂಡಿರವ |
ರ್ಗನುವಶನಾಗಿರ್ಪೆ ನಾನವರ್ಗುಚಿತಮುಮಂ ||
ಮನವೊಸೆದಿರ್ವರ್ಗಂ ನೆ |
ಟ್ಟನೆ ತತ್ಸಮನಾಗೆ ಮಾಡುತಿರಲೊಂದು ದಿನಂ ||೫೮೫||

ಮ|| ಸ್ರ|| ಇರ ಸಿದ್ರಾಸಕ್ತಿಯಿಂದಂ ಮಮಭುಜಯುಗದೊಳ್ ಕಾಮಿನೀಯುಗ್ಮ ಮಾಗಳ್ |
ಪರಿತಂದೊಂದಾಖು ಮೇಗಣ್ಗೆಱೆಯುಲುರಿವ ಪರ್ಬತ್ತಿಯಂ ಕರ್ಚಿ ಬೀಯು|
ತ್ತಿರೆ ಬಾಯ್ವಿಟ್ಟೋಡೆ ಬಿಟ್ಟುತ್ತದು ನಯನದೊಳಾಂ ನಂದಸಲ್ಕ್ಯಯನೆತ್ತಲ್|
ಪಿರಿದುಂ ಸಿದ್ರಾವಿಭಂಗಂ ದೊರೆಗುಮೆನುತುಮಿರ್ದಂದು ದೊಳ್ಳಾಯು ತ್ತನೇತ್ರಂ ||೫೮೬||

ಕಂ|| ಅದಱಿಂ ಬೞಿಕ್ಕ ಮೆನಗಾ |
ದುದು ಭಾವಿಸೆ ದೊಳ್ಳಗಣ್ಣನೆಂಬೀನಾಮಂ ||
ಪದೆಪಿಂದವಧರಿಸುವುದಿಂ |
ತಿದೆನ್ನ ಮೂರ್ಖತ್ವಮೆಂದು ಕೆಲದೊಳ್ ನಿಂದಂ ||೫೮೭||

ವ|| ಅಂತು ಕೆಲಕ್ಕೆ ಸಾರ್ವುದುಂ ಮತ್ತೊರ್ವಂ ಬಂದಿಂತೆಂದಂ;—ಎನಗೆ ಕರಿ ದಿಭಯೆಂಬರಿರ್ವರ್ ಪೆಂಡಿರ್, ಅವರ್ ಸಿಚ್ಚಮ್ಕೊರ್ವರೊಂದೊಂದು ಕಾಲನೊರ

ಸುವರ್. ಒಂದು ದಿನಮಿರ್ವರುಂ ಕಾಲಂ ಪೊಸುತಿರ್ದು ಕರಿಯೆಂಬ ಪಿರಿಯ ವಲ್ಲಭೆ ಬಲಗಾಲಂ ಪೊಸುತಿರ್ದು ಬಿಸುನೀರಂ ತರಲ್ಪೋಗೆ ದಿಭಿಯೆಂಬ ಕಿಱಿಯವಲ್ಲಭೆ ಯೆಡಗಾಲಂ ಪೊಸುತಿರ್ದು ಕರಿಯೊರಸಿದ ಬಲಗಾಲ ಮೇಲಿರಿಸಿ ತಾನುಂ ಬಿಸುನೀರಂ ತರಲ್ಪೋಗೆ, ಆ ಕರಿ ಬಿಸುನೀರಂ ತಂದು ನೋಡಿ ಆನೊರಸಿದ ಕಾಲಮೇಲೆ ತಾನೊರಸಿದ ಕಾಲಸಂಜದೆ ಇರಿಸಿದಳೆಂದು ಕೋಪಿಸಿ ಒನಕೆಯಿಂದಾ ಕಾಲಂ ಮುಱಿಯೆ ಕುಟ್ಟಿದಳ್. ಆ ದಿಭಿ ಪಿಂತನೆ ಬಂದು ಆ ನೊರಸಿದ ಕಾಲಂ ಮುಱಿದಳ್, ಅವಳೊರಸಿದಕಾಲಂ ಮುಱಿವೆನೆಂದು ಅದಂ ಮುಱಿಯೆ ಕುಟ್ಟಿದಳ್. ಅಲ್ಲಿಂದೆನಗೆ ಖಂಜನೆಂಬ ಪೆಸರಾಯ್ತು. ಇದೆನ್ನ ಮೂರ್ಖತ್ವಂ ಎಂದು ಬಿನ್ನವಿಸೆ; ಮತ್ತೊರ್ವಂ ಬಂದು ಎನ್ನ ಬಿನ್ನಪಮನವಧರಿಸುವುದೆಂದಿಂತೆಂದಂ :—

ಚಂ|| ಪರಿಕಿಸೆ ಪೆಂಡಿರಿರ್ವರೆನಗಂತವರೊಳ್ ಸುಖಗೋಷ್ಠಿಯಿಂ ನಗು |
ತ್ತಿರಲವರೆಂದರರ್ಕನುದಯಂ ಬರೆಗಂ ಸತಿ ಮೌನದಿಂದಮಾ |
ರಿರದೊಡೆ ಪನ್ನೆರಡ್ಸವಡಿಮುಂಡಿಗೆ ಯೊಮ್ಮಣತುಪ್ಪವಣ್ಣ ವಾ |
ಲ್ವೆರಸಿ ಸಿತಾನ್ವಿತಂ ತೆಱುವರೆಂದೊಡೆ ಮೌನದೊಳಿರ್ದೆವಲ್ಲರುಂ ||೫೮೮||

ಕಂ|| ಆಸಮಯದಲ್ಲಿ ತಸ್ಕರ |
ನೋಸರಿಸದೆ ಕನ್ನವಿಕ್ಕಿ ಮನೆಯೊಳಪೊಕ್ಕಾ ||
ಸಾಸಿಗನಾವಿರ್ದರೆ ಕಂ |
ಡಾಸಂಕಿಸದೊಡವೆಯೆಲ್ಲಮಂ ನೆಱೆ ಕೊಂಡಂ ||೫೮೯||

ಅದಱಿಂ ನಿಲ್ಲದೆ ತಣಿವಂ |
ಬದಿನುಂಡಂ ಪಂಚಭಕ್ಷ್ಯ ಪಾಯಸವಟ್ಟ ||
ದ್ದಾದನಳಿಪಿ ಬಟ್ಟಿಕವೆನ್ನು |
ಟ್ಟುದುಮಂ ಪೆಂಡಿರ್ಕಳುಟ್ಟುದಂ ಸುಲಿಗೊಂಡಂ ||೫೯೦||

ಮಡದಿಯ ಪಚ್ಚಡಮಂ ಸುಲಿ |
ವೆಡೆಯೊಳ್ ಕೇಳಣ್ಣ ಕಿವಿಯ ಕೊಪ್ಪಂ ನೀಂ ಕೊ ||
ಳ್ವೊಡೆ ನೋಯದಂತೆ ತೆಗೆಯೆಂ |
ದೊಡೆ ಮೋನಂಗೆಟ್ಟಳಿವಳ ಸೋಲ್ತವಳೆಂದೆಂ ||೫೯೧||

ವ|| ಅಂತು ಸೋಲ್ತಳೆಂದಾಕೆಯುಂ ಪನ್ನೆರಡು ಸವಡಿಮುಂಡಿಗೆಯುಂ ಒಮ್ಮಣತುಪ್ಪಮುಂ ಪಾಲುಂ ಶರ್ಕರೆಯುಂ ತಂದೀಗಳಿಂತೆ ಕುಡಲ್ವೇೞ್ಕುಂದು ಎದುರ್ ಕುಣಿದಾಡಿದೆಂ. ಪೋದ ಪೊನ್ನುಂ ಭಂಗಾರಮುಂ ಲೆಕ್ಕಿಸದೆ ಇದನೇ ಪಿರಿದು ಮಾಡಿ ಬಗೆ

ದೇಂ. ಇದೆನ್ನ ಮೂರ್ಖತ್ವಮೊಂದು ಪೇೞ್ದು ಆತಂ ಕೆಲಕ್ಕೆ ಸಾರೆ, ಮತ್ತೊರ್ವಂ ತನ್ನ ಮೂರ್ಖತ್ವಮಂ ಪೇೞಲ್ ತಗುಳ್ದಂ.

ಉ॥ ಎನ್ನ ಪಿತಂ ಮಹಾಪ್ರಭು ಸಮಾನಗೃಹಸ್ಥನ ಪುತ್ರಿಯೋರ್ವಳಂ ।
ಚೆನ್ನೆಯನೊಲ್ದು ತಂದೆನಗೆ ಮಾಡಿ ವಿವಾಹಮನಾವಧೂಟಿ ತಾಂ ।
ತನ್ನಯ ತಾಯತಂದೆಯನಗಲ್ದಿರಲಾಱದೆ ಯೌವನಾಂಬರಂ ।
ಸನ್ನುತಮಪ್ಪಿನಂ ಸಲೆ ತವರ್ಮನೆಯೊಳ್ ಪಲಕಾಲಮಿರ್ಪುದುಂ ॥೫೨॥

ಕಂ॥ ಅಂತಿರೆ ಕೆಲವುದಿನಕ್ಕಾ ।
ಕಾಂತೆಯನೊಡಗೊಂಡು ಬರ್ಪನಂಬೀಬಗೆಯೊೞ ॥
ರಂತೆನ್ನ ಮನದೊಳಂ ದಯಿಸ ।
ಲಾಂ ತಾಯ್ಗಂ ತಂದೆಗುಸಿರಲವರಿಂತೆಂದರ್ ॥೫೩॥

ವ॥ ಮಗನ ಸೊಸೆ ಬಪ್ಪಾಕೆ, ಬವಸದೊಳ್ಳೆದಾಱು ಸೂೞುಂಡಲ್ಲದೆ ನಿಲಲಾಱಳ್. ಬೀಯಗರ ಮನೆಯೊಳಿದಂ ಕಂಡೊಡೆ ಮುಗುಳಾಡುವರ್. ಅದಱಿಂ ಕಿಱಿದಾಗಿ ಉಣ್ಬುದು ಕರದಲ್ಲಿ ಪಿರಿದುಂ ಪ್ರಾರ್ಥಿಸಿಕೊಳ್ವುದೆಂದು ಬುದ್ಧಿಯುಂ ಪೇೞೆ, ಅಂತೆಗೈವೆನೆಂದು ಪೋಗಿ ಆವಾವ ತೆಱದೊಳ್ ಪ್ರಾರ್ಥಿಸಿದೊಡಂ ಉಣ್ಣದೆ ಪಸಿದಿರೆ, ಅನಿತಱೊಳ್ ಬಿಸರುಹಸಖನಪರಗಿರಿಯುಮಂ ಸಾರ್ದಂ. ಅಂತು ನೇಸರ್ಪಡುವುದುಂ ರಾತ್ರಿಯೊಳ್ ಮತ್ತಮುಣಲಪ್ಪಿಸಿದೊಡಾ ನೊಲ್ಲದಿರೆ, ಪಸಿವೆನೆಂದಾಗಳ್ ಅಡಿಗೆಯುಂ ಮಾಡಿ ಉಣಲಿಕ್ಕೆಂದು ಎನ್ನ ಪೆಂಡತಿಗೆ ಪೇೞ್ದಿಕ್ಕಿಯುಂ ನೇರ್ಪಡಿಸಿ ಆಂ ಪಟ್ಟಿರ್ದ ಮಂಚದ ಸಮೀಪದೊಳಿರಿಸಿ ಎಲ್ಲಂ ತಂತಮ್ಮ ಶಯನಸ್ಥಾನಕ್ಕೆ ನಿದ್ರೆಗೆಯ್ಯಲ್ಪೋಗಲೊಡನೆ.

ಚಂ॥ ಸತಿಸಹಿತಾನಿರುಳ್ ಪಿರಿದುಸಿದ್ರಿಯೊಳಿರ್ದುದಯಕ್ಕೆ ಮುನ್ನಮಾ ।
ಸತಿ ಪೊಱಮಟ್ಟು ಪೋಗೆ ಪಸಿವಿಂಗಿರಲಾಱದೆ ಕೂಡೆ ನೋಡಿ ಪೆಂ ।
ಡತಿ ಸಮವಾಗಿ ನೇರ್ಪಡಿಸಿದಕ್ಕಿಯಿರಲ್ ನೆಱೆ ಬಾಯ ಬೀಗಲಾ ।
ರ್ತತೆ ಪಿರಿದಾಗಿ ತೀವಿಕೊಳಲಾಗಳೆ ಕಾಂತೆ ಮಗುಳ್ದು ಬೇಗದಿಂ ॥೫೪॥

ಕಂ॥ ಬಂದಾಕೆ ನುಡಿಸೆ ಬಾಯ್ವರಿ ।
ವೆಂದದೆ ನೇರ್ಪಡಿಸಿದಕ್ಕಿ ತೀವಿರೆ ನುಡಿಯುಂ ॥
ಕುಂದಿರೆ ಸತಿಯಿದು ಸೋಜಿಗ ।
ವೆಂದೀಕ್ಷಿಸಿ ತೆಗೆದು ಗಲ್ಲಮಂ ಕಂಡಾಗಳ್ ॥೫೫॥

### ಕಳಾಭಾಷಿಣಿ ವೃತ್ತಂ.

ಕೆಟ್ಟೆನೆನ್ನ ಪತಿಗಾದುದು…ರೋಗಮಿಂ ।
ದೊಟ್ಟೆಯುಂ ತೊದಱಿಯುಪ್ಪೊಡೆ ಯಾಮಸೆಯೆಲ್ಲಮುಂ ॥
ತೊಟ್ಟನೆಯ್ದು ಪರಿತಂದವರೀಕ್ಷಿಸೆ ಬೇಗದಿಂ ।
ಪುಟ್ಟದೀರುಜೆಗೆ ತಕ್ಕನುಮಾವುದೆನುತ್ತಿರಲ್ ॥೫೯೬॥

ಕಂ॥ ಇವನತಿಮೂರ್ಖತೆಯುಂ ನೋ ।
ಡುವೆನೆನುತುಂ ನಾಗರಾಜನವನೀತಳದಿಂ ॥
ದವೆ ಬರ್ಪ ತೆಱದಿನೇಱಿದ ।
ನವೆಯುವದಿಂ ದುವಯುಶಿಖರಿಶಿಖರಮನರ್ಕಂ ॥೫೯೭॥

ವ॥ ಅಂತು ನೇಸರ್ಮೂಡುವುದುಂ ಹಾಲಸಿಗನೊರ್ವಂ ವಾತಂ, ಪಿತ್ತಂ, ಶ್ಲೇಷ್ಮಂ, ತಲೆನೋವೆ, ಕಣ್ಣಬೇನೆ, ಗುಲ್ಮಂ, ಕ್ಷಯಂ, ಕಾಮಾಲ, ಪಾಂಡು, ಕುಷ್ಟ ಮಿಂದಾದಿಯಾದ ರೋಗಮೆಲ್ಲಮುಂ ಕಳೆವೆನೆನುತ್ತೆ ಕೇರಿಕೇರಿಯುಂ ಸುತ್ತಿ ಬರುತ್ತಿರ ಕಂಡು ಕರೆದಾ ವೈದ್ಯಂಗ ತೋಱೆ ಕಂಡಾವೈದ್ಯಂ ರೋಗನಿದಾನಚಿಕಿತ್ಸೆಯುಂ ತಿಳಿದು ರೋಗಮೆತ್ತಲೆಂದು ತನ್ನ ಮನದೊಳಱಿದು, ಇವಂ ಪಸಿದು ಏನಾನುಮುಂ ಮುಕ್ಕದೆ ಮಾಣೊಂಬು ಗಲ್ಲಮುಂ ತಡವಿ ನೋಡಿ ಅಕ್ಕಿ ತೀಪಿದುದನಱಿದು, ಈ ರೋಗಕ್ಕೀ ಕ್ಷಣದೊಳಗೌಷಧಮುಂ ಮಾಡದೊಡೆ ಸಾಯುಗುಮೆನೆ, ಆ ಮನೆಯುವ ರೆಲ್ಲಂ ಹಾಲಸಿಗನ ಕಾಲಮೇಲೆ ಬಿದ್ದು ನೂರುಗದ್ಯಾಣ ಕಸವರಮುಂ ಕೊಟ್ಟು ಪ್ರಾಣಮುಂ ಕಾವುದೆನೆ ಆತಂ ಶಸ್ತ್ರದಿಂ ಗಲ್ಲಮಂ ಪಾಳಿಸಿ ಪ್ರಣಮೆರಸಿದಕ್ಕಿಯುಂ ಕತ್ತಿಯಿಂದೆತ್ತಿ ತೋಱಿ, ಇದು ತಂಡುಲವ್ಯಾಧಿಯೆಂದು ಪೆಸರನಿಟ್ಟು ಮನೆಯುವರೆಲ್ಲ ರಂ ತೊಲಗಿಮೆಂದು ಬಂದು ಕಂಬಳಿಯುಂ ಪೊದೆಯಿಸಿದೊಡೆ ಆ ತಂಡುಲಮುಂ ಪೊಳ ಕ್ಕನುಗಿದು ಕಳೆದಂ. ಅಂದಿನಿಂದೆನ್ನನೆಲ್ಲರುಂ ಗಲ್ಲಪೋಟನೆಂಬರ್ ಇದೆನ್ನ ಮೂರ್ಖತ್ವಂ ಎಂದು ಪೇಱೆ, ಕೇಳ್ದು ಧರ್ಮಾಧಿಕರಣರ್ ನೀವೆಲ್ಲರುಂ ಸಮಾನ ಮೂರ್ಖರ್ ಆ ಪರಕೆಯುಂ ನೀವೆಲ್ಲರುಂ ಪಂಚಿಕೊಳ್ಳಿಮೆಂದು ಪೋದರ್.

ಕಂ॥ ಇಂತಪ್ಪತಿಮೂರ್ಖರ್ಗಾ ।
ವೆಂತುಂ ಭೀತಾತ್ಮರಪ್ಪೆ ವೆದುಕಾರಣದಿಂ ॥
ದಂತಪ್ಪವರೀ ನಿಮ್ಮ ಸ ।
ಭಾಂತರದೊಳಗಿಲ್ಲಲೇ ವಿಚಾರಿಸಿ ಪೇೞಿಂ ॥೫೯೮॥

ಮ॥ ಸ್ರ॥ ಎನೆ ಕೇಳ್ದು ವಿಪ್ರರೆಲ್ಲಂ ಕಳಕಳಿಸಿ ನಗುತ್ತೆಂದರಿಂತಪ್ಪ ಮೂರ್ಖರ್ ।
ಜನಿಸರ್ ನಮ್ಮೀ ಮಹಾಪತ್ತನದೊಳದಕೆ ನೀಮಂಜಲೇವೇಡ ಪೇೞಿಂ ।

ದೆನೆ ಕೇಳ್ದಿಜ್ಞಾಭಿರಾಮಂ ಸುಖಮುಖಕಮಳಾರ್ಕಂ ಪರತ್ರೈಕಚಿತ್ತಂ ।
ಜಿನಧರ್ಮಾಂಭೋಧಿಚಂದ್ರಂ ಖಗಕುಳತಿಳಕಂ ಪೇಳಲುದ್ಯುಕ್ತನಾದಂ ೧೯೯॥

ವ॥ ಅದೆಂತೆಂದೊಡೆ ಘೂರ್ಜರದೇಶದೊಳ್ ವಂಶಗ್ರಾಮಮೆಂಬ ಪಟ್ಟಣವಲ್ಲಿ ಎಮ್ಮನ್ವಯಂ ಶ್ವೇತಪಟಾನ್ವಯಂ; ಆಪೂರ ಗಾವುಂಡರ ಮಕ್ಕಳ್. ಎಮಗೆ ಕುಱಿಗಳ್ ಪಿರಿದೊಳವು ಅವಂ ಕಾಯುತ್ತ್ಯೋಗಿ ಅಡವಿಯಂ ತೊಳಲುತ್ತೆ ಬರುತ್ತೆ ತುಱುಗಿ ಖಿಱುಪ ಫಲಂಗಳಿಂದೊರಗಿದ ಬೆಳವದಮರನಂ ಕಂಡು ನಾವಿರ್ವರುಂ ಮೆಲಲ್ಬಯಸಿ ಸಿಡಿವಿಡಿಗೊಳುತ್ತಿರ್ದು ಪೂರ್ವೋಕ್ತಮಂ ನೆನೆದೆವದೆಂತೆನೆ ;—

ಶ್ಲೋ॥ ಸರ್ವೌಷಧೀನಾಮಶನಂ ಪ್ರಧಾನಂ
ಸರ್ವೇಷು ಪಾನೇಷು ಜಲಂ ಪ್ರಧಾನಂ ।
ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ
ಸರ್ವಸ್ಯ ಗಾತ್ರಸ್ಯ ಶಿರಃಪ್ರಧಾನಂ ॥

ಕಂ॥ ಎಂದು ಪಿಡಿದಿರ್ದ ಕತ್ತಿಗೆ ।
ಯಿಂದಂ ಶಿರವರಿಯೆ ಕೊಱೆದು ಮೇಗಣ್ಗಿಡಲಾ ॥
ನಂದದೊಳ್ ತುದಿಗಡರ್ದು ಕೊಂ ।
ಬಿಂದಂ ಕೊಂಬಿಂಗೆ ಪಾಯ್ದು ಬೇಗದಿನಾಗಳ್ ॥೨೦೦॥

ಮ॥ ತನಿವಣ್ಣಂ ಪಸಿವೋಡುವಂತಿರೆ ಬಸಿರ್ದೀವಲ್ ಸಿರಂ ಕೊಯ್ದುದಾ ।
ಲ್ವಿನೆಗಂ ತಿಂದಿಚಿತಂದು ಭೂತಳದೊಳಿರ್ದಾ ಮುಂಡದೊಳ್ ಪತ್ತೆ ಭೋಂ ।
ಕನೆ ನಾವಿರ್ದು ಬರುತ್ತೆ ಯೆಮ್ಮ ಕುಱಿಯೆಲ್ಲಂ ಕೆಟ್ಟುಪೋಗಲ್ಕೆ ಕಾ ।
ನನದೊಳ್ ಕೂಡೆ ತೊಳಲ್ದು ನೋಡಿ ಯುವನೊಂದಂ ಕಾಣದಾವಿರ್ವರುಂ ॥

ಕಂ॥ ಮನೆಯತ್ತಲ್ ಪೋಗೆ ಪಿತಂ ।
ಕನಲ್ಗುಮೆಂದಂಜಿ ಪಲವು ನಾಡಂ ಕಳಿದೊ ॥
ಯ್ಯನೆ ಬಂದೆವೀಪುರದ ಚ ।
ಲ್ವನೆ ನೋಡುವಮೆಂಬುದೆಮ್ಮ ಬಗೆಯೊಳ್ ಪುಟ್ಟಲ್ ॥೨೦೧॥

ವ॥ ಎನೆ ಕೇಳ್ದು ವಿಪ್ರರಿಂತೆಂದರ್.

ಇಸಿತೊಂದು ಪುಸಿಯನಾಡುವ ।
ಮನುಷ್ಯರಂ ಕಂಡುದಿಲ್ಲ ಕೇಳ್ದುಱಿಯೆವು ಮೇಣ್ ॥
ಅನುಚಿತಮೀನುಡಿ ನಿಮಗಂ ।
ದೆನೆ ಕೇಳಾ ಶ್ವೇತಪಟರವರ್ಗಿಂತೆಂದರ್ ॥೨೦೨॥

ಕಂ|| ನೀವಾಡುವ ಪುಸಿಯೆಲ್ಲಂ ।
ಭಾವಿಸುವೊಡೆ ಸತ್ಯಮೆಂಬಿರೆಂದೊಡೆ ನಮಗೇಂ ॥
ಆವಾಡಿದಸಿತು ನುಡಿಯೊಳ ।
ಗಾವುದು ಪುಸಿ ಪೇೞಿಮೆಂದೊಡವರಿಂತೆಂದರ್ ||೬೦೪||

ಅರಿದೀಡಾಡಿದ ಮನುಜನ ।
ಶಿರಮುರ್ವೀರುಹಮನಡರ್ದು ತುದಿಗೊಂಬಿನೊಳ ॥
ಚ್ಚರಿಯೆನಿಸುವ ತನಿವಣ್ಣಂ ।
ಪಿರಿದಾಗಿರೆ ತಿಂದು ತಣಿದುದೆಂಬುದು ಚಿತ್ರಂ ||೬೦೫||

ವ|| ಅದಲ್ಲದೆಯುಂ ನೆಲವೊಳಿರ್ದ ತಮ್ಮಟ್ಟೆಗಳ ಬಸಿರ್ ತೀವಲೊಡನೆ ಮರ ದಿಂದಿೞಿದು ಬಂದು ತಮ್ಮಟ್ಟೆಗಳ ಕೊರಲೊಳ್ ಪತ್ತಿತೆಂಬುದು ಪುಸಿಯುಂ ಚೋದ್ಯಮುಮಲ್ಲದೆ ಸತ್ಯಮಂಟೆ ಎನೆ,

ಶಾ|| ನಾವಿಂದುಳ್ಳುದನಾಡೆ ಯೆಯ್ದೆ ಪುಸಿಯೆಂದೇಕೀೞಿದಂಗೆಯ್ವಿರೈ ।
ನೀವಲ್ಲಂ ನೆಱೆ ಪೇೞ್ವ ಪುಣ್ಯಕಥನಂ ರಾಮಾಯಣಂ ಭಾರತಂ ।
ತಾವಲ್ಲಂ ಪುಸಿಯೆಂದ. ನೀವಱಿಯಿರೇ ಪೇೞೆಂದೊಡಂದರ್ ದ್ವಿಜರ್ ।
ನೀವಂಬೀ ಪುಸಿಯೆಮ್ಮ ಧರ್ಮಕಥೆಯೊಳ್ ಕೇಳ್ದುಳ್ಳೊಡಂ ಪೇೞಿರೇ ||೬೦೬||
ವ|| ಎನೆ ಕೇಳ್ದು ಶ್ವೇತಾಂಬರಧಾರಿಗಳಿಂತೆಂದರ್

ಕಂ|| ಸದಮಳಗರ್ಭಂ ಕಾರ್ಗಾ ।
ಲದಮೇಘಂ ಮೊಳಗೆ ನವಿಲ್ಗೆ ಪುಟ್ಟುವವೋಲ್ ಪು ॥
ಟ್ಟಿದುದೊರ್ವ ಸತಿಗೆ ಗರ್ಭಂ ।
ಮುದದಿಂದಂ ಪುರುಷಮೇಘರವಮುಂ ಕೇಳಲ್ ||೬೦೭||

ಮ||ಸ್ರ|| ನವಮಾಸಂ ತೀವೆ ಪತ್ತಳ್ ಬೞಿಯು ತಲೆಯು ನಾಕಾಂತೆ ಯಾಮಸ್ತಕಂ ಕಾ।
ಡುವುದೆರ್ದಿರ್ದೂರೊಳೆಲ್ಲಾ ಮನೆಮನೆಗಳೊಳಂ ಪೊಕ್ಕು ಪಾಯ್ದಟ್ಟದಿಂದ।
ಟ್ಟವನಾಪತ್ತಿತ್ತು ಮತ್ತಂ ನೆಲಹನಡರ್ದು ತಾನಾರ್ತದಿಂ ಪಾಲ್ಮೊಸರ್ತು।
ಪ್ಪವನೆಂತುಂ ತಿಂದೊಡೊಂದರ್ ದಧಿಮುಖನಿವನೆಂದೆಲ್ಲರನ್ವರ್ಥಮಾಗಲ್ ||೬೦೮||

ವ|| ಅಂತು ದಧಿಮುಖನೆಂಬ ನಾಮದಿಂ ವರ್ತಿಸುತ್ತಿರೆ ಕೆಲವು ದಿನಕ್ಕೆ ಆಯೆಡೆಗಗಸ್ತ್ಯಂ ತೀರ್ಥಯಾತ್ರೆಗೆ ಪೋಗುತ್ತುಂ ಬರೆ ಕಂಡಾಮುನಿಗೆಂದಂ ;—ಎತ್ತಣಿಂಬಂದಿರ್ ? ಎಲ್ಲಿಗೆ ಪೋದಪಿರ್ ? ಇಂದೆನ್ನ ಮನೆಯೊಳಭ್ಯಾಗತರಾಗಿ ಮೆನಲಾತನಿಂತೆಂದಂ—ನಿನಗೆ ಕಳತ್ರಮಿಲ್ಲ, ನೀಂ ಪೆಱರ ಮನೆಯೊಳಿರ್ಪ. ನೀನೆಂತಭ್ಯಾಗತೆಯುಂ

ಮಾಡಿಸಲಾರ್ಪೆ? ಏನೊಂದಂ ಪೆಱರ ಮನೆಯೊಳ್ ಮಾಡೆ ಪುಣ್ಯಮಿಲ್ಲ. ನೀಂ ಮದುವೆಯಾಗಿ ಗೃಹಸ್ಥನಾಗಿರ್ದಲ್ಲದೆ ನಿಮ್ಮ ಮನೆಯೊಳಮಗುಣಲಾಗದೆಂದು ಪೋಗಲ್, ಇತ್ತಲ್ ದಧಿಮುಖಂ ತಮ್ಮ ತಾಯಲ್ಲಿಗೆ ಬಂದು-ಅಬ್ಬಾ ಎನಗೆ ಮದುವೆಯಾದಲ್ಲದೆ ಮಾಡಿದ ದಾನಧರ್ಮಂ ಸಲ್ಲದುಗಡಂ ಎನಗೊರ್ವ ಪೆಂಡತಿಯುಂ ಮಾಡಿ ಮೆನೆ, ಅಂತಗೈವೆನೆಂದು ಕೂಡೆ ನೋಡಿ, ಒರ್ವನಿರ್ಧನಂ ಸಾಲ್ವನಿತು ಪೊನ್ನಂ ಕೊಟ್ಟೊಡೆ ಕೂಸಂ ಕುಡುವೆನೆನೆ ಆತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಮದುವೆಯುಂ ಮಾಡಿ ಕೆಲವಾನುಂ ದಿವಸಮಿರುತ್ತಿರೆ, ಆ ದಧಿಮುಖನ ತಾಯು' ಇಂತೆಂದಳ್.

ಕಂ|| ಗಳಿಸಿರ್ದ ಧನದೊಳೊಂದಿನಿ |
ತುಳಿಯದೆ ನಿನ್ನಯ ವಿವಾಹದೊಳ್ ಪೋದುದು ನಾಂ ||
ಸಲಹಲ್ ನೇಱಿಯೆಂ ನೀಮಿಾ |
ಗಳ ಪೋಪುದು ಬರ್ದುಕಲಾರ್ಪ ತಾಣಕ್ಕೆಂದಳ್ ||೬೦೯||

ವ|| ಎನಲಂತೆಗೈವೆನೆಂದು ದಧಿಮುಖಂ ಪೆಂಡತಿಯುಂ ಕರೆದು ಪೋಪೆವೇೞೆನಲ್ ಆಕೆ ತನ್ನ ಗಂಡನ ತಲೆಯಂ ನೆಲಹಿನೊಳಿಕ್ಕಿ ಪೆಗಲೊಳ್ ತಳೆದು ಪೋಗಿ ಬಂದು ಮಹಾಪತ್ತನಮನೆಯ್ದಿ ಅಲ್ಲಿ ಜೂದಾಡುತಿರ್ದ ದೇಗುಲದ ತೋಟಿಯೊಳಾ ನೆಲಹಂ ಕಟ್ಟಿ ಬಟ್ಟೆಯೊಗೆಯಲ್ಕ್ಕೆ ಆ ಜೂದುಗಾಱರ್ ತಮ್ಮೊಳ್ ತಾಮೆ ಕಲಹಂಗೆಯ್ದು ಕಡಿತಲೆಯುಂ ಕೊಂಡೊರ್ವನೊರ್ವನ ಶಿರಮುರುಳೆ ಪೊಯ್ಯಲ್ ಆ ಕಡಿತಲೆಯ ಕೊನೆ ತಾಗಿ ನೆಲಹು ಪಱಿದು ನೆಲಹಿನೊಳಿರ್ದ ದಧಿಮುಖನ ಶಿರಂ ಬೀೞುತ್ತೆ ಜೂದುಗಾಱನ ಮುಂಡದೊಳ್ ಪತ್ತಿ ಎರ್ದು ಕುಳ್ಳಿರ್ಪುದುಂ ಆಸಮಯದೊಳ್,

ಕಂ|| ಒಲವಿಂ ಬೇಡಿ ಮಗುಳ್ದು |
ಲಲನೆ ಕರಂ ಬೇಗದಿಂದೆ ಪರಿತಂದಾದೇ ||
ಗುಲದೊಳಗೆ ಪೊಕ್ಕು ನೆಲಹಿನ |
ತಲೆಗವಯುವವಾಗಿ ಕೆಳಗೆ ಕುಳ್ಳಿರ್ಕಂಡಳ್ ||೬೧೦||

ಅಪ್ಪುದನಜಹರಿರುದ್ರರ್ |
ತಪ್ಪಿಸಲಾರ್ತಪರೆ ಬಱಿಯು ತಲೆಗಂಗಮುಮಾ ||
ಗೊಪ್ಪುವುವಘಟಿತಮಲ್ಲದೆ |
ಯೊಪ್ಪಕ್ಕುಮ್ಮಡಿಸಿದಂತಿರಾಯ್ತೆನಗೀಗಳ್ ||೬೧೧||

ಮ|| ಎನುತಾ ಕಾಮಿನಿಕಾಂತನೊಂದು ಕೆಲದೊಳ್ ಕುಳ್ಳಿರ್ಪುದುಂ ಜೂದುಗಾ |
ಱನ ಚಿತ್ತಪ್ರಿಯಕಾಂತೆ ಬಂದು ಭರದಿಂದೆನ್ನಾಣ್ಮನಿಂತೀತನೆಂ |

ದೆನೆ ಯಾಕಾಂತೆಯು ರೆನ್ನ ತನ್ನ ಪತಿಯೊಂದೋರೆರ್ವರೊಳ್ ಕಾದುತಿ |
ರ್ಪನೆಗಂ ಮಾಣಿಸಿ ಬಿರ್ದ ನಾಲ್ವರವರಂ ಧರ್ಮಸ್ಥಳಕ್ಕಟ್ಟಿದರ್ ||೬೧||

ವ|| ಅಂತು ಕಳಿಪೆ ಧರ್ಮಾಧಿಕರಣಂಗಳಲ್ಲಿಗೆ ಬಂದು ತಂತಮ್ಮ ವೃತ್ತಾಂತಮಂ ಸವಿಸ್ತರಂ ಪೇಳೆ ಕೇಳ್ದು ಸಿಶ್ಚೈಸಿ ತಮ್ಮನಿಬರುಂ ಪೂರ್ವೋಕ್ತಿಯಂ ವಿಚಾರಿಸಿ ಯಿಂತೆಂದರ್.

ಶ್ಲೋ|| ಸರ್ವೌಷಧೀನಾಂ ಮಶನಂ ಪ್ರಧಾನಂ
ಸರ್ವೇಷು ಪಾನೇಷು ಜಲಂ ಪ್ರಧಾನಂ ||
ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ
ಸರ್ವಸ್ಯಗಾತ್ರಸ್ಯ ಶಿರಃಪ್ರಧಾನಂ ||

ಎಂದು ಶಿರವಾರವಲ್ಲಭನದು ಅವರ್ಗೆ ಪತಿಯಕ್ಕುಂ ಎಂದು ಧರ್ಮಾಧಿಕರಣಂಗಳ್ ಪೇಳ್ದು ಪೋಪರಂ ಇದು ನಿಮ್ಮ ಪುರಾಣದೊಳುಂಟೋ ಇಲ್ಲವೋ ಪೇಳಿಮೆನೆ, ಅವರ್ ಇದು ಪ್ರಸಿದ್ಧಂ ಎಂತಿಲ್ಲಕ್ಕುಮೆನೆ; ಆದೊಡೆ ಪುಟ್ಟುವಲ್ಲಿ ಬುಖಿಯ ಸಿರಂ ಪುಟ್ಟಿ ಮತ್ತೊಂದು ಮುಂಡದೊಳ್ ಪತ್ತಿತೆನಲಕ್ಕುಂಗಡ, ಎಮ್ಮ ಶಿರಂ ಎಮ್ಮ ಮುಂಡದೊಳಿರ್ದಾಗಳ್ ಪತ್ತಿತೆಂದೊಡೆ ಪುಸಿಯುಂ ಚೋದ್ಯಮೆಂಬಿರ್ ಎನೆ, ಆ ಮಾತಂ ಕೇಳ್ದು ವಿಪ್ರರೆಲ್ಲಂ ಬೆರಗಾಗಿ ಮರುಮಾತಂ ಕುಡದಿರ್ದರ್

## 29. ಘೋಷ ವರ್ಣನೆ.

(ಇದು ನೇಮಿಚಂದ್ರನಿಂದ ರಚಿತವಾದ ಲೀಲಾವತೀಗ್ರಂಥದಿಂದ ಉದ್ಧೃತ
ವಾಗಿದೆ. 92ನೆಯ ಪುಟವನ್ನು ನೋಡು).

ಕಂ॥ ಆನದಿಯ ತೀರದೊಳ್ ಸುರ ।
ಧೇನೂಪಮಧೇನು ತಳ್ತ ತೋಷಂ ವಿಹಿತಾ ॥
ನೂನಮದವೃಷಭಘೋಷಂ ।
ತಾನೆಸೆರ್ದುದು ವತ್ಸವಿಪುಳಘೋಷಂ ಘೋಷಂ ॥೬೧೩॥

ವು॥ ಕಱುವಂ ಪೊರೆಸಿ ಮೆಲ್ಲನೊಕ್ಕು ತುಱುವಂ ತಾಯ್ಗೊಂಡಿನೊಳ್ ಒಟ್ಟುವುಂ ।
ದುಱುವಾಯ್ತೆರ್ಳಗಂದಿಗಳ್ ತೂಱಿದು ತೋರಂಬೆತ್ತು ಬಲ್ಗೆಚ್ಚಲೂ ।
ಳ್ಪೊಱೆಯುಂ ಪರ್ವಿಡಿಸೋಂದಿಪುಂಕಿ ಮೊಲೆಯಿಂ ಪಾಯ್ತಿರ್ಪ ಪಾಲಿಂದ ಪಾ।
ಲ್ತೊಱೆಯಂತಂತೊಱೆಯುಪ್ಪುದಂದೊಡವ ಸಿನ್ನೇನೆಂದು ಬಣ್ಣಿಪ್ಪುದೋ ॥

ಕಂ॥ ತುಱು ಸೀರ್ಗೆ ಕವಿವೊಡಂತಾ ।
ತೊಱೆ ಪರಿಯುಡುಗಿರ್ದು ದಿನಿಸು ಬೇಗಮದನಲಾ ॥
ತುಱುಪಟ್ಟಿಯ ತುಱುಗಳನೇ ।
ತೆಱದೊಳವಾಂ ತೆಱೆಯ ನಱೆಯ ಪೊಗೞಲ್ ನೆಱೆಯೆಂ॥೬೧೪॥

ಉ॥ ಪಂಕಿಲಮಾದ ಗೋಕುಲದ ಗೋಮಯದಿಂ ನಡೆಗೊಳ್ವ ಘಾತದಿಂ ।
ದಂ ಕವಡಾಗಿ ಮಲ್ಕುಱುವ ಮಲ್ಲ್ಕರಯಿಂ ನೊರೆಯೇಱು ಮೂತ್ರದಿಂ ।
ದಂ ಕಡು ಪೂರಮೇಱು ಪಿಡೆಬಂದವೊಲಾ ತೊಱೆಯುಂದಕಾಲಕೂ ।
ಲಂಕಷಮಪ್ಪುದುಂ ಕೆಳಗೆ ಪಾಯ್ವ ಪಶುವ್ರಜಮಿೂಸಿ ಬರ್ಪುದುಂ ॥೬೧೬॥

ಕಂ॥ ಕಂಡು ಗೆಡೆಗೊಂಡು ಗೋವರ ।
ತಂಡಂ ಬೊಬ್ಬಿಱಿಯೆ ಮಗುಳ್ದು ನೋಡಿ ಮಹೀಭೃ ॥
ನ್ಮಂಡನನುಂ ಮಂತ್ರಿಯುಮಾ ।
ಪಿಂಡನ ಕಡೆಗಾಣದಂತು ಕೌತುಕಮುತ್ತರ್ ॥೬೧೭॥

ವ॥ ಅಂತವರ್ ನಿಂದು ನೋಡುತ್ತುಮಿರೆ,

ಮ॥ಸ್ರ॥ ತ್ವರಿತಂ ಗೋಪಂ ಸಕೋಪಂ ಪೆಱಗೆ ಪರಿಯೆ ಹೂಂಕಾರದಿಂದಳ್ಕಿ ಬೇಗು।
ತ್ತಿರೆ ಬಾಯಿಂ ಬಟ್ಟೆಯೊಳ್ ಸೂಲಿಡೆ ಪಸುನೊರೆಯಿಂ ನಾಂದ ಪುಲ್ ಮಿಳ್ಳಿ
ಗೊಂಡ।

ಬ್ಬರಿಸುತ್ತುಂ ತನ್ನ ಕಣ್ಗಳ್ಕರೆಯೆ ನಿಕಟದೊಳ್ ಕೇಳ್ದು ಗಾಳ್ಕ್ರೆಳೆನುತ್ತುಂ |
ಪರಿತಂದತ್ತೂರ್ಧ್ವದಿಂದಂಬರಿವಿಡೆ ಮೊಲೆವಾಲಂದು ಧೇನುಪ್ರತಾನಂ ||೫೯||

ಅಡೆಯುಂ ಕೋದತ್ತುತುಂ ಮಾರ್ದನಿಗೆ ಮಸಗುತುಂ ದರ್ಪದಿಂ ಛಾಯೆ
ಯೊಳ್ ಕೋ |
ಓಡುತುಂ ಮುಂಕಾದಿ ಪ್ರಣ್ದಂತಿಣಿಗೆಪುಗೆ ನೋಟಿಂ ಶೀರ್ಣಶೃಂಗಾಗ್ರದಿಂ ಮಾ|
ದೋರ್ಡೆಯುತ್ತುಂ ಪಾಯ್ದು ಪಿಂಡಂ ಕಲಕಿ ಕೆಯ್ಯುತುಂ ಬೆರ್ಚೆ ಬಲ್ಗೊಳಿ
ಗಳ್ ಬೆಂ |
ಗುಡಿ ಗಂಡಂ ಸೂಸುತುಂ ಬಂದುದು ಮದವಿಗಳತ್ಪಿಂಗಳಾಕ್ಷಂ ಮಹೋಕ್ಷಂ ||

ಚಂ|| ಎಡಪಿಸರಲ್ಗಳಂ ದೆಸೆಗೆ ಬೆರ್ಚುತೆ ಗೋವನ ಗಾಳಿಗೆಯ್ದು ಪಿಂ|
ಡಡಸುತೆ ಕಂದವಂ ನೆಗಪಿ ನೋಡುತೆ ಪಕ್ಕವನಗ್ರವಾಲದಿಂ|
ತೊಡೆಯುತೆ ಕರ್ಣವಂ ತೆಱೆದು ತಿತ್ತಿಗಾಳೆಯು ಸಾಲಿಸುತ್ತೆ ಪಿಂ|
ಡೊಡೆಯದೆ ಕೂಡಿ ಬರ್ಪ ಪಲವಾಕಳನೀಕ್ಷಿಸಿದಂ ನರಾಧಿಪಂ ||೬೦||

ಕಂ|| ಬರಲಾಱದೆ ಪೆರ್ಗೆಚ್ಚಲ |
ಭರದಿಂದಂ ಪೆಱಗು ಕುಸಿಯೆ ಪೊಱೆಯುಂ ಕಳವೆಂ ||
ತಿರೆ ತೊಱೆದ ತೋರವೊಲೆಗಳ್ |
ನಿರಿವಿಡುತುಂ ಬಂದುವಂದು ಪಯ್ಗಳ್ ಪಲವುಂ ||೬೧||

ಕಱು ಪೆಱಗುಟಿದಿರೆ ಹೂಂಗುಡು |
ತಱುಚುತ್ತುಂ ಮಗುೞ್ಚು ಮೂಸುತುಂ ಪೊಲಸಂ ಮಾ ||
ಸೋಱೆಯುತಿರೆ ಪಿಂತೆ ಕೆಚ್ಚಲ |
ನಿಱುಂಕಿ ನಡೆತಂದು ವೀಂದ ಪಯ್ಗಳ್ ಪಲವುಂ ||೬೨||

ಪರವತ್ಸಂಗಳ ಬಱಿಯಂ |
ಪರಿಗೊಳುತುಂ ತೊಱೆದ ಗೊಂತಮಂ ಬಿಡುತುಂ ಹೂಂ ||
ಕರಿಸುತ್ತುಂ ಪೋಪಗ್ಗದ |
ಪುರುಳಿಗಳಂ ಮಿಗೆ ಮರಲ್ದು ನೋಡಿದನರಸಂ ||೬೩||

ಕಡುಗೊಬ್ಬಿದ ಕಡಸುಗಳಂ |
ಕಡೆಯೊಳ್ ಬರುತಿರ್ಪ ಧೇನು ಬಡವಾಗಿರ್ದುಂ ||
ಬಿಡೆ ಕರಮೊಸೆದುದು ಚಾಗಿಯ |
ಬಡತನಮುಂ ಖಳನ ಸಿರಿಯಿನಗ್ಗಳಮಲ್ತೇ ||೬೪||

ಮ॥ ಸ್ರ॥ ಪಿರಿದುಂ ಬಾಯ್ವಣ್ಣಿಗೆಣ್ಣೊಳ್ ತಳರಡಿ ವನದೊಳ್ ಮುದ್ದು ಗೋವೃಂದದೊಳ್ ಬಂ।
ಧುರಪಾಂಸುಕ್ರೀಡೆ ವತ್ಸಂಗಳೊಳನವರತಸ್ತನ್ಯಪಾನಂ ಸುಧೇನೂ।
ತ್ಕರದೊಳ್ ತಾನಾಗ ಗೋವ್ಯೂಹದ ಬೞಿವೞಿಯಿಂ ಮೆಚ್ಚಿ ಬರ್ಪಂದದಿಂದಂ।
ಬರುತಿರ್ದರ್ ಮೊತ್ತದಿಂ ವಲ್ಲವರಳಿಕಲಲತ್ಪಲ್ಲವರ್ ಲೀಲೆಯಿಂದಂ ॥೬೦೫॥

ಕಂ॥ ನಱುನೆಯ್ಮಾಱಿದ ಸಿರಿಯಂ।
ಮೞೆಯುಳ ಪೂಂಗಳನೆ ಗೋಪಿಯರ್ ಕೆದಱಿದವೋಲ್ ॥
ತುಱುವಯ ನೆಗ್ಗಿಲ ಪೂಗಳ್।
ತುಱುಪಟ್ಟಿಯ ಪೊಱಗೆ ತುಱುಗ ಕರಮೆಸೆದಿರ್ಕುಂ ॥೬೦೬॥

ಚಂ॥ ಕೆಲಕೆಱಗಿರ್ದ ಬಲ್ವರಿಪಿಯಂ ಬಲಗೈ ಜಾಱಿದೊಪ್ಪಿ ತಾಗಸೀ।
ಳ್ದಲದೆಡಗಯ್ಯೊಳಾವರೆಯ ಪಂದಳಗರ್ಗಳ್ ನಡೆಗೇಡುವಾಡೆ ಸೋಂ।
ಕಿಲ ತೊಱೆ ತೀವಿ ಕಟ್ಟ ಕೊರಲೊಳ್ ಮನದೈವದ ಪೊನ್ನೊಳೊಪ್ಪಿದರ್।
ಕೆಲಬಲದೊರ್ಗೆ ಪೋಗಿ ಯುಳಮಾಱಿ ಮಗುಳ್ತರುತಿರ್ಪ ಗೋಪಿಯರ್॥

ಮ॥ ಮದಮಾತಂಗದವೋಲ್ ಮಹಾವಿಳಸಿತಂ ಸತ್ಕ್ಷತ್ರಿಯಪ್ರಾಜ್ಯರಾ।
ಜ್ಯದವೋಲ್ ಸಂಗತಸಂಧಿಸೀತಿಸಿರಂ ಸೀಹಾರಮುಕ್ಚಿತ್ರವೃ।
ತ್ತದವೋಲ್ ರಾಜಿತರೋಹಿಣೀಪರಿಗತಂ ಶ್ರೀಮದ್ಧಯಾಮಾಲಧ।
ಮಾರ್ಗದವೋಲ್ ವಿಶ್ರುತಸುವ್ರತಾಚರಿತಮೇಂ ಚೆಲ್ವಾಯ್ತು ಗವ್ಯಾಶ್ರಯಂ॥

ವ॥ ಆ ಪ್ರಸ್ತಾವದೊಳ್,

ಕಂ॥ ಕಱುವಂ ಬಿಡು ಕರ ತೊಳ ಸೀ।
ರಱಿ ಕಂದಲನೂಱಿಸಿ ತೊಳ ತಗುಳೊದ್ದವಾವಂ ॥
ತುಱುಸು ತಳಯಿಕ್ಕು ತಡೆಯದೆ।
ಮೊಱುವಂ ಸುರಿಯೆಂಬ ಸರಮೆ ತುಱುಗಾರ್ತಿಯರೊಳ್॥೬೦೯॥

ಪಿಡಿಗೆ ಕಡುದೊಱೆದ ಮೊಲೆ ಯುಳ।
ಮಡದೊಡೆ ಮೊನೆವಿಡಿದು ಪಾಲನೇಱಿಸಿ ನೊರೆಯಂ॥
ತೊಡೆದು ತುಱುಗಾರ್ತಿ ಕರೆದಳ್।
ಗಡಿಗೆಯ ಪಾಲುರ್ಪ ಘುಮುಘುಮೆನುತಿರೆ ಪಯಮಂ ॥೬೧೦॥

ಇರಿದೊಂದೆರಡಿರಿಯಂ ತೀ।
ವಿರೆ ಕಂದಲ್ ತನ್ನ ಬಿಳಿಯ ಕಣ್ಗಳ ಬೆಳಗಿಂ॥

ನೊರೆವಾಲಿಂ ತೀವಿತೆಗೆ ।
ತ್ತಿರದೆೞ್ದವೆಳಾತ್ಮಪತಿಯನೇಂ ನಗಿಸಿದಳೋ ॥೬೩೧॥

ಕಡೆಗೋಲ ಪೊಯ್ಲಿನಿಂದಂ ।
ಸಿಡಿದು ಶರೀರದೊಳ ತುಱುಗೆ ತಕ್ರಕಣಂಗಳ್ ॥
ಕಡೆದೇೞ್ವಳೆಸೆದಳಾಪಾ ।
ಲ್ಗಡಲಿಂ ಪೊಱಮಟ್ಟು ಪೊೞ್ಚ ಪೊಸಸಿರಿಯಿರವಿಂ ॥೬೩೨॥

ಕಡೆವಾಕೆಯ ಮುತ್ತಿನ ಕ ।
ನ್ನಡಿಯಂತಿರೆ ತೊಳಗಿ ಘರ್ಮಜಲಬಿಂದುಗಳಂ ॥
ಬಿಡುವ ಮೊಗಮೆಸೆದುದಾ ಪಾ ।
ಲ್ಗಡಲೊಳ್ ತಾಂ ಪುಟ್ಟಿದಮೃತಕರಬಿಂಬದವೋಲ್ ॥೬೩೩॥

## 30. ಮಾತಂಗಕನ ಇಷ್ಟಸಿದ್ಧಿ.

ಈ ಕಥೆ ದಶಕುಮಾರಚರಿತೆಗೆ ಸೇರಿದುದಾಗಿದೆ. ಈ ಚರಿತೆಯುನ್ನು ಮೊದಲಲ್ಲಿ ದಂಡಿಕವೀಶ್ವರನು ಸಂಸ್ಕೃತದಲ್ಲಿ ಗದ್ಯರೂಪವಾಗಿ ರಚಿಸಿದನು. ಇದನ್ನು ಚೌಂಡರಸನೆಂಬ ಬ್ರಾಹ್ಮಣಕವಿಯು ಅಭಿನವದಶಕುಮಾರ ಚರಿತವೆಂಬ ನಾಮಧೇಯದಿಂದ ಕನ್ನಡದಲ್ಲಿ ಚಂಪೂರೂಪವಾಗಿ ಬರೆದನು. ಈತನು ಭಾರದ್ವಾಜಗೋತ್ರೋತ್ಪನ್ನನು. ಈತನ ತಂದೆ ಮಧುಸೂದನನು, ತಾಯಿ ಮಲ್ಲವ್ವೆ, ಹೆಂಡತಿ ಲಕ್ಷ್ಮಿ. ತಾನು "ಪರಿಪಾಂಡ ಕೋಣಪಂಕರುಹ ಮಧುವ್ರತಂ", "ವಿಟ್ಠಲಪದಾಂಭೋಜಾತಭೃಂಗಂ" ಎಂದು ಹೇಳಿಕೊಂಡಿರುವುದಲ್ಲದೆ "ಪಂಡರೀರಾಯನಭಂಗವಿಟ್ಠಲನಲಂಪಿನೊಳೀಗೆಮಗಿಷ್ಟಸಿದ್ಧಿಯಂ" ಎಂದು ಸ್ತೋತ್ರಮಾಡಿರುವನಾದುದರಿಂದ ಈತನು ಪಂಡರಾಪುರದಲ್ಲಿಯೇ ವಾಸವಿರಬಹುದು ಅಥವಾ ಆ ದೇವರ ಬಕ್ತನಾಗಿರಬಹುದೆಂದು ಊಹಿಸಬೇಕಾಗಿದೆ. ಈತನಿದ್ದ ಕಾಲವೂ ಸರಿಯಾಗಿ ಗೊತ್ತಾಗುವುದಿಲ್ಲ, ಸುಮಾರು ಕ್ರಿ. ಶ. 1300 ಇದ್ದಿರಬಹುದೆಂದು ಊಹಿಸಲಾಗಿದೆ. ಈತನಿಗೆ ಸರಸಕಪಿ, ಕವಿರಾಜಶೇಖರ ಎಂಬ ಬಿರುದುಗಳಿದ್ದಂತೆ ತಿಳಿಯುಬರುತ್ತದೆ. ಈತನ ಬಂಧವು ಲಲಿತವಾಗಿಯೂ ಲಕ್ಷಣಬದ್ಧವಾಗಿಯೂ ಇದೆ.

ಚಂ|| ನೊಸಲೊಳಗಿಟ್ಟ ಚೆಲ್ವತಿಲಕಂ ಪಿಡಿದಗ್ಗದ ಸೇಡುಗೋಲ್ ಫಲಂ|
ಬಿಸುವುಪವೀತ ಮೇಣ್ದ್ವಿಜಾಗಾಯುದ ಡೋರೆ ಯೆಸೆಲ್ವ ಧೋತ್ರಮೇ|
ಉಸಿಪಡಗೆಯ್ದು ಬಲ್ ಬೆರಳ ದರ್ಭೆ ಮಹಾದ್ಭುತಮಂ ಮನಕ್ಕೆ ಸೂ|
ಚಿಸಲತಿಸಂಭ್ರಮಂ ಬೆರಸು ಬಂದನದೋರ್ವಸಮಂ ದ್ವಿಜಾಧಮಂ ||೬೪||

ವ|| ಅಂತೊರ್ಬ ಬ್ರಾಹ್ಮಣಂ ಬಂದು ಮಂತ್ರವಿಲ್ಲದಕ್ಷತೆಯಂ ಕೊಟ್ಟೊಡೆ ಇದೇನ್ನೆ ವಿಪರೀತವೇಷಮೆಂದಾತನ್ ರಾಜವಾಹನಂ ಕೇಳ್ವುದು ಮಾತನಿಂತೆಂದಂ :—

ಮ|| ಸ್ರ|| ಅಖಿಳಸೀರ್ಪಳ್ಳಿಂ ನೇಲೆಲಂಟದ ತರುನಿಚಯಂ ಧೂಳಿಡದುರ್ಬಿ ನಿಚ್ಚಂ|
ಪಳಿಗಟ್ಟಿರ್ಪ್ಪನ ನಿಚ್ಚೇಷ್ಟೆಯು ತನುವನಿಶಂ ಬೋಧನಧ್ಯಾನವೇನಂ|
ಮಱೆದುಂ ಮಾಡಲ್ ಮನಂ ಬಾರದ ಬಗೆ ವಿಗೆ ಸರ್ವೋರ್ವಿಯೊಳ್ ಕೂಡೆ ನೋಡಲ್|
ಬಖಿನಾಗಲ್ ಪಾರ್ವರಾಗಲಿ ಕೆಲಬರೊಲೆದರಣ್ಯಕ್ಕೆ ಪಕ್ಕಾಗಿ ಬಂದರ್||೬೫||

ವ|| ಅಂತು ಬಖಿನಱೆಯುಟ್ಟೆ ಕಂದಮೂಲಫಲಂಗಳಿಂ ಮೆಲ್ಲು ಜೀವಿಪೆವೆಂದು ಕೆಲಂಬರ್ ಬ್ರಾಹ್ಮಣರ ಒಡಗೂಡಿ ಶಿಶುವಾಗಿರ್ದನ್ನ ನೆತ್ತಿಕೊಂಡು ಎಮ್ಮ ತಾಯ್ತಂದೆಗಳರಣ್ಯಕ್ಕೆ ಬಂದು,

ಕಂ|| ಮಾತಂಗವೈರಿಸತ್ತ್ವಂ |
ಮಾತಂಗಕನೆಂಬನಿರ್ಪ ನಾವನದೊಳ್ ಮ ||
ತ್ತಾತನ ಪೆಸರಿಟ್ಟಂ ಮ |
ತ್ತಾತಂ ಪೊರೆದೆನ್ನನೊಲ್ದು ನರಪತಿತನಯಾ ||೬೩೬||

ವ|| ಅಂತು ಪೆಸರಿಡಲಾಮಾತಂಗಕ ನೆಮ್ಮೆಲ್ಲರ್ಗಲ್ಪಜೀವನೋಪಾಯಮಂ ಮಾಡುತಿರ್ದನ್ನಂ ಕೆಲವು ದಿನದಿಂ ಮೇಲೆ—

ಮ|| ಜನಕಂ ಮಾತೆ ಸಹೋದರರ್ ಕುಲಜರಾಪ್ತರ್ ಬಂಧುಗಳ್ ಸಂತತಂ |
ವನವಾಸವ್ಯಥೆಯಿಂಗವರ್ ಮಡಿದರಾ ನೀಚೇತರರೊಳ್ ಕೂಡಿ ಕಾ |
ನನದೊಳ್ ಬೇಂಟೆಯನಾಡಿ ಕಳ್ದುಱಿದು ದುಷ್ಟವರ್ಗಕ್ಕೆ ಪಕ್ಕಾದ ಜೀ |
ವನದಿಂದಿರ್ದಪೆ ನುರ್ವರಾಧಿಪತಿ ಕೇಳ್ ಸಂಸರ್ಗಮೇಗೆಯ್ಯದೋ ||೬೩೭||

ವ|| ಎಂದಾದ್ವಿಜಾಧಮಂ ಪೇೞ್ದೊಡೆ ಮತ್ತಮರಸನನಿತ್ತುಂ ಗಾಯದ ಕಲೆಗೆ ಕಾರಣಮೇನೆಂದು ಕೇಳಲಾತ ನಿಂತೆಂದಂ—

ಕಂ|| ನೆರೆದಿರ್ದ ಪುರವನಿಱಿಯಲ್ |
ಕಿರಾತತತಿ ಪೋಪ ಪದದೊಳಿದಿರೊಳ್ ಪಾರ್ವಂ ||
ಬರುತಿರ್ದನೊರ್ಬನಾತನ |
ನರವರಿಸದೆ ಕೊಲ್ವೆವೆಂದು ಮುತ್ತಿದ ಪದದೊಳ್ ||೬೩೮||

ಗೋವಿಂಗಂ ಪಾರ್ವಂಗಂ |
ಸಾವಡಸಲ್ ತನ್ನ ಜೀವದಾಸೆಯನುೞಿದೊ ||
ಲ್ದಾವಂ ಕಾದಪನಾತಂ |
ಕೈವಲ್ಯಾಂಗನೆಯ ಕಾಂತನಪ್ಪನಮೋಘಂ ||೬೩೯||

ವ|| ಎಂಬುದಂ ಕೇಳ್ದಱಿವೆನಪ್ಪುದಱಿಂದಾತನಂ ಕೊಲಲೀಸದೆ ಮೇಲೆ ಬಿೞ್ದೊಡಾತನಂ ಬಿಟ್ಟೆನ್ನನಿಱಿಯಲಾಂ ಗತಜೀವಿತನಾಗೆ—

ಮ|| ಸಲೆ ಕಾಯ್ದುರ್ಕಿನ ದಾರೆಯುಂ ಬಿಡು ನವದ್ವಾರಂಗಳೊಳ್ ಕಾಯ್ದ ಕಾ |
ವಲಿಯೊಳ್ ಕುಳ್ಳಿರಿಸೊಯ್ದು ಬಾಲವುೞುವಂ ಕೀವಾಗಿ ತೀವಿರ್ದ ಸೀಂ |
ಬುೞುವಂ ಬಾಯ್ಗೆಱೆ ನೂಂಕು ಪಾಕುಳದೊಳೇೞಲ್ದೇೞು ಶಸ್ತ್ರಾಸ್ತ್ರದು |
ಯ್ಯಲೆಯಂ ಕೊಯು 'ಕೊಱೆಯೆಂಬ ಕಾಲಯಮನಂ ಕಂಡೆಂ ಧರಾಧೀಶ್ವರಾ |

ಕಂ|| ಪಂಚಮಹಾಪಾತಕಿಯಂ |
ವಂಚಕನಂ ನುಡಿದು ಪುಸಿವನಂ ಸಂಗರದೊಳ್ ||

ಹಿಂಚುವನಂ ಪುಱುಗೊಂಡದ ।
ಸಂಚದೊಳಿಕ್ಕಾವಕಾಲವೇಱಿದ ತೆಱದಿಂ ॥೬೪೧॥

ವ॥ ಎಂಬ ಘೋರಮುಖನಪ್ಪ ಕಾಲನ ಸಮೀಪಕಾಂ ಪೋಗಲಾತನನ್ನಂ ನೋಡಿ

ಕಂ॥ ಈತಂ ಬ್ರಾಹ್ಮಣನಂ ಕಾ ।
ದಾತಂ ಕೃತಕೃತ್ಯ ನೀತನಂ ತಂದವರಾರ್ ॥
ಭೂತಳಕೆ ಪೋಗೆನುತ್ತುಂ ।
ಪ್ರೇತೇಶಂ ಮಗುೞ್ದು ಕಳುಪಿದಂ ಪದೆದೆನ್ನಂ ॥೬೪೨॥

ವ॥ ಅಂತಾ ಯಮನೆನ್ನಂ ಕಳುಪಲಾಂಬರ್ಪಾಗಳ್ ಮುಂದೆ ನಾಂ ಕಾದ ಬ್ರಾಹ್ಮಣನೆನ್ನ ಕಳೇವರಮಂ ಸಂಸ್ಕರಿಸಲೆಂದಿರ್ಪಾಗಳ್—

ಕಂ॥ ಗಣನೆಗರಿದೆನಿಪ ದುಷ್ಕೃತ ।
ಗಣಮಂ ಪರಿಹರಿಸುವಿಷ್ಟದೈವಕ್ಕೆ ಸಲ ॥
ಕ್ಷಣಭಜನೆ ಯೆಸೆಯೆ ದಂಡ ।
ಪ್ರಣತಂ ತಾನಾದ ನೇಱ್ವ ತೆಱದಿಂದೆಱ್ಗಂ ॥೬೪೩॥

ವ॥ ಅಂತಾ ನೇಱ್ದುದಂ ಕಂಡು ಆ ಬ್ರಾಹ್ಮಣಂ ಎನಗೆ ಮಂತ್ರೋಪದೇಶಂಗೆಯ್ಯೆ ಬೞಿಕ್ಕೆನಗೆ ವೈರಾಗ್ಯಂ ಪುಟ್ಟಲೀ ಹೇಮಕೂಟಪ್ರದೇಶಕ್ಕೆ ತಪಂಬಡಲ್ ಬಂದಿರ್ದಪೆಂ. ಇನ್ನೇಕಾಂತದೊಳೊಂದು ಕಾರ್ಯಮಂ ಪೇೞ್ದಪೆನೆನೆ ಅರಸಂ ಬೞಿಕ್ಕೆ ಪೇೞ್ವೆಂದಾತನಂ ಕಳಿಪೆ—

ಮ॥ ದಿನಯಾತ್ರಾನಿಗಮಕ್ರಮಕ್ಕೆ ವಿಷಮಂ ಸಪ್ತಾಶ್ವಮಿನ್ನೊಂದು ಮಾ ।
ಹನಮಂ ತಂದು ಸಮಂ ತುರಂಗಮನಿಪಂತಾಂ ಮಾೞ್ಪೆನೆಂಬೊಂದು ಭಾ ।
ವನೆಯಿಂದುತ್ಸವರಾಗಮಂ ತಳೆದು ಸೂರ್ಯಂ ಪಶ್ಚಿಮಾಂಭೋಧಿಯಂ ।
ಮನವೊಲ್ದಿರ್ದನೆಂದು ಬಣ್ಣಿಸೆ ಜಗಂ ಚೆಲ್ವಾಯ್ತು ಸಂಧ್ಯಾಗಮಂ ॥೬೪೪॥

ಕಂ॥ ಮೂಡಣವಾರ್ಧಿಯೊಳೊಪ್ಪುವ ।
ಬಾಡಬಶಿಖಿ ಪಶ್ಚಿಮಾಬ್ಧಿಯೌರ್ವಾನಳನಂ ॥
ನೋಡಲ್ ಬರ್ಪಂತಿರ್ದುದು ।
ನೀಡುಂ ಕೆಂಪಡರ್ದ ಸಂಜೆಯೊಳ್ ರವಿಬಿಂಬಂ ॥೬೪೫॥

ವ॥ ಅಂತಾ ಸಂಧ್ಯಾಕಾಲದೊಳೋಲಗಮಂ ವಿಸರ್ಜಿಸಿ ಸಂಧ್ಯಾವಂದನಾದಿ ಕ್ರಿಯೆಗಳಂ ಮಾಡಿ ಕುಳ್ಳಿರ್ದ ದೌವಾರಿಕನಂ ನೋಡಿ ಏಕಾಂತಮಂ ಪೇೞ್ವೆನೆಂದ ಬ್ರಾಹ್ಮಣನಂ ಕರೆಯೆನಲವನಾತಂ ಕರೆವುದುಂ.

ಕಂ॥ ಮೆಯ್ಯ ಕೃತಪುಣ್ಯವೆನುತೆನು ।
ತೊಯ್ಯನೆ ಪದವಿಡುತೆ ಬಂದು ನೃಪತಿಗೆ ನಲವಿಂ ॥
ಕೆಯ್ಯೆತ್ತಿ ಪರಸಿ ನಿನಗೇ ।
ಗೆಯ್ಯಲ್ ವೇೞ್ಕುಂದೊಡರಸ ಚಿತ್ತವಿಸೆಂದಂ ॥೬೪೬॥

ಸಕಲಾಭರಣಾನ್ವಿತ ಕ ।
ನ್ನಿಕೆಯೊರ್ಬಳ್ ನನ್ನ ಬೞಿಗೆ ಬಂದೆನಗೀ ಮಾ ॥
ಣಿಕವಂ ಕೊಟ್ಟೆನ್ನಿದಿರೊಳ್ ।
ಮುಕುಳಿತಕರಕಮಳೆಯಾಗಿ ಮತ್ತಿಂತೆಂದಳ್ ॥೬೪೭॥

ನಾಳೆ ಮಗಧೇಶನಣುಗನ ।
ಪಾೞೆಯುಮೀ ಠಾವನೆಯ್ದಿ ಬಿಡುಗುಂ ತದ್ಭೂ ॥
ಪಾಳಂ ಸತ್ಕ್ರಮದಿಂ ಪಾ ।
ತಾಳಕ್ಕೆಯ್ತಂದು ನಿನಗೆ ರಾಜ್ಯಮನೀವಂ ॥೬೪೮॥

ವ॥ ಅದಲ್ಲದೆಯುಂ,

ಕಂ॥ ನಿನ್ನ ಶರೀರಂ ವಂಶಂ ।
ಚೆನ್ನಾದಪುದೆನಗೆ ನೀನ ಪತಿಯಪ್ಪೆ ಮ ॥
ತ್ಪನ್ನಗಲೋಕಂ ನಿನಗ ।
ಕ್ಕಂ ನೆಟ್ಟನೆ ನಂಬು ಮದ್ವಚೋವೃತ್ತಕಮಂ ॥೬೪೯॥

ವ॥ ಎಂದಾ ಕನ್ನಿಕ ಪೇೞ್ದೊಡದೇತಱಿಂ ದಪ್ಪುದೆಂದಾಂ ಕೇಳಲ್ ಮಗುೞಿಂ ತೆಂದಳ್.

ಉ॥ ಈಗುಹೆಯೊಳ್ ಮಹಾಗ್ನಿತ್ರಿತಯಂ ನೆಲಸಿರ್ದಪುದಲ್ಲಿ ಮಂತ್ರನಾ ।
ನಾಗಮವಿರ್ಪ ಪುಸ್ತಕಮುಮುಂಟದಱಾಯು ಮಂತ್ರಜಾಪ್ಯದಿಂ ।
ಬೇಗದೊಳಗ್ನಿಯುಂ ಪುಗು ಮಗುೞ್ದು ತನುರ್ವಿಪನೊಂದು ಮಂತ್ರಮಂ ।
ಯೋಗದೊಳಿತ್ತುವಂ ನಿಜಶರೀರವ ನಿಂತಿದಮೋಘವಾಚಕಂ ॥೬೫೦॥

ವ॥ ಇದಂ ನೀನಱಿಗಂದ ಮೊಂತೆಂದೊಡವಳ್ ಮಗುೞ್ದಿಂತೆಂದಳ್.

ಕಂ॥ ಇನಿತುಂ ಮದೀಯಪಿತನೊ ।
ಳ್ದೆನಗಱಿಪಿ ತಪಕ್ಕೆ ಪೋದನಾನೀ ಪದನಂ ॥

ನಿನಗಱಿಪಿದೆನೆಂದು ತದಂ ।
ಗನೆ ಪೋದಳ್ ಬೞಿಕೆ ನಾಗಲೋಕಕ್ಕರಸಾ ॥೬೫೧॥

ವ॥ ಮೇಲಪ್ಪ ಕಾರ್ಯಮಂ ನೀವೆ ಬಲ್ಲಿರ್ ಎಂದು ಬ್ರಾಹ್ಮಣಂ ಪೇೞ್ದೊಡೆ ಅರಸನದಂ ಮನದೆಗೊಂಡು,

ಮ॥ ಎನ್ನಿಂ ಸಜ್ಜನ್ಮವೆನ್ನಿಂ ಮದನಸಮಶರೀರಂ ಲಸತ್ಪ್ರಾಯಮೆನ್ನಿಂ ।
ದೆನ್ನಿಂದುದ್ವಾಹವೆನ್ನಿಂ ಭುಜಗಭುವನನಾಥತ್ವ ಮಾಯ್ತೆಂಬವೋಲ್ ಮಾ ।
ೞ್ಪಂ ನಿಸ್ಸಂದೇಹಮೀತಂಗಿನಿತು ಘನಯಶೋಲಾಭಮುತ್ಕೀರ್ಣಧರ್ಮಂ ।
ತನ್ನಿಂ ತಾನೆತ್ತರಲ್ ನೋಡುವರೊಳರೆ ಎನುತ್ತುರ್ಬಿದಂ ರಾಜಪುತ್ರಂ॥

ವ॥ ಅದಲ್ಲದೆಯುಂ,

ಉ॥ ಮಾನವಜನ್ಮದೊಳ್ ಜನಿಸಿ ಸತ್ಯಮನಿಂದ್ಯಪರೋಪಕಾರಮಂ ।
ದಾನಮನರ್ಥಪಾಲನೆಯುಮತ್ತಿವಿಗಲ್ ಇವಿಗೆ ಮಾಡದಿರ್ಪವಂ ।
ಮಾನವನಲ್ತವಂ ತೆನಲ ಬೊಂಬೆ ತೊಳ್ಗದ ಲಪ್ಪದಣ್ಕದು ।
ಸ್ಸ್ಥವದ ಹುಲ್ಲ ಹಾಪೆ ಪೞಿಗೋಡೆಯ ಚಿತ್ರಮೆನಲ್ಕೆ ಸಾಲದೇ ॥೬೫೩॥

ಕಂ॥ ತರುಲತೆಗಳಖಿಳಪುಷ್ಪಂ ।
ಪರೋಪಕಾರಕ್ಕೆ ಸಲ್ವುದಂ ಕಂಡು ನರರ್ ॥
ಪರಹಿತಮನೆಸಗದಿರ್ದೊಡೆ ।
ಮರದಿಂದತಿಕಷ್ಟರಲ್ತೆ ಧರಣೀತಳದೊಳ್ ॥೬೫೪॥

ಪಾತಾಳಲೋಕವಿಜಯಂ ।
ಮಾತಂಗಕನಿಷ್ಟಸಿದ್ಧಿ ಯೀಯೆರಡುಂ ಮ ॥
ತ್ಪ್ರೀತಿ ಸಕಲಾವನೀಪಿ ।
ಖ್ಯಾತಿಯೆನುತ್ತವನಿಪಾಲತನಯಂ ನಲಿದಂ ॥೬೫೫॥

ವ॥ ಅನ್ನೆಗಂ,

ಮ॥ ಪದೆಪಿಂದಂಬರಲಕ್ಷ್ಮಿ ಯೆಚ್ಚ ಕೊಳಲೆಂ ದೌತ್ಸುಕ್ಯದಿಂ ಕಜ್ಜಳಂ ।
ಪುದಿದೊಪ್ಪಿರ್ದ ಕರಂಡಮಂ ತೆಗೆದು ತನ್ನುತ್ಸಾಹದಿಂ ಮುಚ್ಚುಳಂ ।
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೈತಪ್ಪಿ ಬಿಟ್ಟಂಜನಂ ।
ಕೆದಱಿತ್ತೆಂಬಿನಮುರ್ಬಿ ಮಬ್ಬು ಪರಿದತ್ತೆತ್ತಂ ದಿಶಾಭಿತ್ತಿಯೊಳ್ ॥೬೫೬॥

ವ॥ ಅಂತು ಪರ್ಬಿದ ಕತ್ತಲೆಯೊಳ್,

ಕಂ॥ ಸೋದರರಂ ವಂಚಿಸಿ ಸ ।
ತ್ಪ್ರೋದಯದಿಂ ನಿರ್ವಿಚಾರದಿಂ ಪರಚಿತ್ತಾ ॥
ಹ್ಲಾದವೆನೆಸಗಲ್ ನೃಪಸುತ ।
ನಾದರದಿಂದಾಯುಧಾನ್ವಿತಂ ಪೊಱಮಟ್ಟಂ ॥೬೫೭॥

ವ॥ ಅಂತು ಪೊಱಮಟ್ಟು ಬ್ರಾಹ್ಮಣಂ ಪೇೞ್ದ ಮಹಾಗುಹಾದ್ವಾರಕ್ಕೆ ಬಂದು.

ಕಂ॥ ಧಾತ್ರೀತಳಪತಿ ಕಡುಪಿಂ ।
ರಾತ್ರಿಯೊಳಾ ಬ್ರಾಹ್ಮಣಾನ್ವಿತಂ ಗುಹೆಯಂ ಪೊ ॥
ಕ್ಕಾತ್ರೇತಾಗ್ನಿಯ ಕುಂಡವ ।
ಮತ್ರಂಗಳ್ಗಱಿಗಿ ಪುಸ್ತಕಮನೀಕ್ಷಿಸಿದಂ ॥೬೫೮॥

ವ॥ ಅಂತು ಗುಹೆಯೊಳಿರ್ದಗ್ನಿಯುಂ ಕಲದ ಪುಸ್ತಕಮುಂ ಕಂಡು ಮಾತಂಗಕನಂ ನೋಡಿ ನೀಂ ಕನ್ಯಾಸೂಚಿತಮಪ್ಪ ಕಾರ್ಯಮನುದ್ಯೋಗಿಸನೆ,

ಕಂ॥ ಮನಸಿಜನ ರೂಪು ನಿಜಯೌ ।
ವನದೇೞ್ಗೆ ವಿವಾಹಸಿದ್ಧಿ ರಾಜ್ಯದ ಲಾಭಂ ॥
ತನಗಪ್ಪುದೆಂಬ ಹರ್ಷದೊ ।
ಳನುಮಾನಿಸದಗ್ನಿಯಲ್ಲಿ ಭೋಂಕನೆ ಬಿೞ್ದಂ ॥೬೫೯॥

ಮಾತಂಗಕದ್ವಿಜಂ ಕ ।
ನ್ಯಾತತ್ವಮನಿಪ್ಪ ಮಂತ್ರದಿಂದುರಿಯುಂ ನಿ ॥
ರ್ಭೀತಿಯಿನಪ್ಪಲ್ ಕಿರ್ಚಿಂ ।
ದಾ ತನು ಭಸ್ಮಾವಶೇಷಮಾದತ್ತಾಗಳ್ ॥೬೬೦॥

ವ॥ ಅದನಾಸಂ ಕಂಡು ವಿಸ್ಮಯಸ್ವಾಂತನಾಗಿ ತತ್ಪುಸ್ತಕದೊಳಿರ್ದ ಮಂತ್ರಮಂ ನೋಡಿ,

ಮ॥ ಮೃತಸಂಜೀವನಮಂತ್ರದಿಂ ನೃಪಸುತಂ ದಿವ್ಯಾಂಬುವಂ ಮಂತ್ರಿಸು ।
ತ್ತತಿಶೀಘ್ರಂ ಮಿಗಲಗ್ನಿಯೊಳ್ ತಳಿಯೆ ನಿದ್ರಾಸಕ್ತನಾಗಿರ್ದಮಂ ।
ಮತಿವೆತ್ತೀಪ್ಸಿತಪೊಂಗಸೌಷ್ಠವವಿಲಾಸಂ ಯೌವನಂ ನಿರ್ಮಲಾ ।
ಕೃತಿಯೊಪ್ಪುತ್ತಿರಲಗ್ನಿಕುಂಡದೊಳಗಿಂದೆೞ್ದಂ ನಗುತ್ತಾ ದ್ವಿಜಂ ॥೬೬೧॥

ವ॥ ಅಂತೆೞ್ದುಬಂದ ಮಾತಂಗಕದ್ವಿಜನನರಸಂ ತಳ್ಕೈಸಿಕೊಂಡು ಸಂತೈಸಿ ಪಾತಾಳಭುವನಮಾರ್ಗಮಂ ನೋಡಿ,

ಮ|| ಪ್ರತಿಪಕ್ಷಪ್ರಚುರಾವನೀಶವಿಲಸಚ್ಚಾತುರ್ಬಲಪ್ರಾಣಮಾ |
ರುತಪೀತಾಹಿ ವಿರೋಧಿಭೂಪತಿಮನೋವೇಶ್ಯಾಭುಜಂಗಂ ರಿಪು |
ಕ್ಷಿತಿನಾಥಾನ್ವಯಚಂದ್ರರಾಹು ಸುಖಸಂಪನ್ನೋಗಿ ಪಾತಾಳಮಂ |
ನ ತಮಾತಂಗಕಕಂಧರಸ್ಥಿತಕರಂ ಪೊಕ್ಕಂ ಮಹೀಪಾಳಕಂ ||೬೬೩||

ವ|| ಅಂತಾಸಂ ಮಾತಂಗಕಸಹಿತಂ ಪಾತಾಳಭುವನಮಂ ಪೊಕ್ಕು ತನ್ನಾಗ ಕನ್ಯಾಭವನಮನೆಯ್ದಿ,

ಚಂ|| ಮಕರಪತಾಕನಾಪ್ಪ ವನಿತಾಕೃತಿವೆತ್ತುದೂ ಪೂರ್ಣಚಂದ್ರಚಂ |
ದ್ರಿಕೆ ಸತಿರೂಪನಾಂತುದೊ ವಸಂತವಿಲಾಸಮಗಣ್ಯಪುಣ್ಯಕ |
ನ್ಯಕೆಯೆ ನಿಸಿರ್ದುದೋ ಸಕಲಮೋಹನವಿದ್ಯೆ ಭುಜಂಗರಾಜಬಾ |
ಲಕಿವೆಸರಿಂ ನೆಗೞ್ದುದೆನೆ ಕಣ್ಗೆಸಗಿರ್ದುದು ರೂಪು ಕಾಂತೆಯಾ ||೬೬೪||

ವ|| ಅಂತು ರೂಪಿಂದಗ್ಗಳಮಾದ ನಾಗಕನ್ಯೆಯುಂ ಕಂಡರಸಂ ನೀಂ ಪೇೞ್ದ ಬಾಲಕಿ ಈಕೆಯಾಗದೆ ಮಾಱೊಂದು ಮಾತಂಗಕನಂ ಕೇಳ್ದೊಡಾತಂ ಲಜ್ಜೆಯಿಂ ತಲೆವಾಗಿತಲದಱಿವಱಿವು ಮುನ್ನಮೆ ತಾಂ ಪೇೞ್ದಳಪ್ಪುದಱಿಂದಾಕನ್ಯೆಯುಂ ಮಾತಂಗಕಂಗೆ ವಿವಾಹಮಂ ಮಾಡಿ ತದ್ರಾಜ್ಯದೊಳ್ ಪಟ್ಟಮಂಕಟ್ಟಿ ಯನಂತರಂ ತನ್ಮಾತಂಗಕನಿಂದರಸಂ ಕಳುಹಿಸಿಕೊಳ್ವಾಗಳಾ ಮಾತಂಗಕನಿಂತೆಂದಂ—

ಸ್ರ|| ನಿಸ್ಸಂದಾವಿರ್ಭ್ರಮಂ ಕೂಡಿದೆ ಮಹಿಭುವನಂ ಕೈಗೆ ಸಾರ್ದತ್ತು ದೇವ |
ಗಿರ್ನಿಸ್ಸಂದಂ ಬನ್ನಮಂಗೆಯ್ದಪ ನಿಸಿತಾ ಪಿಪಾಸಾವಯಂ ಕ್ಷುಧ್ಭಯಂ ಕ್ಲೇ|
ಶಸ್ನಿಂದಾಬಾಧೆ ಪಿಂಗಿಪ್ಪುದು ನಿಜಮಿದಱಿಂ ಸಂತಸಂ ಟವ್ಯಮಾಣಿ |
ಕ್ಯಸ್ನೀನೇ ಭೂಪನಂ ಚಿತ್ತವಿಸೆನುತೊಲವಿಂ ರತ್ನಮಂ ಕೊಟ್ಟನಾಗಳ್ ||

ಕಂ|| ನಾಷಾಡಿಯು ಮೋಣಿಕಮಂ |
ದೀಡಾಪದಿರೆಲೆ ಕುಮಾರ ಮನದುತ್ಸವದಿಂ ||
ಚೂಡಾಮಣಿಯುಂ ಮೊೞ್ಪುದು |
ಪಾಡಿವದೆಳವೆಱೆಯ ನಾಂತ ರುದ್ರನ ತೆಱದಿಂ ||೬೬೫||

ವ|| ಎಂದು ಪೇೞ್ದು ಮಾತಂಗಕಂ ತನಗೆ ನಾಗಕನ್ಯಕೆ ಕೊಟ್ಟ ಮಾಣಿಕ್ಯಮುಂ ಕುಡಲದಂ ಕೈಕೊಂಡು ಆತನಿಂ ಕಳುಹಿಸಿಕೊಂಡು ರಾಜವಾಹನಂ ತಳರಲುದ್ಯುಕ್ತನಾಗಿ ಖಡ್ಗದ್ವಿತೀಯನಾಗಿ,

ಚಂ|| ಉದಯದೊಳೇೞ್ಗೆವೆತ್ತ ರವಿ ವಾರಿಧಿಯಿಂ ಪೊಱಮಟ್ಟನೆಂಬಿನಂ |
ಮದವದರಿಪ್ರತಾನವನಿತಾನಯನೋತ್ಪಲ ಚಂಡಭಾಸ್ಕರಂ |
ವಿದಿತಪರೋಪಕಾರನಿಧಿ ಸಾಹಸಕೇಸರಿ ಶಸ್ತ್ರಶಾಸ್ತ್ರಕೋ |
ವಿದನಹಿಲೋಕದಿಂ ಪದೆಪಿನಿಂ ಪೊಱಮಟ್ಟನಭಂಗವಿಕ್ರಮಂ ||೬೬೬||

## 31. ಗ್ರೀಷ್ಮಋತು ವರ್ಣನೆ.

ಹದಿನಾರನೆಯ ತೀರ್ಥಕರನಾದ ಶಾಂತಿನಾಥನ ಚರಿತ್ರವು ಶಾಂತೀಶ್ವರಪುರಾಣ ದಲ್ಲಿರುವುದು. ಈ ಪುರಾಣವನ್ನು ಕಮಲಭವನೆಂಬ ಕವಿಯು ಕನ್ನಡದಲ್ಲಿ ರಚಿಸಿದನು. ಇದರಿಂದಲೇ ಇಲ್ಲಿ ಕೊಟ್ಟಿರುವ ಪದ್ಯಗಳು ಉದ್ಧೃತವಾಗಿವೆ. ಕಮಲಭವನು ಮತದಲ್ಲಿ ಜೈನನು. ಈತನ ಗುರು ದೇಶೀಗಣಪುಸ್ತಕ ಗಚ್ಛಕೊಂಡ ಕುಂದಾನ್ವಯದ ಮಾಘಣಂದಿ ಪಂಡಿತಯತಿ. ಈತನು ಸುಮಾರು ಕ್ರಿ. ಶ. 1235ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಕುಸುಮಾವಳಿಯನ್ನು ರಚಿಸಿದ ದೇವಕವಿ ಈತನ ಗ್ರಂಥರಚನೆಗೆ ಪ್ರೋತ್ಸಾಹಕನೆಂದು ಹೇಳುತ್ತಾರೆ. ವರ್ಣನಾಭಾಗದಲ್ಲಿ ಎರಡು ಗ್ರಂಥಗಳಲ್ಲಿಯೂ ಕೆಲವು ಪದ್ಯಗಳು ಒಂದೇ ಆಗಿರುತ್ತವೆ. ಕಮಲಭವನಿಗೆ ಕವಿಕಂಜಗರ್ಭ, ಸೂಕ್ತಿ ಸಂದರ್ಭಗರ್ಭ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ. ಶಾಂತೀಶ್ವರಪುರಾಣವು ಲಲಿತವಾಗಿದೆ, ಕವಿತಾಧಾಟಿಯು ಚೆನ್ನಾಗಿದೆ; ಪದಗಳು ತಡೆಯಿಲ್ಲದೆ ಓಡುತ್ತವೆ. ವರ್ಣನಾಭಾಗವೂ ಉತ್ಕೃಷ್ಟವಾಗಿದೆ.

ಮ|| ಸ್ರ|| ಒಗೆದಾಗಳ್ ಮಾಗೆಯುರ್ಕಂ ಮೊದಲೊಳೆ ತವೆತೂಳ್ದಿಕ್ಕಿ ದಾವಜ್ವಾಳಜ್ವಾ|
ಳೆಗಳಿಂದಂ ತೀವ್ರಮಪ್ಪಾತಪದ ಪಸರಮುಂ ಕೂಡೆ ಕಾರುತ್ತುಮುಷ್ಣ |
ನ್ಮೃಗತೃಷ್ಣಾಮಾಳೆಯಂ ಧಾತ್ರಿಗೆ ಮಿಗೆ ಕೆದಱುತ್ತುಂ ಕರಂ ಕಾಯ್ಪಿನಿಂ ಕೈ|
ಮಿಗುತುಂ ಬಂದತ್ತದೊಂದದ್ಭುತಮೊದವಿದಮೋಘಂ ವಿಮೋಘಂ ನಿದಾಘಂ|

ಕಂ|| ನೆಗೆಪುತ್ತುಂ ಗಗನತಳ |
ಕ್ಕಗಣಿತವಾತೂಳಿಕಾಳಿಯುಂ ಕಾಯ್ಪು ಸಮಂ ||
ತೊಗೆದ ಕಡುವಿಸಿಲ ಪಸರಮು |
ನುಗುಳುತ್ತುಂ ಬಂದುದತುಳಭೀಷ್ಮಂ ಗ್ರೀಷ್ಮಂ ||೬೬೮||

ಮ|| ಸ್ರ|| ಪ್ರದಿಶಾಸರ್ವಾಂಬುವಂ ಪೀರ್ದಿನಿತನಡಿವಣಲ್ಗಣಿಸುತ್ತುಂ ಮರುತ್ಪ್ರಾ|
ತದಳಂಗಳ್ ಪೊತ್ತಭೂರೇಣುಗೆ ಮಿಗೆ ಬಿಸುಸಂ ಪರ್ಚಿಸುತ್ತುಂ ಕುಜವ್ರಾ|
ತದ ಶೀತಚ್ಛಾಯೆಗತ್ಯುಷ್ಣತೆಯ ನೊದವಿಸುತ್ತುಂ ಪೊದಱ್ದುಱ್ಗೆಯಿಂ ಬಂ|
ದುದು ತಾಂ ಸಂತಪ್ತತಿಗ್ಮಾತಪವಿಪುಳತರಜ್ವಾಳಮಾ ಗ್ರೀಷ್ಮಕಾಲಂ||೬೬೯||

ಕಂ|| ತರುಗಿಡುವ ತತಿಯ ನೆೞಲುರಿ |
ವರಿವಡೆ ನಿಲಲಾರದೆಱ್ದು ಪಾರುವ ವಿಹಗೋ ||
ತ್ಕರದ ಕೊನೆಗಱಿಗಳೆರೆಸೀ |
ಕರಿಯಾದುವದೇನಳುಂಬಮೋ ಬಿಸಿಲೆಸಕಂ ||೬೭೦||

ಒದವಿದ ನಿದಾಘಸಂತಾ ।
ಪದಳುರ್ಕೆಗಿಳಾವಧೂಟಿ ನೆಱೆ ಸ್ವೈರಿಸಲಾ ॥
ಅದೆ ಬೀರುತಿರ್ಪ ತೆಱನಾ ।
ದುದು ಪಿರಿದುಂ ಪೊಣ್ಮುವತುಳ ಘೋರೀರಾವಂ ॥೬೨೧॥

ಉ॥ ತೊಟ್ಟನೆ ಪಲ್ಲವಾಂಬು ತವೆ ಪತ್ತಿರದಾಕ್ಷಣವೆಬ್ಬಿ ಬಿಟ್ಟೆ ಕಾ।
ಯ್ದಿಟ್ಟಗೆಯಂದವಾಯ್ತು ನೆಲೆಗಾಣದಗಾಧನದೀಪ್ರದಾಂಬುಗಳ್।
ನೆಟ್ಟಗೆ ನೋಡೆನೋಡೆ ಬಱತೆಯ್ದೆ ಮಳಲ್ ಕಿಡಿಯುಣ್ಣ ಮಾಯ್ತನಲ್।
ನಿಟ್ಟಿಸಲೋವೊ ಬಾರದೆನೆ ಬೇಸಗೆಯುಗ್ರಮದೇನುದಗ್ರಮೋ ॥೬೨೨॥

ಚಂ॥ ಜಳಲವಮಿರ್ದ ಬೆಂಚೆಗೆ ತೃಷಾತುರದಿಂ ಪರಿತಂದು ತೀರದೊಳ್।
ಘಳಿಲೆನೆ ಕಾಲನಾಱಿ ಮೊಗಮಂ ನೆಱೆ ನೀಡಿ ತದೀಯಪಂಕಮಾಃ।
ಕುಳಿವ ಕದುಷ್ಣಮೋಷ್ಠಪುಟಮಂ ಸುಡೆ ಸಾರ್ದು ಬಿದಿರ್ಚಿ ಮೋರೆಯಾ।
ಬಳವಳಿಯುತ್ತುಮಿರ್ದುದು ಸಮಂತು ಮೃಗೌಘಮದಾ ನಿದಾಘದೊಳ್॥೬೨೩॥

ಉರಿಮುಯುತ್ತುಮಿರ್ಪ ಬಿಸಿಲೇಱುಗೆ ಸ್ವೈರಸಲಾಱದಯ್ದೆ ತ।
ಮ್ಮಕ್ಕರುತ್ತುಖರ್ಮವುಂ ನೆಗಪಿಕೊಂಡು ಮಾಯುರದೆ ಮೊತ್ತಮಿರ್ಪುಗುಂ।
ದಿರೆ ಪ್ರಬುದ್ಧಾನೆಬಿಲ್ಗಳಿಸಿ ಸಾರ್ದುಮ ಸಾಕೆಯನುಕ್ಕಪನ್ನಗೋ।
ತ್ಕರಮನಲೀನರಂಬವೊ ನಿದಾಘದ ತಾಪಕಳಾಪದುತ್ಕಟಂ ॥೬೨೪॥

ಕಂ॥ ಕುದಿಗೊಳ ಕಾಯ್ದುರ್ಕುವ ಡೊಣೆ ।
ಯುವಕದೊಳಿಡೆ ಚಂಚು ಬಂದು ಘೂಂಕೆನೆ ತಲೆಯಂ ॥
ಬಿದಿರ್ದು ಕರಂ ಬಾಯ್ಬಿಟ್ಟೊಳ ।
ಱಿದುದೊದವಿದ ತಾಪದಿಂ ವಿಹಂಗಕಳಾಪಂ ॥೬೨೫॥

ಚಂ॥ ತರಣಿ ಸಮಾಶ್ರು ನನ್ಮಥಿಸನಾಗಿಯ್ಮು ಮಿಂತುಱೆ ಕಾಯ್ದನೆಂದು ತ।
ತ್ಸರಸಿಜಲಕ್ಷ್ಮಿಗೆಯ್ದಱುತಿರ್ದ ಪುದುಂಬನಮಾಸಿದಾಘ ಘೋ।
ಕಾತರತಾಪದೇಱುಗೆನಸುಂ ನಿಲಲಾಱದೆ ಚೀಱುತುಂ ಕರಂ।
ಕೊರಗಿದ ಪದ್ಮಪತ್ರದ ನೆಱಲ್ವಿಡಿದಿರ್ದುದು ಕೋಕಸಂಕುಳಂ ॥೬೨೬॥

ಕಂ॥ ನೆಱಲಾಗಿರ್ದ ಸರೋರುಹ ।
ದಳಮದು ಕಡುಬಿಸಿಲ ಬೆಂಕಿಯಿಂ ಕೊರಗಿದೊಡಾ ॥
ಗಳ ತನ್ನೆಱಂಕೆಗೊಡೆಯಂ ।
ಕಳವಳಿಸುತೆ ಸತಿಗೆ ಪಿಡಿದುದೊಂದು ರಥಾಂಗಂ ॥೬೨೭॥

ಚಂ|| ಜನಿತನಿದಾಘದುಗ್ರತರತಾಪದಳುರ್ಕೆಯೊಳೆಯ್ದೆ ಕಾಯ್ದು ಚು |
ಯ್ಯನೆ ಕುದಿಗೊಂಡ ನೀರ ಬಿಸುಪಿಂಗೆನಸುಂ ಮಱುಗುತ್ತುಮೆಯ್ದೆ ತೊ |
ಟ್ಟನೆ ತವೆ ಮೞ್ಗಿಪೋದ ಶಫರಾದಿಜಲೇಚರಜಂತುಜಾಲಜೀ |
ವನದೊಡನಾಗಳಂತೆ ಗತಜೀವನಮಾಯ್ತು ಸರೋವರೋತ್ಕರಂ ||೧೭೮||

ಮ|| ಘನಪಂಕೋದರಮಗ್ನಕಚ್ಛಪಕುಲಂ ಬದ್ಧಾಶ್ಮತತ್ಸಂಧಿರಂ |
ಧ್ವನಿಕಾಯೋಪಗತಾರ್ತಕರ್ಕಟಕಜಾಲಂ ಸಾರ್ದ ವೇಳಾಸುರಂ |
ಗನಿವೇಶಸ್ಥಿತಸಂಕಟಾಂಗವಯಃಶಾಲೂರರೋತ್ಕರಂ ತ್ಯಕ್ತಜೀ |
ವನಮತ್ಸ್ಯವ್ರಜಪಿರ್ದುದಂತು ಸರಸೀಸಂದೋಹಮಾಗ್ರೀಷ್ಮದೊಳ್||೧೭೯||

ಕಂ|| ಗಿರಿಗುಹೆಗಳ ನೆಱುಲುರಿಯಿಂ |
ಪಿರಿದಾಗುತ್ತಿರೆ ತದೀಯತಾಪೋತ್ಕಟದಿಂ ||
ಕೊರಗುತ್ತುಂ ನೆಱೆ ಬಾಯ್ವಿ |
ಟ್ಟಿರುತಿರ್ದುವು ಕೇಸರಿವ್ರಜಂ ಜೇಸಗೆಯೊಳ್ ||೧೮೦||

ಮ|| ಸ್ರ|| ತನುವಂ ತಳ್ತೊಯ್ಯನುಂ ತೀವ್ರಾತಪದುರುವ ಸಂಕ್ಷುಳ್ಳಧೂಳಿವ್ರಜಾಸೇ |
ಚನಮಂ ಮಾಳ್ಪುಜ್ಜುಗಂ ವಿಕ್ಷರದ ಮೊಗೆಯುಲಾ ಭೂಜಂ ವಿಸ್ಫುಲಿಂಗೌ
ಘನಿಕೃಷ್ಟೋದ್ಘೃಷ್ಟರೇಣುವ್ರಜಮನೆ ಪುಗೆದಂತಾಗೆ ತತ್ಪುಷ್ಕರಂ ಬೆಂ |
ದೆನಸುಂ ಬೆಚ್ಚುತ್ತೆ ಘೀಳಿಟ್ಟೊಳಱಿ ಪರಿದುದೋರಂದದಿಂ ಹಸ್ತಿವೃಂದಂ ||

ಕಂ|| ಉರಿವಿಸಿಲ ಬೇಗೆಯಿಂದಂ |
ಬಿರಿದೆಡೆವಿಡದುಗುವ ಮುತ್ತುಮಂ ಜಳಬಿಂದೂ ||
ತ್ಕರಮೆಂದು ತುಡುಕಿ ಕರಪು |
ಷ್ಕರಮಂ ಬಿದಿರುತ್ತುಮಿರ್ದುದೊಂದು ಗಜೇಂದ್ರಂ ||೧೮೧||
ಬಿದು ಬಿದಿರ್ದು ಸುರಿವ ರಕ್ತಾ |
ರ್ದ್ರದ ಮುತ್ತುಗಳಿಂ ಗಜವ್ರಜಂ ನನೆಯಿಸುತಿ ||
ರ್ದುದು ವಿಲಯಕಾಲದೊಳ್ ಕೆಂ |
ಡದ ಮೞೆಗಱೆವಬ್ದಮಂ ನಿದಾಘದೊಳಾಗಳ್ ||೧೮೨||

ಮ|| ಜಳಮಾತ್ರಂ ಪುದಿದಿರ್ಪ ಪಲ್ವಲಮಹಾಜಂಬಾಳದೊಳ್ ಕೇಸರಾ |
ವಳಿಯುಗ್ರಂ ನಸುದೋಱದಂತೆ ನೆಱೆ ನಿಷ್ಕಂಪತ್ವದಿಂ ಗಾತ್ರಸಂ |
ಕುಳದೊತ್ತೊತ್ತಿಗಳಿಂ ಮುಳುಂಕಿ ಲವಲೆಸಾದ್ವಕ್ರ(?)ಮಾಗಿರ್ದುದ |
ಸ್ಖಲಿತೋಚ್ಚಂಡನಿದಾಘತಾಪಭಯದಿಂ ಕ್ರೋಡವ್ರಜಂ ನಾಡೆಯುಂ ||೧೮೩||

ಮ॥ ಸ್ರ॥ ಕಡುಗಾಯ್ಪುಗ್ರಾತಪಜ್ವಾಳೆಗೆ ಮಿಗೆ ಪುೞಿ ಪೇೞಲ್ಕೆ ಬೆಂಬೆಂದು ಬಾಯಂ।
ಬಿಡುತುಂ ಪಂಕಾಕ್ತ ಜಿಹ್ವಾಲತೆಯೆಳಲೆ ಜವಂಗುಂದುತುಂ ಬಂದು ಕಂಪ।
ಲ್ತಡುಗೊಂಡಾ ಪಲ್ವಲಂಬೊಕ್ಕಡಿಗಡಿಗೆ ಪೊರಳ್ದೆೞ್ದುತುಂ ಮೆಯ್ಯನಾಜಿ।
ಲ್ಗಡದೊಱೆರಂತಿರ್ದುವೆತ್ತಂ ಬಿಡದಡವಿಗಳೊಳ್ ಸ್ವೈರದಿಂ ಸೈರಿಭಂಗಳ್ ॥

---

## 32. ಸೂರ್ಯೋದಯ ವರ್ಣನೆ.

(ಇದು ಕಮಲಭವನ ಶಾಂತೀಶ್ವರ ಪುರಾಣದಿಂದ ಉದ್ಧೃತವಾಗಿದೆ. 132ನೆಯ ಪುಟವನ್ನು ನೋಡು).

ಚಂ॥ ಭಗಣವಿಳಾಸ ಮೋಸರಿಸ ಲಾಗಲೊಡರ್ಚಿದುವಾ ಚಕೋರಕೋ।
ಟಿಗಳ ಮನೋಮುದಂ ಕರಗುವಂದಮನೊಂದಿದು ದುತ್ಪಳಂಗಳಾ।
ನಗೆಯುಗೆಯೆೞ್ದು ಪೋಗಲನುಗೆಯ್ದುದು ಯಾಮಿನಿ ಮಾಱುವಾಗಲು।
ಜ್ಜಗಿಸಿದುದಾ ಸಿತದ್ಯುತಿಗತಪ್ರಭಮಪ್ಪುದನಪ್ಪುಕೆಯ್ದುದುಂ ॥೬೮೬॥
ಮೊದಲೊಳೆ ಪಿಂಗೆ ಸಾಂದ್ರನವಚಂದ್ರಿಕೆ ಯಾಘರಾತ್ರಿಯೊಳ್।
ಕೆದಱುತುಮಿರ್ದ ತಗ್ಗಿದಿರ ತೊಂಗಲ ತೋರ್ಕೆಯ ಡಂಗೆ ತಳ್ತ ತ।
ಣ್ಗಿದಿರ ಪೊದಱ್ಕೆಯುಂ ಕಱೆವ ನವ್ಯಕಳಾಪಿಸರಂ ಮಸುೞ್ದುವಾ।
ಸವ ಮುಕುರಾಂತದಂತೆ ಗಳಿತಪ್ರಭಮಾಯ್ತು ಮೃಗಾಂಕಮಂಡಳಂ॥೬೮೭॥

ಇರದಳುರ್ದಾವಗಂ ಬಿಡದೆ ಶೋಷಿಸುತಿರ್ದಪು ದೆನ್ನ ಜನ್ಮಮುಂ।
ದಿರವೆನಿಸಬ್ಜಗರ್ಭಮ ನೆನುತ್ತಮ ತಾಂ ಮುನಿದೌರ್ವವಹ್ನಿಯುಂ।
ನಿರವಿಪೊಡಾರ್ಪನೆಂದ ಮೊಳಪೊಕ್ಕಪನೆಂಬವೊಲಾಗಳಸ್ತ ಭೂ।
ಧರಮನೆ ಬಿಟ್ಟು ಪಶ್ಚಿಮಪಯೋನಿಧಿಗಿಂತಿೞಿದಂ ನಿಶಾಕರಂ ॥೬೮೮॥
ಉ॥ ನೆಟ್ಟನೆ ತಾರಕಾಪತಿಯೆನಿಪ್ಪುದಸೀಕ್ಷಿಸಪೆಮ್ಮನಿಂದು ತಾಂ।
ತೊಟ್ಟನೆ ಬಿಟ್ಟುಪೋದ ನಿರದೀಗಳೆ ತನ್ನಯ ತೀವ್ರಪಾದದಿಂ।
ದಿಂಟ್ಟೊರಸಲ್ಕೆ ಬರ್ಪನಿನನೆಂಬಿನಿತುಮ್ಮಳಮಾಗೆ ಕಾಂತಿ ಮೆ।
ಯ್ಗೆಟ್ಟುದೆನಲ್ಕೆ ನಿಷ್ಕಳೆಯನೆಯ್ದಿದುದಾ ಭಗಣಂ ಪ್ರಭಾತದೊಳ್॥೬೮೯॥
ಕಂ॥ ಪೊಳಪಳಿದು ತಾರೆಗಳ್ ಹಳ।
ಹಳನಾದುವು ಕುವಲಯಂಗಳ್ಸಳಸಕಂಗೆ ॥
ಟ್ಟಳವಳಿದುವಾ ಚಕೋರಂ।
ಗಳ ಬಳಗಂ ಪೆಳಱಿದುವು ಕರಂ ದಿನಮುಖದೊಳ್ ॥೬೯೦॥

ಕಂ॥ ನೀರಜದ ನಗೆ ಮುಗುಳ್ದುದು ।
ಕೈರವದ ವಿಕಾಸವೞಿದುದಾ ಕೋಕದ ಚೇೞ್ ॥
ತೋಱಾಗವಧಿಕವಾಯ್ತು ಚ ।
ಕೋರದ ಮುದಮೆಗ್ಗಿ ಪೋಯ್ತು ಮುನ್ನೇಸಱಿನೊಳ್ ॥೯೧॥

ಚಂ॥ ಹಿಮರುಚಿ ತಾನಗಲ್ದಿರದೆ ಪೋಗೆ ತದೀಯವಿಯೋಗತಾಪದಿಂ ।
ದಮರ್ದಿರಲಾಱದಂಬರಮನೊಕ್ಕಿಱಿದುರ್ವಿಯ ಶಾಡ್ವಲಂಗಳ ।
ಗ್ರಿಮದೊಳೆ ಮೆಯ್ಯನಿಕ್ಕಿದ ಸಮುಜ್ಜ್ವಳ ತಾರಕ (ಜಾಳ) ಮೆಂಬ ವಿ ।
ಭ್ರಮಮನೆ ಬೀಱುತಿರ್ದುದೆನಸಂ ಪನಿಪುಲ್ಲ ಪಯಃಕಣವ್ರಜಂ ॥೯೨॥

ಮ॥ ಪನಿಪುಲ್ಲಂಬುಕಣಂಗಳಂ ಕೆದಱುತುಂ ಕೋಕಂಗಳೊಳ್ ರಾಗಮಂ ।
ನನೆವೊಯ್ದಣ್ಮಿಸುತುಂ ಪತತ್ರಿಗಳೊಳಿರ್ಪಾ ತೂಂಕಡಂ ನೂಂಕುತುಂ ।
ವನಜಕ್ಕೊಯ್ಯನಲರ್ಕೆಯಂ ಸಮನಿಸುತ್ತೆಯ್ತಂದತೆ ಮೆಯ್ವೆರ್ಚೆ ತ ।
ಣ್ಣನೆ ತೀಡುತ್ತನಸುಂ ಪ್ರಭಾತಸಮಯಪ್ರೋದ್ಭೂತಶೀತಾನಿಲಂ ॥೯೩॥

ಕಂ॥ ಬಳಸಿ ಚಿಲಿಮಿಲಿಪ ವಿಹಗಂ ।
ಗಳ ಕಳಕಳದೊಡನೆ ತೋರ್ದು ಸರಸೀಜಳಮಂ
ವೆಳಗೊಳಿಸಿ ಕುಮುದಮುಖಮಂ ।
ಪೆಳಱಿಸಿ ತೀಡಿತ್ತು ಸುಪ್ರಭಾತಸಮೀರಂ ॥೯೪॥

ಮ॥ ಸ್ರ॥ ತನುವಂ ತಳ್ಪೊಯ್ಯೆ ತಂಗಾಳಿಯು ಪದೆಪಿನೊಳೆಚ್ಚತ್ತು ಪಕ್ಷಂಗಳೊಳ್ ಪ
ಟ್ಟಿಸಿತುಂ ಪೋತಂಗಳಂ ವೀಕ್ಷಿಸುತೆಱಕೆಗಳಂ ಮೆಲ್ಲನಿರ್ಚುತ್ತೆ ನಿಂದೊ ।
ಯ್ಯನೆ ಸಾರ್ದ್ರತ್ರೋಟಿಯಿಂದಂ ತೊಡೆದು ಗಱಿಗಳಂ ನುಣ್ಣವಿರೆ ಬಿರ್ಚೆ ಮೆಯ್ಯಂ ।
ತೊನೆದುದ್ದಂ ನೀಡು ಗೋಣಂ ನವದಿನಮುಖದೊಳ್ ಕುಕ್ಕುಟಂ ಕೂಗಿತಾಗಳ್॥

ಚಂ॥ ಎಱಕೆಗಳೊಳ್ ಪೊದಟ್ಟಿ ಪನಿಪುಲ್ಲ ಪಯಃಕಣಮಂ ಬಿದಿರ್ಚಿ ಕ ।
ಣ್ದೆಱೆದಿದಿರ್ಗೊಂಬಿನೊಳ್ ತೊಡೆದು ಚಂಚುವನಂಟ ನಿಮಿರ್ಚಿ ಸೀಪಿ ನು ।
ಣ್ಗಱಿಗಳ ನೊರ್ಮೊದಲ್ ಚಿಲಿಮಿಲಿಧ್ವನಿಗೆಯ್ದು ವಿಹಂಗಮಂಗಳ ।
ಕ್ಕಱಗುಟುಕಂ ಕೊಳಲ್ಕಿರದೆ ಪಾಱಿದುವೆಣ್ದೆಸೆಗಂ ಪ್ರಭಾತದೊಳ್ ॥೯೫॥

ಮ॥ ಸ್ರ॥ ಘನನಿದ್ರಾಮುದ್ರೆಯಿಂ ಮೆಯ್ಮಱೆದು ಸುಖದೊಳಾಲಾನಮಂ ನೆಮ್ಮಿರ್ದುಗ್ರೇ ।
ಭನಿಕಾಯಕ್ಕೆಚ್ಚಱಿಂ ಮಾಡುತು ಮಱಿಳೆಚಕೋರಾಳಿಗುದ್ಭೀತಿಯಂ ತೊ ।

ಟ್ಟನೆ ತಾನೀಯುತ್ತು........ಪತಗಕುಹರಣಶ್ರೀಯನುಳ್ಳೆತ್ತುತ್ತುಂ ಭೋಂ ।
ಕನೆ ಪರ್ವಿತ್ತುರ್ವಿ ಚೈತ್ಯಾಯತನತತಿಯು ಶಂಖಪ್ರಭೂತಪ್ರಣಾದಂ॥೯೮॥

ಚಂ॥ ಇನನ ವಿಯೋಗದೊಂದು ನೆವದಿಂ ಮುಗಿದೆಮ್ಮ ಕುಟುಂಬಕೋಟಿಗಂ ।
ತನುಭವಮಪ್ಪ ಸನ್ಮಧುವನೀಯದೆ ಬಯ್ತಿರಿಸಿಟ್ಟರೆಂದು ಬಂ ।
ದನುಪಿಸಿ ತುಂಬಿಗಳ್ ಪಲವರಲ್ಲೆಯಿಂ ಮೊಗವಿತ್ತವಾಯ್ಕೆಯಿಂ ।
ವನಜಸವರ್ಣಜಮುಳ್ಳಲರ್ದಾಗಳೆ ವಾರಿಜಷಂಡಷಂಡದೊಳ್ ॥೯೯॥

ಮ॥ ಸ್ರ॥ ಹರಿದಿಕ್ಕಾಂತಾಕನತ್ಕುಂಕುಮಕೆಯು ತರಳಮಾಣಿಕ್ಯಮೋ ಪೂರ್ವಧಾತ್ರೀ ।
ಧರಹರ್ಮ್ಯಾಗ್ರಸ್ಥಳೀ ಶೋಣಮಣಿಕಳಶಮೋ ವಿಸ್ಫುರತ್ಸಾಂದ್ರಸಿಂದೂ ।
ರರಜಂತಳ್ತೊಪ್ಪುವೈರಾವತಗಜದ ಶಿರಃಪಿಂಡಮೋ ಪೇಳಿಮೆಂಬಂ ।
ತಿರೆ ಕೆಂಪಂ ತಾಳ್ದಿ ಪೊಣ್ಮುತ್ತುಱಿ ತಿಮಿರ(ಕು)ಭೃತ್ಸಂಭವಂ ಭಾನುಬಿಂಬಂ॥

ಮ॥ ಸರಸೀಜಾನನೆ ಚಕ್ರವಾಕಪಿಳಸದ್ವಕ್ಷೋಜೆ ನೀಲಾಂಬರಾಂ ।
ಬರವಿಭ್ರಾಜಿತೆಯಾಗಿ ಬಂದ ದಿವಸಶ್ರೀದೇಪಿಗೈಂದ್ರೀತನೂ ।
ದರಿ ತಂದುತ್ಸವದಿಂದೆ ತೋರ್ಪರುಣರತ್ನಾದರ್ಶಮೆಂಬಂತೆ ಬಿ ।
ತ್ತರಿಸುತ್ತಿರ್ದುದು ಭಾನುಬಿಂಬ ಮಮರೇಂದ್ರಾಶಾಗಿರೀಂದ್ರಾಗ್ರದೊಳ್॥೨೦೦॥

ಚಂ॥ ಹಳಹಳನಿರ್ದ ತಾರೆಗಳನಾಯ್ದು ಕುಟುಂಕುತುಮೋರೆ ನಾನಲಂ ।
ಬಳವಿಡಿದೆತ್ತುಗೊಂಡ ಪರಿಗಟ್ಟಿಲೆಯುಂ ತವೆ ನುಂಗುತುಂ ಕುಳಾ ।
ಚಳಶಿಖರಾಗ್ರಮಂಡಳಮನೆಯ್ದೆ ಪಳಂಚಲೆಯು ತ್ತುಮಾದಿಶಾ ।
ವಳಿಗೆ ಕರಾಳ ಮುಂಬಟಿಯು ಬಂದುದಯಾದ್ರಿಯು ನರ್ಕನೇಱಿದಂ ॥೨೦೧॥

## 33. ಕೋಳೂರು ಕೊಡಗೂಸಿನ ಕಥೆ.

(ಈ ಕಥೆ ಷಡಕ್ಷರಿಕವಿಕೃತ ವೃಷಭೇಂದ್ರವಿಜಯದಲ್ಲಿರುವುದು.
69ನೆಯ ಪುಟವನ್ನು ನೋಡು).

ಮ|| ವಿಳಸದ್ಬಾಹ್ಯವನೋಪವನವ್ಯಪರಿಖಾಪೂರ್ಣಾರ್ಣಂಬುಜಾತಾಂಬುಜೋ|
ತ್ಪಳಕಲ್ಹಾರ ಸುಗಂಧ ಚುಂಬಿತನಭಶ್ಚಂದ್ರಾಶ್ಮಸಾಲಂ ಸಮು|
ಜ್ಜ್ವಳರತ್ನಾಲಯಹರ್ಮ್ಯಮಂಟಪಶಿವಾಗಾರಾಮಿತ ಶ್ರೀಯುತಂ|
ಕಳವೆತ್ತಗ್ಗಳವಾಗಿ ರಂಜಿಪುದು ಕೋಳೂರೆಂಬ ಸತ್ಪತ್ತನಂ ||೨೦೨||

ಕಂ|| ಆಪಟ್ಟಣದೊಳಗಿರ್ಪಂ|
ಗೋಪಧ್ವಜಪಾದಪೂಜಕಂ ಮೃದುಮಧುರಾ||
ಳಾಪಂ ಸದ್ಗುಣನಿವಹಕ|
ಳಾಪಂ ಶಿವದೇವನೆಂಬ ಭಕ್ತನದೊರ್ವಂ|| ||೨೦೩||

ಅವನ ತನುಜಾತೆ ಸೌಂದರಿ|
ಕುವಲಯದಳನಯನೆ ಕೋಮಲಾಂಗಿ ಸುಧಾಮಾ||
ರ್ದವವಿನಯವಾಣಿ ಮೃದುಳ|
ಸ್ಮಿತವನರುಹವದನೆ ಕನ್ಯೆ ಕಣ್ಗೊಳಿಸಿರ್ಪಳ್ ||೨೦೪||

ವ|| ಆ ಶಿವದೇವನೊಂದುದಿನಂ ನಿಜತನೂಜೆಯಂ ಕರೆದು,

ಚಂ|| ಮಗಳೆ ಮನೋಜ್ಞವಾತೆ ಮಱೆದೆರ್ಮಯು ಮಾಡದಿರಕ್ಕ ಮಕ್ಕಳೊಳ್|
ಪುಗದಿರು ಪಿತ್ತಿಲೋವರಿಯು ನೋರ್ವಳೆ ಪೋಗದಿ ರತ್ತಲುಂ ಮನಂ|
ಬುಗುವ ದುಕೂಲಮಂ ಮಿಸುನಿಬೊಂಬೆಯ ನೊಪ್ಪುವ ಭೂಷಣಂಗಳಂ|
ಬಗೆಮಿಗೆ ತಂದು ನಾಳೆ ನಿನಗಿತ್ತಪೆನಾಂ ಮನೆಗಾದಿರೊಪ್ಪದಿಂ ||೨೦೫||

ಕಂ|| ಶಿವನಿಳಯಕ್ಕೈದಿ ತನೂ|
ಭವೆ ನೀಂ ಪ್ರಸ್ಥೈಕಮಿತದ ಕಪಿಲೆಯ ಪಾಲಂ||
ಶಿವಲಿಂಗಕೆ ಪೊತ್ತಿಱಿದೊ|
ಪ್ಪುವ ತೆಱದಿಂ ಸಲಿಸಿ ಸಲಿಪುದೆನ್ನಯ ವ್ರತಮಂ ||೨೦೬||

ಎಂದು ಮಗಳ್ಗೆ ಬುದ್ಧಿವೇೞ್ದು ಪೋದಾಗಳ್ ಕೊಡಗೂಸು ಕಪಿಲಾಕ್ಷೀರಮಂ ಕಮ್ಮನಿನಿದಪ್ಪಂತೆ ಕಾಸಿ ಕಲ್ಲಿನಾಥನಂ ಕಂಡೆಱಗಿ ಮುಂದೆ ಪಾಲ್ಬಟ್ಟಲನಿಟ್ಟು ದೇವ ಪಸಿದೆ ಪಾಲ್ಗುಡಿವುದೆಂದುಸಿರ್ದು ಕಂಬಮಂ ಮಱೆಗೊಂಡು ನಿಂದಿರ್ದು

ಇನಿಸಾನುಂ ಬೇಗದಿಂ ಮರಳ್ದು ನೋೞ್ಪನಂ ಪಾಲ್ಬಟ್ಟಲಿರ್ದಂತಿರೆ ಮನಂ ನೊಂದು ಮಱುಗಿ,

ಕಂ॥ ದಡಿದಡಿಪೆರ್ದ ಬಿಸಿಮಸಗುವ ।
ನಿಡುಸುಯ್ ಕಂಪಿಪಧರಂಗಳಿಪ್ರೋರ್ಡಿದ ಬಾಯ್ ॥
ಗುಡಗುಡನೆ ಸುರಿವ ಕಣ್ಬನಿ ।
ಯೊಡಸಿರೆ ಕೊಡಗೂಸು ನೋಡಿ ಲಿಂಗಮನಾಗಳ್ ॥೨೦೭॥

ಏಂ ಕಾರಣಮೀಪಾಲಂ ।
ನೀಂ ಕುಡಿಯದೆ ಸುಮ್ಮನಿರ್ಪೆ ಯಕಟಕಟನಗಾ ॥
ತಂಕಮನಾಗಿಪ್ಪುದುಚಿತಮೆ ।
ಶಂಕರ ನೀಂ ಪೇಳ್ವುದೆಂದು ಮಗುೞ್ದಂತೆಂದಳ್ ॥೨೦೮॥

ಮ॥ ಪಸಿವೇನಾಗದೊ ದೇವ ಕೇಳ್ ನಿನಗೆ ಪಾಲಲ್ಲಂ ಕಾಯ್ದುದೋ ಪೊತ್ತಿತೋ ।
ಬಿಸುಪಾಱಿರ್ದುದೊ ಕಮ್ರನಾಗದೊ ತನತ್ತಿಂಪೇಱದೋ ಕಗ್ಗರಂ ।
ಜಿಸದೋ ವೇಣ್ ಪೂಗಸುತ್ತಿದತ್ತೊ ಪಱುಱಿಂ ಕಣ್ಣಂಜಲಾದತ್ತೊ ಬ ।
ಲ್ಬಿಸಿಯಾಗದಿರ್ದುದೊ ವಿನಸಲ್ಲೋಸಿತೋ ಪೇೞೇಂ ಮುದಿರ್ದಂದವಂ ॥

ಕಂ॥ ಮನವೞಿಸಿ ನೋಡಿದೆನೆ ನ ।
ಲ್ಗೆನೆಯುಂ ಜೇರ್ಕಯ್ದು ತಂದೆನೇ ಪಾಲನಿದಂ ॥
ಮನೆಯಲ್ಲಿ ತಡಂ ಗೆಯ್ದೆನ ।
ನೆನೆದೆನೆ ಪೆಱತೊಂದನೇಕೆ ನುಡಿಯೆ ಪುರಾರೀ ॥೨೧೦॥

ಬಿಸುಪಾಱಿರ್ದೊಡೆ ಸವಿ ಸಮ ।
ನಿಸುಗುಮೆ ಬಗೆವಂದು ಜವದಿನೀಂಟಯ್ಯ ಸುಧಾ ॥
ರಸಮಂ ನೀಂ ಬಯಸಿದುದಂ ।
ಬೆಸಸೇಗಳ್ ನಿನಗೆ ಪೋಗಿ ತಂದಪೆನಭವಾ ॥೨೧೧॥

ಪೊಸಸಕ್ಕರೆಯುಂ ನವಮಧು ।
ರಸಮಂ ನಱುನೆಯ್ಯ ನೆಸೆವ ಕದಳೀಫಲಮಂ ॥
ರಸನೆಯೊಳಸಿದುದನೆನ್ನೊಳ್ ।
ಬೆಸಸೇಗಳ್ ನಿನಗೆ ತಂದಪೆಂ ಶಶಿಮೌಳೀ ॥೨೧೨॥

ಕಂ|| ಪುರಿಗಡುಬು ತರಗು ಚಕ್ಕುಲಿ |
ಕರಂಜಿಕಾಯತಿರಸಂ ಚಿಗುಳಿ ಲಡ್ಡುಗೆ ಸ ||
ಕ್ಕರೆ ಪೇಣಿ ಯೊಳವು ಮನ್ನಂ |
ದಿರದೊಳ್ ನೀಂ ಬಯಸೆ ಪೋಗಿ ತಂದಪೆನೀಗಳ್ ||೭೧೩||

ಪಾಲೊಡನಾರೋಗಿಪೆನೆನೆ |
ಲೀಲೆಯೊಳಾಂ ಪೋಗಿ ತರ್ಪೆನೋಗರಮ ನಿವಳ್ ||
ಬಾಲಕಿ ಪುಸಿನುಡಿದಪಳಂ |
ದಾಲೋಚಿಸದಿರ್ ಪರೀಕ್ಷಿಸೆನ್ನಯ ಗುಣಮಂ ||೭೧೪||

ಉತ್ಸಾಹವೃತ್ತಂ.

ಎನ್ನಮಾತನುಪೇಕ್ಷೆಗೆಯ್ಯದ ಪಾಲನೀಂಟದೊಡಯ್ಯ ಕೇಳ್ |
ನಿನ್ನನಾಂ ಕರೆದುಯ್ವೆನೊಪ್ಪುವ ವೀರಭದ್ರನ ತೇರ್ಗೆ ಸಂ |
ಪನ್ನ ಮುದ್ಗರು ಪರ್ವಕನ್ನಯ ತಂದೆ ನಾಳೆನಗೀವ ರ |
ತ್ನೋನ್ನತಾಭರಣಂಗಳಂ ನಿನಗೀವೆ ನಿಂದುಕಳಾಧರಾ ||೭೧೫||

ವ|| ಎಂದೊಡಂ ಉಗ್ರಂ ಸುಮ್ಮಗಿರೆ,

ವ || ನುಡಿಯಂ ಪಾಲ್ಗುಡಿಯಂ ಮಹೇಶನಕಟನ್ನೇಗೆಯ್ವೆನೆಂದಟ್ಟು ಬಾ |
ಯ್ವಿಡುತುಂ ಸುಯ್ವನೆ ಸುಗಿಯುತ್ತುಂ ಜೇಳಾಗುತುಂ ಬೆರ್ಚಿ ಸೈ |
ಗೆಡಯುತ್ತುಂ ಬಿಸದೆಬ್ಬಿ ಡಂಡೆಣಿಸುತುಂ ಬಾಯ್ಬಾಚುತುಂ ಬಳ್ಕುತುಂ |
ಸಡೆಯುತ್ತುಂ ಕೊಡಗೂಸು ಕೋಟಲೆಗೆ ಪಕ್ಕಾಗಿರ್ದಳಾವೇಳೆಯೊಳ್ ||೭೧೬||

ವ|| ಇಂತು ಪಿರಿದು ವಿಷಾದಂ ಬಡೆದು ಪಾಲ್ಗುಡಿಯದ ನಿನಗೆನ್ನ ಹರಣಮಂ ಸಮರ್ಪಿಪೆನೆಂದು ಮುಂತಣ ಶಿಲಾಸ್ತಂಭಮಂ ಶಿರಮೊಡ್ಡಿ ಘಳಿಲನೆ ಪಾಯಲೊಡನೆ,

ಕಂ|| ನಂದನೆ ನೊಂದಪಳಂದೊ |
ಲ್ದಿಂದುಧರಂ ಪಿಡಿದು ನಗಪಿ ನಿಜಕರದಿ ನವಳ್ ||
ತಂದಣ್ಣೆ ಪಾಲ ನೀಂಟಿದ |
ನಂದಂ ಮಿಗೆ ಭಕ್ತವತ್ಸಲಂ ಬಟಿಕಾಗಳ್ ||೭೧೭||

ವು|| ಎಳನಗೆಯುಣ್ಣೆ ಮುದ್ದುಮೊಗದೊಳ್ ಸುಧೆಯಿಂದಭಿಷೇಕಿಪಂತೆ ಕ |
ಣ್ಬೆಳಗಡರ್ದೊಪ್ಪೆ ಲಿಂಗತನುವಂ ಕೊಡಗೂಸು ಮನೋನುರಾಗಸ |
ವ್ಮಿಳಿತವಿನೋದದಿಂ ಪಸುಳೆಯೂನೆನುತುಂ ಸುಧೆಯಿಾಂಟಲೊಲ್ಲದು |
ಮ್ಮಳಿಮನೊಡರ್ಚಿ ಕಾಡಿದೆಗಡೆಂದೆನೆ ನಕ್ಕ ನಹೀಂದ್ರಭೂಷಣಂ ||೭೧೮||

ಕಂ|| ಜನಕಂ ಬಂದೊಡೆ ಪೇೞ್ವೆ ।
ನಿನಿತೆಲ್ಲಮನಯ್ಯ ಮರೆಯದಿರ್ ಬೞಿಕೆನಗಂ ॥
ನಿನಗಂ ಸಂವಾದಮದುಂ ।
ಟೆನುತುಂ ಪೊಡೆಮಟ್ಟು ನಗುತೆ ಮನೆಗೆಯ್ತಂದಳ್ ॥೨೧೯॥

ಬಾಲೆಯು ನುಣ್ಣಡಿ ಬಟ್ಟಲ ।
ಪಾಲಿಂದಿನಿದಾಗೆ ಕಿವಿಗೆ ಪಾಲುಡಿಯದೆ ಮು ॥
ನ್ನಾಲಲನೆಯು ಮುಗ್ಧೇಕ್ಷಿಯು ।
ನಾಲಿಸಿದೆಂ ಮುದದಿನೆಂದನುಮೆಗೆ ಮಹೇಶಂ ॥೨೨೦॥

ಪಾಲಂ ತಂದನುದಿನಮಾ ।
ಬಾಲೆ ಪೊವಟ್ಟೇಂಟೆ ಗಿರಿಶಗೆಱಿದೆಯ್ದುಗುಮಾ ॥
ತ್ರಾಲಯಕೆ ಮುಗ್ಧಭಕ್ತಿಸ ।
ಮಾಲಂಬಿತಚಿತ್ತಮತ್ತ ಮತ್ತೊಂದು ದಿನಂ ॥೨೨೧॥

ಪೇಱೂರ್ಗೆ ಪೋದ ಪಿತನಾ ।
ದಾರಿಯೊಳಯ್ತರುತೆ ಬೞಿಯ ಬಟ್ಟಲ್ವಿಡಿದಂ ॥
ದೋರಂತೆ ಬರ್ಪ ಸುತೆಯುಂ ।
ಸಾರೆಯೊಳೀಕ್ಷಿಸುತೆ ನಾಡೆ ಕೆರಳ್ಗಂತೆಂದಂ ॥೨೨೨॥

ಎಲೆ ತರುವಲಿ ಬಟ್ಟಲಪಾಲ್ ।
ನೆಲಕೊಕ್ಕುದೊ ನೀನೆ ಪೀರ್ದೆಯೋ ಪೇೞಿದನು ॥
ಕ್ಕಲಿಸದೊಡನಾಱಿಗಳ್ಗೀಂ ।
ನಲಿದೆಱೆದೆಯೊ ಬೞಿಯ ಬಟ್ಟಲಿದೆಯಿದೆ ಕರದೊಳ್ ॥೨೨೩॥

ವ|| ಎಂದಾಗ್ರಹಿಸಿ ಜನಕಂ ನುಡಿಯೆ ಬಿಗುರ್ತು ನಿಂದು

ಕಂ|| ನೀಂ ಬೆಸಸಿದಂತೆ ಬಟ್ಟ ।
ಲ್ದುಂಬಿ ಸುಧಾರಸಮನುಯ್ದು ಮುಂದಿಡೆಸವಿದಂ ॥
ತ್ರ್ಯಂಬಕ ನೆಲೆ ಜನಕ ಬೞಿ ।
ಕ್ಕಾಂಬಱುವಟ್ಟಲನೆ ಕೊಂಡು ಬಂದಪೆನೀಗಳ್ ॥೨೨೪॥

ಕಂ॥ ಅನುದಿನಮಿಂತಾರೋಗಿಪ ।
ನಿನಿವಾಲಂ ಶೂಲಿ ನನ್ನಿ ತೊದಳಲ್ಲೆನೆ ತ ॥
ಜ್ಜನಕಂ ಪಾಲಂ ಶಿವನು ।
ಣ್ಬನೆ ಪುಸಿ ಪುಸಿಯೆಂದು ತನ್ನೊಳಂದಿಂತೆಂದಂ ॥೭೩॥

ಅತಿವೃದ್ಧಭಕ್ತತತಿ ಸಂ ।
ತತಮುಂ ಪ್ರಾರ್ಥಿಸಿದೊಡುಣ್ಬದದು ದುರ್ಲಭ ಮಿಾ ॥
ಸಿತಗಳನೇನುಮನಱಿಯದ ।
ಮತಿರಹಿತೆಯ ಮಾತುಗೇಳ್ದು ಪಾಲ್ಗುಡಿದಪನೇ ॥೭೪॥

ವ॥ ಎಂದು ಬಗೆದು ವರದಿನಂ ಪಾಲಂ ಪೊಂಬಟ್ಟಲ್ದೀವಿ ತಳೆದ ನಂದನೆಯುಂ ಮುಂದಿಟ್ಟೀಟ್ಟೆಂದು ಶಿವಸಿದಿರೊಳ್ ನಿಂದು ನಿರೀಕ್ಷಿಸುತ್ತಿರ್ಪ ಕೂಡಗೂಸು ಮೃಡಂ ಗೆಱಗಿ ಪಾಲಂ ಮುಂದಿಟ್ಟ ಕೈಮುಗಿದಾರೋಗಿಪುದೆಂದು ಬಿನ್ನಪಂಗೆಯ್ಯೆ,

ಕಂ॥ ಹರನಾಭಕ್ತಿಯ ಮಹಿಮೆಯ ।
ಪರಿಯಂ ಧರೆಗಱಿಪಲೆಂದು ಪಾಲ್ಗುಡಿಯದಿರೆ ॥
ತಿರೆ ಸುರ್ಕಿ ಸುಗಿದಳಾಗಳ್ ।
ತರಳೆ ಪಿತಂ ಕಂಡು ಕಾಯ್ವನಿಂ ಸುತೆಗೆಂದಂ ॥೭೫॥

ಕುಡಿಕುಡಿದು ನೀನ ಸುಧೆಯುಂ ।
ಮೃಡನೀಂಟುಗುಮೆಂದು ನುಡಿದೆ ಪುಸಿಯುಂ ನಿನ್ನಂ ॥
ಕಡಿದಿಕ್ಕದೆ ಮಾಣ್ಬೆನೆ ಕೇಳ್ ।
ಕಡುಪಾತಕಿ ಯೆಂದು ತಂದೆಯುರೆಯಟ್ಟಲೊಡಂ ॥೭೬॥

ಉತ್ಸಾಹವೃತ್ತಂ

ಹಾ ಮಹೇಶ್ವರ ಹಾ ಮದೀಶ್ವರ ನೀನೆ ಸದ್ಗತಿ ಕಾವುದೆಂ ।
ದಾಮಹಾಭಯಕಂಪಿತಾಂಗಿ ಯೊರಲ್ದಿ ಬಾಯ್ಬಿಡೆ ಬೇಗದಿಂ ।
ಸೋಮಶೇಖರ ನಂಜದಿರ್ ತನುಜಾತೆಯೆಂಗಭಯಂಗುಡು ।
ತ್ತಾಮನೋಜ್ಞಸುಧಾರಸಂಗುಡಿದಂ ಕೃಪಾನಿಧಿಶಂಕರಂ ॥೭೭॥

ಕಂ॥ ಆ ಕೂಡಗೂಸಂ ಕರುಣಾ ।
ಲೋಕನದಿಂ ನೋಡಿ ತೆಗೆದು ಬಿಗಿಯಪ್ಪುತೆ ಗೌ ।

ರೀಕಾಂತಂ ತನ್ನೊಡಲೊಳ್ ।
ಜೋಕೆಯಿನೊಳಪುಗಿಸೆ ಪುಗುವ ಮಗಳಂ ಕಂಡಂ ॥೮೩೦॥

ಕಂಡೆಲೆ ಪೋಗದಿರೆನುತುಂ ।
ಚಂಡಿಕೆ ವಿಡಿದೆಳೆಯೆ ಶಿಖೆಯೆ ಪೊಱಗುಳಿದಿರೆ ಭೂ ॥
ಮಂಡಲಮಚ್ಚರಿವಡೆ ಮುಂ ।
ಕೊಂಡಾ ಕೊಡಗೂಸು ಲಿಂಗದೊಳಪೊಕ್ಕಿರ್ದಳ್ ॥೮೩೧॥

ಅಮರ್ದವಳ ಮುಗ್ಧಭಕ್ತಿಯೊ ।
ಳಮರ್ದಂ ತನಗಿತ್ತು ಮುಗ್ಧಭಕ್ತಿಗೆ ಸೊಗಯಿ ॥
ಪ್ಪಮರ್ದನೊಸೆದಿತ್ತನಘಹರ ।
ನಮರ್ವಣಿಗಳ್ ಪೊಗಳೆ ನಲಿಯೆ ಶರಣಸಮೂಹಂ ॥೮೩೨॥

## 34. ವರ್ಷರ್ತು ವರ್ಣನೆ.

(ಇದು ಷಡಕ್ಷರಿ ಕವಿ ಕೃತ ರಾಜಶೇಖರವಿಲಾಸದಿಂದ ಉದ್ಧೃತವಾಗಿದೆ. 69ನೆಯ ಪುಟವನ್ನು ನೋಡು)

ಮ|| ಸ್ರ|| ಅಪರಾಶಾಕುಂಭಿ ಶುಂಭತ್ಕರಟತಟಗಳದ್ದಾನ ಸಂಭ್ರಾಂತಭೃಂಗೌ |
ಘಪಯೋದಾಲಂಬಿ ಜೃಂಭಜ್ಜಲಧಿ ಜಲಲವಾಶ್ಲಿಷ್ಟಮುನ್ನಿದ್ರಕೈತ |
ಕ್ಯಪರಾಗಶ್ರೇಣಿ ಚಂಚಚ್ಚಪಲಮುಪಲಸತ್ತಾಳಸಂಘೃಷ್ಟಭಾಂಡೌ |
ಘಪಟುಧ್ವಾನಾಬ್ದರಾವಂ ಸುಟಿವವು ಪವನಂ ಕಾರಿದೆಂಬಂತಳುಂಬಂ ||

ವ|| ಆಗಳ್,

ಚಂ|| ಅಲರ್ದುದು ಕಾಡಮಲ್ಲಿಗೆ ಮುಗುಳ್ತುದು ಜಾದಿ ಕದಂಬಕುಟ್ಮಲಂ |
ಬಲಿದುದು ಪೂದೊಡಂಬೆಯನೊಡರ್ಚಿತು ಕೇತಕಿ ಕೇಕಿ ನಣ್ಪಿನಿಂ |
ನಲಿದುದು ಹಂಸೆ ಪಾರಲನುಗೆಯ್ದುದು ಚಾದಗೆ ರಾಗವಾಂತುದು |
ಜ್ವಲತೆಯನಪ್ಪುಕೆಯ್ದುದು ವಿಯೋಗಿಗಳಂಗದೊಳಂಗಜಾನಲಂ ||೨೩೪||
ಸುಟಿಗೊಳುತ್ತೆ ಸುಟ್ಟುರ ಧರಾರಜವಂ ಕಳಗೊಂಡೆ ದಂಡದಂ |
ತುಟಿದ ತತಾತಪಂ ಬಳಸಿ ಪಲ್ಲವದಂತಿರೆ ಬಾನ ಮಧ್ಯದೊಳ್ |
ತೊಳಗುವ ಭಾನು ಭರ್ಮಕಲಶಂಬೊಲದೊಪ್ಪಿರೆ ಬಟ್ಟ ಬಲ್ಮುಗಿಲ್ |
ತಳೆದುದು ಕಾಲಭೂಪತಿಯ ಪೀಲಿಯ ಸತ್ತಿಗೆಯೊಂದು ಲೀಲೆಯಂ ||೨೩೫||

ಮ||ಸ್ರ|| ಗಗನಶ್ರೀಯುಟ್ಟ ನೀಲಾಂಬರವೊ ರವಿಸುಧಾಧಾಮಬಿಂಬಂಗಳಂ ಮು |
ತ್ತಿಗೆಯುಂ ಮಾಡ್ಪಂಧಕಾರವ್ರಜವೊ ಸುರನದೀಸ್ನಾತದೇವಾಂಗನಾವೃ |
ಷ್ಟಿಗಳದ್ವಾರ್ಬಿಂದುಚಂಚತ್ಕಚನಿಚಯವೊ ಜಂಘಾರಿಕುಂಭೀಂದ್ರದಾನಾ |
ಬುಗೆ ಪಾಯ್ವಿಂದಿಂದಿರಶ್ರೇಣಿಯೊ ಎನೆ ನೆರೆದತ್ತಭ್ರನೀಲಾಭ್ರಜಾಲಂ ||೨೩೬||

ಕಂ|| ಧೃತಚಂಚಲಮತಿಚಪಲ |
ಸ್ಥಿತಿ ಜಡಭರಿತಂ ಕಟುಸ್ವರಂ ಬರೆ ಮೇಘಂ ||
ನುತಹಂಸಂ ತಳರ್ದುದು ಮಲಿ |
ನತರಂ ಬರೆ ಶುಚಿಸುವೃತ್ತನೇನಿರ್ದಪನೇ ||೨೩೭||
ಗಱಿ ನೆಱೆಯದ ಕಿಱುವೆಱಿಗಳ |
ನಿಱುಂಕಿ ಪಕ್ಷದೊಳ್ ಪಾಱಲಾಱದೆ ಪಿರಿದುಂ ||
ಮಱುಗುವ ಮರಾಳಿಗಳ ನು |
ಣ್ಗಱಿವೊತ್ತೆಡೆವಿಡದೆ ತಳರ್ದುವಂಚೆಗಳಾಗಳ್ ||೨೩೮||

ಮ॥ ರವಿಚಂದ್ರಪ್ರಚುರಪ್ರಭಾಪ್ರಚಯಮಂ ಮೇಘಂ ಮುಸುಂಕುತ್ತಿ ಕಾ ।
ರ್ಷ್ಣ್ಯವಿಶಿಷ್ಟಂ ತಟಿದಂಕುರಾಲ್ಪರುಚಿಯುಂ ಬೀರಿತ್ತುದಗ್ರ ಸ್ಫುರ ।
ತ್ಕವಿಕಾವ್ಯಪ್ರಕಟಪ್ರಭಾವಮನದಂ ಕಿಟ್ಟಿಕ್ಕಿಗಂ ಗುಪ್ತಿಗೈ ।
ದವರಾತ್ಮೀಯಕೃತಿಪ್ರಭಾವತೆಯನಾದಂ ತೋರ್ಪವೋಲ್ ಧಾತ್ರಿಯೊಳ್ ॥೨೪೦॥

ಚಂ॥ ಘನಕರಿಗಿಕ್ಕಿದಂಕುಶಮಿದಬ್ದಮುಕುಂದನ ನಂದಕಾಯುಧಂ ।
ವನದ ತಮಾಲಕಾನನದ ಕಾನಕವಲ್ಲರಿ ವಾರಿಭೃದ್ಘನಾಂ ।
ಜನಪಗದಾವಪಾವಕಶಿಖಾತತಿ ಮೇಘಮಹಾಂಧಕಾಖ್ಯದೈ ।
ತ್ಯನಖರದಂಷ್ಟ್ರ ಮುಳ್ಕಿದುದು ಮಿಂಚು ಮುಗಿಲ್ಮಗುಳಂಬನೀಕ್ಷಣಂ॥
ಅತಿಗಳಿಗುರ್ವಿ ಮಿಂಚುವೆಳಮಿಂಚು ಮರುದ್ಭಟನೆತ್ತಿ ಬೀಗದಿಂ ।
ತೊಡೆವ ಸುವರ್ಣಕೋಣಮೆನೆ ತಳ್ತಿರೆ ತಾಸೆಗೆದತ್ತು ಕಾರ್ಮುಗಿ ।
ಲ್ಗದಣಾನನಿಸ್ವ ದಂತಿತತಿಯುಗ್ರನ ಟಂಟಮನಾದದಂತೆ ಪೆ ।
ರ್ಗದಲಗು ನಿದಾಘನಂ ತಗುಳಲೈದಿದ ನೀರದಕಾಲರಾಜನಾ ॥೨೪೧॥

ವಂಶಸ್ಥವೃತ್ತಂ

ಸ್ಫುರದ್ಧನುಃ ಶ್ರೀಕರಚಂಚಲೇಕ್ಷಣಂ ।
ಶರಧ್ಯುಪಾತ್ತೋರುಶರಂಘನಸ್ವನಂ ।
ಹರಿಪ್ರಭಂ ನೀರದರಾಜ ನಟ್ಟಿದಂ ।
ಧರಾತಿಸಂತಾಪದನಂ ನಿದಾಘನಂ ॥೨೪೨॥

ಕಂ॥ ಗಱು ಮೂಡಿದಂತೆ ಕೆಲದೊಳ್ ।
ಕಿಱುಮುಗಿಲಿರೆ ಜಲದ ನೀಲಗಿರಿ ನೆಗೆಯು ಕಱು ॥
ತ್ತಱಗಿದ ವಜ್ರಿಯ ವಜ್ರದ ।
ಬಿಱುವೊಯ್ಲ ರವಕ್ಕೆ ಬಱಸಿಡಿಲ್ ಸರಿಬರ್ಕುಂ ॥೨೪೩॥

ಮ॥ ವರುಣಾಶಾಬ್ಧಿಪಯಃಪ್ರವಾಹವಿತತಸ್ನಾನಂ ವಿನಿರ್ಧೂತಧಾ ।
ತ್ರೀರಜಃಪ್ರೋತ್ಪಿಹಿತಾಂಗ ನುದ್ಧೃತಘನಕ್ಷ್ಮಾಜವ್ರಜಂ ಭೂಧರೋ ।
ತ್ಕರಸಂಚಾರಿ ಕದಂಬಸನ್ಮಧುಮದಾಂಭೋವಾಹ ಮಂಭೋದಸಿಂ ।
ಧುರಮಂ ಪಾಯ್ದುಪಳಂಚಿ ಪೊಯ್ದುದು ರಟಜ್ಜಂಝಾಮರುತ್ಕುಂಜರಂ ॥

ಚಂ॥ ಗಜದಜೆನಂ ಮುಗಿಲ್ ಗಜಱಿ ಗರ್ಜಿಪ ರುಂಡಕದಂಬಘೋಷಮು ।
ಭುಜಪಟುಘೋಷ ಮುತ್ಕಟತಟತ್ತಿಯುತ್ಫಣಿತಾಹಿಶೀರ್ಷರ ।
ತ್ನಜಘೃಣಿಮಾಲೆ ಘಾಲಶಿಖಿ ಮೇಘಶಿಖಾವಹನಾಗೆ ನರ್ತಿಪಂ ।
ಗಜರಿಪುವೋಲ್ ಘನಾಗಮಮದೇಂ ಬಗೆಗೊಂಡುದೊ ನೋಟಕರ್ಕಳಾ ॥

ಕಂ|| ಕಡಲ ವಿಷಮೀಂಟಿದೊಡೆ ತ |
ನ್ನೊಡಲಂ ಬಿಡದಡರೆ ಕರ್ಪ್ಪುವೆತ್ತಂಗದಿನಾ ||
ಗಡೆ ಜೀವನಮಂ ಬಿಟ್ಟುದು |
ಜಡದಂ ಮೃಡನುೞಿದ ನೆಂದೊಡುೞಿದರ್ಗ್ಗಳವೇ ||೨೪೬||

ನೆರೆದು ಘನಘನಮದೇಭೋ |
ತ್ಕರಮೀಂಟಿ ಮರುತ್ತರಂಗಿಣೀ ಜಳಮಂ ಪ್ರಾ ||
ತ್ಕರಿಸೆ ಸಿಡಿದಿೞಿವ ಕಣಗಣ |
ದಿರವೆನಿಸಿದು ದರರೆ ಸುರಿವ ಪೆರ್ಮ್ಮೞೆ ನಭದಿಂ ||೨೪೭||

ಸುರಚಾಪಚಂಪಕಸ್ರಜ |
ಕುರವಣಿಸುತ್ತಸಿತ ಜಳದ ಮದಮಧುಪಸಮೂ ||
ತ್ಕರಮೆಱಗಿದಂತೆ ಮೆಱೆದುದು |
ಪರಿಕಿಸದಾತ್ಮೀಯ ಜೀವನವ್ಯಯಭಯಮಂ ||೨೪೮||

ನುಂಗೆ ರವಿರುಚಿಯನದು ತ |
ನ್ನಂಗುೞ್ಪಡೆ ಸಿತಜಳದವಿಧುಂತುದನುಗುಪ್ವಾ ||
ಪಾಂಗ ನನುಕರಿಸಿ ಮಿಂಚುತ |
ಡಂಗುವ ಸೆಳಮಿಂಚದೇಂ ಮನಂಗೊಳಿಸಿದುದೋ ||೨೪೯||

ಮೆಲ್ಸರಿ ಸೂೞ್ಸರಿ ಮುಗಿಲೊ |
ಳ್ಗಲ್ಸರಿ ತೆಳ್ಸರಿ ಕರಂಪೊನಲ್ವರಿಯಿಪ ಬಂ ||
ಬಲ್ಸರಿ ಬಲ್ಸರಿ ಕಾಲ್ಸರಿ |
ಸಾಲ್ಸರಿ ಸಲೆ ಸುರಿದು ಕಱೆದುವಿರುಳುಂ ಪಗಲುಂ ||೨೫೦||

ಘುಡುಘುಡು ಚಿಳಿಚಿಟಿಲೆಂದ |
ಗ್ಗಡದ ಸಿಡಿಲ್ದನಿಯೆ ಪೊಡೆಯೆ ಗಗನಸ್ಥಳದಿಂ ||
ದುಡುಂಗಳ್ ಪಳಪಳ ನುದಿರ್ವ್ವೂ |
ಲೆಡೆವಿಡದಿೞಿವಾಲಿವರಲ ಮೞೆ ಬಗೆಗೊಳಿಕುಂ ||೨೫೧||

ಮ|| ಸುರಚಾಪದ್ವಿಪವೈರಿ ಮಿಕ್ಕು ನೆಗೆದಭ್ರಾರಣ್ಯದಭ್ರೋರುಸಿಂ |
ಧುರಕುಂಭಸ್ಥಳವಂ ಸಿಡಿಲ್ದನಿ ನಿಜಧ್ವಾನಂಬೊಲಿಂಬಾಗೆ ಬಂ |

# ನಾವು, ಭಾಷೆ ಮತ್ತು ಸಾಮಾಜಿಕ ವ್ಯವಸ್ಥೆ

## ಮಿತ್ರರೇ, ದಯವಿಟ್ಟು ಯೋಚಿಸಿ:

1. ನಮ್ಮ ಭಾಷಾಭಿಮಾನ ನಿಜವಾಗಿಯೂ ಭಾಷಾಭಿಮಾನವೇ? ಅಥವಾ ಆಂತರಿಕವಾದ ಜಾತೀಯ ಹಿತಾಸಕ್ತಿಗಳ ಅಭಿವ್ಯಕ್ತಿಯೇ? ಹಾಗಿಲ್ಲದಿದ್ದರೆ ನಮ್ಮಲ್ಲಿ ಯಾವುದೇ ಅಭಿಮಾನ, ಚಳುವಳಿ ಜಾತೀಯವಾಗಿ ಪರಿಣಮಿಸುವುದು ಏಕೆ?

2. ಭಾಷೆ ವಿಚಾರದ ಒಂದು ಮಾಧ್ಯಮ. ನಮ್ಮೆಲ್ಲರ ಅನಿಸಿಕೆ ಎಲ್ಲ ಮಟ್ಟದ ಜನರನ್ನೂ ಮುಟ್ಟುವುದು ಎಲ್ಲರೂ ಬಲ್ಲ ಕನ್ನಡದ ಮೂಲಕ ಮಾತ್ರ ಸಾಧ್ಯ. ಆದ್ದರಿಂದ ಸಮಾಜ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವ ಸಾಧ್ಯತೆಗಳು ಎಲ್ಲರಿಗೂ ಸಹಜವಾದ ಕನ್ನಡಕ್ಕೆ ಇವೆಯೇ ಹೊರತು ಕೇವಲ ಕೆಲವರು ಬಲ್ಲ ಇಂಗ್ಲಿಷಿಗಲ್ಲ. ಇಂಥ ಸಾಮಾಜಿಕ ಬದಲಾವಣೆಗೆ ತೀರ ಅಗತ್ಯವಾದ ಕನ್ನಡ ಶಿಕ್ಷಣ ಮಾಧ್ಯಮ, ಕನ್ನಡ ಆಡಳಿತ ಭಾಷೆಯಾಗುವುದಕ್ಕಾಗಿ ಚಳುವಳಿ ನಡೆಯುವ ಬದಲು ಕನ್ನಡಕ್ಕೆ ಅವಮಾನವಾಯಿತು ಎಂದೇಕೆ ಚಳುವಳಿ ನಡೆಯುತ್ತದೆ?

2. ಒಂದು ಭಾಷೆಯ ಪ್ರಭಾವ ಎಂದರೆ ಆ ಭಾಷೆಯ 'ಸಾಹಿತ್ಯ'ದ ಪ್ರಭಾವ ಎಂದರ್ಥ. ಇಡೀ ಭಾರತೀಯ ಸಾಹಿತ್ಯ ಹಿಂದೂ ಮತವ್ಯವಸ್ಥೆಯ ಚೌಕಟ್ಟಿನಲ್ಲೇ ರಚಿತವಾದದ್ದು. ಈ ಸಾಹಿತ್ಯರಚನೆ ನಮ್ಮ ಸಾಮಾಜಿಕ ವ್ಯವಸ್ಥೆಯ ಕೆಲವು ವರ್ಗದವರಿಂದ ಮಾತ್ರ ನಡೆದದ್ದು. ಅವರ ದೃಷ್ಟಿಯ ಮಿತಿಯಲ್ಲೇ ನಾವು ನಮ್ಮ ಸಮಾಜ ವ್ಯವಸ್ಥೆಯನ್ನು ನೋಡಬೇಕಾಗುತ್ತದೆ ಈ ಸಾಹಿತ್ಯ ಎತ್ತಿ ಹಿಡಿಯುವ ಮೌಲ್ಯವನ್ನು ಮತ್ತು ಸಾಹಿತ್ಯವನ್ನು ಸಾಮಾಜಿಕ ತುಳಿತಕ್ಕೆ ಗುರಿಯಾದವರು ಸ್ವಾಭಾವಿಕವಾಗಿಯೇ ತುಚ್ಛೀಕರಿಸುತ್ತಾರೆ ಅದೇ ಸಮಾಜವ್ಯವಸ್ಥೆಯಿಂದ ಲಾಭ ಪಡೆದ ಜನ ಈ ತಿರಸ್ಕಾರವನ್ನು ಯಾವ ದೃಷ್ಟಿಯಿಂದ ನೋಡಬೇಕು?

3. ನಮ್ಮ ದೇಶವನು ಜಾತ್ಯಾತೀತ (ಸೆಕ್ಯುಲರ್) ಎಂದಾಗ ನಿಮಗೇನನ್ನಿಸುತ್ತದೆ? ಹಿಂದೂಗಳು ಮಾತ್ರ ಅಪ್ಪಟ ಭಾರತೀಯರು ಎಂಬ ಭಾವನೆ ನಮ್ಮಲ್ಲಿಲ್ಲವೇ? ಹಿಂದೂ ಮತ್ತು ಮುಸ್ಲಿಮ್ ವಿವಾದಗಳಿಗೂ ಮತ್ತು ಹರಿಜನ ಹಾಗೂ ಸವರ್ಣೀಯ ಹಿಂದೂ ವಿವಾದಗಳಿಗೂ ಇರುವ ವ್ಯತ್ಯಾಸ ಗಮನಿಸಿದ್ದೀರಾ? ಮೊದಲನೆಯದು ಎರಡು ಧರ್ಮಗಳೂ ತಮ್ಮ ತಮ್ಮ ಪ್ರತ್ಯೇಕತೆ ಉಳಿಸಿಕೊಳ್ಳುವ, ಪರಸ್ಪರ ಪರಕೀಯವಾಗಿ ಹಕ್ಕನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರೇರಿತವಾದದ್ದು. ಎರಡನೆಯದು ಹರಿಜನರಿಗೆ ಹಿಂದೂ ಸಮಾಜದ ಅಂಗವಾಗಿಯೇ ಉಳಿಯಲು ಇರುವ ಕಾತರವನ್ನು ತೋರಿಸುತ್ತದೆ. ಒಪ್ಪುತ್ತೀರಾ? ಹರಿಜನರ ಟೀಕೆಗಳಿಗೆ, ಪ್ರತಿಭಟನೆಗಳಿಗೆ ಉಳಿದ ಹಿಂದೂಗಳು ತೋರಿಸುವ ಪ್ರತಿಕ್ರಿಯೆ ಏನು? ಅವರ ಟೀಕಿಸುವ ಹಕ್ಕನ್ನು ಒಪ್ಪಿಕೊಳ್ಳುತ್ತಾರೆಯೇ, ಇಲ್ಲ ಅವರು ತಮ್ಮ ಸಮಾಜಕ್ಕೆ ಪರಕೀಯರಾಗಿಯೇ ಉಳಿಯಲು ಕಾರಣರಾಗುತ್ತಾರೆಯೇ?

4. ಹಿಂದುಳಿದವರಿಗೆ ಸರಕಾರ ಕೊಡುತ್ತಿರುವ ಸವಲತ್ತಿನ ಬಗೆಗೆ ನಾವು ಹೊಟ್ಟೆ ಕಿಚ್ಚು ಪಡುತ್ತಿದ್ದೇವೆಯೇ? ಹಿಂದುಳಿದ ವ್ಯಕ್ತಿ ಹಕ್ಕಿನಿಂದ ಪಡೆಯುತ್ತಿರುವುದನ್ನು ನಾವು ನಮ್ಮ ಕಾರುಣ್ಯದಿಂದ ದಕ್ಕುತ್ತಿದೆ ಎಂದು ಭಾವಿಸುವುದು ಅಪರಾಧವಲ್ಲವೇ? ನಮ್ಮ ಸಮಾನತೆಯ ಕಲ್ಪನೆ, ಆಧುನಿಕರೆಂದುಕೊಳ್ಳುವ ಪ್ರವೃತ್ತಿ ಇವುಗಳೆಲ್ಲ ನಮಗೇ ಗೊತ್ತಿಲ್ಲದಂತೆ ನಡೆಯುವ ಬೂಟಾಟಿಕೆಯೇ? ಹರಿಜನರನ್ನು ನಿಜವಾಗಿಯೂ ನಮ್ಮ ಸಮಾನರೆಂದು ಒಪ್ಪಿಕೊಂಡಿದ್ದೇವೆಯೇ?

5. ನಮ್ಮ ಮೌಲ್ಯ ಕಲ್ಪನೆಯ ದೋಷವನ್ನು ಎತ್ತಿ ಆಡುವ ವ್ಯಕ್ತಿಗಳ ಮೇಲೆ ಕತ್ತಿಮಸೆಯುತ್ತಿರುವುದರಿಂದ ನಮ್ಮ ಮೌಲ್ಯ ಸರಿಯಾದದ್ದಾಗುತ್ತದೆಯೆ? ನಮ್ಮಲ್ಲಿ ಕ್ರಾಂತಿಕಾರಕವೆಂದು ಕೊಳ್ಳುವ ಪತ್ರಿಕೆಗಳೂ ಪತ್ರಕರ್ತರೂ ಇಂಥ ಸಂದರ್ಭಗಳಲ್ಲಿ ಅವರ ಸಂಪಾದಕೀಯ ಧೋರಣೆಗಳಿಗೆ ವಿರೋಧವಾದ ಅಭಿಪ್ರಾಯಗಳುಳ್ಳ ಪತ್ರಗಳನ್ನು ಏಕೆ ಪ್ರಕಟಿಸುವುದಿಲ್ಲ? ಪತ್ರಿಕೆಗಳಲ್ಲಿ, ಭಾಷೆಯ ಬಗ್ಗೆ ಒಂದು ವಿಶಿಷ್ಟ ಸಂದರ್ಭದಲ್ಲಿ ಮಾಡಿದ ಟೀಕೆ, ಅಕ್ರಮ ಪ್ರವೇಶದಂತಹ ಭ್ರಷ್ಟಾಚಾರ ಅನ್ಯಾಯಗಳಿಗಿಂತ ಹೆಚ್ಚಿನ ಸಾಮಾಜಿಕ ಅನ್ಯಾಯ ಎನಿಸುತ್ತದೆಯೆ? ನಮ್ಮ ಪತ್ರಿಕಾ ವರದಿಗಾರರಿಗೆ ಬೇರೆ ಸಾಮಾಜಿಕ ಅನ್ಯಾಯಗಳ ಬಗ್ಗೆ ಸ್ವತಃ ಹುಡುಕಿ ವರದಿ ಮಾಡಲು ಏನೂ ಇಲ್ಲವೆ? ನಮ್ಮ ಪತ್ರಿಕೆಗಳು ರೂಢ ವ್ಯವಸ್ಥೆಯನ್ನು ಬಲಗೊಳಿಸುವ ಅಸ್ತ್ರಗಳೆ?

6. ಕನ್ನಡ ಕೂಡ ಸರಿಯಾಗಿ ಬರದ, ಕಲಿಯಲು ಆಸಕ್ತಿಯೂ ಇಲ್ಲದ ವಿದ್ಯಾರ್ಥಿಗಳಿಂದ ನಮ್ಮ ಭಾಷೆಯ ಬೆಳವಣಿಗೆ ಆದೀತೆಂದು ಅನಿಸುತ್ತದೆಯೆ? ಇಂಥ ವಿದ್ಯಾರ್ಥಿಗಳ ಬಗೆಗೆ ನಿಮ್ಮ ಪ್ರತಿಕ್ರಿಯೆ ಏನು?

7. ನಮ್ಮ ವಿದ್ಯಾರ್ಥಿ ಶಕ್ತಿ ಸಮಾಜಕ್ಕೆ ತರುತ್ತಿರುವ ಒತ್ತಡ ಎಂಥದು? ಸಾಕಷ್ಟು ಸಾಮಾಜಿಕ ಅನ್ಯಾಯಗಳು ಎದುರೇ ಇದ್ದರೂ ಅವುಗಳಿಗೆ ಕುರುಡಾಗಿ ಜಾತೀಯ ಭಾವೋದ್ರೇಕಗಳಿಂದ ಪ್ರೇರಿತವಾಗಿಯೆ ವಿದ್ಯಾರ್ಥಿ ಚಳವಳಿ ಏಕೆ ನಡೆಯುತ್ತಿದೆ?

---

ನಿಮ್ಮ ಸಲಹೆ ಪ್ರತಿಕ್ರಿಯೆಗಳನ್ನು 'ವೇದಿಕೆ' 222, ಧರ್ಮ ಛತ್ರಂ ರೋಡ್, ಚಿಕ್ಕಬಳ್ಳಾಪುರ, 562101 ಇಲ್ಲಿಗೆ ಕಳುಹಿಸಿ ಸಹಕರಿಸಿ.

ಯು.ಎಸ್. ಪ್ರಿಂಟರ್ಸ್, ಮೈಸೂರು.

ಧುರವಿದ್ಯುತ್ಕುಠಾಗ್ರದಿಂ ಪುಗಿದು ಸೀಳಲ್ ಮೌಕ್ತಿಕಾಸೃಕ್ಕಣೋ |
ತ್ಕರಮುತ್ತುಂ ಸುರಿವಂತೆ ಸೂಸಿತು ಘನಗ್ರಾವೇಂದ್ರಗೋಪವ್ರಜಂ ||೨೫೨||

ಉ|| ಎನ್ನ ಸಹಾಯದಿಂ ನೆಱೆಯೆ ತಾಳ್ದು ಘನತ್ವಮ ನಸ್ಮದೀಯಮಿ |
ತ್ತೊನ್ನತತೇಜಮಂ ರವಿಪನೆಂದನಿಲಂ ಮುಗಿಲಂ ಕನಲ್ದು ಪೊ |
ಯ್ದನ್ನೆಗಂ ಘನಧ್ವನಿ ಕಳಲ್ದಿರ್ದತ್ತು ಘನೋಪಳಾಚ್ಛದಂ |
ತನ್ನಿಜ ಮಲ್ಲದಿರ್ದೊಡೆಳೆಯಲ್ಲಿದು ಪೀರ್ದನಾಮುಮಾಂಪುದೇ ||೨೫೩||

ಕಂ|| ಎಳಸಿ ನಿಜಚಂಚುಪುಟದೊಳ್ |
ತಳದಿನಿಯುಳ್ಗೆಱೆದು ಮುಱಿಗಳಂ ತಣಿಪಿ ಮನಂ ||
ಗೊಳಂತಳಪಿ ಸೆಳದು ಜಳಕಣ |
ಕುಳಮಂ ಪೀರ್ದತ್ತು ಚಾತಕಂ ಚದುರಿಂದಂ ||೨೫೪||

ಉ|| ಮಂಗಳಮಾಪ್ಯಮಬ್ದರವ ಮುಣ್ಮುವ ಮಿಂಚಮ ದೀಪಮಾಳೆಯುಂ |
ತ್ತುಂಗಪಯೋದಮಿಟ್ಟ ತೆರೆ ತೋರಣಮಿಂದ್ರದಪಿಲ್ ಸುವೃಷ್ಟಿಯೋ |
ಸಂಗತಧಾರ ಯಾಲಿವರಲುಪ್ಪ್ರವ ಮುತ್ತಿನ ಸೇಸೆಯಾಗೆ ಕಾ |
ರಂ ಗಗನಸ್ಥಲೀರಮೆಯುಮೊಂದಿದ ಕೊಂಡುವಿವಾಹಲೀಲೆಯಂ ||೨೫೫||

ಕಂ|| ಜಳಮಯಮಿಳ ಜಳದಮಯಂ |
ಜಳಧರಮಾರ್ಗಂ ತಟಿನ್ಮಯಂ ದಿಗ್ವಳಯಂ ||
ಕಳಗೊಳ ನವಸೃಷ್ಟಿಯನೇಂ |
ತಳೆದುದೊ ಭುವನಂ ಘನಾಗಮಾಂಬುಜಭವನಿಂ ||೨೫೬||

ಫಣಿಯುಂ ತುಂಡಿಸಿ ವಿಷಮಂ |
ಸೊಣೆದಾನುಂ ನೀಲಕಂಠ ನಾದೆನೆನುತ್ತುಂ ||
ಕುಣಿವಂತೆ ವಿಷಧರದ ಮುಂ |
ದಣಿಯುರದಿಂ ಕೇಗಿ ಕುಣಿವ ನವಿಲೆಸೆದಿರ್ಕುಂ ||೨೫೭||

ಗಱಿ ಪೊಂಪುಟ ಪೋದಂತಿರೆ |
ನೆಱೆ ನಟ್ಟನೆ ನಿಲೆ ಮುದಶ್ರು ಗಱಿಗಣ್ಗಳೊಳೇಂ ||
ಬಱೆತುದೊ ಪೇಟೆನ ಕಿಱುವನಿ |
ತುಱುಗಿರೆ ಮತ್ತೊಂದು ನವಿಲದೇಂ ನರ್ತಿಸಿತೋ ||೨೫೮||

ಉ|| ಛಾವಗೆಯಂತೆ ಮುಂಬನಿಯನೇ ಬರೆಪೀರ್ದುದೆ ವಲ್ಲಿಯಂತದೇಂ |
ತೋದುದೆ ವಾರಿಯಿಂ ಕಡವಿನಂತೆ ಮುಗುಳ್ತುದೆ ತತ್ಸಹಾಯದಿಂ ||

ಕೇದಗೆಯಂತೆ ಪೂತುದೆ ಮುಗಿಲ್ಗಳ ಪಂಗಿನಿತುಂಟೆ ಕೇಕಿ ಯಾ।
ಹ್ಲಾದದೆ ಕಂಡು ನರ್ತಿಪುದಿದಲ್ತೆ ಸಮಾನವಯಃಪ್ರವರ್ತನಂ ||೨೫೯||

ಚಂ|| ಸರಸಸುಗಂಧ ಬಂಧುರ ದಳದ್ದಳ ನೂತನ ಕೇತಕೀ ಸುಮಾ।
ವರಣಫಣಿಪ್ರಮುಕ್ತ ಗರಳೋಪಮಮತ್ತ ಮಧುವ್ರತಾಳಿ ಷ।
ಟ್ಚರಣಗಳತ್ತದೀಯರಜಮುಣ್ಮುವ ಮಿಂಚೆನೆ ಗಾವರಂ ಘನ।
ಸ್ವರಮೆಸಲಲ್ಲಿ ತಳ್ತು ಕೆಳೆಗೊಂಡೆಳಗಾರ್ಮುಗಿಲಂತೆ ರಂಜಿಕುಂ ||೨೬೦||

ವ|| ಮತ್ತಮಾಗಳ್.

ಮ|| ತಳರಲ್ಕೆಂದಡಿಯಿಟ್ಟು ಜಾಱಿ ಜವದಿಂ ಕೆಯ್ಯೋಱಿ ಬಿೞ್ದೆೞ್ದು ಪಂ।
ಕಿಳಮಾದಂಶುಕಮಂ ಪೊನಲ್ವರಿವ ನೀರೊಳ್ ಕರ್ಚಿ ಮೆಯ್ಯಾರ್ಚೆ ಪ।
ಲ್ಗಳನಾದಂ ಪುಳಕಾಂಕುರಂ ಪೊಳೆಯೆ ಮೇಣಾರೆಯ್ದು ಕಾಲಿಟ್ಟಕೋ।
ಲ್ಗಳನಾಂತ್ಕೈಮುವ ಪಾಂಥರಂ ನಗುವರಾ ಹರ್ಮ್ಯಾಗ್ರದಬ್ಜಾಕ್ಷಿಯರ್ ||೨೬೧||

ಕಂ|| ಬೆಳದೆಳವುಲ್ ಕರಮೆಸೆವ।
ತ್ತಿಳ ಮೆಪೆಯಿಂ ನಾಂದು ಸೇಡುವಡೆದಿರೆ ಮೊಳತ ||
ರ್ಗಳಪುಳಕಾಂಕುರಮೆನೆ ಸಂ।
ಚಳದಳವನದಿಂದೆ ಕಂಪಿಸಂತಿರೆ ತೋರ್ಕುಂ ||೨೬೨||

## 35. ಸೀತಾ ಸ್ವಯಂವರಂ.

(ಇದು ಪಂಪರಾಮಾಯಣವೆಂದು ಪ್ರಸಿದ್ಧವಾದ ರಾಮಚಂದ್ರಚರಿತ ಪುರಾಣದಿಂದ ಉದ್ಧೃತವಾಗಿದೆ. ಇದನ್ನು ರಚಿಸಿದ ಅಭಿನವಪಂಪನ ಚರಿತ್ರವನ್ನು 17 ನೆಯ ಪುಟದಲ್ಲಿ ನೋಡು).

ಮ॥ ಬಿಸಿಜೋರ್ವೀರುಹಮಿತ್ತ್ರ ದೇವರಮಣವ್ಯಾಪಾರದಿಂದಾದ ದೇ ।
ವಸಿವಾನಂಗಳೆಂಬ ಭಾವದೊಳೆ ಭೇದಂ ಮಾಟಕೂಟಂಗಳಿಂ ।
ಸಮಂತೆಸ್ಸೇಪಲಕರ್ಮದಿಂ ಮಣಿವಿತಾನಶ್ರೇಣಿಯಿಂ ಭೇದಮಂ ।
ಎಮಗಾರಂಬಿಪಗಂ ಸ್ವಯಂಬರಗೃಹಂ ಕಣ್ಗೆಂ ಬೆಡಂಗಾದುದೋ ॥೨೬೩॥

ವ॥ ಆ ಸ್ವಯಂವರಗೃಹಕ್ಕೆ.

ಕಂ॥ ಪುರುವಂಶವ ಕುರುವಂಶವ ।
ಹರಿವಂಶವ ನಾಥವಂಶದುಗ್ರಾನ್ವಯದ ॥
ವರೆಯೊಡೆಯರಾದಿ ಯಾಗಿರೆ ।
ನರನಾಥಸುತರ್ಕಳನಿಬರಾನುಂ ಬಂದರ್ ॥೨೬೪॥

ಹರಿವಂಶನಿಯಾಮದಿಂ ಹಿತ ।
ಪುರೋಹಿತಂ ಶುಭಮುಹೂರ್ತದೊಳ್ ಕನ್ನಿಕೆಯಂ ॥
ತರವೇಳೆ ವೃದ್ಧಕಂಚುಕಿ ।
ವೆರಸು ಮನೋರಥಮನಿಪ್ಪ ರಥಮಂ ತಂದಂ ॥೨೬೫॥

ಚಂ॥ ಮದಕರಪತಾಕೆ ಚಮರೆಸೆ ವಿಯನ್ಮುಖಮಂ ಸ್ಮರಚಾಪಸಂಕೃತಂ ।
ಪುದಿಪು ದಿಗಂತಮಂ ಕುಸುಮಸಾಯಕಸಾಯಕ ಮುಚ್ಚಿ ರಾಜಲೋ ।
ಕದ ಮನಮಂ ಮನೋಜವಿಜಯಾಂಗನ ಜಾನಕಿ ಪೊಕ್ಕಳಾ ಸಭಾ ।
ಸದನಸುವರ್ಣಗೋಪುರಮನೇಱಿ ಹಿರಣ್ಮಯಮಪ್ಪ ವರೂಥವಮಂ ॥೨೬೬॥

ವ॥ ಅಂತು ಬಂದು.

ಚಂ॥ ಜನಕಜೆ ನಶ್ಯದೀಪಕಳಿಕಾಕೃತಿಯಿಂ ಪುಗೆ ತತ್ಸಭಾನಿಕೇ ।
ತನಕುಸುಮತೋಪಹಾರಮಣಿರಂಗಮ ನಂಗರಮಂ ನರೇಂದ್ರನಂ ।
ತನಗೆ ಮನೋವಿಕಾರನಾಡನಂಗವಿಕಾರ ವಿಮೋಂ ಪೊಮಟ್ಟುದೋ ।
ಸನೆಕೊನೆಯೇ ಪಿವಂತೆ ವನರಾಜಿ ಮಧುಪ್ರಥಮಪ್ರವೇಶದೊಳ್ ॥೨೬೭॥

ಕಂ॥ ಉದಯಿಸೆ ಶಶಿಕಳೆ ತೆರೆಮಸ ।
ಗಿದ ಪಾಲ್ಗಡಲಂತೆ ನೃಪಕುಮಾರಕದಂಬಂ ॥

ಸುದತಿ ಪುಗೆ ಸಭೆಯು ಸೊಳಕೊಂ |
ಡುದು ಮದನವಿಕಾರಚೇಷ್ಟೆಯಂ ಬಹುವಿಧದಿಂ ||೨೬೮||

ವ|| ಆಗಳಾಕೆಯ ಲಾವಣ್ಯಮದಿರಾರಸಸೇವನೆಯಿಂ ಕರಂ ಸೊರ್ಕಿ

ಕಂ|| ದ್ವಿಗುಣಿಸಿ ನಖರುಚಿ ಪ್ರಾವೃ |
ಷೆಗಳಂ ಕಾರಿರುಳೊಳೊಗೆದ ತಾರಾವಳಿಯುಂ ||
ನಗೆ ತೋಱದುಱುಂಬಂ ಸಾ |
ವಗಿಸಿದ ನಡಿಗಡಿಗೆ ನೃಪಕುಮಾರಕನೊರ್ವಂ ||೨೬೯||
ಪರಭಾಗಂ ಬತ್ತಿರೆ ಪ |
ದ್ಮರಾಗಮಣಿ ಪಾಣಿಪದ್ಮರಾಗದಿನೊರ್ವಂ ||
ನರನಾಥಸುತಂ ಮುಱಿದಂ |
ಕಿರೀಟಮಂ ತಿರ್ದುವಂತೆ ಭುಜಶಾಖೆಗಳಿಂ ||೨೭೦||
ತಾರಾವಳಿಯುಂ ತಳದ ನ |
ಭೋರಂಗದ ಭಂಗಿ ತನಗ ಪುದುವೆಸಿಸಿದುದಂ ||
ಪೇರುರಮನದೇಂ ಮುಱಿದನೊ |
ಹಾರಮ ನೋಸರಿಸುವಂತೆ ನೃಪಸುತನೊರ್ವಂ ||೨೭೧||
ಮಂಗಳಮಣಿಪೀಠಂ ನಿಜ |
ಯಾಂಗನೆಗೆನೆ ತೋರ್ಪುವಡೆಗುದಂ ಮತ್ತೊರ್ವಂ ||
ತುಂಗಭುಜಶಿಖರಮಂ ರ |
ತ್ನಾಂಗದಮಂ ಸಾರ್ಚುವೊಂದು ನವದಿಂ ಮುಱಿದಂ ||೨೭೨||

ಮ|| ಕೆಲರಾಗಳ್ ಋಜುವಿಂದಮರ್ಧಋಜುವಿಂದಂ ಸೂಚಿಯಿಂದಂ ಕೆಲರ್ |
ಪಲವುಂ ಭಂಗಿಯಿಸಿರ್ದರ್ ಜಾನಕಿಯ ರೂಪಾಶ್ಚರ್ಯಮಂ ನೋಡಿ ಕ |
ಣ್ಮಲರಂ ಚಿತ್ತಮನಿತ್ತು ಚಿತ್ರಿಸಿದವೋಲ್ ನಿಷ್ಪಂದರಾಗಿರ್ಪುದುಂ |
ನೆಲೆವಂದತ್ತು ವಿಚಿತ್ರಚಿತ್ರಸಭೆಯಂ ಭೂಭೃತ್ಸಭಾಮಂಡಲಂ ||೨೭೩||

ಕಂ|| ಅನಿತಿಂದ್ರಿಯಮುಮಂ ವಿಷಯಮ |
ನನಾಕುಳಂ ಬಿಟ್ಟು ದರ್ಶನೇಂದ್ರಿಯಮೊಂದ ||
ರ್ಕನುವಶಮಾದುವೆನಲ್ ನೃಪ |
ತನಯರ್ ಜಾನಕಿಯ ಮೇಲೆ ಕಣ್ಣಾಗಿರ್ದರ್ ||೨೭೪||

ವ|| ಅನಂತರಂ.

ಕಂ|| ಬಿಸರುಹನೇತ್ರೆಗೆ ಜಾನಕಿ |
ಗೆ ಸುಟ್ಟಿ ತೋಱುತ್ತುಮೞಿಪಿದಳ್ ಪರಿಪಿಡಿಯಿಂ ||
ಪಸಗೊಂಡು ವೃದ್ಧಕಂಚುಕಿ |
ಪೆಸರ ನೃಪಾತ್ಮಜರ ವಂಶವೀರ್ಯಶ್ರುತಮಂ ||೨೨೫||

ವ|| ಆಗಳ್

ಚಂ|| ಎಱಗಿದ ಪೂತ ಚಂಪಕವನಕ್ಕೆ ನಮೇರುಮಹೀರುಹಕ್ಕೆ ಬಂ |
ದೆಱಗುವ ಚಂಚರೀಕದವೊಲಾಕೆಯ ಕೇಕರವನ್ಯರಾಜಕ |
ಕ್ಕೆಱಗದ ರಾಘವಂಗೆಱಗೆ ಕಂಚುಕಿ ಕಣ್ಣುಮುದಾಲತಾಂಗಿಗ |
ಳ್ಕೆಱಗೆ ಳಘುವರ್ಣಿಸಲ್ ಬಗೆದಳಾ ಧರಣೀಶಗುಣೈಕದೇಶಮಂ ||೨೨೬||

ಉ|| ಪ್ರಾಕೃತನಲ್ಲನೀ ದಶರಥಾಗ್ರತನೂಭವನೇಕವಾಕ್ಯನಾ |
ನಾಕಲಿಕರ್ಣಚಾಪಮರಿಯುಶಂ ಚರಮಾಂಗನನಂತವೀರ್ಯನಿ |
ಕ್ಷ್ವಾಕುಕುಳಾಮೃತಾರ್ಣವಸುಧಾಕಿರಣಂ ಗುಣಮೇರುಲೋಕಲುಂ |
ಟಂಕಸಿದಾಘತಾಪಹರವರ್ಷಣಮೇಘ ಸುದಾತ್ತರಾಘವಂ ||೨೨೭||

ಕಂ|| ಕರಿಯುಂ ಕಾಮುಂ ಬಿಸಪಾಂ |
ಡರವರ್ಣಂ ರಾಮನಿಸುವ ಭೇದಮಭೇದಂ ||
ನಿರತಿಶಯಮಪ್ಪ ರೂಪಿಂ |
ವರನಾಗಲ್ ನಿನಗೆ ತಕ್ಕನೀ ರಘುವೀರಂ ||೨೨೮||

ವ|| ಎಂಬಿನಮಾ ಸಮಯದೊಳ್ ವಜ್ರಾವರ್ತಚಾಪಮನೇಱಿಸುವುದುಂ,

ಮ||ಸ್ರ|| ಉಸಿನಾಳಂಬಾಶತಂ ಸಂಚಳಿಸೆ ಹೃದಯಂ ಘೂತ್ಕಾರಮಾಶಾಂತಮಂ ದ |
ಳ್ಳಿಸೆ ವಹ್ನಿಜ್ವಾಲೆ ನಾಗಾನನಕುಹರಸಹಸ್ರಂಗಳಿಂ ಕಣ್ಗಳಿಂದೆ |
ಣ್ದೆಸೆಗಂಗಾರಂಗಳುರ್ಚಲ್ ಕೆದಱಿ ಫಣಸಹಸ್ರಂಗಳಿಂ ಬರ್ಚೆ ಕಣ್ಬ |
ರ್ದೆಸೆ ವಜ್ರಾವರ್ತಚಾಪಂ ಪಡೆದುದು ಭಯಮಂ ಕಾಳಕಾಳಾಹಿರೂಪಂ ||

ಸ್ರ|| ಈ ವಜ್ರಾವರ್ತಕೋದಂಡಮನವಯವದಿಂ ದೇಱಿಸಲ್ವಲ್ಲ ದೋರ್ದಂ |
ಡಾವಷ್ಟಂಭಂ ಪ್ರಚಂಡಂ ಜನಕಜೆಗೆ ವರಂ ಬಪ್ಪನೆಂಬೀ ವ್ಯವಸ್ಥಾ |
ರಾವಂ ಕರ್ಣಾವತಂಸಂ ಪಸರಿಸೆ ನಿಜಪೀಠಂಗಳಿಂ ನೆಟ್ಟನೆದ್ದಾಗಳ್ |
ತೀವ್ರತ್ವರ್ಪನ್ನಗಂ ಭೂಷಣರುಚಿ ಕಕುಭಾನೀಕಮಂ ರಾಜಲೋಕಂ ||

ಕಂ|| ಮನಸಿಜನುಂ ಚಂದ್ರಮನುಂ |
ದಿನಕರನುಂ ಮನೆಕರೇಕೆ ನೆರೆದರೂ ಪೇಟಂ ||

ಬಿನೆಗಂ ನೃಪತನಯರ್ ಬಿ ।
ಲ್ಲನೇಱಿಸಲ್ ತಮ್ಮ ಬೆಳಗೆ ಬೆಳಗೆನೆ ಬಂದರ್ ॥೭೮೧॥

ವ॥ ಅಂತು ಬಂದಗುರ್ವುರ್ವರೆ ವಿಗುರ್ವಿಸುವ ಬಿಲ್ಲಂ ಕಂಡು ಭಯಂಗೊಂಡು,

ಮ॥ ಉರಿಯಂ ಕಾಱುವ ಕೆಂಡಮಂ ಕಱೆವ ಬಿಲ್ಲಂ ಕಂಡೆ ಬಿಲ್ಲುಕ್ಕವಂ ।
ತರುಣೀರತ್ನಮನೀಬ್ದು ಕೊಳ್ವ ಸಮಕಟ್ಟಿಂದಟ್ಟದಂ ಖೇಚರಂ ।
ಮರುಳಾದಂ ಜನಕಂ ವ್ಯವಸ್ಥೆಯನೊಡಂಬಟ್ಟಾರೊ ಕಲ್ಯಾಣತ ।
ತ್ಪರರೀ ಮಂಗಳಲಗ್ನದೊಳ್ ಕುಳಿಕದಂಷ್ಟ್ರಾಲಗ್ನಮಂ ಸ್ಪೈರಿಪರ್॥೭೮೨॥

ಕಂ॥ ಅಹಿದರ್ಶನಮಲ್ತು ಶುಭಾ ।
ವಹಂ ವಿವಾಹಕ್ಕೆ ವಿಷಮಮೀ ಮಾರ್ಗಮಹಿ ॥
ಗ್ರಹಣಂ ಮುನ್ನಂ ಪಾಣಿ ।
ಗ್ರಹಣಂ ಬೞಿಯಂ ಗಡಿನ್ನವಘಟಿತಮಾಳಮೇ ॥೭೮೩॥

ಮಧುಪರ್ಕಮಲ್ತು ಮಂಗಳ ।
ವಿಧಾನದೊಳಗೊಂದುಮಲ್ತು ಪಾಮಂ ಪಿಡಿಮೀ ॥
ವಿಧಿ ಕನ್ಯಾಪರಿಣಯನ ।
ಪ್ರಧಾನಕಾರ್ಯಂಗಳಿನ್ನವಘಟಿತಮಾಳಮೇ ॥೭೮೪॥

ಉ॥ ದೂರದೊಳಂಜವೀಕ್ಷಿಸುವ ಕಣ್ಗಳಿಗಳ್ ನೃಪರಾರುಮಿಲ್ಲೆನಲ್ ।
ಸಾರೆವರಲ್ ಮನಂಗಿಡದ ಮುಯ್ಗಲಿಯಾವನೊ ಬಾಹುವೀರ್ಯದಿಂ ।
ದಾರದನೆತ್ತಲಾರ್ಪರೆನಲೇಱಿಸಲುದ್ಧತವೃತ್ತಿ ನಾಡೆಯುಂ ।
ದೂರಮಿದರ್ಕೆ ಬಿಲ್ಸೆಸರನಿಟ್ಟವನುರ್ವಿಗೆ ನಂಜನಿಟ್ಟವಂ ॥೭೮೫॥

ವ॥ ಎಂದೆಲ್ಲರು ಮಂಜೆ ಪೆಡಂಮಗುಱೆ,

ಶಾ॥ ದೇಶಾಧೀಶತನೂಭವರ್ ಸೆಡೆವುದುಂ ಸಾಕೇತಸಿಂಹಾಸನಾ ।
ಧೀಶಂ ಕಂಡು ದರಸ್ಮಿತಂ ದಶರಥಂ ಭ್ರೂವಲ್ಲರೀಪಲ್ಲವಾ ।
ದೇಶಂ ನೋಡೆ ಮುಖಾಬ್ಜಮಂ ಸಭೆಯಿನೆಬ್ದಿಂ ತುಂಗವಂಶಂ ಸುರೇಂ ।
ದ್ರಾಶಾದಂತಿಬಲಂ ಜಿತಾಹಿತಬಲಂ ದುರ್ವಾರಬಾಹಾಬಲಂ ॥೭೮೬॥

ವ॥ ಅಂತು ತಳರ್ದು,

ಮ॥ ಬಲಭದ್ರಂ ರಜತಾದ್ರಿ ಬರ್ಪ ತೆಱದಿಂ ಬಂದಂ ಧನುರ್ದರ್ಶನಾ ।
ಕುಲರಂ ರಾಜತನೂಜರಂ ಸ್ಮಿತಮುಖಂ ನೋಡುತ್ತುಮುದ್ಭ್ರೂಲತಂ ।

ಕೆಲರಂ ಮೂರ್ಛೆಗೆ ಸಂದರಂ ಕೆಲಬರಂ ಬಳ್ಕುತ್ತೆ ಬೆನ್ನಿತ್ತರಂ ।
ಕೆಲರಂ ಬೆಕ್ಕಸಮುತ್ತರಂ ಕೆಲಬರಂ ಶಂಕಾಪಪಾತಂಕರಂ ||೭೮೭||

ವ|| ಅಂತೆಯ್ದೆವಪ್ಪುದುಂ,

ಚಂ|| ಪವನಬಿದಿಪ್ಪ ಮಂಜರಿ ನಿಜಾಳಕದಂತಿರ ತನ್ನನಾವಗಂ ।
ಪುದಿಯಲೊಡಂ ವಿಗುರ್ವಣೆ ರಘೂದ್ವಹಸನ್ನಿಧಿಯಿಂದದೃಶ್ಯಮಾ ।
ಪ್ಪುದುಮಿಂಟಿದಾಯ್ತು ಚಾಪಲತೆ ರೋಹಣಶೈಲವಿಷಾಪಹಾರ ।
ತ್ತದ ವಿತತಾಂಶು ತಳ್ತಿಡರೆ ನಿರ್ವಿಷಮಾದ ಮಹಾವಿಷಾಹಿವೋಲ್ ||೭೮೮||

ವ|| ಆಗಳಾ ವಿಷಮಕೋದಂಡಮು ನೇರಂಡಕಾಂಡಮುಂ ಬಗೆವಂತೆ ಬಗೆದು,

ಮ|| ಪದುಳಂ ನಿಂದೆಡಗೆಯ್ಯೊಳೊತ್ತಿ ರಘುಜಂ ಕೊಪ್ಪಂ ಪದಾಂಗುಷ್ಠಮೂ ।
ಲದೊಳಿಟ್ಟೇಱಿಸೆ ಕಾಲದಂಡನಿಭಮಂ ಕೋದಂಡಮುಂ ಭೂತಳಂ ।
ಪದುಳಂ ನಿಂದುದೆ ಶೇಷಕಂಠಕರಿನಾಸ್ಥಿಶ್ರೇಣಿ ಸುಗ್ಗಾಗದಿ ।
ರ್ದುದೆ ಕೂರ್ಮೋನ್ನತಖರ್ಪರಂ ಸಳಿಪು ಬೆನ್ನಂ ಪತ್ತದೇಂ ಮಾಣ್ದುದೇ||

ಕಂ|| ಇರ್ಮ ಭರಂಗೆಯ್ದನ ಗೊಲೆ ।
ಗೊರ್ಮದಲೆತ್ತಿದ ನಗುವ್ರ ಪೆಯ್ಯೆತ್ತುದನಾ ||
ಕಾರ್ಮುಕಮಂ ರಘುವೀರನ ।
ದೋರ್ಮಂಡಳಶಕ್ತಿ ಮನುಜಸಾಧಾರಣಮೇ ||೭೯೦||

ಮ|| ಪುಳಕಂ ಜಾನಕಿಗುತ್ಸವಂ ಜನಕರಾಜಂಗುನ್ಮಳಂ ಖೇಚರಾ ।
ವಳಿಗುದ್ವೇಗಭರಂ ನರೇಂದ್ರಸುತಸಂದೋಹಕ್ಕೆ ಸಮ್ಮೋಹನಂ ।
ಬಳನಾಶ್ರೇಣಿಗೆ ವಿಸ್ಮಯಂ ಪುರಜನಕ್ಕಾಕರ್ಷಣಂ ಲೋಚನಾ ।
ವಳಿಗಾಯ್ತೇಱಿಸಿ ನೀಪಿ ಜೇವೊಡೆಯ ಮಜ್ರಾವರ್ತಮಂ ರಾಘವಂ ||೭೯೧||

ಸಮದಂ ಲೀಲೆಯಿನೆತ್ತ ಖೇಚರಬಲಂ ಕೆಯ್ಯೆತ್ತಿ ಪಾರುತ್ತಮು ।
ಕ್ರಮದಿಂದಾನತಮಾಗೆ ಕೊಪ್ಪು ಬಿಲ್ದ ಲಜ್ಜಾನತಂ ರಾಜಲೋ ।
ಕಮುಮಿಂ ಬೆಕ್ಕಸಮುತ್ತುದೇಱಿಸುವುದುಂ ಕೋದಂಡಮುಂ ರಾಮನ ।
ಶ್ರಮಮುಂ ಮನ್ಮಥನಾಗಳೇಱಿಸದೆ ಮಾಱೆಚ್ಚಂ ಪುರಸ್ತ್ರೀಯರಂ ||೭೯೨||

ಕಂ|| ಅವತಂಸವಾದು ಪರಮರ ।
ಸ್ತವನಂಗಳ್ ಸಕಳಜನದ ಜಯಜಯನಿನದಂ ||
ಕಿವಿಶಬ್ದಂಗಿಡಿಸಿದುವು ।
ತ್ಸವ ಪಟಹಧ್ವನಿಗಳುಣ್ಕೆ ಪೊಣ್ಮಿದುವಾಗಳ್ ||೭೯೩||

ಎತ್ತಿದುದು ಮಂಗಳಧ್ವಜ |
ವೆತ್ತಿದುದು ಸಿತಾತಪತ್ರವಾಗಸಮಂ ಪೊ ||
ತ್ತೆತ್ತಿದುದಾಶೀರ್ವಾದಂ |
ಮುತ್ತಿನ ಸೇಸೆಗಳನಿಕ್ಕಿದರ್ ಮಾನಿನಿಯರ್ ||೭೯೪||

ವ|| ಆಬಳಿಕ್ಕಂ,

ಉ|| ಆವೆಡೆ ಹಂಸೆಗೀನಡೆಯ ಚೆಲ್ವನೆ ನೂಪುರಬಂಚರಂ ಸ್ವರಂ |
ಜೇವೊಡೆದಂದವಾಗೆ ಮೃದುಪಾದತಳಂಗಳ ಕೆಂಪು ಕೂಡೆ ಕಾ |
ದಾವರೆವೂಗಳಂ ಕನಖುವಂತಿರೆ ಕುಂತಳಸಾರಭಕ್ಕೆ ಭೃಂ |
ಗಾವಳಿ ಸೋಲೆ ಪೀಲಿದಳೆಯಂತಿರೆ ಬಂದಳದೊಂದು ಲೀಲೆಯಿಂ ||೭೯೫||

ಕಂ|| ಅಲರ್ಗಣೆಯ ನಂಗಜಂಗೀ |
ಯಲೆಂದು ರತಿ ಬರ್ಪ ಮಾಱ್ಕೆಯಿಂ ಮಾಲೆಯನಾ ||
ಲಲಿತಾಂಗಿ ಪಿಡಿದು ಕಣ್ಗಂ |
ಕೆಲಕ್ಕಮಾ ದಾಶರಥಿಯ ಬಗೆಗಂ ಬಂದಳ್ ||೭೯೬||

ವ|| ಅಂತು ಬಂದು,

ಉ|| ಮಾಲೆಯ ಮೇಲೆ ತುಂಬಿಗಳ ಸಾಲೆ ತಪಂಬೊಳೆದಾಡೆ ಬೇಱೆ ಪೂ |
ಮಾಲೆಯ ಲೀಲೆಯಂ ಕೆದಱೆ ಕೇಕರಮಾಲೆ ಶಿರೀಷಮಾಲೆಯಂ |
ಸೋಲಿಸೆ ನೀಳ್ದ ಬಾಹುಲತೆ ತೋಳೆಮೊದಲ್ ಮದನಾನುರಾಗಮಂ |
ಸಾಲಿಡೆ ಸಾದ್ರೆ ಸೀತೆ ರಘುವಂಶನಮೇರುಗೆ ಮಾಲೆಸೂಡಿದಳ್ ||೭೯೭||

## 36. ಖೇಚರ ರಾಜ್ಯ ವೈಭವ.

ಇಲ್ಲಿ ಕೊಟ್ಟಿರುವ ಪದ್ಯಗಳು ಪೊನ್ನನೆಂಬ ಪ್ರಸಿದ್ಧ ಜೈನಕವಿಯಿಂದ ರಚಿಸಲ್ಪಟ್ಟ ಶಾಂತಿಪುರಾಣದಿಂದ ಉದ್ಧೃತವಾಗಿವೆ. ಈ ಪುರಾಣವು 16ನೆಯ ತೀರ್ಥಕರನ ಚರಿತವು. ಇದಲ್ಲದೆ ಪೊನ್ನನು ಜಿನಾಕ್ಷರಮಾಲೆಯನ್ನೂ ಬರೆದಿರುತ್ತಾನೆ. ಇನ್ನೂ ಭುವನೈಕರಾಮಾಭ್ಯುದಯವೆಂಬ ಗ್ರಂಥವನ್ನೂ, ಗತಪ್ರತ್ಯಾಗತವಾದ ಮತ್ತೊಂದು ಕೃತಿಯನ್ನೂ ರಚಿಸಿರಬೇಕೆಂದು ತೋರುತ್ತದೆ. ಈತನು ಒಂದು ಅಲಂಕಾರಗ್ರಂಥವನ್ನು ಕೂಡ ಬರೆದಿದ್ದನೆಂದು ಕೆಲವರು ಹೇಳುತ್ತಾರೆ. ಈತನಿಗೆ ಪೊನ್ನಿಗ, ಪೊನ್ನಮಯ್ಯ, ಸವಣ, ಕುರುಳ್ಗಳ ಸವಣ ಎಂಬ ನಾಮಾಂತರಗಳುಂಟು, ಕವಿಚಕ್ರವರ್ತಿ, ಉಭಯಕವಿಚಕ್ರವರ್ತಿ, ಸರ್ವದೇವ ಕವೀಂದ್ರ, ಸೌಜನ್ಯಕಂದಾಂಕುರ ಎಂಬ ಬಿರುದುಗಳೂ ಉಂಟು. ಉಭಯಕವಿಚಕ್ರವರ್ತಿಯೆಂಬ ಬಿರುದನ್ನು ಕ್ರಿ. ಶ. 945ರಿಂದ 956ರ ವರೆಗೆ ಆಳಿದ ರಾಷ್ಟ್ರಕೂಟದ ಕೃಷ್ಣರಾಜನು ಕೊಟ್ಟಿರಬೇಕೆಂದೂ, ಪೊನ್ನನು ಈ ಕಾರಣದಿಂದ ಸುಮಾರು 950ರಲ್ಲಿ ಇದ್ದಿರಬೇಕೆಂದೂ ಬಲ್ಲವರು ಊಹಿಸುತ್ತಾರೆ. ಈತನು ಬಹು ಪ್ರಸಿದ್ಧನಾದ ಕವಿಯೇ ಸರಿ. ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಈತನಿಗೆ ಅದ್ವಿತೀಯಪಾಂಡಿತ್ಯವಿದ್ದಿತೆಂದು ಈತನ ಕವಿತೆಯಿಂದಲೇ ತಿಳಿಯುತ್ತದೆ. ಇದಲ್ಲದೆ ಅನೇಕಪ್ರಸಿದ್ಧಕವಿಗಳಿಲ್ಲ ಈತನನ್ನು ಹೊಗಳಿರುತ್ತಾರೆ. ರನ್ನಕವಿಯು ಪಂಪ (ಆದಿ), ಪೊನ್ನ, ರನ್ನರನ್ನು ರತ್ನತ್ರಯವೆಂದು ಹೊಗಳಿರುತ್ತಾನೆ. ಪೊನ್ನನು ತಾನು ರಚಿಸಿದ ಶಾಂತಿಪುರಾಣಕ್ಕೆ ಕವಿಪುರಾಣಚೂಡಾಮಣಿ ಎಂಬ ಹೆಸರನ್ನಿಟ್ಟಿರುತ್ತಾನೆ. ಈತನ ಗ್ರಂಥವು ಬಹು ಪ್ರೌಢವಾಗಿದೆ.

ಕಂ॥ ಸಕಳಖಗತಿಳಕನಾಸ್ಥಾ ।
ಯಿಕೆಯೊಳ್ ಚಂಬೊನ್ನ ಸಿಂಹಪೀಠದಿನಿರ್ದಂ ॥
ಪ್ರಕಟಿಸಿದನೊ ಸೀಳದ ಚೂ ।
ಳಿಕೆವರಸಿದ ಮೇರುಗಿರಿಯ ಸಿರಿಯಂ ಸಿರಿಯಿಂ ॥೧೯೮॥

ಪದೆದೆಱಗದ ತಲೆಗಂ ಮುಗಿ ।
ಯದ ಕೈಗಂ ಜೀಯ ದೇವ ಬೆಸಸೇ ಸೆನಗೆ ॥
ನ್ನದ ನಾಲಗೆಗಂ ಸ್ವೈರಿಸ ।
ದುದಗ್ರರಿದನಾತನೊಳ್ ಪ್ರಯೋಗಿಸಿದಪರೇ ॥೧೯೯॥

ತೇಜೋನಿಧಿ ಕರಹತಪರ ।
ರಾಜಕನಪದೋಷದಿಕ್ಕಯುಂ ಪದ್ಮರಜೋ ॥

ರಾಜಪ್ರತಾಪ ನುಪಮಿಂತ ।
ತೇಜಸ್ಪತಿ ಖಚರರಾಜ ನವನೀತಳದೊಳ್ ॥೮೦೦॥

ತಳತಳ ತೊಳಗುವ ತೊಡವಿನ ।
ಬೆಳಗುವ ಬೆಳಗುಗಳ ಬಳದ ಬಳಗಂ ವಿದ್ಯು ॥
ದ್ವಿಳಸನಮಂನಿಱಸೆ ನವಘನ ।
ವಿಳಾಸಮಂ ಖೇಚರೇಂದ್ರ ನೊಳಕೊಂಡಿರ್ದಂ ॥೮೦೧॥

ವೈರಿಜಯಶ್ರೀ ಸೆಱೆಯಿರೆ ।
ಭೂರಿಭುಜಾಂತರದೊಳಾಕೆ ಕಟ್ಟುವ ಮುಕ್ತಾ ॥
ಹಾರಮನೆ ಪ್ರೊಲ್ತು ನವಕೇ ।
ಯೂರಂ ಸೊಗಯಿಸೆ ನಭಶ್ಚರೇಂದ್ರನ ತೋಳೊಳ್ ॥೮೦೨॥

ಉ॥ ಮೌಳಿಯೊಳಿಪ್ಪ ಪುಷ್ಪಮರಭಾಗವಿಭಗ್ನಮಧೂಳಿಮಾಳತೀ ।
ಮಾಳೆ ಮನಕ್ಕೆ ಮಾದೆಸೆದುದಾ ದಹಿತಾರಿಯ ಕೀರ್ತಿ ಲೋಕಮಂ ।
ವ್ಯಾಳೆ ತೊಱಲ್ದು ತನ್ನ ಗಮನಶ್ರಮಮಂ ಕಳೆಯಲ್ಕೆ ತಸ್ತ್ರಿಹೀ ।
ಪಾಳಶಿರೋಜರಾಜಿಪರಭಾಗಮನಾಶ್ರಯಿಸಿರ್ದಳೆಂಬಿನಂ ॥೮೦೩॥

ಕಂ॥ ಪೊಸಮುತ್ತಂ ಪಾಲೊಳ್ ತೇಂಳ ।
ದೆಸೆವಿರೆ ದೆಸೆದೆಸೆಗೆ ಕೆದಱಿದಂತಾಗೆ ನಿರೀ ॥
ಕ್ಷಿಸುವ ಸಿರೀಕ್ಷಣಮಂ ಮನಃ ।
ಪ್ರಸಾದಮಂ ಪೇಱಿದಱಿಪುಗುಂ ಖೇಚರನಾ ॥೮೦೪॥

ಸ್ಫುರಿಯಿಸುವ ಪದ್ಮರಾಗಾ ।
ಭರಣಂಗಳ ಬಳಗುಗಳ್ ಪ್ರತಾಪಾಗ್ನಿಯು ಕೇ ॥
ಸುರಿಗಳನಿಸಿದುವು ವಿಜಯಾ ।
ರ್ಧರುಚಿರಮಣಿಮಕುಟ ಶಿಖರ ಚೂಡಾಮಣಿಯಾ ॥೮೦೫॥

ಚಂ॥ ಇದು ಕೊಂಲಿಂತಿದಾಂ ಮಿದುಭೂಷ್ಯಮಿದರ್ಕಿದು ಭೂಷಣಂ ದಲಂ ।
ಬುದನೆನವೇಡಳಂಕರಣಮಿಾ ಕೊರಲಾರಮಣಂ ಕೃತಾರ್ಥಮೆಂ ।
ಬುದು ದೊರೆವೆತ್ತು ಮಾಪಿತತಹಾರ ಮಧಃಕೃತತಾರಕಾಂತಿ ಪೋ ।
ಲ್ತುದು ಖಚರಾನನಕ್ಕೆ ಹಿಮದೀಧಿತಿಯೆಂಬುದ ನಂಟುಮಾಡುಗುಂ ॥೮೦೬॥

ಚಂ|| ಬಗೆ ಮೃಗರಾಜಶಬ್ದದನಿತರ್ಕೆ ನಿರೀಕ್ಷಿಸಿದಂದಮೋ ಮಹಾ |
ಜಗೆ ನೆರವಾದ ಸಾಮಜಕೃತಂ ಮನದೊಳ್ ನಿಲೆತಂದು ತದ್ವಿರೋ |
ಧಿಗಳನಪುಂಕಿ ಮೆಟ್ಟಿ ಸೆಱೆಯಿಟ್ಟವಲೇಪಮೊ ಪೇೞಿಮೆಂಬ ಶಂ|
ಕೆಗೆ ನೆಲೆಯಾದುದಂಬರಚರೇಶ್ವರನಿರ್ದ ಮೃಗೇಂದ್ರವಿಷ್ಟರಂ ||೮೦೭||

ಕಂ|| ಕ್ಷಿತಿಪ ಶ್ರೀವಿಭವವಿಳಾ |
ಸತೆಯಂ ಪೇರುರಮೆ ಪೇೞ್ಗು ಮಭ್ಯಸ್ತಮಹಾ ||
ಸ್ತ್ರೈತೆಯಂ ಶ್ರಮವಶತನುಮ |
ಧ್ಯತೆ ಪೇೞ್ಗುಂ ಬೇಱೆ ಪೇೞ್ವುದದು ಪುನರುಕ್ತಂ ||೮೦೮||

ಕಟ್ಟಿತಟದ ಸುರಿಗೆ ಪಟ್ಟಿಗೆ |
ಕಟಿಸೂತ್ರದೊಳಸೆದುದೆಸೆವ ಸಾನಂದಕದಿಂ ||
ದಿಟ ಮಮರ್ದ ಪಾರಿಜಾತದ |
ವಿಟಪಿಗೆ ಕೌಸ್ತುಭದ ಸುತ್ತು ಸೊಗಯಿಪ ತೆಱದಿಂ ||೮೦೯||

ಅತಿದೀರ್ಘಮಾಂಸಳಂ ವೃ |
ತ್ತತರಂ ಧೃತವಿಜಯಲಕ್ಷ್ಮಿ ಮಾಡಿದುದೈರಾ ||
ವತಪುಂಡರೀಕ ಕರಯುಗ |
ಮಿತರ್ಕಮಂ ಭುಜಯುಗಂ ನಭಶ್ಚರಪತಿಯಾ ||೮೧೦||

ನಿಜದಿಂ ಗೂಢಂಗಳ್ ಗು |
ಲ್ಫಜಾನುಗಳ್ ಮಂತ್ರದಂತೆ ರಕ್ತತರಂಗಳ್ ||
ನಿಜಕರಪಾದತಳಂಗಳ್ |
ಪ್ರಜೆಯಂತೆ ನಭಶ್ಚರಾನ್ವಯಾಂಬರರವಿಯಾ ||೮೧೧||

ಸಮವೃತ್ತಸಂಧಿಲಕ್ಷಣ |
ಸಮನ್ವಿತಂ ಜಾತ್ಯಲಂಕೃತಿಭ್ರಾಜಿತ ಮು ||
ತ್ತಮಕಾವ್ಯಬಂಧದಂತಾ |
ಮಮಿತಾರಿಗೆ ಸಾಜಮೊಪ್ಪುಗುಂ ಕಿಱುದೊಡೆಗಳ್ ||೮೧೨||

ಕನಕಮಣಿಖಚಿತಸಿಂಹಾ |
ಸನದೊಳ್ ನೀಡಿರ್ದ ವಾಮಪದನಖರುಚಿ ಕಾಂ ||

ಚನಹರಿಪೀಠಮುಮಂ ಮು ।
ತ್ತಿನ ಪೀಠಮುಮನಿಸಿ ತವಸಿಪತಿಯಡಿವೊದಲೊಳ್ ॥೮೧೩॥

ಮೀನಾಬ್ಜ ಶಂಖಚಕ್ರಪಿ ।
ತಾನಾಂಕಿತ ದಕ್ಷಿಣಾಂಘ್ರಿತಳಪಲ್ಲವಮು ॥
ತ್ತಾನಂ ರತ್ನಾಕರದ ವೊ ।
ಲೇನಮುದುರ್ದೊ ಸಾರ್ವಭೌಮಗಗನೇಚರನಾ ॥೮೧೪॥

ಏಣಾರಿಪುಪೀಠಪಾರ್ಶ್ವ ।
ಕ್ಷೋಣಿಯೊ ಳಿಂದೀವರಕ್ಕೆ ಮುಸುಱುವ ಹಂಸ ॥
ಶ್ರೇಣಿಗಳನಿಸಿದು ಪ್ರಭಯು ।
ಶ್ರೇಣೀಪತಿಗಿಕ್ಕೆ ಪೊಳೆವ ಚಮರರುಹಂಗಳ್ ॥೮೧೫॥

## 37. ಅನ್ಯಮತ ಖಂಡನಂ.

(ಇದನ್ನು ಬರೆದಾತನು ವೃತ್ತವಿಲಾಸಕವಿ. 110ನೆಯ ಪುಟವನ್ನು ನೋಡು.)

ಚಂ॥ ಬಯಸಿ ನಿಧಾನಮಂ ಸುಕೃತಮಿಲ್ಲದವಂ ಭರದಿಂ ತದಗ್ರಭೂ ।
ಮಿಯನಗುೞ್ತುಮಿರ್ದು ನಿಧಿಗಾಣ್ಬೆಡೆಯೊಳ್ ಮರುಳಾಗಿ ಪೋಪವಂ ।
ಱಿಕ್ಕೆಯೊಳಪವರ್ಗಮಾರ್ಗದೊಳಮಿಂ ಪಲರಂ ಪಿರಿದೋದಿ ತತ್ವನಿ ।
ರ್ಣಯಜನಿತೋಕ್ತಿಯಲ್ಲಿ ಜಡರಪ್ಪರಿದೇನಘಶಕ್ತಿ ಚಿತ್ರಮೋ ॥೮೧೬॥

ಉ॥ ಪುಟ್ಟದಜಾತಿ ಮೆಟ್ಟದನಲಂ ನಱೆ ಕೊಳ್ಳದ ಕಾಲಮೊಮ್ಮೆಯುಂ ।
ಮುಟ್ಟದ ಭಾವಮೊಂದದ ಭವಂ ಪೆಱತಿಲ್ಲನೆ ದುರ್ವಿಮೋಹದಿಂ ।
ತೊಟ್ಟನೆ ಬಂದೆ ನೀಂ ತಿಳಿಯದಕ್ಕಟ ನಿನ್ನ ನಿಜಸ್ವರೂಪಮಂ ।
ನೆಟ್ಟನೆ ನೋಡು ಕೂಡಿ ಪಡೆ ನಿತ್ಯನಿರಂಜನಮೋಕ್ಷಲಕ್ಷ್ಮಿಯಂ ॥೮೧೭॥

ಕಂ॥ ನದಿವಾರ್ಧಿಗಳಂ ಮಿಾವುದು ।
ಮೆದಿರದೆ ಶಸ್ತ್ರಾಗ್ನಿಗಿರಿಗಳಂ ಪಾಯ್ವುದುಮಿಂ ॥
ತಿದು ಲೋಕಮೂಢಮೆಂಬುದು ।
ಮುದದಿಂದಂ ರಾಸಿಮಾಡುಗುಂ ಕಲ್ಗಳುಮಂ ॥೮೧೮॥

ಮ॥ಸ್ರ॥ ಪರಮಾರ್ಥಂ ಲೋಕಮೆಂಬೀ ಯೆರಡುಮನಱಿಯಲ್ ಲೋಗರೊಲ್ತಾ
ನುಮೊಂದಂ ।
ಭರದಿಂದಂ ಮಾಡುತ್ತುಂ ಮಾಡುವನಘಹರಮೆಂದ್ಬೈದ ಸಿಂಧುಪ್ರವಾಹೋ
ತ್ಕರದೊಳ್ ಮಿಾವಂ ಕೃಶಾನೂದಕಮುರಣದೆ ಮೋಕ್ಷವೈರಯಂ ಪಾಯ್ದು
ಮೋಕ್ಷ ಸಂ ।
ಗರದೊಳ್ ಸಂಹಾರಕಂ ಪ್ರಾಣಮನೆಸಿಪ ನರಂ ಲೋಕದೊಳ್ ಲೋಕ
ಮೂಢಂ ॥೮೧೯॥

ಚಂ॥ ಬಗೆವ ಧನೇಶನಂ ಪರಿವ ಸಿಂಧುವ ನೂದುವ ಗಾಳಿಯಂ ಧಗ ।
ಧಗಿಸುವ ಕಿಚ್ಚ ನುಬ್ಬಿ ನೆಲನಂ ಕಱೆವಾಳಕ ನಿರ್ಪ ಸದ್ಮನಂ ।
ಸೊಗಯಿಸಿನಿಂದ ಪರ್ವತರನ ನುಣ್ಬಗುಳಂ ಬೆಸಕೈವ ತಮ್ಮಮು ।
ಟ್ಟುಗಳನೆ ದೈವಮೆಂದೆಱಗುವಾತನೆ ದೈವದ ಮೂಢನಲ್ಲವೇ ॥೮೨೦॥

ವಚನಂ॥ ನೆಲನುಂ ನೀರುಂ ಗಾಳಿಯುಂ ಕಿಚ್ಚುಂ ಮರಂಗಳುಮೆಂಬ ಪಂಚ
ಸ್ಥಾವರಂಗಳ್ ದೈವಮೆಂಬುದುಂ, ತಮ್ಮ ಗೃಹಂಗಳುಂ ಆಯುಧಂಗಳುಂ ತಮ್ಮ

ಬೆಸಕ್ಕೈವ ಮುಟ್ಟುಗಳುಂ ಉಬ್ಬುಕೋಟುಂ ಎಂಬಿವು ಮೊದಲಾದ ಅಚೇತನಂಗಳಂ ದೈವಮೆಂಬುದುಂ, ಮತ್ತಂ ಪಶುಗಳುಂ ಸರ್ಪಂಗಳುಂ ಮೊದಲಾದ ತಿರ್ಯಗ್ಜಾತಿಗಳುಂ ದೈವಮೆಂಬುದುಂ, ಮತ್ತಂ ಚಂದ್ರಾದಿತ್ಯರೆಂಬ ಜ್ಯೋತಿರ್ಗಣಂಗಳುಂ, ಕ್ಷೇತ್ರಪಾಲ, ಪಣಾರ, ಭೈರವ, ವ್ಯಾಲಾರ, ಜಿನಕ, ಕಾರ್ತಿಕೇಯ, ಭಗವತಿ, ಬಲಾರಿ, ಕಾಳಿ, ಮಹಾಕಾಳಿ, ಚಂಡಿ, ಚಾಮುಂಡಿ, ಮಾರಿ, ಮಸಣಿ, ಸೊಸಣಿ ಮೊದಲಾದ ದೈತ್ಯರುಂ ವರಮ ನೀಗುಮೆಂಬಾಸೆಯೊಳ್ ಓರ್ವರ್ ಕಂಡೋರ್ವರಱಿಗುವುದುಂ, ಮೂಢಜನಂಗಳ್ ದೈವಮೆಂದು ಕೊಂಡಾಡುವುದುಂ ದೇವತಾಮೂಢಂ. ಅದೆಂತು ಲೌಕಿಕರ್ಗೆ ದೈವಮೆಂದೊಡೆ ಪೂರ್ವಕಾಲದೊಳ್ ನಿರ್ವಾಣ ಕ್ಷೇತ್ರಂಗಳಂ ಭವ್ಯಜನಂಗಳ್ ಮುಟ್ಟಿ ನಮಸ್ಕಾರಂಗೆಯ್ವುದಂ ಕಂಡು ಮೂರ್ಖರ್ ಭೂಮಿ ದೈವಮೆಂದರ್; ಕಾಮಧೇನುವೆಂಬ ವಿದ್ಯೆ ಧೇನುರೂಪದಿಂ ಕಾಮಿಸಿದ ವಸ್ತುವಂ ಕುಡೆ ಸಾಧಕನದಂ ಪೂಜಿಸುವುದಂ ಕಂಡು ಪಶುಗಳಂ ದೈವಮೆಂದರ್; ಪಯೋಧಿವಹ್ನಿವಾಯುಗಳೆಂಬ ಲೋಕಪಾಲರುಂ ನಾಗಕರ್ಗಳುಂ ಪರಮಸ್ನಪನ ಕಾಲದೊಳ್ ತರ್ಪಣಂಗೆಯ್ವುದಂ ಕಂಡು ನೀರುಂ ಕಿಚ್ಚುಂ ಗಾಳಿಯುಂ ಸರ್ಪಂಗಳುಂ ದೈವಮೆಂಬರ್. ತಮಗವು ದೈವಮಪ್ಪೊಡೆ ಅವಂ ಬಾಧೆವಡಿಸುವುದೇಕೆ? ಮತ್ತಂ ಅಜ್ಞಾನಿಗಳ್ ಇಟ್ಟ ಮರಂಗಳಂ ಒಟ್ಟಿದ ಕಲ್ಗಳಂ ದೈವಮೆಂದು ಪಸರಿಟ್ಟು ಕೊಂಡಾಡಿ ವರಮೀಗುಮೆಂಬಾಸೆಯಿಂ ತಮ್ಮೊಳರ್ಥಮುಂ ಬಱಿಸೂರೆಗೈವರ್. ಆ ದೈವಂ ವರಮನೀವಂದಮೆಂತೆಂದೊಡೆ ಬಂಜೆಯ ಮರ್ಗಂ ಮೃಗತೃಷ್ಣಾಂಬುವಿಂ ಮಿಂದು ಕಲ್ಲನಾರ ಸೀರೆಯನುಟ್ಟು, ಆಗಸಪೂದುಱುಂಬಿ, ಮೊಲದಕೋಡ ಬಿಲ್ವಿಡಿದು ಬರುತ್ತಿರ್ಪುದಂ ಪುಟ್ಟುಂಗುರುಡಂ ಅಂಧಕಾರದ ನಟ್ಟನಡುವಿರುಳೊಳ್ ಕಂಡನೆಂಬಂತೆ ನಿಷ್ಫಲು ಕ್ಲೇಶಂ ದುರ್ಗತಿ ದುಃಖಮೇ ಅಕ್ಕುಂ. ಆ ದೈವಂ ಪೆಱಗೀವುದುಂ ಕಾವುದುಮೆಂತಿರ್ಕೆ; ತಮಗೆಂದು ಸಂಕಲ್ಪಿಸಿದ ವಸ್ತುವಂ ಕಾಯಲಾಱರ್, ಅದೆಂತೆನೆ,

ಕಂ|| ಜನ್ನಿಗಿಯಾವಂ ಪರಕೆಯ |
ಪೊನ್ನಂ ಪರಿಯಣಮನುಯ್ವ ಕಳ್ಳನ ನಂತಿಂ ||
ತೆನ್ನದು ಗಡಮೆನೆ ದೈವದ |
ಸನ್ನಿಧಿಯಂ ನೋಡೆ ಮನೆಯ ಕುನ್ನಿ ವಿಶೇಷಂ ||೮೨೧||

ಚಂ|| ಪರಕೆಯ ದೈವದಚ್ಚುಗಳನಚ್ಚರಿಯಾಗಿರೆ ಕಟ್ಟುವರ್ ಕೆಲರ್ |
ಕೊರಲೊಳದೇಕೆ ಕಟ್ಟಿದೊಡೆ ದೇವತೆ ತಿಂಗುಮೊ ಕಳ್ವ ಕಳ್ಳರಂ |
ಕರಗಿಸಿ ಮಕ್ಕಸಾಲೆಯರ ಮುರ್ಕುವಿನಿಂದ ಕವರ್ತೆಗೊಂಡು ಪೋ |
ಪರಸರವಂದಿರಂ ತೆಗೆದು ತಿಂದೆಡೆಯುಳ್ಳೊಡೆ ಕೋಟಲಾಗದೇ ||೮೨೨||

ಕಂ॥ ಪಿಂಡಮನೀವುದು ತಡೆಯದೆ ।
ಪಿಂಡಮನಿಡುವುದುವೆ ಕುಱಿಯನಿಕ್ಕುವುದೊಲವಿಂ ॥
ಪಿಂಡಿನೊಳ್ಳೆದಾಱಂ ಮೇಣ್ ।
ಕೊಂಡಾಟದ ನಿಮ್ಮ ದೇವಿ ಯಿಾಗಂ ಕಾಗಂ ॥೮೩॥

ಚಂ॥ ಮಱುಗಿದೆನೋವೊ ಸೂತಿಮಸಗಿತ್ತೆನಲಂತವಳ್ದೋರ್ವಳಿರ್ದಳ್ ಕೂ ।
ರ್ತಿರದೆ ಕುಕಿಲ್ದು ತೇಗಿದೊಡೆ ದೇವತೆ ನೀಂ ಬೆಸನಾರ್ಗೆ ಮಾಣದೇ ।
ಕಱುವಿಗೆ ಕಾಳರಕ್ಕಸಿಯುನಾಂ ಕುಱಿವೇಡಿದೆನೆಂದೊಡಿಕ್ಕುವರ್ ।
ಕುಱಿಕುಱಿಪಟ್ಟಗೆಯ್ದು ತಿನಲಾಗದೆ ದೇವಿಗೆ ಕುತ್ತವೋಗದೇ ॥೮೪॥

ಕುಱಿಗಳ ಪಿಂಡ ಪೊಕ್ಕು ತಿನಲಣ್ಮದೆ ಕಾಡಿಯೆ ಬೇಡುತಿರ್ಪ ಕಾ ।
ಡೆಱೆಯನ ಕಾಳರಕ್ಕಸಿಯ ನಗ್ಗದ ಬೊಮ್ಮನ ದೈವವೆಂಬರಾ ।
ನಱಿಯದ ದೈವಮೋ ಪರರ ಬೇಡದೆ ಕಾಡದೆ ಪಿಂಡುವೊಕ್ಕು ತ ।
ನ್ನಿಱುವುದನಾಯ್ದು ಕೊಂಡು ತಿನುತಿರ್ಪುದು ತೋಳನ ದೈವಮಲ್ಲವೇ ॥

ಮ॥ ಕುಱಿಯಂ ಬೇಡಿದೊಡೀವ ನೋಂದ ಬಡವಂ ತನ್ನಿಚ್ಛೆಯಿಂ ದೈವಮಾ ।
ಕುಱಿವಿಂಡಿರ್ದೆಡೆಗೆಯ್ದಿ ಲೊಂದೆರಡುಮೂಱುಂ ನಾಲ್ಕುಮಯ್ದಱ ಬ ।
ಲ್ಗುಱಿಯುಂ ತಿಂದೊಡೆ ಕಾಪಿನರ್ ಬಡಿಗುಮೋ ನಾಯ್ ತಿಂಗುಮೋ ದೈ
ವಮುಂ ।
ಪಶುವಂ ಬೇಡುವ ದೈವಮೇಕೆ ಗಡ ಪೇಱಾ ತೋಳನಿಂ ಕಷ್ಟಮೋ ॥೮೫॥

ಚಂ॥ ಕುಱಿವೆರಸೀವುದೀವುದುಣಲೀವುದು ಪೂಜೆಗಿದೆಂದು ಮುಂದೆ ತಂ ।
ದಿಱಿವುದು ಕಳ್ಳನಂಮವನ ಚಂಡಿಕೆ ಮಾರ ಬಳಾರಿ ಕಾಳಿಯೆಂ ।
ಬಱಿಕೆಯ ದೇವತಾಸಕರಮಂತಕನುಯ್ವ ಮಗುಳ್ಚಲಾರ್ಪುದೇ ।
ತೆಱದೊಳು ಮಿಾವುದಲ್ಲದೊಡೆ ಪೊಯ್ವುದು ಬಾಯೊಳೆ ಕಾಯ್ದ ಬೂದಿಯಂ ॥

ಉ॥ ಕರ್ಮಜಮೆಂದು ರೋಗಜಮುಮೆಂದೆರಡುಂ ತೆಱದಿಂ ಶರೀರಿಯಂ ।
ನೆರ್ಮಿದ ಕುತ್ತವೊತ್ತಿದೊಡೆ ಗಾಳಿಗರುಂ ನೆಲಮುಕ್ಕ ಜಕ್ಕಿಯುಂ ।
ಬರ್ಮನುಮೆಂದು ಜೀವವಧೆಗೆಯ್ದೊಡೆ ಕುತ್ತದ ದುಃಖದಿಂದೆ ಸಾ ।
ಸಿರ್ಮಡಿ ದುಃಖಮಂ ಪಡೆವ ನಾರಕದುಃಖಮನೆಯ್ದುದಿರ್ಪರೇ ॥೮೮॥

## 38. ಸರೋವರ ವರ್ಣನೆ.

(ಈ ವರ್ಣನೆಯು ನೇಮಿಚಂದ್ರನ ಅರ್ಧನೇಮಿಪುರಾಣದಿಂದ ಉದ್ಧೃತವಾಗಿದೆ. 92 ನೆಯ ಪುಟವನ್ನು ನೋಡು.)

ಮ॥ಸ್ರ॥ ಅನುಸಿಂಚತ್ಸಲ್ಲಕೀಶೀಕರಪರಿಚಯದಿಂ ಶೀತಶೀತಂ ಲತಾಲಿಂ ।
ಗನದಿಂದಂ ಮಂದಮಂದಂ ಫಣಿಗಣವಿಷದಿಂ ಭೀತಭೀತಂ ಚಳಚ್ಚಂ ।
ದನಶಾಖಾಂದೋಳದಿಂದಂ ಚಕಿತಚಕಿತಮಾಯ್ತುಚ್ಚರತ್ಕೀಚಕಪ್ರ ।
ಸ್ವನಿತಂ ಮಾನೇಯನಾಗಸ್ಫುಟಿತಕಟಮದಾಮೋದಭಾರಂ ಸಮೀರಂ ॥೮೯॥

ಮ॥ ತಳಿರಂ ತೂಗಿ ಪರಾಗಮಂ ಪರೆದು ಪೂನೀರಂ ತಡಂಗೂಡಿ ಗು ।
ಗ್ಗುಳನಿರ್ಯಾಸಮನಾಂತು ಚಂದನರಸಕ್ಷೋದಂಗಳಂ ಪೊತ್ತು ಶೀ ।
ತಳಕರ್ಪೂರಮೃಗೋದ್ಭವಾಗುರುಕುಮುಸ್ತಾ ಗ್ರಂಥಿಗಂಧಂಗಳಂ ।
ತಳೆದೇಂ ಗಂದಿಗರಂತೆ ಬಂದೊಲೆದುದೋ ಮತ್ತೊಂದು ಮಂದಾನಿಲಂ ॥೯೦॥

ಚಂ॥ ವನಜಮನೊಕ್ಕಲಿಕ್ಕಿ ಮಱಿದುಂಬಿಯನಾಳ್ದು ತರಂಗಮೆಂಬ ತ ।
ಕ್ಕಿನ ಪರಿಕಾಱರಂ ತುಱಿದು ಶೀಕರಮಂ ತಳೆದೊಟ್ಟಿಕೊಂಡು ಪೂ ।
ವಿನ ಪುಡಿಯಂ ಮೃಗೇಂದ್ರಭಯದಿಂದೆ ತಿರೋಹಿತನಾಗಿ ಬರ್ಪ ಕಾ ।
ನನಕರಿಯಂತೆ ಬಂದುದೆಲರೊಯ್ಯನೆ ರಯ್ಯನೆ ವಾರಿದೇಶದಿಂ ॥೯೧॥

ಕಂ॥ ಆಗಾಳಿವೆಸಗಿನಿಂದಮೆ ।
ಪೋಗಿ ಪರಿಶ್ರಮವಶಾತುರಂ ವಸುದೇವಂ ॥
ನಾಗೇಂದ್ರನಂತೆ ಮೆದಲೀ ।
ಲಾಗಮನಂ ಕಂಡನೊಂದು ಕಮಳಾಕರಮಂ ॥೯೨॥

ಉ॥ ಗಂಗೆಯ ಗೋತ್ರಮೋ ಸುಧೆಯ ಸಾರಮೊ ಬೆಳ್ನಗೆಯೊಂದು ಬಿತ್ತೊ ಮು ।
ತ್ತಿಂಗಡಲಿರ್ದ ಬೇರೊ ಪೊಸಮುತ್ತಿನ ಪುಟ್ಟುವ ನೀರೊ ತೋರ್ಪ ಬೆ ।
ಳ್ದಿಂಗಳ ಬಯ್ಕೆಯೋ ಜಗದ ಧೀವರೆಯರ್ಕಳ ಕಣ್ಣಬೆಳ್ಪು ಬೆ ।
ಳ್ಳಂಗೆಡೆದತ್ತೊ ಪೇೞಿಮೆನೆ ನಿರ್ಮಲಮಾದುದು ನೀರಜಾಕರಂ ॥೯೩॥

ಮ॥ ತೆರೆಯಿಂ ತಣ್ಣಿಱಿಯಾಡುವಂತಿರೆ ಚಳನ್ಮೀನಂಗಳಿಂ ನೋಡುವಂ ।
ತಿರೆ ನಾನಾಮಧುಪಾನಮತ್ತಮಧುಲಿಡ್ಝೇಂಕಾರದಿಂ ಪಾಡುವಂ ।
ತಿರೆ ಮೇಲ್ವಾಱುವ ಕುಂಕುಮಾರುಣರಥಾಂಗದ್ವಂದ್ವದಿಂ ತತ್ಪಯೋ ।
ಧರೆ ಸೆಂಡಂ ಪೊಡೆದಾಡುವಂತಿರೆ ಸರಶ್ರೀಕಾಂತೆ ಕಣ್ಗೊಪ್ಪಿದಳ್ ॥೯೪॥

ಚಂ॥ ನೆಱೆ ಜಳಕೇಳಿಯಾಡಿ ಪೊಱಮಟ್ಟ ವನೇಚರಿಯರ್ಕಳೆಂಬಿನಂ ।
ತುಱುಗಿರೆ ತೀರದೊಳ್ ನವತಮಾಳಲತಾವಳಿ ಯಬ್ಜಷಂಡದೊಳ್ ।

ಪೊಱಮಡದಿರ್ದ ಪಾಕೆಗಳ ಕಣ್ಮಲರುಂ ಪೊಲೆವಿಂಡು ಪೆಂಱಿನಂ |
ಪಿಱುಗಿದು ಪೊರ್ಮೆಯುಂ ಪೊಳೆವ ಮೀಂಗುಲಮುಂ ಪೊಣರ್ವಕ್ಕಿಯೊಕ್ಕಲುಂ||

ಕಂ|| ಹರಿಯ ನಳಿನಾಭಿನಳಿನಂ |
ವಿರಿಂಚಿಯುಂ ಪಡೆದುದರ್ಕೆ ಪುರುಡಿಸಿ ತಾನಾ ||
ಪರಿಯನೆ ಪಡೆದವೊಲೆಸೆದುದು |
ಸರೋವರಾವರ್ತನಳಿನಮೊಂದಳಿಗರ್ಭಂ ||೮೩೬||

ತರುಣಬಿಸಸದನಮಬ್ಜಾ |
ಕರಕರಿ ಪೇರ್ಗೊಟ್ಟುಕೊಂಡುದದು ನೀರ್ವೂರ್ಮಂ ||
ಸರಸಿರುಹಪತ್ರಕರ್ಣಾರ್ಗಂ |
ತರಂಗತರಮುಚ್ಯಮಾನ ಶೀಕರನಿಕರಂ ||೮೩೭||

ವನರುಹಸಹಸ್ರನೇತ್ರನ |
ನನಿಮಿಷಸೇವಿತನ ನಾಸರೋವರಸುರನಾ ||
ಘನನಾಂತ ಕರಿವೊಲೆಸೆದುದು |
ವನಕರಿ ಯುನ್ಮಗ್ನಪೂರ್ವಕಾಯಂ ಕ್ಷಣದಿಂ ||೮೩೮||

ಸೊಗಯಿಸಿದುದು ಕನಕಾಬ್ಜದ |
ಮುಗುಳ್ನನೆಯಿಂ ಕರಿಯ ಬಿಳಿಯ ಕೆಂಪಿನ ನೀರ್ವೂ ||
ವುಗಳಿಂದೆ ಪಂಚರತ್ನದ |
ಪಗೆವಂ ತೆಗೆದಂತೆ ಸರಸಿ ಸರಸಿಜದೆಲೆಯಿಂ ||೮೩೯||

ನೀಲದ ಪೊಳವ ಪರಲ್ಗಳ |
ಕೀಲಣೆಯಿಂ ಜಳಕನಾದ ಜಳದೇವಿಯ ಪೊ ||
ನ್ನೋಲೆ ಯೆನಿಸಿದುದು ಪತ್ರಕ |
ಪೋಲಗತಂ ಕನಕನಳಿನಮೊಂದಳಿಮುಳನಂ ||೮೪೦||

ಕೊಳದೊಳ್ ಪೆಯ್ಗರೆದವೊಲಾ |
ಕುಳಮಿರ್ಪವೊಲಿಂದು ಕೂಡಿದುದು ಕುಮುದಿನಿಯೊಳ್ ||
ಜಳರುಹಮುಂ ಕಡಿದುದು ಶ್ರೀ |
ವೆಳತರುವಂ ಕುಟುಕುಗೊಂಡುದೊಂದುಮರಾಳಂ ||೮೪೧||

ಕಂ|| ಗಲ್ಗಲನೆ ಕರಗುವಾಲಿಯು |
ಕಲ್ಗಳವೋಲ್ ಕರಗಿ ಪರಿವ ಜೊನ್ನದ ತಿಂಗ ||
ಳ ಲ್ಗಳೊಸರದೆನೆ ಕಳದೈ |
ಕಿಲ್ಗೊಳನೆನೆ ಕುಳಿರ್ದುದಾಜಳಂ ತಿಳಿಗೊಳದಾ ||೮೪೦||

ಊದೆ ಕರಿಗಳ್ ಸರಸ್ಸ್ವ |
ಚ್ಛೋದಕವಂ ನೆತ್ತಿಗಡರ್ದ ಪನಿಗಳ ಪೊಸವು ||
ತ್ತಾದುವದಲ್ಲದೊಡಡವಿಯು |
ವೇದಂಡದ ನೆತ್ತಿಯಲ್ಲಿ ಮುತ್ತುಗಳೊಳವೇ ||೮೪೧||

---

## 39. ಮೃಗಯಾವರ್ಣನೆ.

ಈ ಮೃಗಯಾವರ್ಣನೆಯು ತ್ರಿಷಷ್ಟಿಪುರಾತನಚಾರಿತ್ರವೆಂಬ ಚಂಪೂಗ್ರಂಥ ದಲ್ಲಿ ಅಂತರ್ಗತವಾದ ಕಣ್ಣಪ್ಪದೇವರ ಕಥಾವೃತ್ತಾಂತದಿಂದ ಉದ್ಧೃತವಾಗಿದೆ. ಈ ಶಿವಭಕ್ತಚಾರಿತ್ರಗ್ರಂಥವನ್ನು ಸುರಂಗನೆಂಬ ಕವಿ ಬರೆದನು. ಈತನು 16ನೆಯ ಶತಮಾನದಲ್ಲಿದ್ದನೆಂದು ಊಹಿಸಲ್ಪಟ್ಟಿದೆ. ಈತನ ತಂದೆ ಸಂಗಮವಿಭು ವೆಂದೂ, ತಾಯಿ ಮಹಾದೇವಿಯೆಂದೂ ಈ ಪದ್ಯದಿಂದ ತಿಳಿಯಬರುವುದು

ಕಂ|| ಅನಸೂಯೆ ಗತ್ರಿಗಜ್ಜಂ |
ತನೂಜನಾದಂದದಿಂದೆ ಮಹದೇವಿಗೆ ಸ ||
ಜ್ಜನನುತಸಂಗಮವಿಭುಗಂ |
ತನಯಂ ತಾನೆನಿಸಿದಂ ಸುರಂಗನಭಂಗಂ ||

ಈ ಕವಿಯ ಇಷ್ಟದೈವವು ಪುಲಿಗೆರೆಯ ಸೋಮನಾಥನು. ಈತನ ಮು ಖ್ಯಬಿರುದು ಕವಿಚಕ್ರವರ್ತಿ. ಈ ವಿಷಯವು ಪ್ರತ್ಯಾಶ್ವಾಸದ ಕೊನೆಯಲ್ಲಿರುವ ಗದ್ಯದಿಂದ ತಿಳಿಯಬರುವುದು.

"ಇದು ಸಕಲ ಸುರನಿಕರ ಮುಕುಟ ಮಾಣಿಕ್ಯ ಮಾಲಾಮರೀಚಿ ಪುಂಜ ರಂಜಿತ ಪಾದಪಂಕಜ ಶ್ರೀಮತ್ಪುಲಿಗೆರೆಯ ಪುರಾಧಿಪ ಶ್ರೀ ಸೋಮನಾಥ ಭಕ್ತಿ ಯುಕ್ತ ಕರ್ಣಾಟಕ ಕವಿಚಕ್ರವರ್ತಿ ವಿರಚಿತಮಪ್ಪ ತ್ರಿಷಷ್ಟಿ ಪುರಾತನ ಚಾರಿತ್ರ ದೊಳ್."

ಈತನು ತಾನು ಕೇವಲ ಶಿವಸಂಕೀರ್ತನವನ್ನಲ್ಲದೆ ಮನುಜಸ್ತುತಿಯನ್ನು ಮಾಡುವನಲ್ಲವೆಂದು "ಮನುಜಸ್ತುತಿಯಂ ನೆಱೆ ಬಿಟ್ಟು ಲೀಲೆಯಿಂ ಜಗವಱಿಯಲ್ ಸುರಂಗಕವಿ ನಾಲಗೆಯಂ ಗಿರಿಶಂಗೆ ಮಾಱಿದಂ" ಎಂಬ ವಾಕ್ಯದಲ್ಲಿ ಹೇಳಿಕೊಂಡಿರುತ್ತಾನೆ.

ತ್ರಿಷಷ್ಟಿ ಪುರಾತನ ಚಾರಿತ್ರವು ಲೈಂಗ್ಯಪುರಾಣಾಂತರ್ಗತವಾದುದೆಂದೂ ಆ ಚರಿತ್ರೆಯನ್ನು ಮೊದಲು ಉಪಮನ್ಯು ಮುನೀಶ್ವರನು ಕಣಾದನಿಗೆ ವಿವರಿಸಿದನೆಂದೂ ಮುಂದಣಪದ್ಯಗಳು ತಿಳಿಸುತ್ತವೆ.

ಕಂ|| ಪದೆದೊದವಿರೆ ಲೈಂಗ್ಯಪುರಾ |
ಣದೊಳಿರ್ದಂತಭವನಿತ್ತ ವರಮತಿಯಿಂ ಭೂ ||
ವಿದಿತಪುರಾತನಚರಿತೆಯು |
ನುದಿತೋತ್ಸವದಿಂ ಸುರಂಗವರದಂ ಪೇೞ್ದಂ ||
ಧರೆಯೊಳಱುವತ್ತುಮೂವರ್ |
ಪುರಾತನರ್ ಮೆಱೆದ ಪರಿಯ ನುಪಮನ್ಯುಮುನೀ ||
ಶ್ವರನಾಕಣಾದಗಂ ವಿ |
ಸ್ತರಿಸಿದುದಂ ಕವಿಸುರಂಗವರದಂ ಪೇೞ್ದಂ ||

ಕವಿಯು ತನ್ನ ಕಾವ್ಯದಲ್ಲಿ ತನ್ನ ಹಿಂದಿನವರಾದ ಸೋಮನಾಥ, ಶಂಭು, ಹಂಸ, ಬಸವ, ಚೆನ್ನಬಸವ, ಪ್ರಭುರಾಯ, ಇಭವಕ್ತ್ರ, ವಾಣಿ ಎಂಬ ಶಿವಕವಿಗಳನ್ನು ಸ್ತೋತ್ರಮಾಡಿರುವುದಲ್ಲದೆ, ತನ್ನ ಕಾವ್ಯವನ್ನೂ ಕವಿತಾಚಾತುರ್ಯವನ್ನೂ ಮುಂದೆ ತಿಳಿಸುವಂತೆ ಶ್ಲಾಘಿಸಿಕೊಂಡಿರುತ್ತಾನೆ.

ಉ|| ಭಲ್ಲಟನೋಜ ಬಾಣನ ಜಸಂ ಭವಭೂತಿಯ ಸಂದ ಬಿನ್ನಣಂ |
ಬಿಲ್ಹಣನುಕ್ತಿ ಭಾರವಿಯ ರೀತಿ ಮಯೂರನ ಬಂಧಗೌರವಂ |
ಮಲ್ಹಣನುಚ್ಚಭಕ್ತಿ ಮರಮಾಘನ ಜಾಣ್ಣುಡಿ ದಂಡಿಯೊಳ್ಪು ವಾ |
ಗ್ವಲ್ಲಭಕಾಳಿದಾಸನ ರಸಂ ನೆಲಸಿರ್ಕೆ ಮದೀಯಕಾವ್ಯದೊಳ್ ||

ಕಂ|| ವರ್ಣಕ ವಸ್ತುಕ ಕವಿಜನ |
ಕರ್ಣಾಭರಣಂ ಶಿವೈಕ್ಯಸಮುದಯಪೀಯೂ ||
ಷಾರ್ಣವಚಂದ್ರನೆನಿಪ್ಪಂ |
ಕರ್ಣಾಟಕವೀಂದ್ರ ನಮಮ ಸುಕವಿ ಸುರಂಗಂ ||

ಮ॥ಸ್ರ॥ ಧರಣೀಶವರ್ಗಚ್ಚಿ ನಾನಾಚತುರಕಳೆಗಳಂ ತೋಱಿ ವಿಭ್ರಾಜಿಪಂ ಸ|
ದ್ಗುರುಪಾದಾಂಭೋಜಭೃಂಗಂ ನವರಸಕವಿತಾನರ್ತಕೀನೃತ್ಯರಂಗಂ |
ಸರಸವ್ರಾತಾಂತರಂಗಂ ವಿಬುಧವಿನುತನಿಶ್ಶೇಷವಿದ್ಯಾಪ್ರಸಂಗಂ |
ಭರತಾಂಗಂ ಶೈವತುಂಗಂ ಪ್ರತಿಭಟಕವಿವೇಶ್ಯಾಭುಜಂಗಂ ಸುರಂಗಂ ||

---

ಕ॥ ಪಿರಿದೆಸೆವಾಪಕ್ಕಣದೊಳ್ |
ಗಿರುತಿರ್ಪಂ ಶಬರತತಿಗೆ ಪತಿಯೆನಿಸುತ್ತುಂ ||
ಹರಭಕ್ತಿಗೆ ಕಣ್ಣಪ್ಪಂ |
ಧುರಗಲಿ ಕಣ್ಣಪ್ಪನೆಂಬ ಪೆಸರ ಕಿರಾತಂ ||೮೪೪||

ವ॥ ಆ ಪುಳಿಂದಾಧೀಶ್ವರಂ ತಿರಿಕಾಲತ್ತಿಮಲೆಯೊಳ್ ಬೇಂಟೆಗೊಂದು ನಿಜಶಬರ ಬಲಂ ಬೆರಸು ಪೊಱಮಟ್ಟಾಗಳ್,

ಮ॥ ಇದು ಪರ್ಬಿರ್ದ ತಮಂಧವೃಂದ ಮಿದು ಕಾಳಿಂದೀಪ್ರವಾಹಾಂಬುವಿಂ |
ತಿದು ಕಾರ್ಗಾಲದ ನೀರದೌಘ ಮಿದು ನೀಲಕ್ಷ್ಮಾಧರಾಕಾರಮಿಂ |
ತಿದು ಹಾಲಾಹಲಜಾಲದೇೞ್ಗೆ ಯಿದು ತಾನೆಂಬಂತೆ ಮೆಯ್ಗರ್ಪಿನೊ |
ಪ್ಪದಿ ನಂದೆತ್ತಿರುತಿರ್ದುದುಗ್ರಶಬರಾನೀಕಂ ಘನಾಟೋಪದಿಂ ||೮೪೫||

ಕಂ॥ ಪದೆಪಿಂ ಕಟ್ಟಿರ್ದುಡಿದೊವ |
ಲೊದವಿದ ನೀರ್ದಿತ್ತಿ ಕಲ್ಲಿ ಸುತ್ತಿದ ಪುಲಿವಾ ||
ಲದ ತಲೆಸುತ್ತುಗಳೆಸೆಯ |
ಲ್ಕದಟಿಂದಂ ನೆರೆದು ಲುಬ್ಧಕರ್ ಬರುತಿರ್ದರ್ ||೮೪೬||

ಪಿಡಿದ ಪುಲಿ ದೀಹದೇಣಂ |
ಗಿಡುಗಂ ನಾಯ್ ಕೊಡಲಿ ಕತ್ತಿ ಗೇಣ ಬಿಲ್ ಕಣೆ ಕೈ ||
ಪೊಡೆಯಿಟ್ಟವೆರಸು ಭರದಿಂ |
ದಡವಿಯೊಳತ್ಯುಗ್ರಲುಬ್ಧಕರ್ ಬರುತಿರ್ದರ್ ||೮೪೭||

ಕಡುಪಿಂದಂ ಮುಂದಸುವಲೆ |
ಪಿಡಿವಲೆ ಕೋಳವಲೆ ಬೀಸುವಲೆ ಯೆಂಬಿವನಾಂ ||
ತಡವಿಯೊಳತಿರಭಸಂ ಮಿಗೆ |
ನಡೆತರುತಿರ್ದತ್ತು ನೆರೆದು ಶಬರವ್ರಾತಂ ||೮೪೮||

ವ॥ ಅಂತು ಬರುತಿರ್ಪಾಗಳ್.

ಚಂ|| ಪುಲಿ ಬಿರಿತೋಡೆ ಋಕ್ಷವವನೀಜವನೇಱೆ ರುರುವ್ರಜಂ ಭಯಾ |
ಕುಲತೆಯನೆಯ್ದೆ ಮೆಯ್ಪುದೊಱೆದೇಣಿಗಳೊಗ್ಗೊಡೆದೆಯ್ದೆ ಚಲ್ಲಲೆ |
ಕ್ಕಲಸಿರದುರ್ಬುಗುಂದೆ ವರಸೈರಿಭವಾಲಿಸೆ ಮತ್ತದಂತಿ ಪ |
ರ್ಗಲಿಸುತಿರಲ್ಕೆ ಬೇಂಟೆವಱೆಯುಬ್ಬರಮುಣ್ಮಿತು ತದ್ವನಾಂತದೊಳ್ ||೨೪೯||

ಕರಡಿಗಳಿತ್ತ ಲೆಯ್ಯುಮಿಗಮಿತ್ತ ವರಾಹ ಸಮೂಹಮಿತ್ತ ಬೆ |
ಳ್ಕಿರಳೆಗಳಿತ್ತ ಪೆರ್ಬುಲಿಗಳಿತ್ತ ಲುಲಾಯನಿಕಾಯಮಿತ್ತ ಪೆ |
ರ್ಮರಗಳವಿತ್ತ ದಂತಿಚಯಮಿತ್ತ ಮೃಗೇಂದ್ರ ಸಮೂಹಮಿತ್ತ ಭೀ |
ಕರಶರಭಾಳಿಯಿತ್ತ ಲೆನಿಪಬ್ಬರ ಮುಬ್ಬರವಾಯ್ತರಣ್ಯದೊಳ್ ||೨೫೦||

ಕೆದಱಿದ ಸಲ್ಲಕೀಕಿಸಲಯಂಗಳ ಕಂಪಿದೆಪೋದುವೀಕ್ಷಣಂ |
ಮದಕರ ಸೃಕ್ವದಿಂ ನವತೃಣಂ ನುಸುಳ್ದಿರ್ಗ ಸೂಸಿತೀಗಳೋ |
ಱದುಮಿರದೇಣಿಗಳ್ ಕೋಣಸುಗಳ್ ದೆಸೆಗೆಟ್ಟವ ದಂಷ್ಟ್ರ ಪಾದಪಂ |
ಕದ ಕುಮುಪಿಲ್ಲಿದೆಂಬ ಪಲದಬ್ಬರ ಮುಬ್ಬರವಾಯ್ತರಣ್ಯದೊಳ್ ||೨೫೧||

ಮ|| ಇಡು ಕಲ್ಲಿಂ ಮಲೆತಿರ್ಪ ಪೆರ್ಗರಟಿಯಂ ಬೆಂಬತ್ತು ಪೆಬ್ಬಂದಿಯಂ |
ಬಿಡು ನಾಯಂ ಮೊಲವಟ್ಟು ಪೆರ್ಮೊಲನನೆದ್ದೀಪೋಯ್ತು ಶಾರ್ದೂಲವಿ |
ಕರ್ಪಟಿಯಾಗಲ್ಕಿಸು ಮಿಕ್ಕು ತಿವಿಟಕ್ಕಾಂತಿರ್ಪ ಪೆರ್ಗೋಣನಂ |
ಪಿಡಿ ಸಾರಂಗಮನೆಂಬ ಲುಬ್ಧಕರವಂ ಪರ್ಬಿತ್ತು ಕಾಂತಾರದೊಳ್ ||೨೫೨||

ಚಂ|| ನಡೆ ಜಡಿಸನ್ನೆದೋಱಿ ಮರನೇಱಿ ಸಿಲೀಕ್ಷಿಸು ಸಾರ್ದುವರ್ಕೆ ಕೋ |
ಲ್ವಿಡು ಬಿಡವಟ್ಟು ಮುಟ್ಟು ಕಡೆ ಮುಟ್ಟಿಡು ಕಕ್ಕುರಿಮಿಕ್ಕು ಪೊಕ್ಕು ಪೊಯ್ |
ಕಟಿ ತಿವಿ ಕೊಲ್ಲು ಸೀಳ್ ತೊವಲನತ್ತು ಕರುಳ್ಗಳ ನುಚರ್ಚು ನೆತ್ತರಂ |
ಕುಡಿದಟಿಕೆಂಬ ಬೇಡವಡೆಯುಬ್ಬರವಾತಿಡಿದತ್ತು ಸುತ್ತಲುಂ ||೨೫೩||

ವ|| ಅಂತಪ್ಪ ನಿಜಶಬರಬಲಮುಂ ಬೇಂಟೆಯಾಡುವುದಂದು ಕಣ್ಣಪ್ಪಂ ಕೈಮೀಸಲ್ಕಾಗಳ್,

ಕಂ|| ಸರಿಯಂ ಕಟ್ಟುವ ತೋಹಿಂ |
ಗಿರದೆಯ್ದುವ ಬೇಗೆಯಿಡುವ ಬೆಳ್ಳಾರಮನಾ ||
ಸುರದಿಂ ಬೀಸುವ ಬಲೆಯಂ |
ಪರಪುವ ಶಬರಾಳಿ ಕಂಡುದೊಂದೆಕ್ಕಲನಂ ||೨೫೪||

ಚಂ॥ ಎಳವೆಱೆಯಂದವಂ ಜಱಿವ ದಾಡೆಗಳಿಂಗಳದಂತೆ ಕಣ್ಗಳುಂ |
ಜ್ವಳಿಸುವ ಲೋಹಸೂಚಿಗಳವೋಲ್ ತನುರೋಮ ಮಿಱುಂಕಿದಿಕ್ಕೆಳಂ |
ಗಳನುಱೆ ಪೋಲ್ವ ನೀಳ್ದ ಕೊಳಗೊಪ್ಪೆ ಮಹೋನ್ನತ ಕಂಠನೆತ್ತಿ ಪ |
ವ್ವಳಿಸುತ ಉರ್ಕಿ ಸೊರ್ಕಿ ಬರುತಿರ್ದುದು ಭೀಕರನೊಂದು ಸೂಕರಂ ‖

ಮ॥ಸ॥ ಜನಿತೋನ್ಮತ್ತಪ್ರಚಾರಂ ನೆಗಱೆ ಘುರುಘುರುಧ್ವಾನಮಾ ಶೈಲದೊಳ್ ಘೀ|
ಳನೆ ಕೋಪೋದ್ರೇಕದಿಂದಂ ವನಚರಬಲಮಂ ಕುರ್ಕುರಾನೀಕಮಂ ತ |
ದ್ವನದೊಳ್ ಬೆಂಕೊಂಡು ಕೊಂದತ್ತತುಳಬಳಸಮೂಹಂ ಮಹಾರೌದ್ರಗೇಹಂ|
ಘನದೇಹಂ ವ್ಯಾಧದಾಹಂ ಪ್ರಬಳಸಮರಸನ್ನಾಹ ನಂತಾವರಾಹಂ ‖೮೫೬‖

ಚಂ॥ ಇರದದು ಘರ್ರೆನುತ್ತೆ ತಿರುಗುತ್ತೆಸೆಯಲ್ಕಣಿಕಿಕ್ಕುತಾರ್ದು ಬೊ |
ಬ್ಬಿರಿದೊಡೆ ಹೊಮ್ಮಿನಾಲ್ದೆಸೆಯು ನೀಕ್ಷಿಸುತಟ್ಟಿದ ನಾಯ್ಗಳಂ ಕರಂ |
ತಱಿಯುತೆ ತಗ್ಗಿ ಬಗ್ಗಿಸುತೆ ದಾಡೆಗಳಂ ಮಸೆದೊಕ್ಕಲಿಕ್ಕಿ ಪೆ |
ರ್ಗರುಪಿನ ಜೇಡರಂ ತಱಿದು ಸೀಳ್ದುಱಿದಿಕ್ಕುತು ಸೊರ್ಕಿದೆಕ್ಕಲಂ ‖೮೫೭‖

ಕಂ॥ ಉಗಿಬಗಿದು ಬೇಡರರುಣಾಂ |
ಬುಗಳಂ ಕುಡಿದುರ್ಕಿ ಸೊರ್ಕಿ ಕೆಲೆವೆಕ್ಕಲನಂ ‖
ಮಿಗೆ ಕೋಪದೆ ಧಾನುಷ್ಕರ |
ನುಗುಳುಗುಳನುತಿಱಿದು ಕೆಡಪಿದಂ ಕಣ್ಣಪ್ಪಂ ‖೮೫೮‖

ವ॥ ಮತ್ತಮೊಂದೆಡೆಯೊಳೆಳವೊನಲೋಳಾಡುವ ಕಾಡೆಮ್ಮೆಯ ತೆಕ್ಕೆಯೊಳ್,

ಮ॥ಸ್ರ॥ ನಡೆಮಾಗಳ್ ಧಾತ್ರಿ ತರ್ಗಲ್ ಕಡುಮುಳಿದದಟಿಂ ಕೋಡಿಡಲ್ ಬೆಟ್ಟು ಪಿಟ್ಟಾ|
ಗೊಡೆಯಲ್ ಪಿಂಮೆಟ್ಟಿ ಕಾಯ್ಪಿಂ ಪಣೆಯಿಡೆ ನವಭೂಜಾಳಿಗಳ್ ನುರ್ಗುನುರ್ಗಾ|
ಗುಡಿಯಲ್ ಬಾಯ್ವಿಟ್ಟೊಡಂ ಪೆರ್ಮಡು ಬಱಿದೆನಿಸಲ್ ಸೊರ್ಕಿ ಸಲ್ಲೀಲೆಯಿಂ|
ಕೊಂಕಿಡುತುಂ ಕಾಡೆಮ್ಮೆ ಪಿಂಡೊಳ್ ಮೆಱೆದುದು ಕಡುಪಿಂ ಸ್ಥೂಲಕಾಯಂ
ಲುಲಾಯಂ ‖೮೫೯‖

ಅತಿಕೋಪಂ ಮಿಕ್ಕು ಕೋಡಂ ಜಡಿದು ಬಿಡದೆ ಕಿಗ್ಗಣ್ಣಿನಿಂ ನೋಡಿ ಕಾಯ್ಪಿಂ|
ಕ್ಷಿತಿಗಾಸ್ಯಂ ತಗ್ಗೆ ಬಾಲಂ ಮಿಗೆ ನೆಗೆದೊಗೆಯಲ್ಕುರ್ಬಿ ಧೀಂಕಿಟ್ಟು ಬೆಂಕೊಂ|
ಡತುಳವ್ಯಾಧಾಳಿಯಂ ತಳ್ತಱಿದುದು ಬಹಳತ್ರಾಣನದ್ರಿಪ್ರಮಾಣಂ |
ಜಿತಧಾನುಷ್ಕೋಗ್ರಬಾಣಂ ಘನತರಮಹಿಷೀಪ್ರಾಣ ನಾಕಾಡಕೋಣಂ ‖

ವ॥ ಆ ಸಮಯದೊಳ್

ಕಂ|| ಕಡುಕೋಪದೆ ವನಚರರಂ|
ಕೆಡೆದುಱಿದಿಱಿದೆತ್ತಿ ಕೊಲ್ವ ಕೋಣನ ಕೋಡಂ ||
ಪಿಡಿದಾರ್ದು ಖಡ್ಗದಿಂ ತಲೆ |
ಗಡಿಯಲ್ಪೊಡೆದಿಳಗೆ ಕೆಡಪಿದಂ ಕಣ್ಣಪ್ಪಂ ||೮೬೧||

ವ|| ಮತ್ತಮಾಪುಳಿಂದಾಧಿಪನಪ್ಪ ಕಣ್ಣಪಂ ಬರೆವರ ಮುಂದೊಂದು ಪೆರ್ವು
ಳೆಯೊಳ್,

ಮ||ಸ್ರ|| ಕ್ಷಿತಿಯುಂ ವಾಲಾಗ್ರದಿಂದಂ ಪೊಡೆಯುತೆ ಮಿಗೆ ಪುರ್ಬಿಕ್ಕುತುಂ ವಿಸ್ಫುಲಿಂಗ|
ದ್ಯುತಿಯುಂ ಪೊಲ್ವಕ್ಷಿಯಿಂದಂ ದೆಸೆಗಳನೊಲವಿಂ ನೋಡುತುಂ ಶ್ಮಶ್ರುವಂ ಕೆ|
ತ್ತುತೆ ಬಾಯೊಳ್ ಜಿಹ್ವೆಯುಂ ಚಾಲಿಸುತೆ ಸಮುಪದಂಗೊಂಡು ಕುಳ್ಳಿರ್ದುದ|
ದತ್ಯುನ್ನತಭೀಮಂ ಭೀತಿದೂರಂ ಬಲಯುತವರಶಾರ್ದೂಲನಾಭೀಲಶೀಲಂ ||

ಕಂ|| ಬಲೆದಾರ್ದು ಗರ್ಜಿಸುವ ಪೆ |
ರ್ವುಲಿಯುರ್ಬಂ ಕಂಡು ಕಾಯ್ದು ಕಡುಪಿಂದಂ ಪೆ ||
ರ್ಬುಲಿಸಿ ಬಲವಂತವನಚರ |
ಕುಲವೃಬುಬುಬುಜನುತೆ ಮುತ್ತಿ ಕವಿಯಲ್ಕಾಗಳ್ ||೮೬೨||

ಮ||ಸ್ರ|| ಮುಳಿಯುಂ ಪಾರ್ದೋಡಿ ಬಾಲಂ ತೊನೆಯೆ ಕುಸಿದ ಗೋಣೆತ್ತಿ ನಟ್ಟಾ
ಲಿಯಿಂ ಪೆ |
ಪ್ಪಳಿಸುತ್ತುಂ ನೋಡಿ ಮೆಲ್ವಾವ್ಯಾದಟರ ಬಸಿರಂ ಪೊಯ್ದು ಸೀಳ್ದಿಕ್ಕಿ ಬಾಯ್ವಿ|
ಟ್ಟೆಚಿದಾರ್ಕತ್ತುಂಬುವಂ ಸುಪ್ರನೆ ಕುಡಿದಿದಿರಾಂತಿರ್ದ ಶಾರ್ದೂಲನಂ ಬ |
ಲ್ಮೆಳಿಸಿಂದಂ ನೋಡಿದಂ ಕೇಸುರಿಯನುಗುಳ್ವ ಕೆಂಗಣ್ಗಳಿಂದಂ ಪುಳಿಂದಂ||

ವ|| ಅಂತು ನೋಡುತಿರ್ಪನ್ನೆಗಂ,

ಚಂ|| ಜಱಿದರೆಯಟ್ಟಿ ಮುಟ್ಟಿ ಪೊಡೆದೊರ್ವಕಿರಾತನ ಮಸ್ತಕಾಗ್ರಮಂ |
ಘುಂಘುಂಲೆಂದೆನಲ್ ಬಿಡದೆ ಕರ್ಚಿ ಕರಂ ಮೊಱೆಯುತ್ತಿರಲ್ಕೆ ಬೊ |
ಬ್ಬಿರಿದು ಕುಠಾರಮಂ ತಿರುಪುತೆತ್ತಿದ ಕೈವಿಡಿದಾರ್ವ ಬಾಯನೊ |
ತ್ತಿಱಿದು ಚಮೂರುವಂ ಧರೆಯೊಳಿಕ್ಕಿದನಾರ್ಪಿನೊಳಂದು ಕಣ್ಣಪಂ||೮೬೩||

ವ|| ಇಂತು

ಪಳಹದ ಬೇಂಟೆ ಸಂದ ಪಟವೇಂಟೆಗಳುನ್ನತಚಿತ್ರವೇಂಟೆ ಯು |
ಗ್ಗಳಿಕೆಯ ಗೋರಿವೇಂಟೆ ತಡವೇಂಟೆ ನೆಗಱ್ಕೆಯ ತೋಹುವೇಂಟೆ ಸಂ |
ಗಳಿಸಿದ ನೀರವೇಂಟೆ ಘನಸೋಹಿನವೇಂಟೆಯೆನಿಪ್ಪನಾಮಮಂ |
ತಳೆವೆಸೆವೆಂಟುಬೇಂಟೆಗಳ ನಾಡಿದನಟ್ಟಿಯೊಳಂದು ಕಣ್ಣಪಂ ||೮೬೪||

## 40. ಜಿನದತ್ತ ಕಥೆ.

ಈ ಜಿನದತ್ತಕಥೆಯನ್ನು ನಯಸೇನನೆಂಬ ಜೈನಮಹಾಕವಿಯು ತಾನು ಮಾಡಿದ ಧರ್ಮಾಮೃತವೆಂಬ ಚಂಪೂ ಗ್ರಂಥದಲ್ಲಿ ಹೇಳಿರುವನು. ಈ ಗ್ರಂಥಕ್ಕೆ ಆತನು ಕಾವ್ಯರತ್ನವೆಂದು ಹೆಸರಿಟ್ಟಿರುವನು. ಇದಲ್ಲದೆ ಆತನು ಒಂದು ವ್ಯಾಕರಣವನ್ನೂ ರಚಿಸಿರುವಂತೆ ತಿಳಿಯಬರುತ್ತದೆ. ಆತನು ಧರ್ಮಾಮೃತವನ್ನು ಮುಳುಗುಂದದಲ್ಲಿ ಬರೆದೆನೆಂದು ಹೇಳಿಕೊಂಡಿರುತ್ತಾನೆ. ಅದೇ ಆತನ ಸ್ಥಳವಾಗಿರಬಹುದು. ಗ್ರಂಥವು ಶಕ. 1034 (ಕ್ರಿ. ಶ. 1112) ರಲ್ಲಿ ಹುಟ್ಟಿರಬೇಕೆಂದು ಗೊತ್ತಾಗುತ್ತದೆ. ಆತನಿಗೆ "ಸುಕವಿನಿಕರ ಪಿಕಮಾಕಂದ" "ಸುಕವಿಜನಮನಃಪದ್ಮಿನೀರಾಜಹಂಸ" ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಧರ್ಮಾಮೃತ ಗ್ರಂಥವು ಲಲಿತವಾಗಿಯೂ ಮೃದುಮಧುರ ಪದಗುಂಭಿತವಾಗಿಯೂ ನೀತಿ ಶ್ಲೋಕ ಪುಂಜರಂಜಿತವಾಗಿಯೂ ಇದೆ. ಕನ್ನಡದಲ್ಲಿ ಸಂಸ್ಕೃತಪದಗಳನ್ನು ಸಿಕ್ಕಿದಂತೆ ಉಪಯೋಗಿಸಬಾರದೆಂದು ಈತನು ಕಂಠೋಕ್ತವಾಗಿ ಹೇಳಿರುವನಲ್ಲದೆ, ಹೇಳಿದಂತೆಯೇ ಬರೆದು ತನ್ನ ಪ್ರತಿಜ್ಞೆಯನ್ನು ನಿರ್ವಹಿಸಿರುವನು.

ಕಂ|| ಅನುಪಮ ಗುಣಗಣನಿಳಯಂ |
ಜಿನಪಾದಪಯೋಜಷಟ್ಪದಂ ಜನನುತನಿಂ ||
ದ್ರನಿಭ ನಮಳಾಂಗ ನಿರ್ಪಂ |
ಜಿನದತ್ತಂ ಜೈನಸಮಯವಾರಿಧಿಚಂದ್ರಂ ||೮೬೭||

ಆತನ ಪೆಂಡತಿ ಧರಣೀ |
ಖ್ಯಾತೆ ಸದಾಶುದ್ಧಚರಿತೆ ಭವ್ಯಜನೈಕ ||
ಪ್ರೀತೆ ವರಗುಣಮಹಾಂಬುಧಿ |
ಮಾತೇನೊ ಜಿನೇಂದ್ರದಾಸಿ ಯೆಂಬಳ್ ಪೆಸರಿಂ ||೮೬೮||

ನೆಗಟ್ದಾ ಜಿನದತ್ತಂಗಂ |
ಮೃಗನಯನೆ ಜಿನೇಂದ್ರದಾಸಿಗಂ ಮದನನಿಭಂ ||
ಜಗತೀಪೂಜ್ಯಂ ವಿಕ್ರಮ |
ಮೃಗಾರಿ ಜಿನದಾಸನೆಂಬ ನಗ್ರತನೂಜಂ ||೮೬೯||

ವ|| ಅಂತವರ್ ಸುಖದಿಂ ಪಲವುಕಾಲಮಿರ್ಪನ್ನೆಗಂ, ಜಿನಪಾಲಿತರೆಂಬ ತಪೋಧನರೊರ್ವರ್ ಏಕವಿಹಾರಿಗಳ್ ವಸುಧಾವಳಯಮುಮಂ ತೊೞಲುತ್ತುಂ ಉಜ್ಜಯನಿಗೆ ವಂದು ನೇಸರ್ಪಟ್ಟ ಬೞಿಕ್ಕಂ ತೊೞಲ್ವುದು ಸಂಯಮಧರರಪ್ಪ ಋಷಿಯರ್ಗೆ

ಮಾರ್ಗಮಲ್ಲೆಂದು ಗಂಧವತಿಯೆಂಬ ತೊಱೆಯ ತಡಿಯೊಳ್ ರೌದ್ರಮಪ್ಪ ಶ್ಮಶಾನ ಭೂಮಿಯ ನಡುವೆ,

ಕಂ|| ಪೊಲ್ಲೆನಿಸುವ ಜೀವಾಳಿಗ |
ಳಿಲ್ಲದ ರಮಣೀಯಮಪ್ಪ ಪಾಸರೆಯಂ ತ ||
ಳ್ವಿಲ್ಲದೆ ಬೞಿಗಿನೊಳಾರ್ಕೈ |
ಮುಳ್ಳಳ್ಕದ ಗಂಡನಘಾತಮೆಂಧದಿನೇಳಂ ||೮-೭೦||

ಸನ್ನುತರವಿಯುದಯಂಗೆ |
ಯ್ವನ್ನವರಂ ಮಿಸುಕೆನೆಂದು ಮಂದರಧೈರ್ಯಂ ||
ತನ್ನಣ್ಮೆಂವಂ ಮಿಡುಕದೆ |
ಸನ್ನುತಮತಿ ಯೊಂದೆ ಮಗ್ಗುಲೊಳ್ ಪಟ್ಟಿರ್ದಂ ||೮-೭೧||

ವ|| ಅಂತು ಗುಣಗಣಾಭರಣಂ ನಿತ್ಯಯೋಗಂಗೊಂಡೇಱಿಸಿದ ಬಿಲ್ಲಂತೆ ಶರೀರ ಮಂ ಚಲಿಯಿಸದೇಕಪಾರ್ಶ್ವದೊಳ್ ಪಟ್ಟಿರ್ದಂ, ಇತ್ತಲುಜ್ಜಯಿನಿಯಿಂದೊರ್ವ ಎಡಂಬನೆಂಬ ಸಾಧಕಂ ಸಿಧಸಿಕ್ಷೇಪಮಂ ಸಾಧಿಸಲೆಂದು ಯಥೋಚಿತಮಪ್ಪ ಬಲಿ ವೆರಸು ಪಲ್ಲಂಸೊಲಿದು ಮಿಂದು ಶುಚಿಭೂತನಾಗಿ ಧೌತಾಂಬರಮನುಟ್ಟು ಪೆಱದಿ ನುಪವಾಸಮಂ ಕೈಕೊಂಡು ತನ್ನ ನಿವಾಸಮಂ ಪೊಱಮಟ್ಟು, ನಟ್ಟಿರುಳ್ ತನ್ನ ಕಟ್ಟಾಳ್ತನದಿಂ,

ಕಂ|| ಪಲವುಂ ಪೂಣ್ಕೆಗಳಿಂದಂ |
ಚಲದಿಂದಸಹಾಯವಿಕ್ರಮಂ ತನ್ನಳವಂ ||
ಕಲಿತನಮಂ ನಂಬಿ ಬಲಂ |
ತಳರದೆ ಸಾಧಿಸುವನೆಂಬ ಬಯಕೆಯಿನಾತಂ ||೮-೭೨||

ವ|| ಕರಡಿಯ ತೊವಲಂ ಕಾಡಿಗೆಯೊಳದ್ದಿ ವಿಧಾತ್ರಂ ಲೋಕಮಂ ಬಾಸಣಿ ಸಿದನೆಂಬಂತಪ್ಪ ಕಳ್ತಲೆಯೊಳ್ ಕೂಡಿದ ರಾತ್ರಿಯೊಳ್ ಗಂಧವತಿಯ ತಡಿವಿಡಿದು ಬಂದು ಪಿತೃವನಮಂ ಪೊಕ್ಕು ತನ್ನ ಕೆಯ್ಯ ಸೊಡರಿಂ,

ಚಂ|| ತಲೆಪರಿದಿರ್ದ ಪೆರ್ದಸಿಯ ಮೇಲೆ ಮಹಾದ್ಭುತದಿಂದಮಿರ್ದ ಕ |
ಣ್ಗಳನರೆಮುಚ್ಚಿಕೊಂಡು ಕೆಡೆದಿರ್ದ ಕರುಳ್ಪರಿದಿರ್ದ ಭೂ |
ತಳಮನ ಕರ್ಚಿ ಮೆಯ್ಮೆಯುಡಿದಿರ್ದ ಭಯಂಕರಮಾಗಿ ಪಟ್ಟು ಕ |
ಣ್ಣೊಳತೆಗೆದಿರ್ದ ವೇದನಗೆ ಸ್ಮರಣೆಗೆಟ್ಟುಱುತಿರ್ದ ಜೀವರಂ ||೮-೭೩||

ವ|| ನೋಡುತ್ತುಂ ಬಂದೇಕಪಾರ್ಶ್ವದೊಳ್ ಪಟ್ಟಿರ್ದ ಜಿನಪಾಲಿತಮುನಿಯುಂ

ಕಂಡು ಪೆಣನೆಂದು ಬಗೆದು ಬೇಗದಿನಲ್ಲಿಗೆ ಮತ್ತೆರಡು ಪೆಣಂಗಳಂ ತಂದು ಮೂಱುಂ ತಲೆಯು ನೊಲೆಗಲ್ಲೂಡಿ ಕೆಳಗೆ ಕಿಚ್ಚಂ ಪೊತ್ತಿಸಿ ಚರುವನಡುತ್ತಿರ್ಪುದುಂ,

ಕಂ|| ಘೋರೆನೆ ಕಿಚ್ಚಿನ ನಾಲಗೆ |
ನೇರಿದುವಾಗಳುರೆ ನೋವಿನೊಳ್ ಸ್ಯೈರಣೆಗೆ |
ಟ್ಟೋರಂತೆ ಮಱುಗಿ ಕುದಿಯದೆ |
ಧೀರಂ ಜಿನಪಾದಪದ್ಮಮಂ ನೆನೆಯುತ್ತುಂ ||೮-೭೪||

ಮನದೊಳ್ ಜರಿಯದೆ ಬೆರ್ಚದೆ |
ಮುನಿಯದೆ ಸಿಡಿಯದೆ ನಿಳಿಂಪನಗನಿಭಧೈರ್ಯಂ ||
ತನುವಿನ ಮೇಲಣ ಮೋಹಂ |
ತನಗಿಲ್ಲದೆ ತಳರದಿರ್ದ ನುನ್ನತಚಿತ್ತಂ ||೮-೭೫||

ವ|| ಅಂತು ಚಿತ್ತದೊಳಳ್ಕದೆ ಜಿನಾಗಮಮುಮಂ ಭಾಪಸ್ತುತ್ತಿರ್ಪುದುಂ ಪೆಗಲೆಲ್ಲಂ ಬೆಂದು ತೋಳವೊದಲಂ ಕಿಚ್ಚುಳುರ್ವಾಗಳ್ ನರುವುಗಳ್ ತೆಗೆದು ತೊಳ್ ತನಗೆ ತಾನ ನಗೆವುದುಂ ವಿಡಂಬಂ ಸೊಡರಂ ಕಂಡ ಕೂಡಗದಂತೆ ಬೆಬ್ಬಳಿಸಿ * * * ಕಾಡಿರ್ದದೆಂದು ಬೆಚ್ಚಿ ಬೆಗಡುಗೊಂಡು ಮಱಿಗೆಟ್ಟು,

ಕಂ|| ಮರನುಂ ಗಿಡುವುಂ ಪೊದಱುಂ |
ತರತರದಿಂದಿರ್ದ ಮೃಗನಿಕಾಯಮುಮೆರ್ದು ||
ಬ್ಬರಮಾಗೆ ಬಂದು ತನ್ನಂ |
ಸೆರಗಿಲ್ಲದೆ ನುಂಗುವಂತೆ ತೋರ್ಪುದುಮಾಗಳ್ ||೮-೭೬||

ವ|| ಕೆಟ್ಟೆನೆಂದು ಬಾಯ್ಬಿಟ್ಟು ತಡವರಿಸಿ ಪಱಗಣ್ಗಿ ಬಿರ್ದಟ್ಟುದುಮಂ ಸುರಗಿಯುಮನೀಡಾಡಿ ಮಯ್ಯಱಿಯದೆ ಕೂಳ್ಪಟ್ಟರಂತೆ ಬತ್ತಲೆ ಕರುಳ್ಪಱಿವಿನ ಮೋಡುವುದುಂ [ಇತ್ತಲ್] ಆದಿತ್ಯಂ ಪೂರ್ವಾಚಲಶಿಖರಶೇಖರನಪ್ಪುದುಂ ಪೂಕ್ಕೆತೀರ್ದ ಜಿನಪಾಲಿತಮುನಿವೃಂದಾರಕಂ ಯೋಗಂ ನಿರ್ವರ್ತಿಸಿ ತಡೆಯದಲ್ಲಿಂದೆ ರ್ದ ಬರ್ಪುದುಂ ತನ್ಮುನಿನಾಥನಂ ಜಿನದತ್ತಂ ಕಂಡು ಮನದಾದರದಿಂ ಬಂದಿಸಿ ತಮ್ಮ ಮನೆಗೊಡಗೊಂಡು ಬಂದು ದೇಹಾರದೊಳಿರಿಸಿ,

ಕಂ|| ಅಲ್ಲಿಗೆ ದಿವ್ಯೌಷಧಮಂ
ಬಲ್ಲವರಿಂ ತರಿಸಿ ವೈಶ್ಯತಿಲಕಂ ಮುಂದಿ ||
ರ್ದಲ್ಲಿಂದಗಲದೆ ಬೀಯ |
ಕ್ಕುಳ್ಳಳ್ಕದೆ ಕೊಟ್ಟು ಪೊಂಗಳಂ ಪ್ರಿಯದಿಂದಂ ||೮-೭೭||

ವ|| ಮತ್ತಂ ತಾನೆ ಕೆಲದೊಳಿರ್ದು ಪಥ್ಯಪಾನಂಗಳಂ ಪ್ರಯತ್ನದಿಂ ಮಾಡಿಸೆ * * ಕೆಲವುದಿವಸಕ್ಕೆ ಪುಣ್ಣೆಲ್ಲಂ ತೀರ್ದು ಲೇಸಪ್ಪುದುಂ ಜಿನಪಾಲಿತಮುನಿ ತನ್ನೊಳಿಂತೆಂದಂ—

ಕಂ|| ವಿಪರೀತದ ಪುಣ್ಣಿನಿಂದಂ |
ಕೃಪೆಯಿಂ ಸಾರಿರ್ದು ವೈಶ್ಯವಂಶಲಲಾಮಂ ||
ಸುಪರೀಕ್ಷೆಯುಳ್ಳ ವೈದ್ಯರಿ
ನಪಹರಿಸಿದ ನಿಂತು ಸಾರ್ದ್ರಹೃದಯರುಮೊಳರೇ ||೮೬೮||

ವ|| ಎಂದು ಮನದೊಳ್ ಮೆಚ್ಚಿ ಕಿಚ್ಚಿನೊಳಾದ ವೇದನೆಯುಂ ಮನದೊಳಾದ ಸಂಕ್ಲೇಶಮುಂ ತೀರ್ದುದಿನಿತು ಕಾಲಮಿಲ್ಲಿರ್ದನಿತೆ ಸಾಲ್ಗುಂ, ಇನ್ನಾಂ ಧರಣೀವಳಯದೊಳ್ ವಿಹಾರಿಸುವೆನೆಂಬ ಬಗೆಯಂ ತಂದು ಸೆಟ್ಟಿಗೆ ತಮ್ಮ ಪೋಗಂ ಪೇೞ್ದು ತದಾಲಯದಿಂ ಪೊಱಮಡುವುದುಂ,

ಕಂ|| ವರಮುನಿಪಾದಾಂಬುರುಹಮು |
ಸುರುವಂದನೆಗೆಯ್ದು ಮಗಲಲಾಱದೆ ವೈಶ್ಯಂ ||
ಬರಭಾನು ಪೆಱಗೆ ನಿಲ್ಲದ |
ಕರಮಾದರದಿಂದೆ ತಾನು ಮಾತ್ಮಾಲಯಮಂ ||೮೬೯||

ಪೊಱಮಟ್ಟು ಬರ್ಪುದುಂ ಮುನಿ |
ಕಿಱಿದಂತದರಲ್ಲಿ ನಿಂದು ಸದ್ಧರ್ಮಮುಮಂ ||
ಮಱೆಯದೆ ಸನ್ಮುನಿಮತಮಂ
ತಱುವಲಿತನದಿಂದ ಮೋಟಿಸದೆ ನೀಂ ಮಗನೇ ||೮೭೦||

ವ|| ಸದ್ಧರ್ಮಸಮೇತನುಂ ಸನ್ಮಾರ್ಗಪ್ರೀತನುಮಪ್ಪುದೆಂದು ಜಿನದತ್ತಸೆಟ್ಟಿಯುಂ ಮೃದುವಚನಂಗಳಿಂ ಬೋಧಿಸಿ ಮನೆಗೆ ಮಗುೞ್ದು ಪೋಗಿಮೆಂಬುದುಂ ಮಹಾಪ್ರಸಾದಮೆಂತೆಗೆಯ್ವೆನೆಂದು ಪ್ರದಕ್ಷಿಣಂಮಾಡಿ ಬಂದಿಸಿ ಮನೆಗೆ ಬಂದಿರ್ಪನ್ನೆಗಂ,

ಕಂ|| ತಂದೆಯು ಪೋಗಂ ಕಂಡಾ |
ನಂದದಿನರ್ಥಕ್ಕೆ ಮುನ್ನ ಮಡಹಡಿಸಿ ಮನಂ ||
ಗುಂದಿ ಕಡುನೊಂದು ಮನದೊಳ್ |
ಬೆಂದು ಮಹಾಮೞುಕದಿಂದ ವಿರ್ಪದುರಾತ್ಮಂ ||೮೭೧||

ಕಂ|| ಮನೆಯುವರಂ ಬಂದಿಸಿ ಮೆ|
ಲ್ಲನೆ ಧೂರ್ತಿಂ ಕೊಂಡು ಬೀಯಗದಕ್ಕೈಯಂ ನೆ||
ಟ್ಟನೆ ತೆಱೆದು ಪಡಿಯನೊರ್ವನೆ|
ಮನಮಂಜದೆ ಪೊಕ್ಕು ಕಂಡು ಕನಕಮನಾಗಳ್ ||೮೮೦||

ವ|| ಸಂತಸಂಬಟ್ಟು ಮುನ್ನಿನಂತೆ ಪಡಿಯಂ ಕತ್ತು ಪೊನ್ನಂ ತನ್ನಾರ್ಪನಿತಂ ಕಟ್ಟಿಕೊಂಡು ಪೋಪೆನೆಂದಿರ್ಪುದುಂ ಜಿನದತ್ತಸೆಟ್ಟಿ ಬಂದು ಪಱವೊಂದುವಂ ನೋಡದೆ ತನಗೆ ಪೊನ್ನೊಳಾದ ಮೋಹಮಂ ಪಿರಿದಪ್ಪುದಱಿಂ ಪೊನ್ನೆಡೆಯೊಳ್ ನಾಯುಸಪ್ಪೊಡಂ ನಂಬಲಾಗದೆಂಬ ನಾಣ್ಣುಡಿಯನವಧಾರಿಸಿ ಪೊನ್ನಿರ್ದೋವರಿಯ ಬಾಗಿಲಂ ನೋಡಿ ತನ್ನಿಕ್ಕಿದ ಬೀಯಗಮುಂ ಕಾಣದೆ ಪಡಿಯುಂ ನೂಂಕುವುದುಂ ಜಿನದಾಸಂ ತಂದೆ ಬಂದನೆಂದಱಿದು ಮನದೊಳ್ ಬೆಗಡುಗೊಂಡು ನಾಡೆಯುಂ ಭಯಸ್ಥನಾಗಿ ಪೊಱಮಟ್ಟು ಪೋಗಲಣ್ಮದೆ ಚೀನದ ದಿಂಡನೆಡೆಯುಂ ಪೊಕ್ಕು ಮೇಲೊಂದು ಚೀನದ ದಿಂಡಂ ತೆಗೆದುಕೊಂಡು ತಾನಲ್ಲದಂತುಸಿರದಿರ್ಪುದುಂ, ಸೆಟ್ಟಿ ಮನೆಯೊಳಗೆ ಪೊಕ್ಕು ನೋಡಿ ಪೊನ್ನರಾಸಿಯೊಳ್ ಕಿಱಿದುಪೊರ್ ಪೋದುದಂ ಕಂಡು,

ಮ|| ಮಱುಕಂ ತೊಟ್ಟನೆ ಪುಟ್ಟೆ ನೊಂದು ಮತಿಗೆಟ್ಟೋವೆಂದು ಜಾಣ್ಗೆಟ್ಟು ಬೆಂ|
ದಱಿತಂಗೆಟ್ಟೆರ್ದೆಗೆಟ್ಟು ಮೆಯ್ಮಱುಗೆ ಕಟ್ಟಿಂ ಬಾಳೆನೆಂದಱ್ತು ಬಾ|
ಯ್ದೆಱೆದೋರಂತತಿಕಂದಿ ಕುಂದಿ ಮನದೊಳ್ ಮಂಕಾಗಿ [ ಕಣ್ಗೆಟ್ಟು ] ಮೆ|
ಯ್ಮಱೆದಿನ್ನೇಗುವೆನೆಂದು ಮೋಹದೂದವಿಂ ಬಿರ್ದಂ ಧರಾಚಕ್ರದೊಳ್ ||

ವ|| ಅಂತು ಬಿರ್ದು ಕಿಱಿದು ಬೇಗದಿನೆರ್ದು ಕುಳ್ಳಿರ್ದು ಕಳ್ಳನಿರ್ದನೆಂದು ಕೋಣೆಯಿಟ್ಟೆಡೆ ಕುಸುಕುಱೊಳೆಲ್ಲಂ ನೋಡಿ ತದಾವಾಸದೊಳಾರುಮಂ ಕಾಣದೆ ಮನೆಯುಂ ಪೊಱಮಟ್ಟು ಪಡಿಯಂ ಕತ್ತು ಮುನ್ನಿನಂತೆ ಮುದ್ರಿಸಿ ಬಿಲ್ಕಟ್ಟುವರ್ ಕೆಲಂ ತಪವರಿಸಿದರೆಂಬಂತೆ ಕುದುರೆ ಕೆಟ್ಟವರ್ ಬಾದಣಮಂ ನೋಡಿದರೆಂಬಂತೆ ನಾಣ್ಣುಡಿಯುಂ ನನ್ನಿಮಾಡಿ ಮನದ ಮಱುಕದಿಂ ಭ್ರಮೆಗೊಂಡು ಜಿನಪಾಲಿತಮುನಿನಾಥಂ ಕೊಂಡುಪೋದನೆಂದು ಬೆನ್ನನೆ ಪರಿದು ಮುನಿಕುಂಜರನನೆಯ್ದಿ ಮಾಯಾವಿನಯದಿಂ ಪೊಡೆಮಟ್ಟು,

ಉ|| ಇನ್ನೆಗಮೆನ್ನನುತ್ತಮಗುಣಾಂಬುಧಿ ಭವ್ಯಪಯೋರುಹಾರ್ಕ ಮ|
ತ್ತೆನ್ನದೆ ಕೂರ್ಮೆಯಿಂ ಪರಸುತಿರ್ದಿರವೋಘದಿನಿಂದು ಪೋಗಲಾ|
ಗೆನ್ನನವಜ್ಞೆಗೆಯ್ದು ಬಿಸಿಲಾದುದು ನಿಮ್ಮಡಿ ನಾಳೆ ಪೋಪುದಂ|
ದುನ್ನತಶೀಲರಂ ತೆಗೆವುದುಂ ನಯದಿಂ ಪಲವುಂ ಬ್ರತಂಗಳಿಂ ||೮೮೪||

ವ|| ಮುನಿನಾಥಂ ಕಾರುಣ್ಯದಿಂ ಮಗುಳ್ವುದುಂ ಜಿನದತ್ತಸೆಟ್ಟಿ ತನ್ನ ಮನೆ

ಗೊಡಗೊಂಡುಬಂದು ಪೊನ್ನಿದೋ(ವರಿಯ ಬಾಗಿಲಲ್ಲಿ ಪಿರಿದಪ್ಪ ಮಣೆಯಂ ತಂದಿಕ್ಕಿಸಿ ಯತಿನಾಥನಂ ಕುಳ್ಳಿರಿಸಿ ತಾನುಂ ಕೆಲದೊಳ್ ಕುಳ್ಳಿರ್ದು ತನ್ನೊಳಿಂತೆಂದಂ,

ಮ|| ತನುವಂ ಬಿಟ್ಟು ಪರತ್ರೆಯುಂ ಪಡೆವೆನೆಂಬಾಪೇಕ್ಷೆಯಿಂ ಜೈನಸೇ |
ವನೆಯುಂ ಮಾಡುತುಮಿರ್ದು ನಿಷ್ಕಪಟದಿಂ ಪಾಪಾರಿಯಂ ಗೆಲ್ದು ನೆ|
ಟ್ಟನೆ ಕೈವಲ್ಯವಿಭೂತಿಯಂ ಪಡೆಯದಿಂತೀಸಾಧು ಬೇಳಾಗಿ ಕೆ |
ಮ್ಮನೆ ಮೋಹೋದಯದಿಂದ ಮನ್ನಧನಮಂ ತಾನೇಕೆ ಕಳ್ದುಯ್ದನೋ ||

ವ|| ಎಂದು ತನ್ನ ದುರ್ಭಾವದಿಂ ಲೋಭಿ ಗುಣಪಿಶೇಷಮ ನಱಿಯನೆಂಬುದಂ ನನ್ನಿಮಾಡಿ ಮುನಿನಾಥನಂ ಕಳ್ಳನೆಂದು ನಿಶ್ಚೈಸಿ ಪೊನ್ನನೊವರ್ಯು ಬೇಡಿದೆನ ಪ್ಪೊಡೆ ಮಹಾತಪೋಧನರಂ ಬಱಿದೆ ಕಾಡುತುಮಿರ್ದಪರನ್ಯಾಯಮೆಂದು ಕೆಲದ ವರೆಲ್ಲಮೆನ್ನಂ ದೂರಿ ಕೊಲ್ವರದುಕಾರಣದಿಂ ಮೆಲ್ಲನುಪಾಯದಿಂ ನುಡಿದು ಬುದ್ಧಿಯಿಂದಂ ಪೊನ್ನಂ ಕೊಳ್ವೆನೆಂದು ಮೆಲ್ಲನಿಲ್ಲಿಗೆ ತಕ್ಕಂತಪ್ಪ ಕಥೆಯಂ ಪೇಱ್ವೆನೆಂದಿಂತೆಂದಂ,

ಕಂ|| ಜಿನಪಾಲಿತಮುನಿಪತಿ ಮಾ |
ದಿನಿವಂದಿತ ಕಥೆಯನೊಂದನವಧಾರಿಸಿ ಕೇ ||
ಳನಘ ಮನವೊಲ್ದು ಕಾಮ್ಯಕ |
ವನಮೆಂಬುದು ದುರ್ಗಮುಂಟು ಕೇಳ್ ತದ್ವನದೊಳ್ ||೧೧೬||
ಗರಳಧರಂ ಪುಲಿಯುಂ ವಾ |
ನರನುಂ ಬಿಡದಕ್ಕಸಾಲೆಯುಂ ಬಿರ್ದಿರೆ ಭೂ |
ಸುರನೋರ್ವಂ ಗಂಗೆಗೆ ಸ
ಚ್ಚರಿತಂ ಪೋಗುತ್ತುಮಿರ್ದು ಕೌಶಿಕನೆಂಬಂ ||೧೧೭||

ವ|| ನೀರಡಿಸಿ ತಕ್ಕುಪಾಯದೆಡೆಯಂ ಮನಚರಂಬದಱಿತು ಬಾವಿಯ ತಡಿಯೊಳ್ ನಿಂದು ತನ್ನಟ್ಟುಂಬ ಮಡಕೆಯಂ ಕೊರಳ ಬಳ್ಳಿಯಿಂ ಕಟ್ಟಿ ನೀರಂ ಸೇದಲೆಂದು ಬಾವಿಯೊಳಗಿಕ್ಕುವುದುಂ,

ಕಂ|| ತಡೆಯದೆ ಸೇದೆಯ ನೇಣಂ |
ಪಿಡಿದಿರೆ ಪುಲಿ ತೋಯಮೆಂದು ತದ್ವಿಪ್ರಂ ನೇ ||
ರ್ಪಡೆ ಪೆರ್ಚಿ ತೆಗೆಯೆ ಪುಲಿ ಬಂ
ದೊಡೆ ಭಯದಿಂ ನೋಡುತಿರ್ಪುದುಂ ತದ್ವ್ಯಾಘ್ರಂ ||೧೧೮||

ವ|| ಕೌಶಿಕಂಗೆ ಪೊಡೆವಟ್ಟು ಪೊಗೞ್ದು ನಿನ್ನಪ್ರಸಾದದಿಂ ಪ್ರಾಣಭಯಂ ಪಿಂಗಿದುದೆನ್ನಂ ಬೆಸಕೆಯ್ಸಿಕೊಳ್ವುದೆಂದು ತನ್ನನೆಲೆಗೆ ಪೋಯ್ತಿತ್ತಲ್,

ಕಂ|| ನೀರಱ್ಕೆ ಪೆರ್ಚೆ ವಿಪ್ರನು |
ದಾರಂ ಮತ್ತಿಕ್ಕೆ ಬಾವಿಯೊಳ್ ಸೇದೆಯನಂ ||
ತೋರಂತೆ ಪಾವು ಪಿಡಿದಿರೆ |
ವೀರಂ ನೀರೆಂದು ತೆಗೆವುದುಂ ತತ್‌ಕ್ಷಣದೊಳ್ ||೮೮೯||

ವ|| ಪಾವು ಬಂದೊಡೆ ಪಾವಂ ನೋಡಿ ಬೆರಗಾಗಿರ್ಪುದುಂ ಫಣಿಪತಿ ಕೌಶಿಕಂಗೆ ಪೊಡೆವಟ್ಟು ನಿಮ್ಮ ಪ್ರಸಾದದಿಂದೊಂದು ಕಂಟಕಂ ಪೋಯ್ತು, ಇಂದು ನಿಮ್ಮ ಮಾಡಿದುಪಕಾರವ ನೆಂದಿಗಂ ಮಱೆಯಲ್ಬಾರದು, ನಿಮಗೊಂದೇನಾನು ಮಾಪತ್ತಾದೊಡೆ ಮಱೆಯದ ನೆನೆವುದೆಂದು ತನ್ನಿರ್ಪಾವಾಸಕ್ಕೆ ಪೋಯ್ತನ್ನೆಗಂ,

ಕಂ|| ಪಿರಿದಪ್ಪ ತೃಷ್ಣೆಯಿಂ ಭೂ |
ಸುರನಾಗಳ ಮತ್ತೆ ಸೇದೆಯಂ ಬಾವಿಯೊಳೂ ||
ಪ್ಪಿರೆ ಬೇಗ ಮಿಕ್ಕೆ ನೇಣಂ |
ತ್ವರಿತಂ ಭಯದಿಂದೆ ಪಿಡಿಯೆ ವಾನರನಾಗಳ್ ||೮೯೦||

ವ|| ನೀರೆಂದು ತೆಗೆವುದುಂ ಕೋಡಗಂ ಪೊಱಮಡೆ ಕೌಶಿಕಂ ಬೆರಗಾಗಿರ್ಪುದುಂ ಮರ್ಕಟಂ ದ್ವಿಜಂಗೆ ವಿನತನಾಗಿ ನಿನ್ನ ಧರ್ಮದಿಂದೊಂದುಸೂಱೆನಗೆ ಬಂದಪ ಮೃತ್ಯು ಪಿಂಗಿಪೋಯ್ತು ನಿನಗಾನೇನಂ ಮಾಡಿದೊಡಂ ಮಾಟಮಲ್ಲ ಎನ್ನಿಕ್ಕೆಯ ಮೀಕಾವ್ಯಕವನವೆ, ನಿಮ್ಮ ಚಿತ್ತದೊಳವಧರಿಸಿ ಕಾರುಣ್ಯದಿಂದೊಂದವಸರದೊಳ್ ನೆನೆವುದೆಂದು ನಿಜಸ್ಥಾನಕ್ಕೆ ಪೋಪ್ಪುದುಂ,

ಕಂ|| ಅಡಹಡಿಸಿ ತೃಷ್ಣೆಯಿಂದಾ |
ಗಡೆ ವಿಪ್ರಂ ಬಾವಿಯೊಳಗೆ ಸೇದೆಯನಿಕ್ಕಲ್ ||
ಕಡುಭಯದಿಂದಂ ಮನದೊಳ್ |
ನಡುಗುತ್ತಿರ್ಪಕ್ಕಸಾಲೆ ಸೇದೆಯ ನೇಣಂ ||೮೯೧||

ವ|| ಪಿಡಿವುದುಂ ನೀರೆಂದು ಪೊಱಗಣ್ಗೆ ತೆಗೆಯೆ ಸ್ವರ್ಣಕಾರಕಂ ಬರೆ ಕೌಶಿಕಂ ಚೋದ್ಯಂಬಟ್ಟಿರ್ಪುದು ಮಕ್ಕಸಾಲೆ ವಿಪ್ರಂಗೆ ಪೊಡೆವಟ್ಟು,

ಕಂ|| ಈನೆಗಟ್ಟುವನದ ಪೊರೆಯೊಳ್ |
ತಾನಗ್ಗದ ತಾಮ್ರಕೂಟಮೆಂಬುದು ಪೊಱಲಂ ||
ತಾನಗರದೊಳಾನಿರ್ಪೆಂ |
ನೀನಲ್ಲಿಗೆ ಬರ್ಪುದೆಂದು ಕೈಮುಗಿದಾತಂ ||೮೯೨||

ವ|| ಪ್ರಾರ್ಥಿಸುವುದುಮಾತಂ ಮಗುೞ್ದು ಬರ್ಪಾಗಳ್ ನಿನ್ನಲ್ಲಿಗೆ ಬಂದೊಡಲ್ಲ ದೆನ್ನ ನೆಲೆಗೆ ಪೋಗೆನೆಂದಕ್ಕಸಾಲೆಯು ನೊಡಂಬಡಿಸುವುದುಂ ಆತನೊಡಂಬಟ್ಟು ತನ್ನ ಪುರಕ್ಕೆ ಪೋದಂ ಇತ್ತಲ್ ಕೌಶಿಕಂ ತನ್ನಿಷ್ಟಸ್ಥಾನಕ್ಕೆ ಪೋಗಿ ಕೆಲವು ದಿವಸಕ್ಕೆ ಮಗುೞ್ದು ಬರುತುಂ ಕಾವ್ಯಕವನಕ್ಕೆ ಬಂದು ಕೋಡಗನಿರ್ದಲ್ಲಿಗೆ ವರ್ಪುದುಂ, ವಾನರನಾನರನನಱಿದು ಮುನ್ನಿನ ಪಕಾರಮಂ ನೆನೆದು ಪಣ್ಣ್ಗಳಂಗಳಂ ತಂದಿಕ್ಕುವುದುಂ, ಪಸಿವು ಪೋಪಿನಂ ಮೆಲ್ದು ಪಥಪರಿಶ್ರಮಮಂ ಕಳಲ್ದು,

ಕಂ|| ಪುಲಿಯಿರ್ಪ ಗುಹೆಗೆ ಬರ್ಪುದು |
ಮಲಂಘ್ಯಗುಣನೆನ್ನ ನೆತ್ತಿಗಾತಂ ಬಂದಂ ||
ಫಲಮಿತ್ತುದೆಂನ ಪುಣ್ಯಂ |
ಪಲತೆಱದಿಂದೆದ್ದು ಪೆರ್ಚೆ ಪುಲಿ ಬಂದಿದಿರಂ ||೮೯೩||

ಅಂದು ಪೊಡೆಮಟ್ಟು ಪರಮಾ
ನಂದಟನಟ್ಟಿರ್ತು ತಂದು ರತ್ನದ ತೊಡವಂ ||
ಮುಂದಿಡೆ ತದ್ವಿಪ್ರಂ ಸಾ |
ನಂದದಿನವನಟ್ಟಿವೆರಸು ಕೊಂಡಾವನದಿಂ ||೮೯೪||

ವ|| ಪೊಱಮಟ್ಟು ತಾಮ್ರಚೂಡಕ್ಕೆ ಬಂದು ಸ್ವರ್ಣಕಾರನ ಮನೆಗೆ ವರ್ಪುದು ಮಾತಂ ಪೂರ್ವೋಪಕಾರಮಂ ನೆನೆದಿದಿರಂ ಪಱತಂದು ಪೊಡೆವಟ್ಟಭಾಗ್ಯತಪ್ರತಿಸ ತ್ತಿಯುಂ ಮಾಡಿ ಬಟ್ಟೆಯು ಬಳಲ್ಕೆಯ ಂ ಕಳೆದು ಕೌಶಿಕನಂ ಕೊಂಡಾಡುತಿರ್ಪುದುಂ, ಮಱು ದೆವಸಂ ಬೃಹಸ್ಪತಿರವಿಶ್ವಾಸ್ಯಃ ಎಂಬೀನೀತಿಯುಂ ಮಱೆದು ಚಮೂರುವಿತ್ತ ರತ್ನಾಭರಣಂಗಳೆಲ್ಲಮಂ ಪುಟ್ಟಿಮಾಡಿಕುಡುವುದೆಂ ದೇಕಾಂತದೊಳಕ್ಕಸಾಲೆಯು ಕೈಯೊಳ್ ಕುಡುವುದು ಮಾತನಂತೆಗೆಯ್ವೆನೆಂದು,

ಮ|| ಮನದೊಳ್ ಭಾವಿಸಿ ನೋಡಿನೋಡಿ ಪಿರಿದಪ್ಪೀದ್ರವ್ಯಮಂ ಸಾರ್ಚಿ ಮೇ |
ದಿನಿಕಾಂತಾಪತಿಯಲ್ಲಿ ಕೊಟ್ಟು ಮೆಚ್ಚು ವಡೆವೆಂ ನಿಷ್ಕಾರಣಂಕೊಟ್ಟು ಕ |
ಮ್ಮನೆ ವಿಪ್ರೋನ್ನತನಲ್ಲಿ ಬರ್ಪ ಪಡೆಪೇನೆಂದಾದುರಾತ್ಮಂ ಮಹೀ |
ಶನನಾನಂದದಿನೆಯ್ದಿ ಪೇೞ್ದೊಡರಸಂ ಕೇಳ್ದಾಗಳುತ್ಸಾಹದಿಂ ||೮೯೫||

ವ|| ತಳಾರನಂ ಕರೆದು ನೀನೀಸ್ವರ್ಣಕಾರಂ ತೋಱಿದ ಪಾರ್ವನಂ ಸೆಱೆಯಿ ಡೆಂಬುದುಂ, ತಳಾರನಕ್ಕಸಾಲೆಯೊಡನೆಪೋಗಿ ಕೌಶಿಕನಂ ತಂದು ಕೋಳದೊಳಿಕ್ಕು ವುದುಂ; ಕೌಶಿಕಂ ಬೆರಗಾಗಿ,

ಕಂ|| ಎನಗರ್ಥಮುಳ್ಳುದಂ ಮೇ |
ದಿನಿಪತಿ ಯೆತ್ತಱಿವನೀ ದುರಾತ್ಮನೆ ಪೇೞ್ದಂ ||

ಧನಮುಂಟೆಂಬುದನೀ ದು |
ರ್ಜನನಿಂ ಕೇಡಾದುದೆಂದು ಚಿಂತಿಸಿ ವಿಪ್ರಂ ||೮೯೬||
ಫಣಿಪತಿಯುಂ ನೆನೆವುದು ಮಾ |
ಫಣಿಪತಿ ಬಂದೇಕೆ ನೆನೆದಿರೆಂಬುದುಮಾ ಧಾ ||
ರಿಣಿದೇವನೆಂದನೀ ನಿ |
ರ್ಘೃಣನಿಂದೆನಗಾದ ದುಃಖಮಂ ತತ್ಕ್ಷಣದಿಂ ||೮೯೭||

ವ|| ಪಿಂಗಿಸುವುದೆಂಬುದುಂ ತದ್ರಾಜಸುತನಂ ತಿಂದು ಆರ್ಗಮಱಿಯದಿರೆ ಕೌಶಿಕಂ ನಿರ್ವಿಷಂ ಮಾಡಿ ಮೆಚ್ಚುಗೊಂಡು ತದ್ವೃತ್ತಾಂತಮನೆಲ್ಲಮ ನರಸಂಗೆ ಪೇೞೆ ಮಹೀನಾಥಂ ಚೋದ್ಯಂಬಟ್ಟು ಮುನಿದು ಅಕ್ಕಸಾಲೆ ವಿಶ್ವಾಸಘಾತಕನವನಂ ಕವರ್ದೊಡೆ ದೋಷಮಿಲ್ಲೆಂದು ಕೊಂಡಂ. ಅಂತೆ ಕೆಲರುಪಕಾರಶೂನ್ಯರೊಳರೆಂದು ಜಿನದತ್ತಸೆಟ್ಟಿ ನುಡಿದುಸಿರದಿರ್ಪುದುಂ ಜಿನಪಾಲಿತಮುನಿ ವಿಸ್ಮಯಂಬಟ್ಟು ಸೆಟ್ಟಿಯ ಮುಖಮಂ ನೋಡಿ,

ಕಂ|| ಅವಧರಿಸು ವೈಶ್ಯವಂಶ |
ಪ್ರವರ ಮಹಾಚೋದ್ಯಮಪ್ಪ ಕಥೆಯನಿದಂ ಭೂ ||
ಭುವನಕ್ಕೆ ರೂಢಿವೆತ್ತಿ |
ರ್ದವಂತಿಯೆಂಬೊಂದು ನಾಡು ತದ್ಧಾರಿಣಿಯೊಳ್ ||೮೯೮||

ವ|| ಉಜ್ಜಯಿನಿ ಎಂಬುದು ಪುರಂ ಅದನಾಳ್ವಂ ಮಹೇಂದ್ರನೆಂಬರಸಂ ಆತನ ರಾಜಶ್ರೇಷ್ಠಿ ಕುಬೇರನೆಂಬಂ. ಆಪರದನೊರ್ಮೆ ಜಲಯಾತ್ರೆಗೆ ಪೋಗಿ ಪಿರಿದಪ್ಪರ್ಥ ಲಾಭಮಾಗಿರ್ಪುದು ಮೊರ್ವನೊಂದು ಮಾವಿನಪಣ್ಣಂ ತಂದು ಕುಬೇರನಂ ಕಂಡು ಅಪೂರ್ವಮಪ್ಪ ಮಾವಿನಪಣ್ಣಿದಂ ಮೆಲ್ದೊಡೆ ಸಕಲರುಜೆಗಳುಂ ಕಿಡುಗುಂ. ಇದರ ಪೆಸರುಂ ಸರ್ವರುಜಾಪಹಾರಿ ಯೆಂಬುದೆಂದು ಕುಡುವುದುಂ ಸೆಟ್ಟಿ ಯಾತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಸಂತೋಷಂಬಡಿಸಿ ಕಳಿಪಿ ಮಾವಿನ ಪಣ್ಣಂ ನೋಡಿ,

ಕಂ|| ಇದನಿಲ್ಲಿ ಮೆಲ್ದು ಕೆಡಿಸದೆ |
ಪದುಳಂ ಕೊಂಡುಯ್ದು ಮಾಳವೇಶಂಗಿತ್ತು ||
ಭ್ಯುದಯಶ್ರೀಯುಂ ಪಡೆವೆಂ
ಮುದದಿಂದಾನೆಂದು ಮೆಲ್ಲದಂತಾಪಣ್ಣಂ ||೮೯೯||

ವ|| ಪ್ರಯತ್ನದಿಂ ತಂದುಜ್ಜಯಿನಿಯುಂ ಪೊಕ್ಕು ಅವನಿಪನಂ ಕಂಡು ಪೊಡೆವಟ್ಟು ಫಳದಿಂ ತೀವಿದ ಪರಿಯಣಮಂ ಭೂಮಿಪಾಲನ ಮುಂದಿಡುವುದುಂ,

ಕಂ|| ಅರಸಂ ಮಾವಿನಪಣ್ಣಂ |
ಕರಮೊದರರದಿಂದೆ ಕಳದುಕೊಂಡೆಂದಂ ಭೂ ||
ಧರಧೈರ್ಯರ್ ಚೂತಫಲವಿಂದು
ಧರಣೀಚಕ್ರದೊಳಪೂರ್ವ ಮಾದುದೆ ಮರುಳೇ ||೯೦೦||

ವ|| ಅಮೂಲ್ಯವಪ್ಪ ವಸ್ತುಗಳನೇಕಾರಣದಿಂ ತಂದಿಕ್ಕುವುದುಂಗೆಟ್ಟು ಇದಂ ತಂದಿರೆಂಬುದುಂ ಕುಬೇರನಿಂತೆಂದಂ,—

ಕಂ|| ನರೆ ಬಂದ ನರರ್ ಮೆಲ್ಲೊಡೆ |
ತರುಣತ್ವಮನೆಯ್ದುವರ್ ಮಹಾವ್ಯಾಧಿಗಳಂ ||
ಕರಗುವವರ್ ಮೆಲ್ದೊಡೆ ನಿ |
ರ್ಜರಸನ್ನಿಭದೇಹರಪ್ಪರೆಂಬುದು ಮರಸಂ ||೯೦೧||

ವ|| * *ಪಣ್ಣನೊರ್ವನೆ ಮೆಲ್ವುದು ಕಷ್ಟಂ. ಪುರವುಮಂ ಪುರಸ್ತ್ರೀಯರುಮಂ ಕುಮಾರರುಮಂ ಬೆರಸು ಮೆಲ್ವೆನೆಂದು ಪಣ್ಣನರಮನೆಯ ಪೆಱಗಣ ನಂದನವನದೊಳ್ ಬಿತ್ತಿಸುವುದುಂ ಬೆಳೆದು ಪೆರ್ಮರನಾಗಿ ಫಲವಪ್ಪುದುಂ,

ಚಂ|| ಉರಗನೊಂದು ಪರ್ದು ಪಿಡಿದಾಮರನಂ ಪರದೇಱೆ ತದ್ವಿಷಂ |
ತ್ವರಿತದಿನಾಗಳೊಂದು ಫಲನೊಳ್ ನೆಲೆಗೊಳ್ವುದು ಮಾಫಲಂ ಸವಿ |
ಸ್ತರದೊಳೆ ಪಣ್ತು ಬೀಳೆ ವನಪಾಲಕನಂತದನೊಯ್ದುಕೊಟ್ಟೊಡಂ |
ನರಸನುಮುಬ್ಬಿಯಿಂ ಕೆಲನೊಳಿರ್ದ ಮಗಂಗಿರದೀವುದುಂ ಮಗಂ ||೯೦೨||

ವ|| ಮೆಲ್ದು ವಿಷಪೂರಿತನಾಗಿ ಸಾವುದುಂ ಮಹೇಂದ್ರಭೂಮೀಶ್ವರಂ ಮಗನ ಸಾವಿಂಗೆಱಲ್ದು ವಿಷವೃಕ್ಷಮಿದಂ ಕಡಿದು ಕಳೆಯಿಮೆಂದು ಕಡಿದೀಡಾಡಿಸಿ ಕುಬೇರನಂ ಸಾಯೆಬಡಿಸಿ ಸರ್ವಸ್ವಮುಮಂ ಕವರ್ದುಕೊಂಡನನ್ನೆಗಂ ಪುರದೊಳಗಣ ತೊನ್ನರುಂ ಪೆಱವರುಂ ಕೂಂಟರುಂ ಕುರುಡರುಂ ಪರಿತಂದು ಸಾವೆವೆಂದು ಪಣ್ಣುಮಂ ಕಾಯುಮಂ ತಿಂದು ಸುವರ್ಣಮಯಶರೀರರಪ್ಪುದುಂ ಅರಸನವರಂ ಕಂಡು ವಿಸ್ಮಯಂಬಟ್ಟು ಮಱುಗಿ ಕುಬೇರನರ್ಥಮುಮಂ ಕೊಟ್ಟು ಕ್ಷಮೆಗೊಂಡು ಮಾವಿನಮರನಂ ಘಾತಕನೆಂ ವಿಚಾರಿಸದೆ ಕೆಡಿಸಿದನೆಂದು ಚಿಂತಿಸಿದಂ ಅಂತೆ ಕೆಲರವಿಚಾರಿತೆಯುಮಂ ಮಾಡುವರ್. ಅದಱಿಂ ಸಜ್ಜನರಪ್ಪ ಪುರುಷರ್ ವಿಚಾರಿಸಿ ನೆಗೞ್ವುದು.

ಕಂ|| ಜಿನಪಾಲಿತಮುನಿ ಪರದನ |
ಮನಮಂ ಕಂಡೀತನಪ್ಪೊಡತಿಲೋಭಂ ದು ||

ರ್ಜನನೆನ್ನ ಮೇಲೆ ನುಡಿದಪ |
ನನಘರಿವರ್ ಶುದ್ಧರೆಂಬ ಮಾತನೆ ಬಿಟ್ಟಂ ||೧೦೩||

ವ|| ಕೆಮ್ಮನೆ ಬಾಯುಂಬಿಡುವುದು ಕಜ್ಜಮಲ್ಲೆಂದು ಘೋರೋಪಸರ್ಗಂ ಪಿಂಗುವಿನಮಾಹಾರಶರೀರನಿವೃತ್ತಿಯೆಂದು ಕೈಯನಿಕ್ಕಿ ಮೋನಂಗೊಂಡಿರೆ ಜಿನದತ್ತಸೆಟ್ಟಿ ನುಡಿಯಿಸಲಾರದೆ ಮೀಸೆಯುಮಂ ಕಡಿದು,

ಕಂ|| ಕುಡು ಕೊಂಡೊಡವೆಯು ನೀಗಳ್ |
ಕುಡುದಿರ್ದೊಡೆ ಮುಱಿವೆ ನಿಕ್ಕುಳೊಳ್ಕೆಯ್ಯಂ ಕೞ ||
ಗಿಡೆ ಕೊಯ್ದು ಕೊಯ್ದು ಸುಣ್ಣಮ
ನಿಡುವೆಂ ಪಿೞಿದುಯ್ದು ಮೆಟ್ಟುವೆಂ ಪೆರ್ಗಱಿಯೊಳ್ ||೧೦೪||

ವ|| ಎಂದು ರೌದ್ರಾಟೋಪಮಂ ಪಣ್ಣಿ ನಿಗ್ರಹಂಗೆಯ್ಯಲೆಂದಿರ್ಪುದುಂ ಒಳಗೆ ಪಡಿಯಂ ಪತ್ತಿರ್ದು ಕೇಳ್ದು, [೫೧೦|

ಮ|| ಸ್ರ|| ಜಿನದಾಸಂ ನಕ್ಕು ತಮ್ಮಯ್ಯನ ಮನದ ಮಹಾದ್ವೇಷಮಂ ಕಂಡು ಮಾ
ಮುನಿಮಂದ್ಯಂಗುಗ್ರಕರ್ಮಾಂಬುರುಹಹರಪಿಗೆ ಕೋಪಾಗ್ನಿಯಿಂ ವೈಶ್ಯಜಂ ಭೋ
ಕೆನೆ ತೀವ್ರಂಮಾಡದನ್ನಂ ಪೊಱಮಡುವನಿದೇಂ ಪ್ರಾಪ್ಯಮೇ ಕಷ್ಟಮೆಂ ದು
ರ್ವಿನಯಂಗಿತ್ತೆಣ್ಮಿ ಲೋಕಂ ಪೊಗೞೆ ಪಲವುಮಾತೇವುಮಂ ದೀಕ್ಷೆಗೊಳ್ವಂ ||

ಕಂ|| ಪೆಱತೇನೀ ಮುನಿಪಂ ಪೊಂ |
ಗೆಱಗಂ ಪೊಂಗೆಱಗುವೊಂದು ಮನಮುಳ್ಳೊಡೆ ಮುಂ ||
ತೊಱೆವನೆ ಸಕಳಮನೆನ್ನದೆ |
ನೆಱೆ ದಂಡಿಪನಿಂತು ಕಷ್ಟರಂ ಕಂಡಱಿಯೆಂ ||೧೦೬||

ಮಱೆದಂ ಧರ್ಮದ ಬಟ್ಟೆಯ |
ನಱಿತಂ ಪಿಂತಾಗಿ ಪೋಯ್ತು ಲೋಭೋದಯದಿಂ ||
ಮಱುಕಮುಮನಱಿವೊಡರ್ಥದ |
ಮಱುಕಕ್ಕೆಣೆ ಮಱುಕಮೊಳವೆ ಬಗೆವೊಡೆ ಜಗದೊಳ್ ||೧೦೭||

ವ|| ಎಂದು ದ್ರವ್ಯದೊಳಾದ ಸಂಕ್ಲೇಶಮಂ ವಿಚಾರಿಸಿ ಸಂಸಾರಕ್ಕೆ ಪೇಸಿ ಪಡಿಯುಂ ತೆಱೆಯಿಸಿ ಪೊಱಮಟ್ಟು, ಮಹಾಪಾತಕಂ ಲೋಭದಿಂ ಮತಿಗೆಟ್ಟು ಸುಗತಿಯಂ ಕಿಡಿಸುವ ಕಜ್ಜಮನೆತ್ತಿಕೊಂಡು ಗಣಧರರಪ್ಪವರಂ ಬಱಿದೆ ಸತ್ತುತಿರ್ದಪೆ ಕೊಳ್ ನಿನ್ನ ಪೊನ್ನನೆಂದು ಪೊನ್ನಂ ತಂದೆಯೊರ್ದಯುಮನೀಡಾಡಿ ಮುನಿನಾಥಂಗೆ ಪೊಡೆವಟ್ಟು ಮುಂದನಿಂದು,

ಕಂ|| ದುರಿತಮದಗಂಧಸಿಂಧುರ |
ಹರಿ ಚಾರುಚರಿತ್ರ....ನಿರ್ವೃತಿಸತಿಯಂ ||
ವರಿಸುವ ಜಿನೇಂದ್ರದೀಕ್ಷೆಯು |
ಸುರುಚಿಮುದದಿಂದೀವುದೆಂದು ಬೇಡುತೆ ಮುನಿಯಂ ||೯೦೭||

ಪರಮಶ್ರೀಯೊಳ್ ನೆರಪುವ |
ದುರಿತಾರಿಯನಟ್ಟುವ ದೇವರಿಂ ಪೊಗಳಿಪ [illegible] ||
ಸುರಜೈನದೀಕ್ಷೆಯಂ ಸ|
ಚ್ಚರಿತಂ ತಡೆದಿರದೆ ಕೂರ್ಮೆಯಿಂ ಕೈಗೊಂಡಂ ||೯೦೯||

ವ|| ಅಂತು ಜಿನದಾಸಂ ಜಾತರೂಪಧರನಾಗಿರ್ದುದುಂ ಜಿನದತ್ತಸೆಟ್ಟಿಯುಂ ವೈರಾಗ್ಯಂ ಪುಟ್ಟಿ ತನ್ನ ಮಾಡಿದ ಮಾಟಕ್ಕೆ ಕರಮಲ್ಲದೆ ನೊಂದು ಎನ್ನ ಪಾಪಮಿಂತಲ್ಲದೆ ಪೋಗದೆಂದು ತಾನುಂ ಜಿನದೀಕ್ಷೆಯಂ ಕೊಂಡು ತಪಂಗೆಯ್ದು ಸನ್ನ್ಯಸನ ವಿಧಿಯಿಂ ಮುಡಿಪಿ ಮಹರ್ಧಿಕದೇವನಾಗಿ ಪುಟ್ಟಿದಂ.

---

## 11. ಮೌಢ್ಯವಿಡಂಬನಂ.

ಬ್ರಹ್ಮಶಿವನೆಂಬ ಒಬ್ಬ ಜೈನಕವಿಯು ಸಮಯಪರೀಕ್ಷೆಯೆಂಬ ಗ್ರಂಥವನ್ನು ರಚಿಸಿ, ಶೈವವೈಷ್ಣವಾದಿ ಮತದವರ ಪುರಾಣಗಳಲ್ಲಿಯೂ ಆಚರಣೆಗಳಲ್ಲಿಯೂ ಇರುವ ದೋಷಗಳನ್ನು ತೋರಿಸಿ, ಜೈನಮತವೇ ಸರ್ವೋತ್ಕೃಷ್ಟವಾದುದೆಂದು ಹೇಳುತ್ತಾನೆ. ಇಲ್ಲಿ ಕೊಟ್ಟಿರುವ ಮೌಢ್ಯವಿಡಂಬನ ಪದ್ಯಗಳು ಈ ಗ್ರಂಥದಿಂದ ಉದ್ಧೃತವಾಗಿವೆ. ಕವಿಯು ಕೆಲವು ಕಾಲ ಶೈವಮತವನ್ನು ಅವಲಂಬಿಸಿಯಿದ್ದು ಅದರ ಅಸಾರತೆಯನ್ನು ಕಂಡು ಪುನಃ ಜೈನನಾದಂತೆ ಅವನ ಮಾತುಗಳಿಂದ ತಿಳಿಯಬರುತ್ತದೆ. ಈತನು ವತ್ಸಗೋತ್ರದವನು; ಇವನ ಸ್ಥಳವು ಪೊಟ್ಟಣಗೆಱೆ. ಇವನ ತಂದೆ ಸಿಂಗರಾಜನು. ಇವನ ಬಂಧವು ಬಹು ಸರಳವಾಗಿಯೂ ಲಲಿತವಾಗಿಯೂ ಇದೆ. ಅಂಕಿತವನ್ನು ತಿಳಿಸುವ ಗದ್ಯವನ್ನು ಬಿಟ್ಟರೆ ಗ್ರಂಥದಲ್ಲಿ ಆದ್ಯಂತವಾಗಿ ಬರಿಯ ಕಂದವೃತ್ತಗಳೇ ಹೊರತು ಗದ್ಯವಿಲ್ಲ.

ಕಂ|| ಇದು ಯುಕ್ತಮಪ್ಪುದಲ್ಲೆ |
ನ್ನದೋತಿ ತಲೆಮೇಲೆ ಬೀಳೆ ಬೋಳಿಸರಾ ಅಂ ||
ದದ ಬುದ್ಧಿಮೆಂತರಂತದು |
ತುದಿಮೂಗಿನ ಮೇಲೆ ಬೀಳ್ವೊಡದನೇಗೆಯ್ವರ್ ||೯೧೦||

ಗೂಗೆ ಮನೆವೊಕ್ಕೊಡಂತೆದ ।
ನಾಗಡೆ ಕೊಂದಲ್ಲಿ ಪೂಪೊಡ್ಡಲ್ಲದೆ ಮನೆಯಂ ॥
ಪೋಗಲ್ ಕೆಟ್ಟಪುದಲ್ಲಿರ ।
ಲಾಗದು ಕೇಡಕ್ಕುಮೆಂಬರಱಿವಿಲ್ಲದವರ್ ॥೭೧೧॥

ಇದು ಯುಕ್ತಮೆಪ್ಪುದಲ್ಲೆಂ ।
ಬುದನೆಂತುಂ ತಿಳಿಪಲಾಱದನ್ವಯದಿಂ ಬಂ ॥
ದುದದೇನಾದೊಡಮಕ್ಕೆಂ ।
ತದೆ ದೈವದ ಮಾರ್ಗಮೆಂದು ನೆಗಟ್ಟುರ್ ಮೂಢರ್ ॥೭೧೨॥

ಪೊಲ್ಲದಿದೊಳ್ಳಿತ್ತೆನವೇ ।
ಡೆಲ್ಲಂ ಕೊಂಡಾಡುತಿರ್ಪ ಧರ್ಮಮಂ ಲೇಸಿಂ ॥
ತಿಲ್ಲಿಂ ಮೇಲೊಂದಿರ್ದೊಡ ।
ಮಲ್ಲಿಗೆ ಮತ್ತೆಱಗಲಾಗದೆಂಬರ್ ಮೂಢರ್ ॥೭೧೩॥

ನಾಡವರೇನಾನೊಂದಂ ।
ಮಾಡಿದುದಂ ಮಾಡದಂದು ನಾಸ್ತಿಕನೆಂಬರ್ ॥
ಮೂಡದೊಳ ಬಯ್ವರದಱಿಂ ।
ಮಾಡುವುದಲ್ಲದೊಡೆ ಪೊಲ್ಲದೆಂಬರ್ ಮೂಢರ್ ॥೭೧೪॥

ಸಲೆ ಮುಯ್ಗ ಚರ್ಮವ ಪಲ್ಲಂ ।
ಸುಲಿವ ವಿಲೇಪನಮನಾಗಳುಂ ಪೂಸುವ ತಂ ॥
ಬುಲಮಂ ಮೆಲ್ವ ತಪಸ್ವಿಗ ।
ಳೊಲಿಪರ್ ಬಲೆವೆಣ್ಣನೊಲಿಸರಮ್ಮ ತಾಂಗನೆಯಂ ॥೭೧೫॥

ಸದಮಳ ಚರಿತ್ರದಿಂ ನೆಗ ।
ೞಿದೆ ಮೆಚ್ಚಿದ ತೆಱದೆ ನಲಿದೆ ಸವೆಳದೆ ಸಾಧು ॥
ತ್ವದೊಳೊಂದಿ ಬೆಂಣೆಯಂ ನುಂ ।
ಗಿದ ಜಕ್ಕನ ತೆಱನೆನಿಪ್ಪ ಮುನಿಯುಂ ಮುನಿಯೇ ॥೭೧೬॥

ವ॥ ಅಪದಸ್ಥಂ ವಿಷ...ತ್ರಕಂ ದ್ವಿರಸನಂ ಮಿತ್ರದ್ವಿಷಂ ವಕ್ರಗಾ ।
ಮಿ ಪರೋಪದ್ರವಕಾರಿ ದುಷ್ಟಮತಿ ಛಿದ್ರಾನ್ವೇಷಿ ಹಿಂಸ್ರೈಕಲೋ ।

ಉಪನತ್ಯಾಮಿಷದತ್ತಚಿತ್ತನೆನೆ ಪಾಪಂ ಪೋಲ್ತುಲೋಕಕ್ಕೆ ವ |
ರ್ತಿಪ ದುರ್ಬೋಧನನುಗ್ರನಂ ತಪಸಿಯೆಂಬರ್ ಮೂಢರೀ ಲೋಕದೊಳ್ ||

ಮ|| ಮೊದಲೊಳ್ ದೀಕ್ಷೆಯನಿತ್ತು ಸಚ್ಚರಿತದಿಂ ದೇವಾರ್ಚನಂ ಮಾಳ್ಪುದೆ |
ನ್ನದೆ ಮಾಂಸಂ ಮಧು ಮದ್ಯಮೆಂಬಿನಿತುಮಂ ಸೇವಿಪ್ಪುದಂತಲ್ಲಿ ಪೊ |
ರ್ದದು ದೋಷಂ ದಿಟಮೆಂಬವೋಲುಸಿರುತಿರ್ಪಾತಂ ದಿಟಂ ಯೋಗಿಯೆಂ |
ಬುದೆ ಸನ್ಮಾರ್ಗವಿಹೀನನಂ ಕಪಟನಂ ಪಾಪಿಷ್ಠನಂ ಕಷ್ಟನಂ ||೯೧೮||

ಕಂ|| ನುಡಿವವರೆತ್ತಾನುಂ ಪುಸಿ |
ನುಡಿದೊಡೆ ಕಳ್ಗುಡಿದನಂತೆ ಮೆಯ್ಯಱಿಯದವಂ ||
ನುಡಿದಪನೆಂಬಿನಮೆನೆ ಕ |
ಳ್ಗುಡಿವುದಱಿಂದತ್ತ ಪಾತಕಂ ಪೆಱತುಂಟೇ ||೯೧೯||

ವೃ|| ಪ್ರಿಯಮಂ ನೀನೇಕೆ ಮದ್ಯಪ್ರಿಯನೊಳಱಸುವೈ ಮದ್ಯಪಂ ಸೌಹೃದಂ ನಾ |
ಸ್ತಿಯೆನಿಪ್ಪಾವಾಕ್ಯಮಂ ಭಾವಿಸದೆ ಮರುಳೆ ಮದ್ಯಾನುರಕ್ತಾತ್ಮನಾರ್ಗಂ |
ಪ್ರಿಯಮಂ ತಾಂ ಮಾಡನುರ್ವೀವಳಯದೊಳದಱಿಂ ಮದ್ಯಪಾಕಿನ್ನಕು
ರ್ವಂ |
ತಿ ಯೆನುತ್ತುಂ ಪಂಡಿತರ್ ಕಳ್ಗುಡಿಯರವನ ನೀಂ ಚಿತ್ತದೊಳ್ ತಾಳ್ವುದೆಂ
ದುಂ ||೯೨೦||

ಕಂ|| ಮಱೆಯಱಿಯನಾಗಳುಂ ಕೃತ |
ಮಱಿಯುಂ ಕಳ್ಗುಡಿದ ಪಾತಕಂ ತನ್ನಂ ತಾ ||
ನಱಿಯನೆನೆ ಬಗೆವೊಡಂತವ |
ನಱಿವನೆ ಕಡುದೂರಮಪ್ಪ ಮೋಕ್ಷದ ಪಥಮಂ ||೯೨೧||

ಚಂ|| ಕುಲಜರೆವೆಂದು ಪಂಡಿತರೆವೆಂದು ಮುನೀಂದ್ರರೆವೆಂದು ಪಂಪಿನೊಳ್ |
ಮಲೆತು ಪರತ್ರಗಾಟಿಸಿ ಕೆಲರ್ ಮರೆಗಳ್ಗುಡಿದಾಪ್ತಭಾವಮೆ |
ಮ್ಮೊಳ್ ಶಿವತತ್ವಮೆಮ್ಮೊಳ್ ವಿಮುಕ್ತಿಯುಮೆಮ್ಮೊಳ್ ನಿಂದುದೆಂಬ ಗಾ |
ಪಿಲರ ನೆಗಱ್ತೆ ದುರ್ಯಶದೊಳೊಂದಿ ನಿಗೋದದೊಳಿಕ್ಕದಿರ್ಕುಮೇ ||

ಕಂ|| ಮಾಡಿದ ಮಾಡಿಸಿದ ಪೆಱರ್ |
ಮಾಡಿದ ಹಿಂಸಾದಿಕಾರ್ಯದೊಳ್ ಮೆಚ್ಚುಗೆಯುಂ ||
ಮಾಡಿದ ಪಾಪಂ ಪ್ರಾಣಿಗೆ |
ಮಾಡದೆ ಪೋದಪುದೆ ಘೋರನರಕದ ಗತಿಯುಂ ||೯೨೩||

ದಾನಂಗೊಂಡು ಕಳತ್ರಮೆ ।
ನಾನೆಂತುಂ ಪೊರೆವೆನದುವೆ ಧರ್ಮ್ಮಂ ಪರಮು ॥
ಧ್ಯಾನಂ ಪರತ್ರಹಿತಮುಂ ।
ಬೀನುಡಿಯನೆ ನೆಗೞ್ದವಂಗೆ ಕೊಟ್ಟುದು ವಿಫಲಂ ॥೯೧೪॥

ಕಂ॥ ಪರಮನನೋಲಗಿಸದೆ ಸ ।
ಚ್ಚರಿತ್ರದಿಂ ನೆಗೞದಾಗಳುಂ ಜೀವದಯಾ ॥
ಪರನೆನಿಸದೆ ಮಕ್ಕಳ ಪಂ ।
ಡಿರ ದುಃಖದೆ ತಿರಿವವಂಗೆ ಕುಡಲಾಗದುವಂ ॥೯೧೫॥

ಪಾವಿಂಗೆ ಪಾಲನೆಱೆದೊಡೆ ।
ಕೇವಳಮದು ವಿಷಮೆಅಕ್ಕುಮಂತಪಾತ್ರಚಯದೊಳ್ ॥
ಭಾವಿಸಿದಂಗಿತ್ತುದು ಪಾ ।
ಪಾವಹಮಲ್ಲದೆ ವಿಶೇಷಫಲಮಾದಪುದೇ ॥೯೧೬॥

ಬಗೆಗೆಟ್ಟು ಕುಪಾತ್ರಕ್ಕಿ ।
ತ್ತಗಣಿತಧನಮುಂ ಕುಭೋಗಭೂಮಿಯನಾದಂ ॥
ಪುಗಲೊಡರಿಪ ಧಾರ್ಮ್ಮಿಕನ ।
ಕ್ಕಿಗೊಟ್ಟು ಮಡೆಗೂೞನುಣ್ಬ ಮರುಳಂ ಪೋಲ್ಕುಂ ॥೯೧೭॥

ಪುಸಿಯೋದುಗಳಿಂದಂ ನಂ ।
ಬಿಸಿ ಕುತ್ಸಿತಪಾತ್ರದಾನಮಂ ಮಾಡುವವಂ ॥
ಕಸವರಮುಂ ಮತಿಯುಂ ಪೋ ।
ಲೆ ಸುಗತಿಯುಂ ಕೆಟ್ಟು ಮೂಱುಕೇಡಿಂ ಕಿಡುಗುಂ ॥೯೧೮॥

ದಯೆಧರ್ಮ್ಮಮನೊಕ್ಕಾ ಪಾ ।
ಪಿಯೆ ಪಾತ್ರಮೆನುತ್ತೆ ಕೊಟ್ಟು ಕೆಡದೆ ನಿಸರ್ಗಂ ॥
ದಯೆಧರ್ಮ್ಮಮುಳ್ಳ ಪುರುಷಂ ।
ಗೆ ಯುಕ್ತದಿಂ ಕುಡುಗೆ ಸೌಖ್ಯಮಂ ಬಯಸುವವಂ ॥೯೧೯॥

## 42. ವಸಂತೋದ್ಯಾನವರ್ಣನಂ.

ಈ ವಸಂತೋದ್ಯಾನವರ್ಣನೆಯು ವಾರ್ಧಿಕಷಟ್ಪದಿಯಲ್ಲಿಯೇ ಬರೆಯಲ್ಪಟ್ಟ ಪದ್ಮರಾಜಪುರಾಣದಿಂದ ಉದ್ಧೃತವಾಗಿದೆ. ಈ ಪುರಾಣವನ್ನು ರಚಿಸಿದ ಕವಿ ಪದ್ಮಣಾಂಕನು. ಈತನು ಆರಾಧ್ಯ ಬ್ರಾಹ್ಮಣನು; ಕೆಱೆಯ ಪದ್ಮರಸನ ವಂಶದಲ್ಲಿ ಹುಟ್ಟಿದವನು. ಇವನ ತಂದೆ ಪದ್ಮಣಾರ್ಯನು. ಪದ್ಮರಾಜಪುರಾಣವು ಕೆಱೆಯ ಪದ್ಮರಸನ ಚರಿತೆಯನ್ನು ತಿಳಿಸುವುದು. ಇದರಲ್ಲಿ ಕೆಱೆಯ ಪದ್ಮರಸನು ಇತರ ಮತಗಳನ್ನು ವಾದದಲ್ಲಿ ಖಂಡಿಸಿದಂತೆ ಹೇಳುವ ಭಾಗಗಳಲ್ಲಿ ಪದ್ಮಣಾಂಕನು ಶ್ರುತಿಸ್ಮೃತಿವಾಕ್ಯಗಳನ್ನು ಒಪ್ಪುವಂತೆ ಸೇರಿಸಿ ಬರೆದಿರುತ್ತಾನೆ. ಈತನ ಬಂಧವು ಪ್ರೌಢವಾಗಿಯೂ ಲಕ್ಷಣಬದ್ಧವಾಗಿಯೂ ಇದೆ. ಈತನು ಸುಮಾರು ಕ್ರಿ. ಶ. 1385ರಲ್ಲಿ ಇದ್ದಿರಬಹುದೆಂದು ಊಹಿಸಲಾಗಿದೆ.

### ವಾರ್ಧಿಕ ಷಟ್ಪದಿ.

ಪರಮಹರ್ಷದಿನಿಂತು ಗುರುಕುಲಾಗ್ರಣಿಯಿರಲು |
ಧರೆ ಮೆಲ್ಲಮೆಲ್ಲನೆ ಹಿಮಂ ಸರಿಯೆ ಪೊಸಪಿಸಿ |
ಲ್ಪೊರೆಯೊಳೆಱೆ ಮೆಯ್ಯ ಪಿಂಬುಗಳಡಂಗಿ ಲಸತ್ಪ್ರಸನ್ನತೆಯನಪ್ಪುಗೆಯ್ಯೆ ||
ಕೂರಗಿದಂಬುಜವನಂ ಸೊಂಪೇಱೆ ಬಲ್ಗಾಳಿ |
ಸರಿದು ತಂಬೆಲರ್ ಕಾಲಾಟವಗ್ಗಳಿಸೆ ನಸು |
ಮೊರೆಯುತುಂ ತುಂಬಿ ಸುಳಿದಾಡೆ ಮೆಱೆದುದು ಮಾಗಿಯಪಜಯಂ ಮಧುವಿನ [ಜಯಂ ||೧||

ಪಱಿಯೆ ಮದವು ಮಾಗಿ ಕಱೆಯೆ ಸೊಗಸಂ ಮಾವು |
ನೆಱೆಯೆ ಕಳಿಪೆರ್ಚೆ ಸಗಿ ನೊಱೆಯೆ ಮಾಧವಿ ಪೂತು | [ಪರಂ |
ತೊಱೆಯೆ ಲಜ್ಜೆಯನವನಿ ಜಱೆಯೆ ತಪಮಂ ಯಮಿಗಳೆಱಿಯೆ ಪನೆಗಣೆಯೊ
ಮುಱಿಯೆ ವಿರಹಿಯ ಗುಟ್ಟು ಬೆಱೆಯ ಕುಸುಮೋಷ್ಮ ಕುಕಿ |
ಲಿರಿಯೆ ಕೋಗಿಲೆ ದುಃಖವರೆಯೆ ಸುಖಿಜನಕೆ ಕ |
ಣ್ಬೆಱೆದುದು ವಸಂತಮಾಸಂ ಭೋಗಿತತಿಯ ಮುಖವಿಕಾಸಂ ಸುಖೈಕವಾಸಂ ||

ಅಸುಗೆ ನೇರಿಲ್ಮಾಮರಂ ಪನಸು ಮೊದಲಾಗಿ |
ಮಿಸುಪ ಮರಗಳ್ ಕನರ್ಗೊನರ್ಚಿಗುರ್ ಚಂದಳಿರ್ |
ಪೊಸನನೆಗಳೆಳರ್ಗಾಯ್ಗಳಿಂ ದೋರೆ ತನಿವಣ್ಗಳಿಂತು ಮೆಱೆಯೆ ||
ಒಸೆದವಱ ಸವಿಯನುಱೆ ಸವಿದು ಪಡಿಯುರವಕ್ಕಿ |
ಯೆಸೆವರಲ್ವಕ್ಕಿ ಕನ್ನಡವಕ್ಕಿ ಮೆಲ್ಲುಲಿಯ |
ನೆಸಗೆ ಝುಂಕೃತಿಗೆಯ್ಯೆ ಸವಿವಾತನಾಡೆ ಕಣ್ಗೆಸೆದುದು ವಸಂತಸಮಯಂ ||

ರಸಭರಿತವಾಗಿ ಸತ್ಕವಿಕಾವ್ಯಬಂಧದಂ |
ತೆ ಸಮಸ್ತಫಲಪೂರ್ಣವಾಗಿ ಸುಕೃತಾತ್ಮನಂ |
ತೆಸೆವ ಹರಿಸಂಯೋಗಿಯಾಗಿ ಲಕ್ಷ್ಮೀದೇವಿಯಂತೆ ಗೋಪಿಯರೊಳೊಂದಿ ||
ಬಿಸಜಾಕ್ಷನಂತೆ ತಿಮರಲ್ಲರ್ಜುನಾಢ್ಯವಾ |
ಗಿ ಸುಭದ್ರೆಯಂತೆ ಸಸಿಯೊಡನೊಂದಿ ರೋಹಿಣಿಯು |
ಮಸಕದಂತೆ ಸುವರ್ಣಯುತವಾಗಿ ಪರದನಂತೊಪ್ಪುಗುಂ ಶಾಲಿಯುವನಂ||

ಫಲಸಂಪದಂ ತಮಗೊದವಿದಲ್ಲಿ ಸಜ್ಜನ |
ರ್ತಲೆವಾಗಿರಲ್ವೇಳ್ಕುಮಿಂತೆಂದು ತೋರ್ಪನುವೊ |
ತಲೆವಾಗಿ ನಡವವರ್ಗೆ ತಲೆವಾಗುವರ್ಸರ್ವರೆಂದಭಿನಯಿಸುವ ಬಗೆಯೋ ||
ಸಲೆ ಪೆತ್ತ ಧರೆಯ ಮೋಹದಱನೆಱಗಿ ನೋಳ್ಪಿರವೊ |
ಸುಲಭಗರುವಂ ಕಂಡು ವಂದಿಪಂದವೊ ಎನ |
ಲ್ಕಳಮಾಳಿಎಸೆದುವಲ್ಲಲ್ಲಿ ಚೆಲ್ಲಂಗೆಯ್ಯುತಂ ಕಾವ ವಲ್ಲವಿಯರಿಂ ||೯೪||

ಪಾಲ್ದುಂಬಿ ಮುಱಿವ ಪೊಸಕಮ್ಮಂಗಳವೆದೆನೆಯ |
ನೊಲ್ದು ಪಿಡಿದಲ್ಲಿ ಪಾಮರಿ ಚರಿಸುತಾವನಕ |
ನಾಲ್ದೆಸೆಯನೊಸೆದುಬಂದಱಪ ಗಿಳಿವಳಗಮಂ ಕಯ್ಯೆತ್ತಿ ರಯ್ಯವಾಗಿ ||
ಬಲ್ದನಿಮೆರಸು ಸೋಮೆ ಯದನೊಂದು ಗಿಳಿಕಂಡೊ |
ಱಿಲ್ದುಬಂದಾಕ್ಕ್ಯಯ್ಯ ತೆನೆಗೆಱಗೆ ಮಾನಸವ |
ರಲ್ದುಕಟ್ಕಿನ ಪಿಡಿದು ಕುಟುಕನೀವುತೆ ಬಿನದಿಸುತ್ತಸೆದಳತಿಹರ್ಷದಿಂ ||

ಬವೊ ತತ್ಕೇದಾರವನದುಭಯಪಕ್ಷದೊಳ್ |
ತೀವಿಕರ್ವಿನತೋಂಟಪೂದೋಂಟಗಳ್ಮಿಱಿದು |
ಮಾವಿಭವವೆಂತೆನ ಲ್ವಿಶ್ವತೋಮುಖನೊಡನೆ ಬಲ್ವಗೆತನಂ ಬಂದುದು ||
ಆವಿಲಗಮಂ ಜಯಿಸಲೊಂದುಪಲ್ಲೈದಂಬು |
ತಾವೆಯ್ದುವರೆ ಯೆಂದು ಪಲವುಬಿಲ್ಲಂಬುಗಳ |
ಕಾವನೀತಾಣದೊಳ್ಬಿತ್ತಿಯೊತ್ತಿನೊಳಗಿದೋರ್ಪವಿದಪನೋ ಎಂಬಿನಂ ||೯೬||

ಸಲ್ವುದೀ ದೇಸಿ ಯೆಂಬಂತಲಂಕರಿಸಿ ಯಾ |
ವಲ್ವಗಳಿಂ ಸಮೆದ ಮಾಲೆಯಂ ಧರಿಸಿ ನಸು |
ಜೋಲ್ವ ಮೇಲುದನಿನಿಸು ಮುಸುಕುತಲರ್ಗಣ್ಣ ಬಂಬಲ್ವೆಳಗುಗಳ ಸೂಸುತೆ||
ನಲ್ವಣ್ಣಗಿನ್ನರಿಯನುಱಿ ಮೇಳಯಿಸಿಕೊಂಡ |
ರಲ್ವಂದರೊಳ್ಕಾಂತೆಯೊರ್ವಳ್ವಿಳಾಸದಿಂ |
ಚೆಲ್ವಮರೆ ಪದ್ಮರಾಜಾಂಕಮಾಲೆಯ ಬಾಜಿಸುತ್ತಸೆದಳೀಂ ಸುಕೃತಿಯೋ ||

ಇಂತಸೆವ ಶಾಲಿಪಾಲಿಕೆಯರಂ ನೋಡುತುಂ।
ಮುಂತುಪವನದ ಪೊರೆಯುನೆಯ್ದೆ ವನಲಕ್ಷ್ಮಿ ಹರಿ।
ದಂತದೊಳ್ಪಸರಿಸಿದ ಕಹಳಾರವದಿನಿವರ ಬರವಱಿದು ಗಂಧವಹನಂ॥
ನೀಂ ತಳ್ವದಲ್ಲಿಗಾರ್ಯನ ಕರೆದು ತಾರೆಂದು।
ಸಂತಸದೆ ಕಳುಪಿದಳೊ ಎನೆ ಬಂದುದುದ್ಯಾನ।
ದಿಂ ತಂಬೆಲರ್ಪದ್ಮರಾಜನೆಡೆಗತಿಸುರಭಿಭರದೆ ಕಾಣ್ಕೆಯುನೀಯುತೆ ॥೯೩೮॥

ಅಲ್ಲಿ ತವಮ್ಮಡವಂದ ಬಲವನಿರವೇೞ್ದು ಪೊಂ।
ಬಲ್ಲಿಕೆಯುನಿಟಿದು ತತ್ಕಾಲೋಚಿತಕೆ ತಕ್ಕ।
ರೆಲ್ಲವರ್ಗರಸಿ ಯುಪಾರ್ಶ್ವನಾಬನಕೆ ಬೇಲಿಯುಗಿರ್ದ ಕೇತಕಿಯ ಸೂಚಿ॥
ಸಲ್ಲಲಿತವರ್ಣ ಸನ್ಮೋಹನಾಕಾರ ಚಿ।
ತ್ತೋಲ್ಲಾಸಕರಗಂಧಮಿಗೊರ್ಡೇಂ ಕಂಟಕಿಗ।
ಳೆಲ್ಲಡೆಯೊಳುಂ ಬಹಿಷ್ಕೃತರೆಂಬುಗೆರ್ಕಿವೇ ಸಾಕ್ಷಿ ಯೆಂದೆನುತೊಳಪುಗೆ॥

ನಗಱ್ದ ಪೊಂಬಾಳೆಗಳ ಚಮರದಿಂ ಪೂತು ಕಂ।
ಪುಗುವ ವೃಕ್ಷಾವಳಿಯ ಗುಡಿಯಿಂ ಮುಗಿಲಗಳಂ।
ಬಿಗಿದುಱೆ ತಳಿರ್ತಗಳಲತೆಯ ತೋರಣದಿನೆಸೆವ ಸೋಗೆಗಳ ಸೀಗುರಿಗಳಿಂ॥
ಮಿಗೆ ಮಱೆವ ತೆಂಗುಗಳ ಸತ್ತಿಗೆಗಳಿಂ ಕೋಗಿ।
ಲೆಗಳ ಕಹಳೆಯಿನಖಿಳಪಕ್ಷಿರವವಾದ್ಯದಿಂ। [ದುದು॥
ಸೊಗಸಿ ವನಲಕ್ಷ್ಮಿ ಗುರುವರನನಿದಿಗೊಂಡಪಳೊ ಎಂಬಂತೆ ವನಮೆಸೆ

ಒದವಿದ ಪಲಸುವರ್ಣವೃದಂಗವಾ ಕರ್ಣಿಕಾ।
ರದ ಪೂವ ಪೊಂದಾಳಮಾರಡಿಗಳಿಂಚರಂ।
ಮೃದುಗೀತವರಗಿಳಿಗಳುಗ್ಗಡಣೆ ಗಂಡುಕೋಗಿಲೆಗಳ ಸಭಾಯೋಗ್ಯರು॥
ಪುದಿದ ತಂಬೆಲರಾಡಿಸುವ ನಟುಂ ಮಾಧವಿ ಸ।
ಮುದಿತನರ್ತಕಿ ಯುದಱಿನುದಿಪ್ಪಲಪ್ಪೊವಲಿಯ।
ಪುದುವನಾಗಿಸೆ ವಸಂತಕನ ನಾಟಕಶಾಲೆಯುಂತುಪವನಂ ಮೆಱೆದುದು॥

ತುಂಬಿ ಸಾವರ್ತಕಂ ಫಲಿಸಿ ಪಾವನಮಾಗ।
ಳುಂಬಮೆಸೆವನ್ನ ಮುಂದುಟಿದ ಬನಗಿನಗಳಾ।
ಡಂಬರಂ ನಿಲ್ವುದೇ ತೆಗೆ ಚೀ ಸುಡೆನುತೆ ತಳಿಗೊರ್ಂಬೆಂಬ ಕಯ್ಯನೆತ್ತಿ॥
ತುಂಬಿಗಳ ಪಲ್ಮೊಱೆಪದಿಂ ಗಿಳಿಯತೊಂಡುಬಂ।
ಡಂ ಬೆಟ್ಟಿತಾದ ನುಡಿಯಿಂ ಗಂಡುಗೋಗಿಲೆಯು।
ಮುಂಬರಿಯು ಕೂಗಾಟದಿಂ ಬಗ್ಗಿಸುತೆ ಮೆಱೆದುದಾವನಂ ಸುಖಜೀವನಂ॥

ಮಾಲತೀಮಾಧವೀಯಾನ್ವಿತದೆ ನಾಟಕದ |
ಲೀಲೆಯಂ ಯೋಗಿಕುಸುಮಾಂಜಲಿಯಿನಾತರ್ಕ |
ಶೀಲತೆಯನಿಂದ್ರಚಂದ್ರಾಂಕದಿಂ ವ್ಯಾಕರಣಮಂ ವಿಲಸಿತಧ್ವನಿಗಳಿಂ ||
ಲಾಲಿತಾಲಂಕಾರಮಂ ಚಂಪಕೋತ್ಪಲದಿ |
ಶಾಲತ್ವದಿಂ ಛಂದಮಂ ಮಹಾಶ್ರೀಹರ್ಷ |
ದಾಲಂಬದಿಂ ಕಾವ್ಯಮಂ ಪೋಲ್ತು ರಂಜಿಸುವುದಾನಂದನಂ ನಂದನಂ ||೯೪||

ಪಗಲಬಲ್ಲಹನ ಕೆಂಗದಿರ್ಗಂಗಲಿನಿಸು ಪುಗ |
ದೆ ಗಭೀರಮಾಗಿ ಕತ್ತಲಿಸಿದ ತಮಾಲವ ತ |
ರುಗಳ ತಣ್ಣೆಳಲೊಳೆಳೆವಾಳೆಯೆಲೆಗಳ ಪಚ್ಚಡಿಸಿ ತಳಿರ ಹರಹಿಯಲ್ಲಿ ||
ಮುಗಮುಗಿಪರಲ ಮುಡಿದು ಚಂದನಂಬೊರೆದು ಚೀ |
ನಿಗಳ ಪೊದೆದಿನಿದುಂಡು ಸವಿದಂಬುಲಂಗೊಂಡು |
ಸೊಗಸುಗಾರ್ತಿಯರೊಡನೆ ಬೇಸಗೆಗಳೆವ ಭೋಗಿಜನಮಾ ವನದೊಳೆಸೆದುದು ||

ನುತಪಲ್ಲವಮೆ ಧೋತ್ರಮುಂ ಬಹಿರ್ವಾಸಮುಂ |
ತತಪಿಕಸ್ವರಮೆ ವೇದಸ್ವರಂ ಮೊಱೆವ ಪಂ |
ಡಿತವಕ್ಕಿಯೊಳ್ನುಡಿ ಪುರಾಣಪಠನಂ ಭ್ರಮದ್ಭ್ರಮರೀವಿಲಾಸವಿರುತಿ ||
ಹಿತವಾದ ಮಂಗಲಾಶೀರ್ವಾದಮಂತ್ರಂ ಪ |
ತಿತಮಪ್ಪಕುಸುಮಕೇಸರವೆ ಮಂತ್ರಾಕ್ಷತದ |
ತತಿಯಾಗೆ ಮಧುವಿನ ಪುರೋಹಿತನೊ ಎನೆ ಯೊಂದಶೋಕವೃಕ್ಷಂ ಮೆಱೆದುದು

ಮೊದಲಿಂದ ತುದಿವರಂ ಬೇರೊಂದು ರೀತಿಯಾ |
ಗದೆ ಯೊಂದೆ ಚಂದದ ಸಫಲಗುಣವನಾಂತು ನಿಜ |
ಹೃದಯದೊಳ್ಪಂ ಬಹಿಷ್ಕರಿಸಿ ಕಾಣಿಸದೆ ಸದ್ವಾಸನೆಯನೇ ಬೀಱುತೆ ||
ಒದವಿ ಕೊಯ್ದುಂ ಕೊಱೆದುವುಂ ಹಿಕ್ಕಿ ನೋಡಿದೊಡೆ |
ಸದಮಲಾಮೃತವನೇ ಕಾಣಿಸುತೆ ಪಲಸುಗ |
ಳ್ವಿದಿತಸಜ್ಜನರಂತೆ ಮೆಱೆದುವು ಮಹಾಫಲಾಂಕರ್ಗನೇಂ ನೃಜಮಲ್ತೆ ||

ಫಳರಸಮೆ ಮದಧಾರೆ ಚಳಿಪ ತಳಿರ್ಗೊಂಚಲು |
ಜ್ವಳಕರ್ಣಮುಱೆ ನೀಳ್ದಕುಸುಮಮಂಜರಿ ದಂತ |
ಪೊಳಪಟ್ಟದಕ್ಕಿಱಗುವಳಿಮಾಲೆ ಬರಿಕಯ್ಯಮಱಿ ಝುಂಕೃತಿಯೆ ಬೃಂಹಿತಂ ||
ಗಿಳಿಗಳಿಟ್ಟಳವೆ ಪಚ್ಚೆಯ ಪಕ್ಕರಕ್ಕೆ ಕೋ |
ಕಿಳರವಂ ಮುಂದುಲಿವ ಡೌಡೆಯಾಗಲ್ಕತನು |
ಗೆಳಸಿ ಮಧುಯೋಧನನಲಂಕರಿಸಿ ಪಿಡಿದ ಮದಗಜದಂತೆ ಚೂತಮೆಸೆಗುಂ ||

ತಳಿರ ತೊಂಗಲ್ ಕೆಂಜೆಡೆಯು ಬಿಂಕವಂ ಬೀಱೆ ।
ಪೊಳೆವ ಕೆಂಗಾಯ್ಕೊಸಲಕಣ್ಣದೇಸಿಯು ಸೂಸೆ ।
ಮಿಳಿರ್ವ ತನಿವಣ್ಕೊರಲ ಬಿಸದ ತೇಜವನೋಜೆಗೆಯ್ಯೆ ಕಳಿದುಗುವಲರ್ವುಡಿ ॥
ತಳೆದ ಭಸಿತದ ಸೊಗಸನಾಗಿಸೆ ತುಂಬಿಗಳ ಸವಿ ।
ವೊಳೆವ ಝುಂಕೃತಿ ಶಿವನೂತವುಪಾವುಗಳ ಪಾಡಿ ।
ನಳವಡಿಕೆ ದುಡುಕೆ ಶಿವಚಿಹ್ನವಾಂತಂತೆ ನೇರಿಲ್ವರಂ ಚೆಲ್ವಾದುದು ॥೯೪॥

ಕೆಂಪುವಡೆದೆಸಳಿಂ ರಜೋಗುಣಯುತಬ್ರಹ್ಮ ।
ನಂ ಪೊಳೆವ ಬೆಳ್ಪವುರ್ದ ಕೇಸರದೆ ಸತ್ವಗುಣ ।
ಸಂಪನ್ನವಿಷ್ಣುವಂ ಕರ್ಪಡಿದ ತೊಟ್ಟಂ ತಮೋಗುಣಾನ್ವಿತರುದ್ರನಂ ॥
ತಾಂ ಪೇೞ್ವುದಱಿನೊಂದೆ ಕುಸುಮದೊಳ್ ತ್ರಿಗುಣಾತ್ಮ ।
ಕಂ ಪುದಿದ ದೇವತೆಗಳಾಂತವೊಲ್ ಮುತ್ತುಗಂ ।
ಪೆಂಪುವಡೆದುದು ಫಲಪದಂಗಳನಱಿದ ಮುಕ್ತಕಾವಳಿಗಿದೇಂ ಚೋದ್ಯಮೋ ॥

ಸುರಲೋಕದಮೃತಕೀ ನರಲೋಕದಿನಿದುಗ ।
ಳ್ಪರಿಯುಳ್ಳವೆಂದು ರಿಕ್ಕಟಮಂ ನಿಂದಿಸದೊರ್ವ ।
ಪರಿಕಿಸುವುದೆಂದಮುರ್ದಗಳಸಗಳ ಪಲಗೈಯ್ಯೊಳಾಂತುದ್ದಕತ್ತಿಭೂಮಿ ॥
ಸುರಗಿರೀವನುವೂ ಕಿಂಚಿದುಪಕಾರಗಭಕತರ ।
ಪುರುಷಾರ್ಥವುಂ ಮಾಡುವಸ್ಸುಜನರೆಂದು ತಿಳಿ ।
ದರರೆ ನೀರೆಱೆವಂಗ ಪಾವಮಾವೃತಂಬೊತ್ತ ಪಟಯೊ ಎನೆ ತೆಂಗೆಸೆದುವು ॥

ಪೊಳೆವಲರ ಸಿಂಧೂರತಿಲಕದಿಂ ತತ್ಕುಸುಮ ।
ಕಳಸಿಬಂದೆಪಗಿದಳಿಗಳಕುಂತಳವಿಸವವು ।
ಕಳರುತಿಯು ಸವಿವಾತಿನಿಂ ತೋರದೋರೆಗಾಯ್ಗಳ ಕುಚಂಗಳಿನೊಪ್ಪುತೆ ॥
ಕಳಿವಣ್ಬಿಯುಬಾಯ್ದೆರೆಯೊಳೊಂದಿದೊಳ್ವಿತ್ತು ।
ಗಳ ಮಿಳಿರ್ವ ಕೆಂಬಲ್ಲ ಸೊಗಸಿನಿಂ ದಾಡಿಮೀ ।
ಲಲನೆ ಶುಕನುಮನೋಲಿಸಿಕೊಂಡಳನೆ ಸುದತಿಯುರದಾರಂ ವಶೀಕರಿಸರೋ ।

## 43. ಆತ್ಮಸ್ವರೂಪ.

(ಇದು ಜನ್ನನಿಂದ ರಚಿಸಲ್ಪಟ್ಟ ಯಶೋಧರ ಚರಿತೆಯಿಂದ ಉದ್ಧೃತವಾಗಿದೆ. 26ನೆಯ ಪುಟವನ್ನು ನೋಡು.)

ಕಂ|| ಗರಟಿಗೆ ಗಿತ್ತಲ್ ತದ್ವನ |
ಪರಿಸರದೊಳ್ ಬರುತುಮಿರ್ದ ಕಂಪನರೆಂಬರ್ ||
ತರುಮೂಲದೊಳಿರೆ ನಿಧಿಯಂ |
ಕುರುಡಂ ಕಾಣ್ಬಂತೆ ಚಂಡಕರ್ಮಂ ಕಣ್ಡಂ ||೯೫೨||
ಮನಮಿರೆ ಪುರ್ಬಿನ ಕೊನೆಯೊಳ್ |
ಮನದೊಳಗಿರೆ ವಾಯು ಕರಣತತಿ ವಾಯುವಿನೊಳ್ ||
ಮುನಿದಿರೆ ಪದ್ಮಾಸನದೊಳ್ |
ತನುವಿರೆ ಯೋಗೀಂದ್ರನಾತ್ಮಚಿಂತೆಯೊಳಿರ್ದಂ ||೯೫೩||
ಎಱಗಿದನಾತಂ ಗೌರವ |
ವೞಿಯುದೆಯುಂ ದೀಪವರ್ತಿ ನಿಧಿಗಾಣ್ಬುದು ಮೊ ||
ಲ್ದೆಱಗುವ ತೆಱದಿಂ ಮುನಿ ಕ |
ಣ್ದೆಱೆದೊಯ್ಯನೆ ನೋಡಿ ಪರಸೆ ಬೞಿಕಿಂತೆಂದಂ ||೯೫೪||
ಎಲೆ ದೇವರೆ ಪುತ್ತುಂ ಬ |
ತ್ತಲೆಯುಂ ಬೞಿದಿಲ್ಲರೆಂಬರದುಕಾರಣದಿಂ ||
ನೆಲೆಯೂಂದೆಯು ನಚ್ಚಿದವ್ರೋ |
ಲೆಲೆಮಿಡುಕದೆ ನೆನೆಯುತಿರ್ದಿರೇನಂ ಮನದೊಳ್ ||೯೫೫||
ಅವಧರಿಸೆ ಕೇಳ್ವುದಿಂತೆಂ |
ದವಧಿಯಿನಾಸನ್ನಭವ್ಯನೆಂಬುದನಱಿದಿಂ ||
ತವರಿಂತು ನುಡಿದರಾತ್ಮನ |
ನವಿಕಲನಂ ನೆನೆಯುತಿರ್ದೆವೆನೆ ಮತ್ತಾತಂ ||೯೫೬||
ಆವೆಡೆಯೊಳಿರ್ಪ ನಾತ್ಮಂ |
ಗಾವುದು ಕುಱುಪೆಂದೊಡಂಗಿ ಯಂಗದೊಳಲ್ಲಂ ||
ತೀವಿರ್ಪಂ ಭೂತಚತು |
ಷ್ಟಾವಯವದಿನನ್ಯನಾತ್ಮನತಿಚೈತನ್ಯಂ ||೯೫೭||

ಕಂ|| ಎಂದೊಡೆ ತಳಾಱನಾಯಕ ।
ನೆಂದಂ ನೀವೆಂದ ಮಾತು ಪೊಲ್ಲದು ನೋಡ ||
ಲ್ಕೆಂದು ಪಲರಂ ವಿಚಾರಿಸಿ ।
ಕೊಂದೆಂ ತನುವಲ್ಲದಾತ್ಮನಂ ಕಂಡಱಿಯೆಂ ||೯೫೮||

ಕಡಿದು ಕಿಱಿಕಿಱಿದ ನೆಲುವಂ ।
ಪುಡಿಗುಟ್ಟಿಸಿ ತೊಗಲನುಗಿದು ಕರುಳ ತೊಡಂಕಂ ||
ಬಿಡಿಸಿ ನಡೆ ನೋಟ್ಪೊಡೊಳಗೆಲು ।
ವಡಗಿರ್ಪುದು ಜೀವನಿರ್ಪೊಡೆಲ್ಲಿಗೆ ಪೋದಂ ||೯೫೯||

ಕುದಿರೊಳ್ ಕಳ್ಳನ ಸಿಕ್ಕಿಸಿ ।
ಸೊದೆಯಿಟ್ಟರೆ ಬಳಿದು ಬಱಿಕ ತೆಱೆದೊಳಗಂ ನೋ ||
ಡಿದೊಡಾತ್ಮನಿಲ್ಲ ತನುವಿ ।
ರ್ಪುದು ಬೇಱೆಂಬಾತ್ಮನಂ ನೆಗಪ್ ನುಂಗಿದುದೇ ||೯೬೦||

ತೂಗಿಸಿ ತೊಲೆಯೊಳ್ ಬಾಯಂ ।
ಮೂಗುಮನೊಡೆಯೊತ್ತಿ ಕೊಂದ ಕಳ್ಳನ ದೇಹಂ ||
ಮೂಗಿದೊಡೆ ಕುಂದದಾತ್ಮವಿ ।
ಭಾಗಂ ಬೇಱಿಲ್ಲ ಜೀವನಂತುಂ ದೇಹಂ ||೯೬೧||

ಎಂದೊಡೆ ದಂಡಧರಂಗಿಂ ।
ತಂದರ್ ಗುರುಗಳ್ ವಿಮೋಹಮೃಗಮುಂ ಮಿಥ್ಯಾ ||
ಕಂದರದೊಳ್ ಬದಱಿಟ್ಟುವ ।
ಮಂದುಭಿರವದಂತಿರೊಗೆಯೆ ಗಂಭೀರರವಂ ||೯೬೨||

ತಱಿದೊಡೆ ಕಡಿದೊಡೆ ಸೀಳ್ದೊಡೆ ।
ಪೊಱಮಡುವುದೆ ಕಿಚ್ಚು ಕಾಷ್ಠದಿಂ ಪೊಸೆಯಲೊಡಂ ||
ಪೊಱಮಡುವುದಂತೆ ಜೀವಂ ।
ಬೆಱತೊಡಲಿಂ ತೋಱುಗುಂ ವಿವೇಕಕ್ರಿಯೆಯಿಂ ||೯೬೩||

ಕುದಿರೊಳಗಿರ್ದೂದಿದ ಶಂ ।
ಖದ ದನಿ ನಿಚ್ಛಿದ್ರಮಾದೊಡಂ ಪೊಣ್ಮದೆ ಶಂ ||

ಖದಿ ನನ್ನವಲ್ಲದೇ ಪೊ।
ಣ್ಮಿದ ನಾದಂ ಕಾಯದಿಂದೆ ಜೀವನುಮನ್ಯಂ ||೯೬೪||
ತೀವಿದ ತಿದಿಯುಂ ತೂಗಿಯು।
ಮಾವಾಯುವ ನಿೞಪಿ ತೂಗಿ ನೋಡಲ್ ತಿದಿಯಿಂ ||
ದಾವಾಯು ಬೇಱೆ ತನುವಿಂ।
ಜೀವಂ ಬೇಱೆಂದು ಮಗನೆ ಭಾವಿಸಿ ನೋಡಾ ||೯೬೫||
ಏದೊರೆಯನಾತ್ಮನೆಂದೊಡ।
ನಾದಿಯನಂತ್ಯಂ ನಿರತ್ಯಯಂ ಚಿನ್ಮಯನಿಃ ||
ಪ್ರಾದೇಶಿಕನೆಂಬಾತನು।
ಪಾದೇಯಂ ಮುಕ್ತಿಮುಕ್ತನುಂ ಪರಮಾತ್ಮಂ ||೯೬೬||
ಪರಮಾತ್ಮನನ್ನನೆಂದೊಡೆ।
ಚರಮಾಂಗಪ್ರಮಿತ ನಖಿಳಲೋಕಸಮಾನಂ ||
ನಿರವಯವ ನಿರಂಜನ ನಿ।
ರ್ಮರಿತ ನನಂತಪ್ರಬೋಧದರ್ಶನಸೌಖ್ಯಂ ||೯೬೭||
ಕಲ್ಲೊಳ್ ಪೊನ್ ಪಾಲೊಳ್ ಘೃತ।
ಮಿಲ್ಲೆನವೇಡುಂಟು ದೇಹದೊಳಗಾತ್ಮನದೇಂ ||
ಕೆಲ್ಲ ಕುರುಡಂಗೆ ತೋಱದೊ।
ಡಿಲ್ಲಪ್ಪುದೆ ವಸ್ತು ಭೇದಿಪಂಗಾತ್ಮನೊಳಂ ||೯೬೮||
ಮಾಡುವನಾತ್ಮಂ ನೆಟ್ಟಗೆ।
ನೋಡಿದುದುಣ್ಬಾತನಾತ್ಮ ನಘಜಲಧಿಯೊಳಗೀ ||
ಲಾಡುವೊಡಂ ಗುಣಗಣದೊಳ್।
ಕೂಡುವೊಡಂ ಜನ್ಮಜಲಧಿಯಂ ದಾಂಟುವೊಡಂ ||೯೬೯||
ಕೊಲಲಾಗದು ಪುಸಿಯಾಗದು।
ಕಳಲಾಗದು ಪೆಱರ ಪೆಂಡಿರೊಳ್ ತನ್ನ ಮನಂ ||
ಸಲಲಾಗದು ತೀಱದುದ।
ರ್ಕಲವರಲಾಗದು ಪರತ್ರೆಯುಂ ಬಯಸುವವಂ ||೯೭೦||

## 44. ಧರ್ಮ ಪ್ರಶಂಸೆ.

ಬಂಧುವರ್ಮನೆಂಬ ಜೈನಕವಿಯು ಹರಿವಂಶಾಭ್ಯುದಯ ಜೀವಸಂಬೋಧನ ಎಂಬ ಎರಡು ಗ್ರಂಥಗಳನ್ನು ಬರೆದಿರುತ್ತಾನೆ. ಇಲ್ಲಿ ಕೊಟ್ಟಿರುವ ಧರ್ಮಪ್ರಶಂಸೆಯ ಪದ್ಯಗಳು ಜೀವಸಂಬೋಧನೆಯಿಂದ ಉದ್ಧೃತವಾಗಿವೆ. ಇದರಲ್ಲಿ ಕವಿಯು ಜೀವನನ್ನು ಸಂಬೋಧಿಸಿ ಜೈನಮತದ ತತ್ವಗಳನ್ನು ಉಪದೇಶಮಾಡಿರುತ್ತಾನೆ. ಗ್ರಂಥವು ಲಲಿತವಾಗಿಯೂ ನೀತಿಬೋಧಕವಾಗಿಯೂ ಇದೆ. ಅದರ ಕಡೆಯಲ್ಲಿ ಕವಿಯು "ನುತವೈಶ್ಯೋತ್ತಮ ಬಂಧುವರ್ಮರಚಿತಂ" ಎಂದು ಹೇಳಿಕೊಂಡಿರುವುದರಿಂದ ಈತನು ವೈಶ್ಯಜಾತಿಯವನೆಂದು ತಿಳಿಯಬರುತ್ತದೆ. ಈತನ ವಿಷಯವಾಗಿ ಇನ್ನೇನೂ ಹೆಚ್ಚಾಗಿ ಇದುವರೆಗೆ ತಿಳಿಯದು. ಈತನು ಸುಮಾರು 1200ರಲ್ಲಿ ಇದ್ದಿರಬಹುದೆಂದು ಕೆಲವರು ಊಹಿಸುತ್ತಾರೆ.

ಚಂ|| ಸುರಧನುವೆಂತುಟಂತೆ ಪೊಳೆವುಜ್ಜಳಬುದ್ಬುದವೆಂತುಟಂತೆ ಪ |
ರ್ವರೆಯಿಂದವೆಂತುಟಂತೆ ಕಿಸುಗಂಜೆಯ ರಂಜನೆಯೆಂತುಟಂತೆ ಭೂ |
ಧರನದಿಯೆಂತುಟಂತೆ ಮುಗಿಲಿಂದ್ರಣದಾಕೃತಿಯೆಂತುಟಂತೆ ಮ |
ಸ್ಥಿರಮಲ್ತನುವುಂ ಕಳತ್ರಜನಮುಂ ಧನಮುಂ ಬಗೆವಂತು ನೋಳ್ಪೊಡಂ ||

ಕಂ|| ಅಱಿಯುಱಿಯೆ ನೋಡನೋಡ |
ಲ್ಕಱಿವರು ಮಾರ್ಪವರು ಮೊದಲೆ ಬಂದಿರೆಯಿರೆ ಕಿ ||
ಕ್ಕಱಿಗಱಿದು ಬಳಸಿ ನಂಟರ್ |
ಮೊಱೆಯಿಡೆಯಿಡೆ ಬಗೆಯದಸುವನಂತಕನುಯ್ವಂ ||೧೭೨||

ಎಂದಿಂಗವೆಮಗೆ ಸಾವಿ |
ಲ್ಲೆಂದಿರ್ಪ ಜರಾಮರರ್ಕಳಂತಿರೆ ಬೞಿಕೆ ||
ಪರ್ಗಂಪಮಿದು ಪ್ರೊಲ್ಲ ತೊಟ್ಟನೆ |
ಬಂದಪಸುವ ಜವನನವನನಾವಂ ಕಾವಂ ||೧೭೩||

ಸಿಲ್ಲದುದುಮನೆಂತುಂ ನಿನ |
ಗಲ್ಲದುದುಮನೋವಿ ತಾರದೊಡೆ ಕಾಲದೊಳಂ ||
ಬಿಲ್ಲದುದುಮನಂತ್ಯದೊಳೂಡ |
ಸಲ್ಲದುದುಮನಱಿದು ಧನಮನೆನಗೆನುತಿರ್ಪಾ ||೧೭೪||

ಚಂ|| ಪಡೆಯ ಮೊದಲ್ ಪರಾಭವದ ಮುತ್ತಮೊದಲ್ ಖಳಮೋಹರಾಜನಂ |
ಬಡಿಸನ ಬಾಳ್ಕೆಮೊದಲ್ ಬಳೆವ ಕರ್ಮದ ಬಿತ್ತುಮೊದಲ್ ನಿತಾಂತಮಂ |

ದಱಿಪುವ ಕಾವ ಪೆರ್ಚಿಸುವ ಚಿಂತೆಯನರ್ಥದೊಳಂಟುಮಾಡದೊ|
ಳ್ಪಱಿಯದೆ ಮೋಹಮಂ ಬಿಸುಟು ಮಾನಸರಿಲ್ಲಿಯೆ ದೇವರಲ್ಲರೇ ||೯೩೫||

ಕಂ|| ಸಾರಂ ಸಂಸಾರಕ್ಕಾ |
ಧಾರಂ ಸಲೆ ದೇಹಿಗೆಂತು ಮೋರೊಂದೆಡೆಯೊಳ್ ||
ನೀರುಂ ಕೂಱುಂ ಕೊಲ್ವುವು |
ಬಾರಿಪರಾರಾನೆಗೊಲೆಯನುಗ್ರಾಂತಕನಾ ||೯೩೬||

ಚಂ|| ಬಡಮೆಯನುಂಟುಮಾಡಿ ಬಱಿಕೊಯ್ವನೆ ಧರ್ಮದನಪ್ಪನಿಲ್ಲದಂ|
ತೊಡರಿಪೆನೀಗಳೆಂಬ ಬಗೆ ಪೊಲ್ಲದು ಸಲ್ಲದು ಮೃತ್ಯುವೆಂಬವಂ |
ಪಡೆವಿನಮಿರ್ಪ ನಲ್ಲನೆಡೆಯೊಳ್ ಪೊಡೆದಿಕ್ಕುಗು ಮುಳ್ಳ ಪಾಂಗಿನೊಳ್|
ತಡೆಯದೆ ಧರ್ಮದೊಳ್ ನೆಗಱಿವೆಂಬುದು ಗೋಸಣೆ ಜೈನಮಾರ್ಗದೊಳ್||

ಕಂ|| ಮುತ್ತನಿವಂ ಕೂಸಿವನು |
ದ್ವೃತ್ತನಿವಂ ತಕ್ಕನಿವನಿವಂ ಖಳನಿವನ ||
ತ್ಯೃತ್ತಮನೆಂದಿಂತು ಮದೋ |
ನ್ಮತ್ತಂ ಬಗೆದಪನೆ ಬಗೆಯನಂತಕರಾಜಂ ||೯೩೮||

ಶಾ|| ಪಟ್ಟಂಗಟ್ಟಿದನೆಂಗುಮೋ ಬಡವನೀಂ ಪೋಬರ್ದುಮಾಯೆಂಗುಮೋ |
ಕಟ್ಟಾಳೆಂಗುಮೊ ಪಂದೆಯೆಂದು ಕಡೆಗಣ್ಚುತ್ತಿರ್ಕುಮೋ ಲೋಭಿ ನೀಂ |
ಮುಟ್ಟಂದಿರ್ಕುಮೊ ಜಾನಿ ಮೆಚ್ಚಿದನಿವಂ ಬಾಳ್ಗೆಂಗುಮೋ ಕಮ್ಮನೇ |
ಗೆಟ್ಟತ್ತೆಂಬವೊಲಟ್ಟಿಕೊಂದಪನಿವಂ ಮಾಯಾಂತಕಂ ಪಾತಕಂ ||೯೩೯||
ನೋವಂ ಮಾಡದಿರಂಗಮೊಳ್ಪನೊಳಕೊಳ್ ಮೆಳ್ಪಟ್ಟೊಡೇಂ ನಿನ್ನನಾರ್|
ಕಾವರ್ ನೀಂ ಜವನೆಂಬ ರಕ್ಕಸನ ಪೆರ್ವಾಯೊಳ್ ಮಹೋಗ್ರಾಗ್ರದೊಳ್|
ಸಾವರ್ ಪುಟ್ಟುವರೆಂಬ ದಾಡೆಯೆಡೆಯೊಳ್ ಸಿಕ್ಕಿರ್ದ ಯಿಂತಿರ್ದುಮೇಂ |
ಜೀವಾ ನೆಟ್ಟನೆ ಮೆಲ್ಲದನ್ನೆವರೆಗಂ ಬೇಗಂ ನೆಗಱ್ ಧರ್ಮದೊಳ್ ||೯೪೦||

ಕಂ|| ಇದು ಪೊಲ್ಲದೊಳ್ಳಿತೆಂದಂ |
ತದನಱಿಯದೆ ನೆಗಱ್ದು ಕೆಟ್ಟೆಯಿನ್ನುಂ ನಿನಗ ||
ಪ್ಪುದನಱಿದೊಳ್ಪಂ ಕೈಕೊ |
ಳ್ಳದೊ ಡಂತಕಜಠರದಹನನಳುರದೆ ಬೇಗಂ ||೯೪೧||

ಮ|| ತಿರಿದೀ ಸಂಸೃತಿಯೆಂಬ ಪೇರಡವಿಯೊಳ್ ದುಃಖಾಗ್ನಿ ನಿನ್ನಂ ನಿರಂ |
ತರಮಾಳುತ್ತಿರೆ ಬೆಂದು ನೊಂದು ನವೆಯುತ್ತುತ್ತಾನುಮೋರೊರ್ಮೆ ನೀಂ|
ಕುರುಡಂ ಲಾವಗೆ ಮೆಟ್ಟಿದಂತೆ ದೊರೆಕೊಂಡಿರ್ದಲ್ಪಸೌಖ್ಯಕ್ಕೆ ಮು |
ಚ್ಚಿರದಿರ್ ಮೆಳ್ಪಡದಿರ್ ತೊಡಂಕಿ ಕಿಡದಿರ್ ದುರ್ಮೋಹದಿಂ ಜೀವನೇ ||೯೪೨||

## 45. ದೇಹಾನಿತ್ಯತೆ.

(ಇದು ರನ್ನನ ಅಜಿತನಾಥಪುರಾಣದಿಂದ ಉದ್ಧೃತವಾಗಿದೆ. 15ನೆಯ ಪುಟವನ್ನು ನೋಡು)

ಕಂ|| ಮತಿಗೆಟ್ಟು ಜೀವ ಧರ್ಮಾ|
ಮೃತಮಂ ಸೇವಿಸದಧರ್ಮಮಂ ಸೇವಿಸಿ ದು||
ರ್ಗತಿಗಿೞದಾ ಜವನೆಂಬಱ|
ಸಿತಿಂಬ ದೈವಕ್ಕೆ ಪೋಗಿ ಪಾೞಂ ಬಡುವಾ ||೧೮೩||

ತನು ತಾಳಲಾಱದನ್ನೆಗ|
ಮನಸುಂ ನೀನದಱೊಳಾತ್ಮಶಕ್ತಿಕ್ಷಯಮು||
ಪ್ಪಿನೆಗಮಿರಲಕ್ಕುಮೇ ಕಳಿ|
ದ ನೀಗೆರ್ ಬಂದಪುದೆ ಬೞಿಕೆ ಜರಗಂ ಕರ್ಚಲ್ ||೧೮೪||

ಎನಿತೆನಿತು ಕಳೆದ ಭವಮುಂ|
ನೆನೆವಡೆ ಯೆನಿತೆನಿತು ಭವದ ಬಂಧುಗಳಂ ನೀಂ||
ನೆನೆವಡೆ ಯೆನಿತೆನಿತೊಡಲಂ|
ನೆನೆವಡೆ ಯೆಲೆ ಜೀವ ನೀನೆ ಪೇೞ್ ಪವಣೊಳವೇ ||೧೮೫||

ಎನಿತಂ ಕುಕ್ಕುಳಗುದಿದಪೆ|
ಯೆನಿತಂ ಕಕ್ಕಳನೆ ಕಾಲ್ದಪ್ಪೈ ಜೀವನೆ ನೀ||
ನೆನಿತಂ ಮುಮ್ಮುಲಮುಱುಗುವೆ|
ಯೆನಿತಂ ಸಂಸಾರದೊಳಗೆ ತಿರ್ರನೆ ತಿಱಿವೈ ||೧೮೬||

ಕಡೆಯಿಲ್ಲದ ಸಂಸಾರದ|
ಕಡೆಗಾಣಲ್ಬಗೆವಯಪ್ಪೊಡೆನ್ನುಕ್ತಿಗೊಡಂ||
ಬಡು ಜೀವ ನಿನ್ನ ಕಾಲಂ|
ಪಿಡಿವಂ ಧರ್ಮಮನೆ ಮಗುೞೆ ಬಲ್ವಿಡಿವಿಡಿಯಾ ||೧೮೭||

ಕಂ|| ಪೊಲ್ಲಮೆ ಪರಮತದೊಳ್ ಫಲ|
ಮಿಲ್ಲವೆಱೊಳ್ ತೊಡರ್ದು ಕಿಡಿದಿರಲೆ ಜೀವನೆ ನೀ||

ನಲ್ಲಿಯುಂ ತೊಡರ್ವರ್ ತಿಂಬರ |
ನಲ್ಲದೆ ಕುಱಿ ಮೆಚ್ಚದೆಂಬ ನುಡಿ ತಪ್ಪುಗುಮೇ ||೯೮೮||

ಜನನ ಮೃತಿ ದೇವ ನಾರಕ |
ಮನುಷ್ಯ ತಿರ್ಯಗ್ವಿಕಲ್ಪಗತಿಗಳೊಳನಸುಂ ||
ನಿನಗೆ ಸುಖಮಿಲ್ಲ ನೆಟ್ಟನೆ |
ಮನದೊಳ್ ಭಾವಿಪೊಡಸಾರಮೀ ಸಂಸಾರಂ ||೯೮೯||

ಪುಸಿ ಕೊಲೆ ಕಳವು ಪರಸ್ತ್ರೀ |
ವ್ಯಸನಂ ಬಹುವಿಧಪರಿಗ್ರಹಂ ನರರಂ ಬಂ ||
ಧಿಸಲೀ ಭವಾಬ್ಧಿಯೊಳಗ |
ದ್ದಿಸಲಾರ್ಕುಂ ದ್ಯೂತಮದ್ಯಮಾಂಸವ್ಯಸನಂ ||೯೯೦||

ಜವನಟ್ಟೆ ಕೊಲ್ವ ಕೊಲೆಗಾ |
ಜವಂಜವಸ್ಥಿತಿಗೆ ಮುಯ್ಯುಸೀರ್ ತೆಗವನ್ನಂ ||
ಜವಜವಮನಲಂಜಿಸುವುವು |
ಜವನಾಳ್ಗಳ್ ತೆಱದಿನೆನ್ನ ಕನ್ನೆಯುಂ ನರೆಗಳ್ ||೯೯೧||

ಬಡಿವ ಪಿಡಿದುಡಿವ ಕಟ್ಟುವ |
ಜಡಿದು ಕರಂ ಬೈದು ನುಡಿವ ನೋಯಿಪ ತೊಡರಂ ||
ತೊಡರಿಸುವ ನರಕಗತಿಯೊಳ್ |
ತೊಡರ್ವುದೆ ತೊಡರದೆ ಜಿನೇಂದ್ರಮತದೊಳ್ ಹಿತದೊಳ್ ||

ಪಱುವ ಪೇಱುವ ಮೂಗಿನೊ |
ಳೂಱುವ ಮಣಿಗಟ್ಟಿ ತೋಱುವುಯ್ದಂಗಡಿಯೊಳ್ ||
ಮಾಱುವ ತಿರ್ಯಗ್ಗತಿವುಗ |
ಲಾಱದೆ ನರಕಕ್ಕೆ ಬಿಱುಸುವೆಗ್ಗರುಮೊಳರೇ ||೯೯೩||

ಎಱೆಯಂಗೆ ಬೇಯು ದೇವಂ |
ದೆಱಗುವುದಾಯುಃಪ್ರಮಾಣದಡಿಗಾಣಲೊಡಂ ||
ಮುಱುಗುವುದಂಗಜಶರದಿಂ |
ಕಱುಗುವುದೆನೆ ದೇವಗತಿಯೊಳೇಂ ಸುಖಮುಂಟೇ ||೯೯೪||

ಈ ನಾರಕ ತಿರ್ಯಗ್ಗತಿ ।
ಗೀ ನರಸುರಗತಿಗೆ ಪೇಸಿದೆಂ ದರ್ಶನದಿಂ ॥
ಜ್ಞಾನದಿನೊಪ್ಪುವ ಪರಮ ।
ಸ್ಥಾನವನಾಂ ಪಡೆವೆನಕ್ಕೆ ಪಂಚಮಗತಿಯಂ ॥೯೯೫॥

ಶಿಷ್ಟಜನಾಶಿಷ್ಟಂ ಬಹು ।
ಕಷ್ಟಂ ಬಹುದುಷ್ಟಮಷ್ಟಕರ್ಮಾಗ್ನಿ ಪರಿ ॥
ಪ್ಲುಷ್ಟಂ ಹಾ ಹಾ ಧಿಕ್ ಛೀ ।
ಕಷ್ಟ ಮನಶ್ಯಂ ನಿಕೃಷ್ಟಮಿ ಸಂಸಾರಂ ॥೯೯೬॥

ಅಂಗನೆಯರ್ಕಳ ಸವತಿ ಜ ।
ರಾಂಗನೆ ತಾನವರ ಸವತಿ ಸಂದಿರ್ದ ಸಿಯ ॥
ತ್ಯಂಗನೆ ತಾಂ ಸವತಿಯುವೋಲ್ ।
ಪಿಂಗಿಸಿ ಪುದುವಾಳ್ವನಕ್ಕೆ ಮುಕ್ತ್ಯಂಗನೆಯೊಳ್ ॥೯೯೭॥

ಕಂ॥ ಮುಱಿತುಂ ಸಮಿಱಿಸುವೆ ಗಾ ।
ಪಿಱಿದಪ್ಪವರಿಪ್ಪೊರ್ಡಿರ್ಕೆ ಮುಳ್ಪಟ್ಟು ಜವಂ ॥
ಕಾಲೆ ಕಾವರೊಳರೆ ಧರ್ಮಮ ।
ತಱಗಾಗುಂ ಧರ್ಮಮಧರ್ಮಮುಭಯಭವಕ್ಕಂ ॥೯೯೮॥

ಮೇಲೆನಿಸುವ ಜಿನಧರ್ಮಂ ।
ಪೋಲದು ಪೆಱಪೆಱರ ಪೇಳ್ವ ಧರ್ಮದ ತೆಱನಂ ॥
ಪಾಲೆಂಬ ತೆಱದೆ ಪಸುವಿನ ।
ಪಾಲಂ ಪೋಲ್ತಪುವೆ ನಾಯ ಕಳ್ಳಿಯ ಪಾಲ್ಗಳ್ ॥೯೯೯॥

ಊಟದಿನಾಟದಿನೊಪ್ಪುವ ।
ಪಾಟದಿ ನಾಱಿಸುವ ತೀಟದಿಂ ಕಂಪಿನ ಕೈ ॥
ಗೂಟದ ನಪ್ಪ ಸುಖಂಗಳ ।
ಪಾಟಿಸದ ಸುಖಂಗಳಿಂದ್ರಿಯಂಗಳ ದೆಸೆಯಿಂ ॥೧೦೦೦॥

ಸೆಱೆಯುಱುವ ನೆಱೆಯ ಕಾಂಕ್ಷೆ ।
ತೆಱದಿಂ ಸಮಸಂದು ಸಂದತೀಂದ್ರಿಯಸುಖದ ॥

ತ್ತೆಱಗದೆನಿಂ ವಿಷಯಸುಖ ।
ಕ್ಕೆಱಗೆಂ ಪೆಱಕೆಯ್ದ ಕುತ್ತಮೆಱೆವೆಂತುಱೆವೆಂ ||೧೦೦೧||

ಆಧಿಗಳುಮನೇಕವಿಧ ।
ವ್ಯಾಧಿಗಳುಂ ಬಾಧಿಸುತ್ತುಮಿರೆ ನರಜನ್ಮಂ ॥
ಭೋಧಿಯೊಳಗಱ್ದು ದುರಿತವಿ ।
ರೋಧಿಗಳಳ್ಳೞಿಯೊಳಳ್ಳವಿಳ್ಳಯನಾದೆಂ ||೧೦೦೨||

ಕರಗುವ ಮುಗಿಲಂ ಕನ್ನೆಯ ।
ನೆರೆಯಂ ಕಂಡನಿತಱಿಂ ಕೆಲರ್ ಪರಮತಪೋ ॥
ಭರದೊಳ್ ನೆಗೞ್ದರ್ ನೆಗೞಲ್ ।
ಗುರು ಬಂಧು ಪ್ರಿಯವಿಯೋಗಮಂ ಕಂಡು ಕೆಲರ್ ||೧೦೦೩||

ನರೆ ಜರೆ ವೈರಾಗ್ಯಂಗಳ್ ।
ದೊರೆಕೊಂಡೊಡೆ ತೋಱುವವೆಂಬ ರನ್ನವರಂ ಸ್ಯ ॥
ತಿರಲೀಯದಂತಕಂ ಗೋ ।
ಣ್ಮುರಿಗೊಂಡೆಳೆದುಯ್ದೊಡಡ್ಡವರ್ಪರುಮೊಳರೇ ||೧೦೦೪||

ಕುಸುಮಾಸ್ತ್ರಗಜಂ ಬೆಂಕೊಳ ।
ಬಿಸುಟಂ ಕಡಿಕೆಯ್ದು ತಪಮನೊಳಕೊಂಡಿರ್ದ ॥
ರ್ದೆಸೆಯೊಳಡಂಗದೆ ಬಸನದ ।
ಬಸದಿಂ ತಲೆದೋಱೆ ತೋಱದಿರ್ಪುಮೆ ಕೊಲೆಯುಂ ||೧೦೦೫||

ಮದನಮದೇಭಂ ಕಡುಕೆ ।
ಯ್ಯದನ್ನಗಂ ಸಲ್ಗುಮಾರ ಬೀರಂಗಳುಮಂ ॥
ತದು ಕಡುಪಿಂ ಪಂಚತೆಯಾ ।
ಗದೆ ಮಾಣ್ಗುಮೆ ವಶಗತಂಗೆ ಪಂಚೇಂದ್ರಿಯದಾ ||೧೦೦೬||

ಮನದ ಬೞಿವೞಿಯೊಳಾಡುವ ।
ಮನತಿಂದ್ರಿಯಗುಣಮನನಿತುಮಂ ಗೆಲಲಾರ್ಕುಂ ॥
ಮನಮಂ ಗೆಲ್ದೊಡೆ ನಾಯಕ ।
ನನಗೆಲ್ದೊಡೆ ಪಂಚತಂತ್ರಮಂ ಗೆಲಲರಿದೇ ||೧೦೦೭||

ಕಂ|| ಜಿನವಂದನಸಮಯದೊಳಂ |
ದಿನಿಸಾನುಂ ಬೇಗಮಿರಿಸದಿರಲೊಂದೆಡೆಯೊಳ್ ||
ಮನ ಮದುವೆ ಬಹುಪರಿಗ್ರಹ |
ವಿನೋದದೊಳ್ ತೊಡರ್ದ ಜಡರ್ಗೆ ಸಯ್ತಿರ್ದಪುದೇ ||೧೦೦೮||
ನುಡಿಯದೆ ನೋಡದೆ ಕೇಳದೆ |
ಮಿಡುಕದೆ ಸಮತೆಯೊಳ್ ಸಂಯಮಂ ಬೆರಸಿರೆ ಬಂ ||
ದಡಿಗಡಿಗೆ ಧರ್ಮಶುಕ್ಲ |
ಕ್ಕೆಡೆಗುಡದೆಡೆವುಗುಗುಮಾರ್ತರೌದ್ರಧ್ಯಾನಂ ||೧೦೦೯||
ಒಡಲಂ ದಂಡಿಸಿ ತಪದೊಳ್ |
ನಡೆವ ತಪಸ್ವಿಗಳುಮೆಯ್ದೆ ಮನಮಂ ತೆಗಳಲ್ ||
ಪಡೆಯರೆನೆ ಚಪಳರಕ್ಕಟ |
ಪಡೆದಪರೆ ಗೃಹಸ್ಥರೆಂತೊ ಸರ್ವಾವಸ್ಥೆ ||೧೦೧೦||
ಭವಭವದೊಳ್ ಪೆರ್ಚಿದ ಕೆ |
ಚ್ಚುಪಿರ್ದ ಮಿಥ್ಯಾತ್ವದವರ್ಗೆ ಜಿನಧರ್ಮಕಥಾ ||
ಶ್ರವಣಂ ಪ್ರೈತ್ತಿಕಮಾಗಿ |
ಪರ್ವಂಗೆ ಪಾಲ್ ಕಯ್ಪಿಯುಪ್ಪವೋಲ್ ಕಯ್ಪು ವಲಂ ||೧೦೧೧||
ಬಳಕಣ್ಬಿರ್ದಪ್ರು ಕಣ್ ಬಾಯ್ |
ಬಳಯಾಯಿತ್ತಳಿಪುವತ್ತಮೆಳಪೋಪಿನೆಗಂ ||
ಬಳಸಿ ಬಲವೆಂದು ನೋಡುವೆ |
ಯುಳವೆಂಡಿರನವರೊಳಜ್ಜ ನಿನಗೇಂ ಕಜ್ಜಂ ||೧೦೧೨||
ಕೆನ್ನೆಯು ನರೆಯುಂ ಕದಪಿನೊ |
ಳುನ್ನಸ್ನಂ ನೆಗೆವ ತೆರೆಯು ನೊಡ್ಡಿದ ಜರೆಯುಂ ||
ಕನ್ನಡಿಯು ನೋಡದಿರೆಯುಂ |
ಕನ್ನಡಿಕುಂ ವೃದ್ಧ ನೋಡ ನಿನ್ನಯ ಮೊಗಮಂ ||೧೦೧೩||
ಮುಸುಮೊಗಮಾಯ್ತು ಮೊಗಂ ಕಾ |
ಲ ಸತ್ತುಗಂ ಪೋಯ್ತು ಪಲ್ಗಳಳ್ಳಾಡಿದುವೇ ||
ಡಿಸುವಂತಿರ್ದಪುವಿನ್ನುಂ |
ಬಿಸುಡಿರೆ ನೀವಜ್ಜ ನಿಮ್ಮ ನಿರ್ಲಜ್ಜೆಕೆಯುಂ ||೧೦೧೪||

## 46. ತುಂಗಭದ್ರಾನದಿಯ ವರ್ಣನ.

ಈ ನದೀವರ್ಣನೆಯು ಸೋಮರಾಜನೆಂಬ ವೀರಶೈವಕವಿಯಿಂದ ರಚಿಸಲ್ಪಟ್ಟ ಶೃಂಗಾರಸಾರವೆಂಬ ಗ್ರಂಥದಲ್ಲಿ ದೊರೆಯುತ್ತದೆ ಇದು ಕುಮಾರಪಾಲ ಘೂರ್ಜರನ ಅಥವಾ ಉದ್ಭಟನಚರಿತ್ರೆಯಾದುದರಿಂದ ಈ ಗ್ರಂಥಕ್ಕೆ ಉದ್ಭಟ ಕಾವ್ಯ ಎಂಬ ಹೆಸರೂ ಉಂಟು ಇದರ ಬಂಧವು ಲಲಿತವಾಗಿದೆ. ಇವನ ಪಿತಪಿತಾಮಪ್ರಪಿತಾಮಹರಾದ ಇಂದುಶೇಖರ ರಾಯಣ ತಿರುಮಲರೆಂಬರು ಚಂದ್ರವಂಶೋತ್ಪನ್ನರಾದ ರಾಜರಾಗಿದ್ದರೆಂದು ಹೇಳಿಕೊಂಡಿರುವನಾದುದರಿಂದ ಈತನೂ ರಾಜನಾಗಿರಬಹುದು. ತಾನು ಶೃಂಗಾರಸಾರಗ್ರಂಥವನ್ನು ಶಾಲಿವಾಹನಶಕ 1144 ಚಿತ್ರಭಾನುವಿನಲ್ಲ (ಕ್ರಿ. ಶ. 1222) ಬರೆದಂತೆ ಅದರಲ್ಲಿ ಹೇಳಿಕೊಂಡಿರುತ್ತಾನೆ.

ಕಂ|| ಸುಳಿಯಿಂ ಬುದ್ಬುದದಿಂ ಪೊ |
ನ್ನಳ ಸೊಂಪಿಂ ಕಿಱುದೆರೆಗಳ ಚಲ್ವಿಂದೆ ಸಮು ||
ಜ್ಜ್ವಳಶೀಕರತತಿಯಿಂ ಕ |
ಣ್ಗೊಳಿಸಿದುದಾ ತುಂಗಭದ್ರೆ ತುಳ್ಕುತೆ ಸೊಗಸಂ ||೧೦೦೩||

### ಲಲಿತ ರಗಳೆ.

ಮಡುಗಳೊಳ್ ಪೊಣ್ಮಿ ಮುರಿಗೊಂಡೇಳ್ವ ಸುಳಿಗಳಿಂ |
ಬಿಡದೆ ತೀಡುವ ತಂಬೆಲರಿನೊಗೆವ ವಳಿಗಳಿಂ ||
ತೆರೆವೊಯ್ಲಿನಿಂ ಚಿಮ್ಮುವಂಬುಕಣಜಾಲದಿಂ |
ಭರದಿ ತಾಂಗಲ್ ಮಿಾಂಗಳೊಗೆವ ಕಲ್ಲೋಲದಿಂ ||
ವೀಚಿಯು ಪೊಯಿಲ್ಗಳೆಡೆ ಸಿಲ್ಕುವೆಳಮಿಾನ್ಗಳಿಂ |
ವೀಚಿಗಳನೊಡೆದುರ್ಬಿ ಪರಿವ ಬಲ್ಮೀನ್ಗಳಿಂ ||
ಫುಟನೆಗೆದು ಮಗುಟಿಟಿವ ಚಿಳಿಚಿಮಾನೀಕದಿಂ |
ಲಟಕಟಿಸಿ ನಲಿದಾಡುತಿರ್ಪ ನವಕೋಕದಿಂ ||
ಕಂಜಮಿತ್ರನ ಬೆಂಗದಿರ್ಗಳಳವಂ ಕಂಡು |
ಮಂಜುಳತರಾನಂದಮಂ ನಾಡೆ ಕೈಕೊಂಡು ||
ನಲಿದು ಕೂಗುವ ಚಕ್ರಯುತಕಂಜಪುಂಜದಿಂ |
ವಿಲಸದುದ್ವರ್ತ ವಿಮಲಾವರ್ತಪುಂಜದಿಂ ||
ಪೊಸತೆರೆಗಳೊಳ್ ಸಿಲ್ಕಿ ತೇಲ್ವ ಹಂಸಂಗಳಿಂ |
ಮಿಸುಪ ಮಡುಗಳೊಳಮರ್ದ ಬಾಲಹಂಸಂಗಳಿಂ ||

ತತ್ತಟಂ ಬಿಡಿದೆಸೆವ ಚಾರುದ್ರುಮಂಗಳಿಂ।
ಉತ್ತಮಸುಗಂಧಮಂ ಕುಡುವ ವೃಕ್ಷಂಗಳಿಂ॥
ಚೂಚಕಂಗಳ ಭರದಿ ನೊಂದಿನಿಸು ತೂಗುತುಂ।
ಪ್ರಾಚೀನಮಾದೆಲಗೊರ್ಲೆದೊಲೆದು ಬಾಗುತುಂ॥
ಕಣ್ಗೆ ಮಂಗಳಮಾದ ತೆಂಗುಗಳ ಸಾಲ್ಗಳಿಂ।
ತಣ್ಗಂಪನೀವ ಪೂವಲ್ಲಿಗಳ ಮೇಲ್ಗಳಿಂ॥
ಫಳಮಂಜರೀಭರ ವಿನಮಿತಪೂಗಂಗಳಿಂ।
ಮಿಳಿರ್ವಕುಹಳಾನೀಕಮಮರ್ದ ಪೂಗಂಗಳಿಂ॥
ಕಂಪುಂಡು ಸೊರ್ಕಿ ಸಲೆ ಬೀಳ್ವ ಮತ್ತಾಳಿಯಿಂ।
ಸೊಂಪಿನಲರ್ಗಳನಾಂತ ಸಂಪಗೆಗಳೋಳಿಯಿಂ॥
ಸಲ್ಲಲಿತಪಲ್ಲವಾವಳಿಯ ಕಡುಸೊಂಪಿನಿಂ।
ಮಲ್ಲಿಲಗೊರ್ಲೆವ ಸೆಳೆಗೊಂಬುಗಳಲಂಪಿನಿಂ॥
ನಸುಗಾಳಿಗೊಡೆನೊಸರ್ವ ಮಂಜುಳಫಲಂಗಳಿಂ।
ದೆಸೆದೆಸೆಗೆ ನಱುಗಂಪನೀವ ಕುಸುಮಂಗಳಿಂ॥
ಕಡುಸೊಂಪುವಡೆದೆಸೆವ ನವರಸಾಲಂಗಳಿಂ।
ಪಡವಡಿಚಿ ಮುರಂಬುಗುವ ಚಾರುಪನಸಂಗಳಿಂ॥
ನಳನಳಿಸಿ ಬೆಳೆದೆಸೆವ ರಸಬಾಳೆಯೋಳಿಯಿಂ।
ಪೊಳಪಡಾವೇನಮಂ ಪಸರಿಪ ಲತಾಳಿಯಿಂ॥
ಮಂಜುಳಫಲೋಚ್ಚಯಂ ನವಮಾದ ಕಿತ್ತಿಳೆಯಿಂ।
ರಂಜಿಸುವಲರ್ಗಳಮನರ್ ಕೇದಗೆಯಿಂ॥
ಕೋಶಾಂಕುರಮಂ ಪಸುರಪಚ್ಚೆ ಪುಷ್ಪಂಗಳಿಂ।
ಮಾಣಿಪಂತೆಸೆವ ರಾಜಾಸಮೂಹಂಗಳಿಂ॥
ತಳಿದು ಕಣ್ಗೊಳಿಪ ಕಂಕೇಳೀವಿತಾನದಿಂ।
ಫಳಭರಿತ ಕಮನೀಯ ವಿಟಪಿಗಳನೂನದಿಂ॥
ಪಾಟಳಿಗಳೆಸಕದಿಂ ನಿಂಬೆಗಳಳುಂಬದಿಂ।
ಮಾಟುವಡೆದೆಸೆವ ಸುರಹೊನ್ನೆಯ ಕದಂಬದಿಂ॥
ಪೊಚ್ಚ ಪೊಸಗಂಪಮರ್ದ ಚಂದನಕುಜಂಗಳಿಂ।
ಅಚ್ಚಿಗೊಳಿಸುವನಂತ ತಿಳಕದ ಕುಜಂಗಳಿಂ॥
ಪೂಸಗಂಪನುಂಡುರ್ಕಿ ಪೊಂಗಿ ಪೊಂಪುಳಿವೋಗಿ।
ಕುಸುಮಮಂಜರಿಗಳೊಳ್ ಪಟ್ಟಿರ್ದು ಸೊಂಪಾಗಿ॥
ಪೊದಬ್ಬಿ ನುಚ್ಚರವೆತ್ತಿ ಝುಂಕರಿಸುವಳಿಗಳಿಂ।

ಕದಳೀಫಲಂಗಳಂ ಸವಿದುಲಿವ ಗಿಳಿಗಳಿಂ ||
ದಾಳಿಂಬದೊಳ್ವಣ್ಣನೊಡೆದು ಚೆಮ್ಮೂಗಿಟ್ಟು |
ಹೇಳಲಳವಡದ ಸಲ್ಲೀಲೆಯೊಳಗಳವಟ್ಟು ||
ತೊರೆದೆಚ್ಚು ಪಾಯ್ವ ತನಿರಸಮನುಂಡುಱೆ ತಣಿದು |
ಪೊರೆಯೇಱಿ ಪೊಂಗಿ ತಚ್ಛಾಕಾಗ್ರದೊಳ್ ಕುಣಿದು ||
ಗಳಪುವರಗಿಳಿಯುಚ್ಚ ಪೊಚ್ಚ ಪುರುಳಿಗಳಿಂದೆ |
ತಳಿಗೊರ್ಂಚಲಂ ಕರ್ದುಕಿ ಯುರ್ಬಿ ಸಂತಸದಿಂದೆ ||
ಚೂತದೆಳಗೊಂಬ ನಡದುರ್ಲಿವ ಕೋಗಿಲೆಗಳಿಂ |
ನೂತನಲತಾಭವನದಮರ್ದ ಬಾಗಿಲುಗಳಿಂ ||
ಪೂಗೊಳಂಗಳೊಳಚ್ಚ ದಾವರೆಯೊಳಳವಟ್ಟು |
ರಾಗದಿಂ ನಲಿಯುತಂ ಮೂರ್ಛೆಯಂ ಮುಂದಿಟ್ಟು ||
ಮೆಲ್ಲನೆಚ್ಚತ್ತು ಸಂಚರಿಪ ಹಂಸಂಗಳಿಂ |
ನಿಲ್ಲದಾಡುವ ಮಂಜುಪಾರಾವತಂಗಳಿಂ ||
ಪೊಣರ್ವ ಪಿಂಛಗುಳಚ್ಛಮುಂ ಕದಱಿ ಮುದದಿಂದೆ |
ತಣಿವಿಲ್ಲದೊಲ್ದು ಕುಣಿವತುಲಕೇಕಿಗಳಿಂದೆ ||
ಸೊಂಪಮರ್ದ ಕಂಗೊಳಿಪ ಪೊಸಬನದಲಂಪಿನಿಂ |
ಪೆಂಪಮರ್ದ ಬೆಳೆದ ಕೇದಾರಂಗಳಿಂಪಿನಿಂ ||
ಚಂದ್ರಕಿರಣಸ್ಪರ್ಶನದಿನೊಗೆದು ಪರಿತರ್ಪ |
ಚಂದ್ರಕಾಂತದ ರಸಮನುಂಡು ಬೆಳೆದಸದರ್ಪ ||
ಮಂಜುಮಧುರೇಕ್ಷುವಾಟಿಗಳ ಪೊಸಲಂಪಿನಿಂ |
ರಂಜಿಸುವ ಪುಷ್ಪವಾಟಿಗಳ ಕಡುಸೊಂಪಿನಿಂ ||
ಅಳವಟ್ಟು ರಂಜಿಪಿರ್ತಡಿಗಳ ಬೆಡಂಗಿನಿಂ |
ತಿಳಿದು ಪರಿವಂಬುಧಾರಾಳಿಯ ಬೆಡಂಗಿನಿಂ ||
ಮುಟ್ಟದವರಂ ಮುಮುಕ್ಷುಗಳನುಱೆ ಮಾಡುತುಂ |
ಮೆಟ್ಟದವರಂ ಘನಪವಿತ್ರರಂ ಮಾಡುತುಂ ||
ರಂಜಿಸಿಮುದುರುಪುಣ್ಯದೊಬ್ಬುಳಿಯಲಂಪಿನಿಂ |
ಮಂಜುಳಾವೃತ ತುಂಗಭದ್ರೆ ಕಡುಸೊಂಪಿನಿಂ ||೧೧೬||

ಚಂ|| ಮಿಸುಪ ಘನಪ್ರವಾಹರವದಿಂ ತಟಸಂಸ್ಥಿತಮಾದ ತೋಂಟದೊಳ್ |
ಪಸರಿಸಿದಂಡಜಂಗಳುಲಿಯಿಂ ಕಿಱುಮೀನ್ಗಳಿಱಂಕೆವೋಯ್ಲದೊಂ |
ದೆಸಕದಿ ನುಣ್ಮಿ ಪೊಣ್ಮುವ ಲಸಜ ಲಸಂಜನಿತಪ್ರಣಾದದಿಂ |
ದೆಸೆದುದು ತುಂಗಭದ್ರೆ ನಿಜನಿಮ್ನಜಿತೋರುಸಮುದ್ರ ಪೆಂಪಿನಿಂ ||೧೧೭||

# ಪದ್ಯಸಾರಲಘುಟಿಪ್ಪಣಿ.

## 1. ಕರ್ನಾಟಕ ಭಾಷೆ.

೧. ಜನಪದಂ = ವಿಷಯಂ = ದೇಶಂ.

ನೋ. ನಿ.॥ ವಿಷಯೋಽಸ್ತ್ರೀಜನಪದೇದೇಶೇ ತಥಾಜನಪದೇಽಪಿಚ।
ಪ್ರಬಂಧಾಪ್ಯಸ್ಯಯೋಜ್ಞಾತ ಸ್ತತ್ರ ರೂಪಾದಿಕಂಪ್ರವರ್ತ॥

೨. ಕಿಸುವೊಳಲೆಂಬುದು ವಿಜಾಪುರದ ಡಿಸ್ಟ್ರಿಕ್ಟಿನಲ್ಲಿರುವ ಪಟ್ಟದಕಲ್ಲು. ಕೊಪಣನಗರವು ನಿಜಾಮರ ಬಳ್ಳಾರಿಗಳ ನಡುವೆ ಇರುವ ಕೊಪ್ಪಳವೆಂಬುದು. ಪುಲಿಗೆಱೆಯು ಧಾರವಾಡ ಡಿಸ್ಟ್ರಿಕ್ಟಿನಲ್ಲಿರುವ ಲಕ್ಷ್ಮೇಶ್ವರವು. ಒಂಕುಂದವು ಬೆಳಗಾವ ಡಿಸ್ಟ್ರಿಕ್ಟಿನಲ್ಲಿರುವುದು. ತಿರುಳ್ = ಸಾರಪ್ರದೇಶವು.

೩. ಕುಱಿತೋದದೆಯುಂ = ಗುರಿಮಾಡಿಟ್ಟು (ಉದ್ದೇಶಿಸಿ) ಓದದಿದ್ದರೂ. ಪರಿಣತ = ಪಕ್ವ.

೪. ಕಿಱುವಕ್ಕಳ್ ಶ. ದ 67; 181.

೫. ಪೂಣಿಗರ್ ಧಾ ಪೂಣ್—ಪ್ರತಿಜ್ಞಾಯಾಂ. ಕೆಡನುಡಿ = ದೂಷಿಸು.

೬. ಶಕುನಿ = ಪಕ್ಷಿ. (ಅರ್ಥಾಂತರ—ದುರ್ಯೋಧನನ ಸೋದರಮಾವ) ಅಪ್ರಗಲ್ಭಂ = ಪ್ರತಿಭೆಯಿಲ್ಲದವನು, ಅಜ್ಞನು. ಪ್ರವೃತ್ತಿ = ಬೀಕೆ. ನೆಗೞ್ದಂ—ಶ. ದ. 44; 227.

೭. ಗುಣಂ = ಶ್ಲೇಷಪ್ರಸಾದ ಸಮತಾದಿಗಳು. ದೋಷಂ = ಪದವಾಕ್ಯಾರ್ಥ ದೋಷಗಳು. ಗಣಿದಂ (ಧ್ವ) = ಎಣಿಕೆ, ತಾರತಮ್ಯಜ್ಞಾನ. ಅಕ್ಷುತ ಪ್ರಕೃತಿಜನಂ = ಶಾಸ್ತ್ರಜ್ಞಾನ ವಿಹೀನರು. ಇಂತಹರಿಗೆ ಸತ್ಯಕಾಭ್ಯವಹಾರಿಗಳು ಎಂದು ಹೆಸರು. ಪ್ರಣಯಂ = ಪ್ರೀತಿ.

೮. ಆಗಮ = (ಭಾಷಾ) ಶಾಸ್ತ್ರಂ. ಆಪ್ಪುದು. ಅಕ್ಕುಮ್. ಶ. ದ. 232. 242, 243.

೯. ನುಡಿವಲ್ಮೆ = ನುಡಿಯಬಲ್ಮೆ, ವಾಕ್ಚಾತುರ್ಯಂ ಶ. ದ. 67. ಪುರುಳ್ = ಪೆರ್ಗ್ಗಣಿ.

೧೦. ಪ್ರತಿಭಾವತ್ತ್ವಂ = ಅದೊಂದು ವಿಶೇಷವಾದ ಪ್ರಗಲ್ಭತೆ. ಅಕೃತಕ = ಸ್ವಭಾವಜನ್ಯ, ಸಹಜ. ಪ್ರತೀತಿ = ಖ್ಯಾತಿ. ವಿದಗ್ಧತೆ = ಪಾಂಡಿತ್ಯಂ. ತರ್ಕ್ಕಂ—ಶ. ದ. 227.

೧೧. ಬೇವಸಂ = ಚಿಂತೆ. ಬಳರೆ—ಶ. ದ. 244.

೧೨. ಪೆಂಪು = ಉನ್ನತಿ, ಅತಿಶಯಂ.

೧೪. ಕುಱಿವಂತು = ಗುರಿಯಿಟ್ಟಂತೆ. ಮಾತಱಿವಂ = ಭಾಷಾಚತುರಂ ವಾಗ್ಮಿ. ಅಱಿಪಲ್ಕೆಱೆವಾತಂ = ತಿಳಿಸಲ್ಸಮರ್ಥಂ.

೧೭. ಕವಿಪ್ರಧಾನರಾ ಕಾವ್ಯಂಗಳ ಶ. ದ. 117.

೧೮. ಸಾಮಯಿಕ = ಕವಿಸಂಕೇತಕ್ಕೆ ಸಂಬಂಧಿಸಿದ. (ಕಾವ್ಯಾವಲೋಕನ 5ನೆಯ ಅಧಿಕರಣವನ್ನು ನೋಡು). ನಾ॥ ಸಮಯಃಕಾಲ ಸಿದ್ಧಾಂತ ಪ್ರತಿಜ್ಞಾಶಪಥೇಷುಚ, ಸಂಕೇತಾಚಾರ ಯೋಶ್ಚ. ಸಿಕ್ತ್ರೀಯಸಮುಂ = ಮುಕ್ತಿಯುಂ. (ಸಿತರಾಂ + ಶ್ರೀಯಃ) ಇಲ್ಲಿ ರೂಪಹೇಗೆ?

೨೦. ತನ್ನಱಿವಂತೆ ಶ. ದ. 134.

---

## 2. ಕವಿತಾ ಪ್ರಶಂಸೆ.

೨೧. ದಿಗಂಬರಂ = ದಿಕ್ಕು ವಸ್ತ್ರವಾಗುಳ್ಳ, ಅರ್ಥಾಂತರ—ದಿಗಂಬರ ಜೈನಧರ್ಮ. ಅಳಱಿಸು = ಅಂಜಿಸು. ಇವಿಗಿಂತ ಕವಿದೊಡ್ಡವನೆಂಬರ್ಥವು ವ್ಯತಿರೇಕದಿಂದ ಹೇಳಲ್ಪಟ್ಟಿರುವುದು.

೨೨. ವಿಪರೀತತೆಯಿಂದೆ = ಅನ್ಯಥಾ ಬುದ್ಧಿಯಿಂದ, ಮಾತ್ಸರ್ಯದಿಂದ, ಅರ್ಥಾಂತರ—ಹಿಂದು ಮುಂದಾಗಿ. ವಿಲೋಮದೆ = ಬಲದಿಂದೆಡಕ್ಕೆ, ಹಿಂದು ಮುಂದಾಗಿ. ಪಂಪಕವಿ—ಆದಿ ಪುರಾಣವನ್ನು ಭಾರತವನ್ನು ರಚಿಸಿದನು. ಆತನ ಕಾಲ ಕ್ರಿ. ಶ. 941.

೨೪. ಬಿನ್ನಣಂ (ಪ್ರ) = ವಿಜ್ಞಾನಂ, ಜಾಣ್ಮೆ. ಕುಸುರಿ = ಹೂವಿನ ಕುಸುರಿನಂತಹ ಆಭರಣ ವಿಶೇಷಂ, ಶಬ್ದಾಲಂಕಾರ ಭೇದಂ. ಪೇಟಿಕೆಗಳೊಳ ಪೇಟಿಭೇದಂ (ಕಾವ್ಯಾವಲೋಕನಂ). ಗುಣಂ = ತಂತು; ಕಾವ್ಯಶೋಭಾಕರಧರ್ಮಂ, ಎಂದರೆ ಸಮಸಂಶ್ಲಿಷ್ಟಾದಿಗಳು. ಜಾತಿ = ಬಗೆ; ಸಾಹಿತ್ಯಭೇದಂ. ಬಂಧಂ = ಕಟ್ಟುವುದು; ಚಿತ್ರಬಂಧಾದಿಕಾವ್ಯಬಂಧಂ. ಪೊನ್ನಂ = ಶಾಂತಿ ಪುರಾಣವನ್ನು

ರಚಿಸಿದ ಕವಿ ಕ್ರಿ. ಶ. 950 ರನ್ನಂ=ಗದಾಯುದ್ಧವನ್ನೂ ಅಜಿತಪುರಾಣವನ್ನೂ ಬರೆದಾತನು ಕ್ರಿ. ಶ. 993. ಪೊನ್ನರನ್ನ ಶಬ್ದಗಳ ಶ್ಲೇಷೆ ಚಮತ್ಕಾರಿಕವಾಗಿದೆ.

೨೪. ಬಳಕೆಯುದ್ದು=ಪರಿಗ್ರಹಿಸಿ. ವಿಬುಧರ್=ದೇವತೆಗಳು; ವಿದ್ವಾಂಸರು. ಪ್ರಸಾದ=ಅನುಗ್ರಹ; ಕಾವ್ಯಗುಣವಿಶೇಷ. ಕಳೆ= ಪ್ರಕಾರ; ವಿದ್ಯೆ. ನಾಗಚಂದ್ರಂ=ರಾಮಚಂದ್ರ ಪುರಾಣವನ್ನು ಬರೆದ ಅಭಿನವಪಂಪನು ಕ್ರಿ. ಶ. 1105.

೨೫. ನೇಮಿ=ನೇಮಿಕವಿ ಕ್ರಿ ಶ. 1170; ಲೀಲಾವತಿಯನ್ನೂ ನೇಮಿನಾಥ ಪುರಾಣವನ್ನೂ ಬರೆದವನು; ಅರ್ಥಾಂತರಂ—ಚಕ್ರಾಂತಂ. ಸಮ್ಮುಗೆ= ಆಸರ, ಆಧಾರ. ಮತ್ತಿನ ಕವಿಯೆಂಬರೆ—ಉಳಿದ ಸಾಮಾನ್ಯಕವಿ ಎಂಬರ್ಥವು. ಮನೋರಥಂ=ಇಷ್ಟಾರ್ಥಂ; ಕೋರಿಕೆ ಯೆಂಬರ್ಥಂ.

೨೬. ಜನ್ನಂ=ಯಶೋಧರ ಚರಿತವನ್ನೂ ಅನಂತನಾಥ ಪುರಾಣವನ್ನೂ ಬರೆದಾತನು ಕ್ರಿ. ಶ. 1209.

೨೭. ಬೇರ್ವರಿದ=ರೂಢಮೂಲರಾದ, ಸಾರಂಗತರಾದ. ಸೀಮೆ=ಎಲ್ಲೆ, ಅವಧಿ.

೨೮. ಸುಂಪ್ಪರಿ=ಸೊಬಗು. ಸ್ನೃಪ್ರು=ನೇರ್ಪು. ಪಿಕ್ಕುವ=ವಿಂಗಡಿಸುವ, ಭೇದವನ್ನೆಣಿಸುವ. ಧಾ. ಪಿಕ್ಕು—ವಿವರಿಸೆ. ನಾದುಗಂ= ಗೋಜು, ತೊಡಕು, ಸಿಕ್ಕು.

೨೯. ರಸಂ=ವಿಭಾವಾನುಭಾವಾದಿಗಳಿಂದ ಸ್ಫುರಿಸುವ ಸ್ಥಾಯೀಭಾವಂ; ಶೃಂಗಾರಾದಿಗಳು. ಭಾವಂ=ಸ್ಥಾಯಿವ್ಯಭಿಚಾರೀಭಾವಂ. ರೀತಿ =ಪದಸಂಘಟನಾತಿಶಯಂ, ವಿದರ್ಭಪಾಂಚಾಲಗೌಡರೀತಿ. ದೇಸ =ಆಯಾ ಪ್ರದೇಶದ ಮಾತಿನ ಬಗೆ ಇದನ್ನು ಕೆಲವರು ದೇಶಿ ಎಂದು ಕರೆವರು.

೩೦. ಸುಮನಸ್ಸ್ಥಿತಿ=ಹೃದಯಂಗಮತ್ವಂ, ಅರ್ಥಾಂತರ—ಪುಷ್ಪಸ್ಥಿತಿ. ಮಾಲಾಕಾರಂ (ತ್ಸ)=ಮಾಲೆಗಾರಂ (ದ್ಭ.)

೩೧. ತನಿರಸಂ=ಪಕ್ವವಾದ ಕಬ್ಬಿನರಸಂ; ಶೃಂಗಾರಾದಿರಸಂ. ಕೊಂಕು =ಡೊಂಕು; ವಕ್ರೋಕ್ತಿ. ಗುಣಂ=ಬಿಲ್ಲಿನ ತಿರುವು; ಶ್ಲೇಷ ಪ್ರಸಾದಾದಿ ಕಾವ್ಯಗುಣಂ.

೩೨. ತಿಂಗಳ ಬೆಳತಿಗೆ ವೆಳಗಿನೊಳ್=ಚಂದ್ರನ ಶುಭ್ರಕಾಂತಿಯಲ್ಲಿ. ಇಂಗ ನಳ್ ಶ. ದ. 179. ಪಿಸಂತೆ=ಅದೇರೀತಿಯಲ್ಲಿ.

೩೩. ಮಿಡಿ = ಮಿಾಟು. ಧಾ. ಅಂಗುಲಿ ಪ್ರಹರಣೆ ಇತ್ತು ಎಂಬುದು ಇತ್ತ ಎಂದಿರಬೇಕು. ತಕ್ಕಿನ = ಉಚಿತವಾದ. ಬಂಟಿನ ನಂಟಿನಗ್ಗಳಿಕೆಯಿಂದೆ = ಆಶ್ರಯ ಬಲದಿಂದ ಇಲ್ಲಿನ ಬಾಂಧವ್ಯದ ದಾಕ್ಷಿಣ್ಯದಿಂದ. ಎಗ್ಗು = ಮೂರ್ಖಭಾವ, ಹೆಡ್ಡತನ. ಎಗ್ಗನೆಂದು ಹೆಡ್ಡಂ (ಕ. ಶಬ್ದಸಾರಂ). ಉರ್ವೆಬ್ಬಿ = ಗರ್ವದಿಂದ ಉದ್ಧತನಾಗಿ. ಗಾವಿಲಂ (ದ್ಭ) = ಗ್ರಾಮೀಣಂ, ಮೂಢಂ. ತೋಣ್ಡುವಸರ = ಉದ್ಧತ ನಾಮಧೇಯಂ, ಜಂಬದ ಬಿರುದು.

೩೪ ಪಾವಂ ತಲೆಗಂಡ ಪಂದೆಯಂದದೆ = ಹಾವಿನ ತಲೆಯನ್ನು ನೋಡಿದ ಮಾತ್ರದಿಂದ ಹೆದರಿದ ಹೇಡಿಯಂತೆ. ಜಗುೞ್ವ = ಕದ್ದೋಡುವ.

೩೫ ತಳ್ತೆಳವಟ್ಟಿರಲ್ = ಚೆನ್ನಾಗಿ ಅನುರೂಪವಾಗಿ ಎಂದರೆ ಹೊಂದಿಕೆಯಾಗಿರುವಂತೆ. ಅಲಂಕಾರಂ = ಉಪಮಾದ್ಯಲಂಕಾರಂ, ಹಾರಾದಿ ಭೂಷಣಂ. ಏವಾೞ್ತೆ = ಏನು ಪ್ರಯೋಜನ? ತೊೞ್ತು = ತೊತ್ತು, ದಾಸಿ. ಎರವು = ಎರವಲು, ಅಸಂಗತಂ.

೩೬. ಎರೆಯುಮಣ್ಗೆ = ಕಪ್ಪುಮಣ್ಣಿಗೆ. ಮೂಗುಂ ಕಿವಿಯುಂ ಎಂಬುದನ್ನು ಯಥಾಸಂಖ್ಯಕವಾಗಿ ಅನ್ವಯಿಸಿಕೊಳ್ಳಬೇಕು.

೩೭. ಕಾೞ್ಗೆಡೆದು = ದೂಷಿಸಿ. ಉಬ್ಬಟೆ = ಉನ್ನತಿ. ತೂರಲ್ಗೊಂಬು = ದೂರವ್ಯಾಪಿಸಿದಕೊಂಬು, ಶಾಖಾಗ್ರಂ. ಕುನುಂಗಿ = ಕುಗ್ಗಿ ಸಂಕೋಚನವನ್ನು ಪಡೆದು. ಬೆಂಬೀೞ್ವಂ = ಹಿಂಜರಿವಂ. ಪಕ್ಕ = ಆಸ್ಪದಂ.

೩೮. ಅಗಿ = ಅಂಜು. ಉಂತೆ = ಅದೊಂದು ಬಗೆಯಲ್ಲಿ, ಅದೊಂದು ವೈಖರಿಯಿಂದ. ಕರಭಂ = ಒಂಟೆಯಮರಿ (ಆನೆ ಮರಿಗೂ ಕರಭಂ ಎಂದು ಹೆಸರುಂಟು) ನಿಡುಗೊರಲ್ ಶ. ಸ. 181.

೩೯. ಸುವರ್ಣಂ = ಚಿನ್ನ, ಒಳ್ಳೆಯಕ್ಷರ.

೪೦. ಸುಮನಸ್ತವನೀಯಂ = ವಿದ್ವಾಂಸರಿಂದ ಹೊಗಳಿಸಿಕೊಳ್ಳತಕ್ಕ, ಪುಷ್ಪಗಳಿಂದ ಶ್ಲಾಘ್ಯಂ. ಜಱೆ = ತಿರಸ್ಕರಮಾಡು. ಧಾ. ಜಱೆ—ಆಕ್ರಮಣಾಲಾಪ. ಸ್ತಬಕಂ = ಹೂವಿನ ಗೊಂಚಲು. ಪ್ಲವಗಂ = ಕಪಿ (ಪ್ಲವೈರ್ಗಚ್ಛತಿ).

೪೧. ಢುಂಡುಬಿ = ಬುಡಬುಡಕೆ, ಡಮರು, ಢುಂಢುಮೆಂದು ಶಬ್ದಮಾಡುವ ವಾದ್ಯ. ಪೇರಿ + ಪಱೆ = ತಂಬಟೆ. ಬೀರನ = ಬೀರೇದೇವನ, ಬೀರಪ್ಪನ.

೪೨. ಮಚ್ಚರ. (ದ್ಭ) = ಮತ್ಸರ (ತ್ಸ). ಬಿರುದು—ರೂಪಶಬ್ದದಂತೆ ಕನ್ನಡದಲ್ಲಿ ಸಂಸ್ಕೃತ ಬಿರುದ ಶಬ್ದವು ಬಿರುದು ಎಂದಾಯ್ತು.

೪೩. ಅಣಲ್ = ದವಡೆ. ತೇಟ = ಚೇಳು.

೪೪. "ಬಗುಳುವನ ಬಾಯುಮುಗುಳ್ಗುಂ" ಎಂದರೆ ಬಾಯ್ಗೆ ಬಂದಂತೆ ಬಗುಳುತ್ತಿರುವನ ಬಾಯಲ್ಲಿ ಉಗುಳು ಉತ್ಪತ್ತಿಯಾಗುವುದೆಂಬುದೇ ಗಾದೆಯ ಅರ್ಥವು. ದುರಭಿಪ್ರಾಯವನ್ನು ಹರಟುತ್ತಿರುವ ದುಷ್ಟನ ಮುಖದಮೇಲೆ ಇತರರು ಉಗುಳಬೇಕೆಂಬುದು ಕವಿಯ ಅಭಿಪ್ರಾಯವು.

೪೫. ಬಿಡುವಾತು—ಶ. ದ. 184. ಕಂತೆವೊರೆದಂತೆ = ಕಸ್ತಬೊಸ್ತಯಾಗಿ ಜೋಡಿಸಿದಂತೆ. ಅಱಿಗಬ್ಬಂ = ಅಲ್ಪಕಾವ್ಯಂ, ನಿಸ್ಸಾರಕಾವ್ಯಂ. ಪೀಗು = ಉಬ್ಬು, ಗರ್ವಿಸು.

೪೬. ಎಸಕದ = ಖ್ಯಾತಿಯುಳ್ಳ. ಪೊಸತೇಂ = ಆಶ್ಚರ್ಯವೇನು? ಎಱೆ—ಧಾ. ಯಾಚ್ಞಾಯಾಂ. ಹೆಸರು ಮಾತ್ರ ಹಾಲಿನಯ್ಯ, ತಿರಿದುಂಬುದು ಕಂಬಲಿ ಎಂದಭಿಪ್ರಾಯವು. ಗಸಣಿ = ಜಂಜಡ, ಸಂಕಟ.

೪೭. ಸಗ್ಗಕೆ ಸುಧ ಸುರಭಿ ಅಗ್ಗದ ಮಧು, ವಸುಧಾತಲಕೆ ಮಧುರಕವೀಂದ್ರಕವಿತೆ ಅಗ್ಗದಮಧು—ಎಂದನ್ವಯಿಸುವುದು. ಅಧರಿತೆ = ಕೀೞ್ತನಂ. "ಪಡೆದಂ" ಕ್ರಿಯೆಗೆ "ವಿಧಿ" ಕರ್ತೃಪದವು.

೪೮. ಗೋಸಣೆ (ತ್ಭ.) = ಘೋಷಣಾ. ಕೇಳ್ದುಱಿಯಾ ಜಡಾ ಶ. ದ. 123.

೪೯. ಬಣ್ಣಣೆ (ತ್ಭ) = ವರ್ಣನ. ಅನ್ನದು ಇನ್ನದು = ಅಂತಹುದು, ಇಂತಹುದು. ಶ. ದ. 160. ಕಣ್ಣೆಲೆ = ಕಣ್ + ನೆಲೆ = ದೃಷ್ಟಿಗೆ ವಿಶ್ರಾಂತಿಸ್ಥಾನಂ, ವೃಕ್ಷಪ್ರದಂ ಎಂದರೆ ಅವಧ. ಕಳಾವಿಳಾಸನೆಂಬುದು ಮಧುರ ಕವಿಯ ಬಿರುದು.

೫೦. ಚದುರ = ಚತುರತೆಯು. ಬಂದ ಚೂತಂ = ಫಲಿತರಸಾಲಂ. ಕೊನರ್ = ಚಿಗುರು. ತಿಂಗಳ ಸೊಂಪು = ಚಂದ್ರಿಕಾಹ್ಲಾದಂ. ಪೊದೆ = ಬತ್ತಳಿಕೆ. ರಾಗದಾಗರಂ = ಅನುರಾಗದ ಖನಿ.

೫೧. ಪೊದೞ್ದುದು = ವ್ಯಾಪಿಸಿತು. ಪ್ರಮದವಂದುದು = ಬೆಸಗೂಡಿ ಬಂದಿತು.

೫೨. ಒಗಟಿಸಲ್ = ಒಕರಿಸಲ್, ಎಂದರೆ ಅಸಹ್ಯತೆಯನ್ನುಂಟುಮಾಡಲು. ಉಕ್ಕನದಿಂ = ಉತ್ಸಾಹದಿಂದ. ಪಡಿಗೆತ್ತು = ದ್ವಾರಬಂಧಮಾಡಿ ಭಾರತೀದೇವಿಯು ತನ್ನ ಕೈಯ ಅರಗಿಣಿಯಾಡುವ ಮಾತು ತನಗೆ ಅಸಹ್ಯತೆಯನ್ನುಂಟುಮಾಡಿದುದರಿಂದ, ತನ್ನ ರತ್ನದುಂಗುರವನ್ನು ಫಲಭ್ರಾಂತಿಯುಂಟಾಗುವಂತೆ ಆ ಗಿಣಿಯ ಬಾಯ್ಗೆ ಕುಟುಕೀವಂತೆ ಸಿಕ್ಕಿಸಿ ವಾಗ್ಬಂಧವನ್ನು ಮಾಡೆ ಮಧುರನ

ವಾಙ್ಮಾಧುರ್ಯವನ್ನು ರುಚಿನೋಡುತ್ತಿರುವಳೆಂದಭಿಪ್ರಾಯವು. ಶುಕವಚನಕ್ಕಿಂತ ಮಧುರನ ವಾಕ್ಕು ಮಧುರತರವೆಂಬುದು ಸಾರಾಂಶವು.

೫೩. ಮದಪ್ಲವಂ=ಮದೋದಕ ಪ್ರವಾಹಂ. ಸುಮುಖಂ=ಗಣಪತಿ. ಈತನಿಗೆ ಶೂರ್ಪಕರ್ಣಂ (ಮೊರಗಿವಿಯಂ) ಎಂಬುದು ನಾಮಾಂತರಂ.

೫೪. ಈ ಪದ್ಯದಲ್ಲಿ ಕವಿ ತನಗೆ ಹೇಳಿಕೊಂಡಿರುವ ವಿಶೇಷಣಗಳಲ್ಲಿ ತನಗಿಂತ ಮೊದಲಲ್ಲಿದ್ದ ಕೆಲವರು ಕವಿಗಳ ಹೆಸರುಗಳನ್ನು ಶ್ಲೇಷೆಯಿಂದ ತಿಳಿಸಿರುತ್ತಾನೆ. ಕವಿತಾಶ್ರೀಗೆ ಜನಾರ್ದನಂ=ಕವಿತ್ವವೆಂಬ ಲಕ್ಷ್ಮಿಗೆ ಗಂಡನಾದ ಜನಾರ್ದನಂ. ಜನಾರ್ದನ ಕವಿಯಿದ್ದ ಕಾಲ ತಿಳಿಯಲಿಲ್ಲ. ಪುರುಷರತ್ನಂ=ಪುರುಷಶ್ರೇಷ್ಠಂ. ರತ್ನಕವಿ ಕ್ರಿ. ಶ. 993. ಪುಷ್ಪದಂತಂ=(ಮೊಲ್ಲೆಯ) ಹೂವಿನಂತಹಹಲ್ಲುಳ್ಳವಂ. ಪುಷ್ಪದಂತಕವಿ ಕ್ರಿ. ಶ. 1350. ರಿಪುಪ್ರವರೋತ್ತುಂಗ ಗಜಾಂಕುಶಂ=ಪ್ರಬಲ ಶತ್ರುಗಳೆಂಬ ಉನ್ನತಗಜಗಳಿಗೆ ಅಂಕುಶದಂತಹವನು. ಗಜಾಂಕುಶ ಕವಿ ಕ್ರಿ. ಶ. 1050. ಮನಸಿಜಾಕಾರಂ=ಮನ್ಮಥನ ಆಕಾರದಂತಹ ಆಕಾರವುಳ್ಳವನು. ಮನಸಿಜಕವಿ ಕ್ರಿ. ಶ. 1140. ಸಭಾಮಧ್ಯಲಬ್ಧವರಶ್ರೀವಿಜಯಂ=ಸಭೆಯಲ್ಲಿ ಜಯಶ್ರೀಯನ್ನು ಪಡೆದವನು. ಶ್ರೀವಿಜಯಕವಿಕಾಲ ಗೊತ್ತಿಲ್ಲ. ಸಮಸ್ತಸುಜನೋತ್ತಂಸಂ=ಸಕಲ ಸುಜನರಿಗೂ ಶಿರೋಭೂಷಣಪ್ರಾಯಂ. ಸುಜನೋತ್ತಂಸ ಕವಿ ಕ್ರಿ. ಶ. 1180. ಯಶಶ್ಚಂದ್ರಂ=ಕೀರ್ತಿಯೆಂಬ ಚಂದ್ರನುಳ್ಳವಂ. ಚಂದ್ರಕವಿ ಕ್ರಿ. ಶ. 1350. ಉತ್ಸವಲೀಲಾರಥನೇಮಿ=ಉತ್ಸವಾರ್ಥವಾದ, ಕ್ರೀಡಾರಥಕ್ಕೆ ಚಕ್ರಾಂತದಂತಹವನು. ನೇಮಿಚಂದ್ರಕವಿ ಕ್ರಿ. ಶ. 1170.

---

## 3. ಸಮುದ್ರವರ್ಣನೆ.

೫೫. ಬಂದೆ=ಸೇತು ಬಂಧನಕ್ಕೆ ಮೊದಲು. ಜಡಭೂತಂ=ಬುದ್ಧಿಹೀನಂ; ನೀರಿನಿಂದ ತುಂಬಿದುದು.

೫೬. ಅಗ್ರಜರ=ಪೂರ್ವದೇವರಾದ ರಾಕ್ಷಸರು; ಮೊದಲಲ್ಲಿ ಹುಟ್ಟಿದ ದೊಡ್ಡ ಮೀನುಗಳು. ಅನಿಮಿಷರ=ದೇವತೆಗಳು; ಮೀನುಗಳು.

೫೭. ಧರ್ಮವಂ ಮಿಕ್ಕು, ಸೀತೆಯುಂ ಉಯ್ದು ಎಂದನ್ವಯವು. ಅಳಿದ= ಅಳಿದಂ. ಇದಕ್ಕೆ "ದಶಕಂಧರಂ" ಎಂಬುದು ಕರ್ತೃ. ಬಿತರ್ಪ=ಬರುವ. ಮೊಱೆವೊಕ್ಕವಂಗೆ=ಶರಣಾಗತನಾದ ವಿಭೀಷಣನಿಗೆ.

೫೮. ಭಂಗಕ್ಕೆ=ಕ್ಷೀಣತೆಗೆ. ಪಕ್ಕಾದವ್ಯ=ಭಾಜನನಾದನು. ಅರಸಿಯರ್=ಪತ್ನಿಯರು (ಇಲ್ಲಿ ನದಿಗಳು.) ಬಾನೇರ್ದಂ=ಆಕಾಶವನ್ನೇರಿದನು.

೫೯. ಕಾಕುತ್ಸ್ಥ—ಇದರ ಅವಯವಾರ್ಥವೇನು? ಅನಿಮಿಷಾಶ್ರಯಂ= (1) ಮೀನುಗಳಿಗೆ ಆಶ್ರಯವಾದುದು, (2) ದೇವತೆಗಳಿಗೆ ಆಶ್ರಯವಾದುದು.

೬೦. ಕೊಡಸನಣುಗನರಸಿ=ಅಗಸ್ತ್ಯನ ಪಂಡತಿ ಲೋಪಾಮುದ್ರೆ. ಅಗಸ್ತ್ಯರ್ಷಿಯು ದಕ್ಷಿಣದೇಶಕ್ಕೆ ಬಂದ ಮೇಲೆ ತನ್ನನ್ನು ಅಗಲ ಕೂಡದೆಂದು ಸಂಕೇತಮಾಡಿಕೊಂಡಿದ್ದ ಲೋಪಾಮುದ್ರೆಯು ಒಂದುದಿನ ಆತನು ಕಾರ್ಯಾಂತರಾಸಕ್ತನಾಗಿರಲು, ಕಮಂಡಲು ಜಲದಲ್ಲಿ ಪ್ರವೇಶಿಸಿ ಕಾವೇರೀನದಿಯ ರೂಪವಾಗಿ ಹರಿದು ಸಮುದ್ರವನ್ನಾಶ್ರಯಿಸಿದಳೆಂದು ಪುರಾಣಕಥೆಯು. ಜೀವನನುಂ=ಪ್ರಾಣವನ್ನು, ನೀರನ್ನು.

೬೧. ಶರಣರಕ್ಷಣೆಯೊಳ್—(1) ಮರೆಹೊಕ್ಕವರನ್ನು ಕಾಪಾಡುವುದರಲ್ಲಿ, 'ಸಮುದ್ರಪರವಾದ ಅರ್ಥವು'—(2) ಮೈನಾಕ ಪರ್ವತವನ್ನು ರಕ್ಷಿಸಿದುದು. ಗಂಭೀರಭಾವಂ=ಆಳ. (ಸಮುದ್ರಪರವಾದ ಅರ್ಥವು). ಸತ್ವಂ=1. ಬಲಂ 2. ಜಂತು. ವಾಹಿನೀ=1. ಸೇನೆ, 2. ನದಿ.

೬೨. ಧೂತಪಾಪೆ=ಹೋಗಲಾಡಿಸಲ್ಪಟ್ಟ ಪಾಪ ಉಳ್ಳವಳು. ಗೋತ್ರರಾಜಂ=ಪರ್ವತರಾಜನಾದ ಹಿಮವಂತಂ.

೬೩. ಭೂಭೃತ್ಕುಲಂ=1. ರಾಜಸಮೂಹಂ. 2. ಪರ್ವತಸಮೂಹಂ. ಘೂರ್ಣಿಸುವುದು=ಘೋಷ ಮಾಡುವುದು.

೬೪. ಜೀವನನು=ಪ್ರಾಣಂ, ನೀರು. ಅರ್ಥಾಂತರ ನ್ಯಾಸಾಲಂಕಾರಂ.

೬೫. ಇಲ್ಲಿ ಪ್ರಯೋಗಿಸಿರುವ ಜಲಪರ್ಯಾಯ ನಾಮಗಳ ಔಚಿತ್ಯವು ಬಹು ಚಮತ್ಕಾರವಾಗಿರುವುದು.

೬೬. ಉರ್ಚಿ=ಸೆಳೆದು. ಧಾ. ಉರ್ಚು—ಆಕರ್ಷಣೇ. ಮೆಯ್ಗರವ=ಅಡಗುವ. ರಾಜೀವಂ=ಒಂದು ಬಗೆಯಮೀನು. ಕರ್ಚಿ. ಧಾ.

ಕಟರ್ಚ=ಕ್ಷಾಳನೆ. ಇರ್ಬಡಿದ=ಎರಡುಕಡೆಗೆ ಸಿಡಿದ. ತಾನದಿಂ=ಎಡೆಯಿಂದ. ಸೆಗಳ್=1. ಖ್ಯಾತಿ. 2 ನಕ್ರಂ.

೬೭. ಪಟ್ಟುಗಿದು=ತಡೆಯಿಲ್ಲದೆ. ಬಾಳೆ=ಒಂದು ಬಗೆಯಮೀನು. ಮುಟ್ಟಿಪಿಸಿ=ಎಟಕಿಸಿಕೊಂಡು. ಕಟ್ಟೆಸಕದಿಂ=ಬಹಳ ಚೆಲ್ವಿನಿಂದ.

೬೮. ಗಿರಿಸುತಾ=1. ಪಾರ್ವತಿ. 2. ಗಂಗೆ. ಮಕರಕೇತನ=1. ಮಕರಧ್ವಜ. 2. ಮಕರಾವಾಸಸ್ಥಾನ. ಸರಸ್ವತಿ=1. ಸರಸ್ವತೀನದಿ. 2. ಸರಸ್ವತೀದೇವಿ. ಆತ್ಮಸಂಭವಂ=ಬ್ರಹ್ಮನು. ಲಾವಣ್ಯ=1. ಸೌಂದರ್ಯ 2. ಲವಣತ್ವವು. ಇಲ್ಲಿ ವಿರೋಧಾಭಾಸ ಶ್ಲೇಷಾಲಂಕಾರ ಸಂಸೃಷ್ಟಿ.

೬೯. ವಿರಿಚಿಯು= ಅಲೆಗಳ ಉಬ್ಬರ ವಿಳಿತಗಳು.

೭೦. ಹರಿ ಮಿಥುನದಿಂ=1. ಗಂಡು ಹೆಣ್ಣುಹಾವುಗಳಿಂದ, 2. ಸಿಂಹ ಮತ್ತು ಮಿಥುನರಾಶಿಗಳಿಂದ. ದ್ರೋಣಿ=1. ಕಪ್ಪೆ, 2. ವೃಶ್ಚಿಕರಾಶಿ. ತಿಮಿನಂಗಳ್=ತಿಮಿಶ್ರೇಷ್ಠಗಳು. ಧನುಷ್ಕೋಟಿ=ರಾಮೇಶ್ವರದ್ವೀಪದ ಬಳಿಯಲ್ಲಿರುವ ತೀರ್ಥ ವಿಶೇಷ. ಅತುಳವೃಷಕೆ=ಅಸದೃಶವಾದ ಪುಣ್ಯಕ್ಕೆ. ರಾಶಿ ರಾಶಿಯುಂ=ಮೇಷಾದಿ ರಾಶಿಗಳ ಗುಂಪನ್ನು. ಇಲ್ಲಿ ಅಮಿಮೇಷವೆಂಬ ಪದದಲ್ಲಿ ಮೇಷರಾಶಿಯೂ, ಧನುಷ್ಕೋಟಿಯೆಂಬ ಪದದಲ್ಲಿ ಧನೂರಾಶಿಯೂ, ಅತುಲವೃಷವೆಂಬ ಪದದಲ್ಲಿ ವೃಷಭರಾಶಿಯೂ ಸೂಚಿತವಾಗಿರುವುವು.

೭೧. ಭಂಗಸಂಗದೊಳ್=ಅಲೆಗಳ ಸಂಬಂಧದಿಂದ.

---

## 4. ವಿಜಯಯಾತ್ರಾದ್ರಿ ವರ್ಣನೆ.

೭೨. ರುಂದ್ರ=ದೊಡ್ಡದಾದ. ಪೊಡರ್ದ=ಹೊಳೆದು ಧಾ. ಪೊಡರ್—ಸ್ಫುರಣೇ.

೭೩. ಕಾಳವಂ=ಕತ್ತಲೆಯನ್ನು. ಜೊನ್ನಂ—(ತ್ಸ.) ಜ್ಯೋತ್ಸ್ನ.

೭೪. ಬಿಟೆ=ಬಿಸಿವು, ಸ್ರವಿಸುವಿಕೆ.

೭೫. ಬಡ್ಡಂಗಲ್ಲನ=ಬಂಡೆಯನ್ನೇ.

೭೬. ಕಷಣ=ಉಜ್ಜುವುದು. ಕೂಜತ್=ಶಬ್ದಮಾಡುತ್ತಿರುವ. ವಿಜಿಗೀಷು=ಜಯಿಸಲಿಚ್ಛೆಯುಳ್ಳದು. ಅರ್ಥಾಂತರನ್ಯಾಸಾಲಂಕಾರಂ.

೭೭. ಮಸ್ತಿಷ್ಕ=ತಲೆಯಮಿದುಳು. ಲಂಘನಂ=1. ಹಾರುವುದು, 2. ಆ

ಹಾರ ಬಿಡುವುದು. ಖಗನಗದಾ...ಶ. ದ. 117ನೇ ಸೂತ್ರ ನೋಡು.

೭೮. ಸ್ರೋತಸ್ಸುಂದರಪುಷ್ಕರಂ = 1. ನೀರಿನಿಂದ ಮನೋಹರವಾದ ಕೊಳಗಳುಳ್ಳ, (2) ಹರಿಯುತ್ತಿರುವ ನೀರಿನಿಂದ ಮನೋಹರವಾದ ಸೊಂಡಲಿನತುದಿಯುಳ್ಳ. ಆತತಋಕ್ಷಂ = 1. ವಿಸ್ತಾರವಾದ ಒಂದು ಬಗೆಯ ಮರವುಳ್ಳ ಅಥವಾ ಕರಡಿಗಳುಳ್ಳ, 2. ಬಗ್ಗಿಸಲ್ಪಟ್ಟ ಮರವುಳ್ಳ. ಗುಹಾನ್ವಿತಂ = 1. ಗುಹೆಗಳಿಂದ ಕೂಡಿರುವ, 2. ಷಣ್ಮುಖನೊಡನೆ ಕೂಡಿರುವ. ವಂಶ = ಬಿದಿರು. ಉತ್ಸಂಗ = 1. ಬೆಟ್ಟದ ಇಳಿಜಾರು ಪ್ರದೇಶ, 2. ನಿತಂಬ ಪ್ರದೇಶ. ಇಲ್ಲಿ ಶ್ಲಿಷ್ಟರೂಪಕಂ.

೭೯. ಕಂಡೂಯನ = ನವೆ. ಸಪ್ತಪರ್ಣ = ಏಳೆಲೆಬಾಳೆ.

೮೦. ಮರುಳ್ಚಿತ್ತಂ = ಎಷ್ಟು ಮರುಳ್ಗೊಳಿಸಿತು. ಸಂಗೀತಕಂ = ನೃತ್ಯಗೀತವಾದ್ಯಂ.

---

## ೧. ವೀತಶೋಕ ಪುರ ವರ್ಣನೆ.

೮೧. ವಿವಿಧರತ್ನ........ಭಿಷಣಸುಂದರಂ = ನಾನಾ ಬಗೆಯಾದ ರತ್ನಖಚಿತವಾದ ಮನೆಗಳಿಂದ ಹೊರಡುವ ಕಾಂತಿಗಳ ಸಂತತಸ್ನಾನದಿಂದ ಸುಂದರವಾದ.

೮೨. ಅಳಕ = ಕುಬೇರನಪಟ್ಟಣವು. ಅಳಕ = ಮುಂಗುರುಳು. ಚೈತ್ರರಥಂ = ಕುಬೇರನ ಉದ್ಯಾನ ವನ. ಭೋಗವತಿ = ನಾಗರಾಜ ರಾಜಧಾನಿ.

೮೩. ಕನೆರ್ = ಅಪಕ್ವರಸಂ. ಈ ಪದ್ಯದಲ್ಲಿರುವ ಪ್ರಥಮಾಂತ ದ್ವಿತೀಯಾಂತ ಪದಗಳನ್ನು ನ್ಯೂನಕ್ರಿಯೆಗಳಲ್ಲಿಯೂ, ನ್ಯೂನಕ್ರಿಯೆಗಳನ್ನು ನೆಗಯಿಕುಂ ಎಂಬ ಪೂರ್ಣ ಕ್ರಿಯೆಯಲ್ಲಿಯೂ ಅನ್ವಯಿಸಿಕೊಳ್ಳುವುದು.

೮೪. ಪರಿಕಾಲಿರ್ತಡಿಯೊಳ್ = ಹರಿವ ಕಾಲುವೆಯ ಎರಡು ಭಾಗಗಳಲ್ಲಿಯೂ. ಮಡಲ್ತು = ಹಬ್ಬಿ. ಅಳಿಪಿಸಿಂ = ಆಸೆಯಿಂದ. ಎಱಕೆ = ರೆಕ್ಕೆ. ನಾಂದು = ನೆನದು.

೮೫. ಮಾವಿಡಿಗಳ್ = ಮಾವಿನ ಹೀಚುಗಳು. ಪೊಣರ್ವಕ್ಕಿ = ಚಕ್ರವಾ

ಕಪಕ್ಷಿ. ತಗುಳ್ದುತುಂ = ಓಡಿಸಿಕೊಂಡು ಹೋಗುತ್ತಲೂ. ಬಿನದಂ = ವಿನೋದ (ತ್ಸ.)

೮೬. ನನೆ = ಮೊಗ್ಗೆ, ಪುಷ್ಪಕುಟ್ಮಲ. ಬಿರಯಿ = ವಿರಹಿ (ತ್ಸ). ಪೌವನೆ = ಶೀಘ್ರವಾಗಿ. ಶಿಲೀಮುಖಂ = 1. ಬಾಣಂ, 2. ಭೃಂಗಂ.

೮೭. ಉಪಕಂಠಂ = ಸಮೀಪಂ. ಕುಪ್ಪಿಗೆ = ಚಿಕ್ಕ ಬಟ್ಟಲು. ಕುಳಿರ್ವ = ಶೀತಳವಾದ. ಅಡಿಕಿಲಿಟ್ಟಂ = ಒಂದರಮೇಲೊಂದು ಹೇಱಿಟ್ಟನು. ಸಿತೇಕ್ಷುದಂಡಂ = ಬಿಳಿಯ ಕಬ್ಬಿನ ಜಲ್ಲೆ.

೮೮. ದೇಸೆಗೆ = ಸೊಗಸಿಗೋಸುಗ. ಪತ್ತುಗೆ = ವಿಭಾಗ. ತೀವುಗುಂ = ತುಂಬುವುದು. ಧಾ. ತೀವು — ಪೂರಣೇ. ಉತ್ತಾಸಿತಂ = ಮೇಲ್ಮೊಗವಾಗಿ ಮಾಡಲ್ಪಟ್ಟ. ಈ ಪದ್ಯದಲ್ಲಿ ಸೂಚಿತವಾದ ಪೂರ್ವಕಥೆ ಯಾವುದು ?

೮೯. ಚಾಗದ = ಹಸುರಿನ. ಬಲ್ವಲಿಂದ = ಅಧಿಕವಾದ. ಪೊನಲ್ = ಪ್ರವಾಹಂ. ತೆಱಪು = ಅವಕಾಶಂ. ಪುದಿದ = ವ್ಯಾಪ್ತವಾದ. ತೞ್ಪು = ಅಳ್ಸು, ಸಂಶ್ಲೇಷ, ಸಂಬಂಧ.

೯೦. ಮುಂದ್ರಿಸಿ = ವ್ಯಾಪಿಸಿ. ಉನ್ಮುದ್ರಿತಂ = ತೆರೆಯುವುದು. ಚೇರ, ಕೋದ್ರವ, ನವಹಾರದ್ರುಕ, ವಾಟೋತ್ಕರಂ = ಜೋಳ, ಹಾರಕ, ಅರಶಿನ ಇವುಗಳು ಬೆಳೆದಿರುವ ಪ್ರದೇಶಗಳು. ಉನ್ಮುದ್ರಿತ = ವಿಕಸಿತವಾದ.

೯೧. ಜಳಖಾತಿಕೆ = ಅಗೞು.

೯೨. ವಿಕಟಾಟ್ಟಾಳಂ = ಬಹಳ ಎತ್ತರವಾದ ಕೊತ್ತಳ, ಬುರುಜು. ದೊರೆಯಾದುದೋ = ಸದೃಶವಾಯಿತೊ.

೯೩. ಮುಗಿದರಿಯದುದುವು = ಮುಕುಳನಮೆಂಬುದನ್ನೇ ಕಾಣದಿರುವುವು. ಮುಗಿದರಿಯದುವು ಎಂಬ ಪದವು ಕೆಂದಾವರೆಗಳ್ ಎಂಬುದಕ್ಕೆ ವಿಶೇಷಣವು.

೯೪. ಬಳವು = ಉಂಟು. ನೆಗೞ್ತೆ = ಪ್ರಖ್ಯಾತಿ. ಒಳ್ = ಮುತ್ತಂ. ಆನೆಯ ಕುಂಭಸ್ಥಳ, ಹಾವಿನಹೆಡೆ, ಇವುಗಳಿಂದ ಮುತ್ತುಗಳು ಹುಟ್ಟುವುವು ಎಂಬ ಪ್ರತೀತಿಯಂತೆಯೇ ಮುಗಿಲಿನಲ್ಲಿಯೂ ಮುತ್ತು ಹುಟ್ಟುವುದೆಂಬ ಪ್ರತೀತಿಯುಂಟು.

೯೫. ಪಮಣ = ಪ್ರಮಾಣ, ಇಯತ್ತೆ. ಪರದರ್ = ವರ್ತಕರು. ಆಕ್ಷೇಪವಾಚಕಂ = ಸಲ್ಲದ ಶಬ್ದವು.

೯೬. ಅಸುಕೆ = ಅಶೋಕ (ತ್ಸ).

೯೭. ತೆರೆವೊಯ್ಲಿಂದಂ = ತೆರೆಗಳ ಹೊಡೆತದಿಂದೆ. ತೆಕ್ಕೆಗಟ್ಟಿದ = ತಟ್ಟೆಕಟ್ಟ

ದ. ಪೊನ್ನಾಗಿಲ್ = ಚಿನ್ನದಪ್ರಾಕಾರ. ಬಾಗಿಲ್ ಎಂಬುದಕ್ಕೆ ಬದ ಲಾಗಿ ಪೊಗಡು ಎಂಬ ಪ್ರಯೋಗ ಉಂಟು.

೯೮. ಸಿರ್ಘರ = ಪ್ರವಾಹ. ಸೋದೆವಟಿದ = ಸುಣ್ಣ ಹಚ್ಚಿದ. ಸುಧಾ = ಸೊದೆ (ದ್ಭ).

೯೯. ಸಿಂಧುರ = ಆನೆ. ಪೊಗಸಿದ = ಮುತ್ತಿಕೊಂಡ, ಅಪೇಕ್ಷಿಸಿದ. ಧಾ. ಪೊಗಸು = ಸಂಛನ್ನೇ.

೧೦೦. ಗವಸಿ = ಆವರಣ. ಸುಗಿದು = ಭಯಪಟ್ಟು, ಧಾ. ಸುಗಿ—ಭಯೇ ಪಳುಕು = ಸ್ಫಟಿಕ (ತ್ಭ). ಮಂದುರಂ = ವಾಜಿಶಾಲೆ, ವಾಜಿ ಶಾಲಾತುಮಂದುರಾ — ಅ.

೧೦೧. ಬಳ್ಳಿಮಾಡಂ = ಲತಾಗೃಹಂ. ಕಡುಮಾಡಂ = ನಲೆಮನೆ, ಉಪ್ಪರಿಗೆ. ಚೀರಘಟ್ಟ = ಶಿಲ್ಪಿ ಶ್ರೇಷ್ಠ.

೧೦೨. ಪಳಂಚಿ = ತಾಗಲು. ಧಾ. ಪಳಂಚ—ಸಂಘಟ್ಟನೇ. ಉಡುಗದೆ = ಎಡೆ ಬಿಡದೆ, ನಿರಂತರವಾಗಿ, ಧಾರಾಳವಾಗಿ. ಉಣ್ಮಿದ = ಉಂಟಾದ, ಪ್ರಾದುರ್ಭವಿಸಿದ. ಧಾ. ಉಣ್ಮು—ಉದ್ಗತೌ. ತಡತಡಮಾಗೆ = ಸಿಕ್ಕಿಕೊಳ್ಳಲು.

೧೦೩. ಕುಂದದ = ಮೊಲ್ಲೆಯಹೂವಿನ. ಕುಂದದ = ಕ್ಷೀಣಿಸದಿರುವ. ಉ ಕ್ಕಂದಮಾಗಿ = ವಿಶೇಷವಾಗಿ. ಅಮರ್ದಿನತಾಯ್ಗಡಲ್ = ಕ್ಷೀರಸ ಮುದ್ರಂ.

೧೦೪. ಕುಟ್ಟಿಮದಿ = ನೆಲಗಟ್ಟಿನಿಂದ. ಗ್ರಾಮಣಿ = ಮೇಲ್ವಿಚಾರಣಕರ್ತ.

೧೦೫. ಕಂದಳ = ದಂಟು. ಅಪೂರ್ವಭಿತ್ತಿ = ಅಸದೃಶವಾದ ಗೋಡೆ.

೧೦೬. ಸನ್ನಿವಂ = ಸಮೀಪದಲ್ಲಿರುವ. ಭವನಾಂಗಭೂಜ = ಭವನಕ್ಕೆ ಅವ ಯವರೂಪವಾದ ವೃಕ್ಷ, ಅಂದರೆ ಕಲ್ಪವೃಕ್ಷ. ಬಡರ್ಪ = ಉಂಟುಮಾಡು, ಧಾ. ಬಡರ್ಪು—ಉದ್ಯಮೇ. ಏವುದು = ಎಲ್ಲಿಯದು.

೧೦೭. ಕರು = ಎರಕದ ಅಚ್ಚು. ಕರುವಿಂಗೆ = ಎರಕ ಹೊಯ್ಯುವುದಕ್ಕೆ. ಕಲ್ವೆಸದೊಳೆಗೆ = ಕಲ್ಲುಕೆಲಸದ ಕ್ರಮಕ್ಕೆ. ಕಣ್ದೆರವಿ = ಕಣ್ಣ ನ್ನು ತೆರೆಯಿಸತಕ್ಕದು. ಆ ವಿಧಾನವನ್ನು ಸ್ಪಷ್ಟವಾಗಿ ತಿಳಿಸುವ ಮಾದರಿಯು ಎಂದು ತಾತ್ಪರ್ಯ. ಕಂಡರಣೆ = ಕೆತ್ತುವುದು. ಮರ ವೆಸಕ್ಕೆ = ಮರಗೆಲಸಕ್ಕೆ, ಎಱೆವಟ್ಟು = ಕಿರೀಟಪ್ರಾಯವು. ಪೊ ಗ್ಗ ? = ವಶವೆ, ಸಾಧ್ಯವೆ ?

೧೦೮. ಎಱಲಿಕ್ಕಿದ = ಜೋಲುವಂತೆ ಕಟ್ಟಿದ. ಸೂಸಕಂ = ಕುಚ್ಚು.

೧೦೯. ನೆಲೆಮಾಡದ = ಉಪ್ಪರಿಗೆಯು. ದೇಸಿ = ಕಾಂತಿ, ಸೊಬಗು. ನೆಲೆವಾತದ = ಬಂದೆಡೆ ನಿಲ್ಲದಿರುವ. ನೆಲೆಯಾದುವೆ? = ನಿಲ್ಲತಕ್ಕಸ್ಥಾನ ವಾದುವೆ?

೧೧೦. ಕುಸುರಿವೆಸಂ = ಬಂದುಬಗೆಯ ಚಿತ್ರದಕೆಲಸ.

---

## 6. ಉದ್ಯಾನ ವರ್ಣನೆ.

೧೧೧. ಈಳೆ = ಕಿತ್ತಿಳೆ, ಹೇರಿಳೆ. ಕಮ್ರಂಗು = ಅಡಿಕೆಯ ಮರ. ಕ್ರಮುಕ (ತ್ಸ).

೧೧೨. ಚಪ್ಪರಿಪ = ಶಬ್ದ ಮಾಡುತ್ತಿರುವ. ತೊರದ ದೋರೆಗಳಿಂ = ರಸವು ತುಂಬಿರುವ ದೋರೆಹಣ್ಣುಗಳಿಂದ.

೧೧೩. ಪರಿಪುಷ್ಟಪೋತಕಂ = ಕೋಗಿಲೆಯ ಮರಿ. ಇಲ್ಲಿ ಅವಯವಾರ್ಥವು ಹೇಗೆ? ಪೊಣ್ಮಿರ್ದುದು = ತುಂಬಿರುವುದು.

೧೧೪. ತೊಂಡುಗಡೆಯುತ್ತ = ಕಲಕಲಧ್ವನಿ ಮಾಡುತ್ತ.

೧೧೫. ಸಮೆದು = ರಚಿಸಿ, ನಿರ್ಮಿಸಿ.

೧೧೬. ಸಿಮಿರ = ಧಾ. ಸಿಮಿರ್—ಪ್ರಸಾರಣೇ. ಶ. ದ. ಚಿಗುರುತ್ತಿರೆ = ಮುಂದಕ್ಕ ಬರುತ್ತಿರಲು. ಸ್ವಭಾವೋಕ್ತ್ಯಲಂಕಾರಂ.

೧೧೭. ಪೆಗ್ಗಳಿಸೆ = ಹೆಚ್ಚಲು. ಅಬ್ಬಿದುದು = ಮುಳುಗಿತು.

೧೧೮. ಅರಳೆಲೆ = 1. ಪುಷ್ಪ ಮತ್ತು ಎಲೆ. 2. ಆಭರಣ ವಿಶೇಷ. ಮಾಂಗಾಯ್ =(1) ಮಾವಿನಕಾಯಿ (2) ಆಭರಣ ವಿಶೇಷ. ಇಲ್ಲಿ ಮಾವಿನ ಮರವನ್ನು, ಅರಳೆಲೆ ಮಾಂಗಾಯ್ಗಳನ್ನು ಧರಿಸಿ, ಮುದ್ದು ಮಾತಾಡುವ ಮಗುವಿಗೆ ಹೋಲಿಸಿದೆ.

೧೨೦. ಪಿಕ...ಸೂಕರ್ಣ ಸಮಚೂತ ಕುಜದ ಅಂಕುರದೆ, ಮಧುಸಿಕರದಮಂದವು ಮಲ್ಲಿಯು ಪುಷ್ಪಂ, ಅರಗಿಳಿಗಳ ಗರ್ವಂ, ದಾಡಿಮ ಫಲ ಬಂದಂ ಎಂದು ಕ್ರಮವಾಗಿ ಅನ್ವಯಿಸಿಕೊಳ್ಳುವುದು.

೧೨೧. ಅಗ್ರಾಂಬರಂ = ತುದಿಯವರೆಗೂ.

೧೨೨. ಸಾರುತ್ತಿರ್ಪವೊಲ್ = ಕಾಪಾಡುತ್ತಿರುವ ಹಾಗೆ, ನೋಡಿಕೊಳ್ಳುವ ಹಾಗೆ. ಸಾರಂಗದು = ಸಾರಾಂಶ (ತ್ಸ.) ಉದಾ. ಸಾರಾಯದಾಸಿಜ ವತೋರ್ಜುವಾ ಗುರುವು ಯಾರಾದೊಡೇನು. ಸರ್ವಜ್ಞನಪದ.

೧೨೩. ಪಳಮೇಜು = ವೃದ್ಧಿಯನ್ನು ಹೊಂದು. ಇಡಿಕಿಱಿದು = ಒತ್ತಾಗಿ ತುಂಬಿಕೊಂಡು. ಪಿಳ್ಗುತ್ತೆ = ಹಿಗ್ಗುತ್ತ, ಪುಷ್ಪವಾಗುತ್ತ.

೧೨೮. ಇದರಲ್ಲಿ ಸ್ವಭಾವೋಕ್ತ್ಯಲಂಕಾರವು ಬಹಳ ಚೆನ್ನಾಗಿದೆ.

೧೨೯. ಅಬ್ಜ=(1) ಕಮಲ (2) ಚಂದ್ರ. ಸಿತಪಕ್ಷ=(1) ಹಂಸ, (2) ಶುಕ್ಲಪಕ್ಷ. ಚಕ್ರ=(1) ರಥಚಕ್ರ (2) ಚಕ್ರವಾಕ. ಭುವನ=(1) ನೀರು (2) ಪ್ರಪಂಚ ಶಿಲೀಮುಖ=(1) ಬಾಣ (2) ಭೃಂಗ ಉಪಮಾಲಂಕಾರಂ.

೧೩೦. ಕರ್ಣಿಗೆ=ದಂಟು ತಳರ್ದೆ=ಅಲ್ಲಾಡದೆ. ಧಾ. ತಳರ್=ಚಲನೇ. ಶ. ಮ.

೧೩೧. ಇಕ್ಕಿಮನೆ=ನೆಲಮನೆ. ಸದಾಗತಿ=ವಾಯು. ಪೇೞಿಂ=ಹೇಳಿರಿ. ಬಸೆದು=ಅಕ್ಕರೆಯಿಂದ. ಧಾ. ಬಸೆ—ಪ್ರಸನ್ನೇ ಶ. ದ.

೧೩೨. ಅಗಿಗರ್ಪಂತಿ=ಆವಿರ್ಮೂರ್ತ್ತಿ, ವಾಸಂತಿ. ಪಡ್ಗಳ್=ಕಣಗಿಲ.

೧೩೩. ತೇಂಕಾಡಿ=ತೇಗಿ. ಜೆಮುಗಿ=ಝೇಂಕಾರಮಾಡಿ.

೧೩೪ ಧೃತ ಕಂಟಕಂ=ಧರಿಸಲ್ಪಟ್ಟ ಮುಳ್ಳುಳ್ಳುದು. ಅತಿರಾಕ್ಷ=ಅತಿಕಠಿನ, ಅತಿತೀಕ್ಷ್ಣ. ಬರ್ಪುದೇ=ಬರುವುದೇ (ಇರಿ) ಈ ಪದ್ಯದಲ್ಲಿ "ಧೃತಕಂಟಕ" 'ಅತಿರಾಕ್ಷ' ಈ ಶಬ್ದಗಳಿಂದ ಸೂಚಿತವಾದ ಶ್ಲೇಷಾರ್ಥ ಹೇಳಿ

---

## 7. ಆಸ್ಥಾನ ವರ್ಣನೆ.

೧೩೫. ಈಸಿಬಿಎವಲ್ಲಿಗ=ಈವ+ಇಬ್ಬಿವಲ್ಲಿಗ. ಸರಕ್ಷ=ಸಹಾಯವಿಲ್ಲ. ಇಂಪೆರಗದೇಂ=ಇರ್+ಪೆರಗು+ಅದು+ಏಂ. ಪ್ರಾಭವಂ=ನೀಳವಾದ. ವಿಶ್ವಭೂಭರವಂ=ಸಮಸ್ತ ಭೂಭಾರವನ್ನು. ತಾಳ್ದುದು=ಧರಿಸಿತು. ಧಾ. ತಾಳ್ದು—ಧಾರಣೇ ಶ. ದ

೧೩೬. ಧಾರೆ=ಕತ್ತಿಯ ಬಾಯಿ, ಅಥವಾ ಅಲಗು. ತೀಕ್ಷ್ಣ ಶಸ್ತ್ರ ಭಿದುರಾಳಿ... ಚಿತ್ರಂ=ಹರಿತವಾದ ಕತ್ತಿಗೂ ಮತ್ತು ವಜ್ರಾಯುಧಕ್ಕೂ ಸದೃಶವಾದ ಕ್ರೂರವಾದ ಸೋಟಿದಲ್ಲಿ ಕೊಡಲ್ಪಟ್ಟ ಮನಸ್ಸುಳ್ಳ. ಇದು 'ಅಂತಕಂ' ಎಂಬ ಪದಕ್ಕೆ ವಿಶೇಷಣ. ಅಂತಕಂ ಆ ನೃಪನ ಕೃಪಾಣಪಟ್ಟಿಕೆಯಂ ಪಿಕೆದಾಳಿ .... ಚೆಂಬಿವೆರಸು ಒಲಗಿಪಂ. ಎಂಬುದಾಗಿ ಅನ್ವಯವು.

೧೩೭. ಶತ್ರುರಾಜರು ಸಿಂಹಸೇನನ ಕೈಯಲ್ಲಿ ಪಟ್ಟುತಿಂದು, ಗಾಯವಡೆದು, ಬಳಿಕ ಅವನಿಂದ ಪ್ರಾಣದಾನವನ್ನು ಹೊಂದಿ, ಅವನ ಆಜ್ಞೆಯನ್ನು ಶಿರಸಾವಹಿಸಿ ನಡೆಯುವರೆಂದು ಭಾವವು,

೧೩೯. ನವಮೀರು = ಸುರಪುನ್ನಾಗ.

೧೪೦. ಲಚ್ಛಣಂ = ಲಕ್ಷಣಂ (ತ್ಸ). ಉಲ್ಲೇಖಾಲಂಕಾರಂ.

೧೪೧. ಆ ನೃಪನ ಮನಸ್ಸೆಂಬ ಹಂಸದ ಕ್ರೀಡೆಗೂ, ನೇತ್ರವೆಂಬ ಭೃಂಗದ ಕ್ರೀಡೆಗೂ ಕಮಲ ಮುಖಿಯಾದ ಮತ್ತು ಕೈರವಲೋಚನೆಯಾದ ಜಯಲಕ್ಷ್ಮಿಯು ಸರಸಿಜಾಕರವಾದಳೆಂದು ಅಭಿಪ್ರಾಯವು.

೧೪೨. ತೆಮಳ್ದಪ್ಪುದು = ಕಲಸಿಕೊಂಡು ಕೆಟ್ಟುಹೋಗುವುದು. ವಿದ್ಧ = ವಿಗ್ರಹ. ರೂಢಿಯ = ಪ್ರಖ್ಯಾತಿಯುಳ್ಳ. ಗಾಡಿ = ಸೌಂದರ್ಯಂ. ಈ ಪದ್ಯದಲ್ಲಿ ವರ್ಣನೆಯು ಬಹು ಸ್ವಾರಸ್ಯವಾಗಿರುವುದು.

೧೪೩. ಕೂರ್ಪಿಂಗೆ = ಪ್ರೀತಕ್ಕೆ. ಅಪವರ್ಗದ = ಆಸ್ಪದವಾದ. ತಿರುಳಮಿಂಚಿಂದ = ಮಿಂಚಿನ ಸಾರದಿಂದ.

೧೪೪. ಜೀವ = ಹೆದೆ. ಬಾಸ = ರೋಮರಾಜಿ. ಶಸ್ತ್ರಾಧಿದೈವಂ = ಶಸ್ತ್ರದೇವತೆ. ಕ್ರಮಾಲಂಕಾರಂ.

೧೪೫. ಬೀಳುಡೆ = ಧರಿಸಿದ ಹಳೆಯ ಬಟ್ಟೆ. ನಿರ್ಮಾಲ್ಯ = ಧರಿಸಿದಮೇಲೆ ತೆಗೆದುಹಾಕಿದ ಹೂ. ಮಂಗಳ ನೀರಾಜನಭಾಜನಂ = ಮಂಗಳಾರತಿಯ ಪಾತ್ರ. ಕಾಲ್ಗಪ್ಪು = ಕಾಲಾಳು.

೧೪೬. ತುಱುಂಗ = ಎಲ್ಲೆಡೆಯಲ್ಲಿಯೂ ವ್ಯಾಪಿಸುವಂತೆ. ಅನಂಗನ = ಮನ್ಮಥನ. ಜಂಗಮಕಲ್ಪವಲ್ಲಿ = ಸಂಚರಿಸುತ್ತಿರುವ ಕಲ್ಪವೃಕ್ಷ. ಐಂದವ ಕೋರಕಜಾಲಂ = ಚಂದ್ರಿಕೆಯ ಸಮೂಹಂ.

೧೪೭. ಶುದ್ಧರ್ = ಸಂಪನ್ನರು. ಉಪಧಾಶುದ್ಧರ್ = ರಾಜಭಕ್ತಿ, ನಿಷ್ಪಕ್ಷಪಾತಿತ್ವ, ಧೈರ್ಯ, ಜಿತೇಂದ್ರಿಯತ್ವ ಈ ನಾಲ್ಕರಲ್ಲಿಯೂ ಶುದ್ಧರಾದವರು. ಪಾದವಿಷ್ಟರ = ಪಾದಪೀಠ.

೧೪೮. ಸಮಾಹಿತವೃತ್ತಿ = ಸಮೃದ್ಧಿ, ಸುಸ್ಥಿತಿ. ಕಂಟಮೊನೆಬಾಳ್ಮೊನೆಯಾಸ್ತಿರ = (ಇವರು) ಬರೆಯುವ ಕಂಟದ, ಅಥವಾ ಹಿಡಿಯುವ ಕತ್ತಿಯ ಮೊನೆಗೆ ಅಧೀನವಾಗಿರಲು. ಕರಣಗಣಾಗ್ರತಸ್ಸರರ = ಪ್ರಧಾನ ಕರಣಿಕರ.

೧೪೯. ಗಮಕಿ = ಲಿಪಿಯ ನೋದುವನು.

೧೫೦. ಓಳಿಗಳಿಂ = ಸಾಲುಸಾಲಾಗಿ. ಮಂಡಳಿಕರ್ = ಅಧೀನರಾದ ರಾಜರು ಅಂತರ್ನಿಯುಕ್ತರ್ = ಒಳಗಣ ಅಧಿಕಾರಿಗಳು. ಬಗೆಕಾರರ್ = ಚಿತ್ತವೃತ್ತಿಯನ್ನರಿತು ನಡೆವರು. ಅಡಪದವರ್ = ವೀಳೆಯದೆಲೆ ಅಡಿಕೆ ಮುಂತಾದುವಿರುವ ಸಂಚಿಯನ್ನು ಹಿಡಿವ ಊಳಿಗದವರು. ನೆತ್ತಕರ್ = ಜೂದಾಡುವರು. ವಾಂಸಕಾರರ್ = ಕೊಳಲೂದುವ

ರು. ಸೋಜಿವಾಳರ್ = ಪರಿಚಾರಕರು, ಅಥವಾ ಕೂಗಿ ಹೇಳುವರು. ಅಣುಗಿನವರ್ = ನಕಲಿ ಮಾಡುವರು. ಪಯಾಳರ್ = ಕಾಲಾಳುಗಳು.

೧೫೧. ಠಾಯೆಯೊಳ್ = ನಿಂತನಿಲುವಿನಲ್ಲಿಯೇ.

೧೫೨. ಬೀರವರ್ತಿನಿಕರಂಗಳ = ಶೂರರ ಸಮೂಹದ. ಚಾಗದೋಲಗದ = ಕೊಂಡಾಟದ ಸುಡಿಯುಳ್ಳ ಆಸ್ಥಾನದ. ವಿಡಂಬಡಂಬರಕೆ = ಅನುಕರಿಸುತ್ತಿರುವ ಠೀವಿಗೆ. ಸಾರ್ಥಕಂ = ಸಮೂಹಂ.

೧೫೩. ಮೇಳೆಯಂದೊಳ್ ತೊಡಬ್ಬ = ಸರಿಯಾಗಿ ತೊಡಿಸಿಕೊಂಡು, ಮೆಚ್ಚಿತಂ = (ತಾನು) ಮೆಚ್ಚಿನುದನ್ನು. ಕಳನಲ್ಲಿ = ಯುದ್ಧರಂಗದಲ್ಲಿ. ಸಂಕಂಪಜಿಗೆಗುಟ್ಟಿ = ಶಂಖಧ್ವನಿಮಾಡಿ. ಭೃಗುವಿದ್ಯಾ = ಧನುರ್ವಿದ್ಯೆ. ಪಾರ್ತಳ್ತವೊಲ್ = ಇದಿರಿಗೆ ಕಾಣಿಸಿಕೊಂಡಹಾಗೆ.

೧೫೪. ತಲು = ಅನು ಹೋರಲಿಕ್ಕಿದ ಸ್ಥಳಂ. ಮುಳತೊಡೆ = ಇದಿರಾಗಿ ಕಾದುವುದಕ್ಕೆ ಬರಲು.

ಕಣ್ಪೊಲಂ = ದೃಷ್ಟಿಪಥಂ, ನೋಟ. ವೈಹಾಳಿ = ವಾಹ್ಯಾಳಿ (ತ್ಸ) ಅನು ಕುದುರೆಗಳ ಓಟದ ಪ್ರದರ್ಶನ. ಕಟ್ಟುಣಕದ = ಅತ್ಯಂತ ಪ್ರಬಲವಾದ. ಸಮಯಮಂ = ಅವಕಾಶವನ್ನು, ಅಪ್ಪಣೆಯನ್ನು. ಕೇಳ:— ಇಲ್ಲಿ ವ್ಯಾಕರಣ ವಿಶೇಷವೇನು?

೧೫೫. ಬೋಹಕ್ಕೆ = ಕಡಿವಾಣಕ್ಕೆ. ಅಸೆ = ಹಾಸು. ತಡಿ. ಪ್ರೈಸರಂ = ಜಾಂಪೆಕೆಯನ್ನು. ಜಾಬುಗಳ್. ಇಲ್ಲಿ ಸಮಾಸವು ಹೇಗೆ? ಬಿಡಂಗಂ, ಉದ್ಭಾವಮಂ, ಪ್ರೈಸರಂ, ಮತ್ತಂ ಚೆಲ್ವಂ— ಈ ಕರ್ತೃಪದಗಳನ್ನು "ಏಱಿ ನೋಡಿರೆ" ಎಂಬುವಕ್ರಿಯಾಪದದೊಡನೆ ಅನ್ವಯಿಸಿಕೊಳ್ಳುವುದು.

೧೫೬. ಕೃಪಂದ = ಪ್ರಾಪ್ತವಾದ, ನವಿರಾಪಕ್ಕೆ ಬಂದ. ಲೂಠಿ....... ಬೊಲ್ಲಂಬ ಘೋಷಣರೂಪವಾದ ಪ್ರತಿಹಾರರುಗಳ ಧ್ವನಿಯು ಗಂಡುಗೋಗಿಲೆಗಳ ಕಲಕಲಧ್ವನಿಯಂತಾದುದು ಎಂದು ಭಾವವು.

---

## 8. ಕೃಷ್ಣನ ಬಾಲಲೀಲೆ.

೧೫೭. ತೊಟಿಲು = ತುಟಿಯಿಂದ ತೂ ಎಂಬ ಶಬ್ದಮಾಡಿ ರಕ್ಷೆಹಾಕು. ಗಾವರಂ = ಶಬ್ದ. ತೂಂಕಡಂ = ಮೆಲ್ಲಗೆ ಕಣ್ಣು ಮುಚ್ಚುವಹಾಗೆ ಮಾಡುವುದು.

೧೫೯. ಪಕ್ಕುಗುಡುತಲ್ = ಆಸ್ವಾದ ಕೊಡುತ್ತಾ. ನಿಷ್ಣಾತತೆಯಂ = ಚಾತುರ್ಯವನ್ನು, ಜಾಣ್ಮೆಯನ್ನು.

೧೬೦. ವಿಷಮಾಶಯಂ = ದುರಭಿಪ್ರಾಯವುಳ್ಳ. ತಳಂಗಳಿಂದ = ಹಸ್ತಪ್ರದೇಶದಿಂದ, ಈ ಪದ್ಯದಲ್ಲಿ "ಪಡೆದು" ಎಂಬುವುದಕ್ಕೆ ಬದಲಾಗಿ "ಪಡೆಯೆ" ಎಂದಿದ್ದರೆ ಸರಿಯಾಗಿ ಅನ್ವಯಿಸುವುದಕ್ಕಾಗುವುದು.

೧೬೨. ಸವ = ಸಮ. (ತ್ಸ) ಅನುಗೆಯ್ದಪಂ = ಪರಿಮಾಡುವೆನು. ಬಲಿಭುಕ್ = ಕಾಗೆ.

೧೬೩. ಶಿಶುಳಂ = ಬಾಲಕಂ ?

೧೬೪. ಪೊಂಗವಡಿಕೆ = ಅರ್ಧ ಚಂದ್ರಾಕೃತಿಯಾದ ನೆತ್ತಿಯಮೇಲೆ ಹಾಕುವ ಆಭರಣ. ಮಲಕು ? ಕುಸುರಿ ಪೆಸನಪ್ಪ = ಚಿತ್ರಕೆಲಸಮಾಡಿದ.

೧೬೫. ಅಂಘ್ರಿಪ = ವೃಕ್ಷ—ಇಲ್ಲಿ ಅವಯವಾರ್ಥವು ಹೇಗೆ? ಅರ್ಜುನ = ಮತ್ತಿ ಮರ.

೧೬೯. ತಳಿರ್ಮೆ = ಉರವಣಿಸಿ, ವಿಜೃಂಭಿಸಿ. ಬೆಳಗಾಂಪಂ = ಕಣ್ಣು ಚಪ್ಪ ಮಾತ್ರದ ಕಂಪುಕಾಂತಿಯನ್ನು. ಸೂಂತಱಿಸುತುಂ = ಅರಚುತ್ತಲೂ, ಸುಳ್ಳಿರ್ದಬಾಲಂ = ಬೀಸುತ್ತಿದ್ದ ಬಾಲವು. ತೊತ್ತಳಂದುಳಿಯಲ್ಕೆ = ಚೆನ್ನಾಗಿ ತುಳಿಯಲು.

೧೭೦. ಬಿಫ್ರಂ = ಶಕ್ತಿಯಿಂದ. ಈ ಪದ್ಯದಲ್ಲ ಎರಡನೆಯ ಪಾದವು ತಪ್ಪಾಗಿರುವಂತೆ ತೋರುತ್ತದೆ.

೧೭೧. ಕುಕಿಲ್ಗೆಯ್ಯಲ್ಕೆ = ಆರ್ಭಟಿಸ ಮಾಡುವುದಕ್ಕೆ. ಕುತ್ಕೀಲಂ = ಪರ್ವತಂ.

೧೭೨. 'ಕರಾಗ್ರದಿಂ' — ಎಂದಿರಬೇಕು. ಅಟ್ಟ್ಯಸುರದಿಂದಾಗಿ = ಅತ್ಯಂತ ಕೋಪದೊಡನೆ.

೧೭೩. ತೀಸು = ತೀಚು. ಆಲವಟ್ಟಂಗಳಿಗಳವಸಿತಂ = ಆಲವಟ್ಟ + ಅಂಗಳಿಗಳ + ಅವು + ಅಸಿತಂ ಆಲವಟ್ಟ = ದೊಡ್ಡಪಟ್ಟ, ಅಂಗಳ. (?)

---

## 9. ವಿದ್ಯಾಭ್ಯಾಸ.

೧೭೪. ಸಂಸ್ಕೃತಿ = ಸಂಸ್ಕಾರ, ದ್ವಿಜರಿಗೆ ಮಾಡತಕ್ಕ ಚೌಳಾದಿ ಸಂಸ್ಕಾರಗಳು

೧೭೫. ಪುರುಳಂ = ಅರ್ಥವನ್ನು. ಸಯ್ಪಂ = ಯೋಗ್ಯತೆಯನ್ನು, ಸರಿಯಾದ ರೀತಿಯನ್ನು.

೧೭೬. ಬಿತ್ತರಂ ಬಡದೆ ನೀನುಂ ಬಿತ್ತರಂಗೊಳ್ಳದಂತೆ = ಬಂದವರೊಡನೆ ಬಂದು

ಸೇರಿಕೊಳ್ಳದಂತೆ ಸ್ಫುಟವಾಗಿಯೂ, ವಿಳಂಬವಾಗಿ ಅಕ್ಷರಗಳನ್ನು ಚ್ಚರಿಸಿ ಅರ್ಥವಾಗದಂತೆ ಇರವಹಾಗೂ.

೧೭೭. ಪುರುಳಿದಿರ್ಚಿಪಳಚ್ಚನೆ ಮಿಂಚಿತೋರೆ = ಅರ್ಥವು ವ್ಯಕ್ತವಾಗಿ ಸ್ಫುರಿಸುವಂತೆ. ಬಿಜೆವಡೆದು = ಚೆನ್ನಾಗಿ ಸ್ಫೂರ್ತಿಯಾಗುವಂತೆ.

೧೭೮. ಅಪೋಹಂಗೆಯ್ದು = ಚರ್ಚೆಯಿಂದ ಸಂಶಯ ನಿವೃತ್ತಿಯಂ ಮಾಡಿ. ನಿಶ್ಚಿತಂ ಗೊಂಡು = ನಿಶ್ಚಯಿಸಿ. ಕೈವಂದವೊಲ್ = ವಶವಾದಂತೆ. ಆಗಳುಂ = ಯಾರಿಗಾದರೂ.

೧೭೯. ಬಳ್ಪು = ಸಾರಭೂತವಾದುದು. ಇರ್ಕುಳಿಸುತೆ = ಸಿಕ್ಕಿಸಿಕೊಂಡು.

೧೮೦. ಚತುರ್ವಿಂಶತಿತತ್ವಗಳು ಆವುವು? ತೂಳ್ದಿ = ಹೋಗಲಾಡಿಸಿ. ವಿವಿಕ್ತಿಗೈದು = ವಿಂಗಡಿಸಿ.

೧೮೧. ಇನ್ನರ್ = ಇಂತಹರು ಇದರಂತೆಯೇ ಎನ್ನರ್.

೧೮೨. ಮನೆವಾರ್ತೆ = ಗೃಹಕೃತ್ಯವಿಚಾರಂ. ದೇಗುಲಂ = ದೇವಕುಲಂ (ತ್ಸ)

೧೮೩. ಜಂತ್ರವಿಜ್ಜೆ = ಸಂಗೀತವಿದ್ಯೆ. ಪೂಣಲ್ಕೆ = ಧಾ. ಪೂರ್—ಪ್ರತಿಜ್ಞಾಯಾಂ. ಶ. ವ. ಸ್ಥಿರೀಕರಣಂ. ಚೆಲ್ಲದಿಂ = ವಿನೋದದಿಂದ, ವಿಲಾಸದಿಂದ.

೧೮೪. ರಕ್ತಿ = ಇಂಪು.

೧೮೫. ಕಂಬಚ್ಚಿನೋಳ್ = ಅಕ್ಕಸಾಲೆಯು ತಂತಿ ಎಳೆಯುವುದಕ್ಕೆ ಇಟ್ಟುಕೊಂಡಿರುವ ಅಚ್ಚು. ಪೊಂಜುಗ = ಚಿನ್ನದ ಸಲಿಗೆ. ಶ್ರುತಿ—ಇದನ್ನು ಸಂಗೀತ ಶಾಸ್ತ್ರದಲ್ಲಿ ೨೨ ಬಗೆಯಾಗಿ ವಿಂಗಡಿಸಿದ್ದಾರೆ. ಸ್ವರಂ = ಶ್ರೋತೃ ಚಿತ್ತವನ್ನು ಸ್ವತಃ ರಂಜಿಸತಕ್ಕುದು.

೧೮೬. ಪೊಡರ್ಪು = ಸ್ಫುರಣಂ. ಅಲುಗು = ಧ್ವನಿ ಅಲ್ಲಾಡುವಿಕೆ. ಚಾರಿ = ಸಂಚಾರ.

೧೮೭. ಕಿವಿವೊಡವೊಕ್ಕು = ಕರ್ಣಾಂತವನ್ನು ಪ್ರವೇಶಿಸಿ. ಸಮೆದುದು = ರಚಿಸಿದುದು.

೧೮೮. ಆಲಿನೀರ್ = ಆನಂದಭಾಷ್ಪ. ಉರ್ಕಳಿಪ = ಅತಿಶಯವಾದ. ಪೊಂಪುಳಿ = ಸಂತೋಷದಿಂದುಬ್ಬುವುದು. ಮಲರ್ದೆರ್ದೆ = ವಿಕಸಿತವಾದ ಹೃದಯಂ.

೧೮೯. ಅಱುಗೋವರ್ = ತುಚ್ಛರಾದ ಗೊಲ್ಲರು. ಅೞ್ದು = ಮುಣುಗಿ. ಕೈಮೆ = ಹಸ್ತಲಾಘವಂ. ತೊನೆದು = ತೂಗಾಡಿಸಿ, ಸೊರ್ಕನೇರಿಕುಂ = ಪಾರವಶ್ಯವನ್ನುಂಟುಮಾಡುವುದು.

೧೯೦. ಲೆಪ್ಪಂ = ಲೇಪ್ಯಂ (ತ್ಸ). ಲೆಪ್ಪದಬೊಂಬೆ = ಚಿತ್ರದಲ್ಲಿ ಬಣ್ಣಹಾಕಿದ ಬೊಂಬೆ. ಪದೆದು = ಮನಸ್ಸಿಟ್ಟು, ಪ್ರೀತಿಯಿಂದ

೧೯೧. ಕೊನರೇಱುವ = ಚಿಗುರುವ. ಬರಣ = ಸಾಲು.

೧೯೨. ಈ ಪದ್ಯದಲ್ಲಿ, ವೇದದಲ್ಲಿ ಹೇಳಿರುವ, ಒಂದಕ್ಕಿಂತಲೂ ಮತ್ತೊಂದು ನೂರ್ಮಡಿಯಾಗಿ ಹೆಚ್ಚುವ ಮನುಷ್ಯ, ದೇವ, ಗಂಧರ್ವ, ಬ್ರಹ್ಮಾದ್ಯಾನಂದಗಳ ತಾರತಮ್ಯವು ಸೂಚಿತವಾಗಿದೆ.

೧೯೩. ಪೊಂಗಿರುಗಟ್ಟಿಗೆ = ಪೊರ್ + ಕಿರಿದು + ಕಟ್ಟಿಗೆ. ಚೊಲ್ಲೆಯಂ = ತುಱುಂಬಿನ ಕೊನೆ. ಸೀಸಕಂ = ಶೀರ್ಷಕಂ. (ತ್ಸ) ತಲೆಯುಟವುಳಿ. ಗರುಡಿಗೈಮೆ = ಸಾಮು.

೧೯೪. ಕರುವಿಟ್ಟು = ಎರಕಹೊಯ್ದು. ಕಂಡರಿಸಿ = ಕೆತ್ತಿ. ತಿಟ್ಟಮಂ = ಚಿತ್ರಕೆಲಸವನ್ನು, ರೇಖೆ = ಲಾವಣ್ಯರೇಖೆ. ವೃತ್ತದಿರವಂ = ದುಂಡಾದ ಮೈಕಟ್ಟನ್ನು.

೧೯೫. ಬಿಡಯದೆ = ಗಂಭೀರಭಾವದಿಂದ. ಭರಿಕೈ = ಸೊಂಡಿಲು. ಬಿಣ್ದೊಡೆಗಳಿಂ = ತೋರವಾದ ತೊಡೆಗಳಿಂದ. ಕಡುಲುಳಿವೆತ್ತು = ಬಹು ಚಟುವಟಿಕೆಯನ್ನು ಹೊಂದಿ. ಲಾಗಿಸುವ = ಲಾಗಹಾಕುವ.

೧೯೬. ಮೋಡಿಯೊಳ್ = ಒಂದು ಬಗೆಯಲ್ಲಿ.

೧೯೭. ಮಲೆತು = ಧಾ. ಮಲೆ—ಔದ್ಧತ್ಯೇ. ಶ. ದ. ಠಾಣಕಂ = ನಿಲವು. ಕದುಬದೆ = ಬತ್ತದೆ. ಬಚ್ಚತಂ = ಸಮನಾಗಿ. ಬಲಿಯಿಸಿ = ದೃಢವಾಗಿಟ್ಟುಕೊಂಡು.

೧೯೮. ಮಣಿತಂ = ಬೊಗ್ಗುವುದು? ಇಂದಾಳಂ = ಹಿಂದುಗಡೆಯಿಂದ ಮೇಲ್ಬೀಳುವುದು? ಸುಯ್ಧಾನಂ = ಚೆನ್ನಾಗಿ ಮಾಡುವ ಕ್ರಮಂ. ಸುವಿಧಾನಂ (ತ್ಸ). ಬೀರಂ = ವೀರ್ಯಂ.

---

## 10. ಶುಕನಾಸನ ಹಿತೋಪದೇಶ.

೧೯೯. ಮಂತ್ರ ನಿಧಾನಂ = ರಾಜಮಂತ್ರಕ್ಕೆ ನಿಧಿಯಾದವನು.

೨೦೦. ಮಾಯ್ಗು = ಮುಚ್ಚಿಕೊಂಡಿರುವ. ಏಗೆಯ್ದುಂ = ಏನು ಮಾಡಿದರೂ.

೨೦೨. ದಾಹಜ್ವರಂ = ಧನದಾಶೆಯೆಂಬ ಜ್ವರವು. ಇಂದ್ರಿಯ ದಿಶಾಗಜ ಪ್ರಕರಂ = ಇಂದ್ರಿಯಗಳೆಂಬ ದಿಗ್ಗಜಗಳ ಸಮೂಹಂ.

೨೦೩. ವಿಷಯಂಗಳ್ = ಸ್ರಕ್ಚಂದನ ವನಿತಾದಿಗಳು. ಮಾಣಿಸಲು = ಹೋಗಲಾಡಿಸಲು, ಅಡಗಿಸಲು,

೨೦೪. ಮರವಟ್ಟು = ಪರವಶರಾಗಿ.

೨೦೫. ಬಳ್ಳಿ ವಳ್ಳಿ = ನಿರಂತರವಾಗಿ ಬಳೆಯುವ ಬಳ್ಳಿ. ಆಯತನಂ = ಸ್ಥಾನವು.

೨೦೬. ಪ್ರಕೃತಿ = ಸತ್ವ, ರಜಸ್ತಮೋ ಗುಣಾತ್ಮಕವಾದ ಸ್ವಭಾವಂ. ರಜಂ ಪೊರೆದು = ರಜೋಗುಣವು ತುಂಬಿ ಸುಟ್ಟುಱಿ = ಸುಟ್ಟುರೆಗಾಳಿ

೨೦೭. ಭವ್ಯೇತರಂ = ಅಯೋಗ್ಯಂ, ನೀಚಂ.

೨೦೮. ಶ್ರುತಂ = ವೇದಶಾಸ್ತ್ರಗಳು. ಶಾಸ್ತ್ರಜ್ಞಾನಂ. ದಳ್ಳಿಸಿ = ದೊಡ್ಡದಾಗಿ.

೨೦೯. ಸಿಡಿಲೇಱಿಗೆ ಯೆೞ್ದು = ಸಿಡಿಲು ಎರಗುವಹಾಗೆ ಎದ್ದು. ಮೆಯ್ಮೆಱುಗಿ = ಮೈಯ್ಯುಬ್ಬರಿದು. ಅವಧೀರಿಸುತ್ತ = ತಿರಸ್ಕರಿಸುತ್ತ ಮಮ್ಮಲಂ ಮಱುಗಿಪರ್ = ಅತ್ಯಂತ ಸಂತಾಪ ಪಡಿಸುವರು.

೨೧೦. ಬಂದಿಗರ್ = ಜತೆಯವರೆ; ನಿನ್ನೊಂದಿಗರು = ನಿನ್ನಂಥವರು. ಭಾಜನರಪ್ಪರ್ = ಪಾತ್ರರಾಗುವರು. ಉಪಮಾಲಂಕಾರಂ.

೨೧೧. ತಿರುಪ = ತಿರುಗುವ ನಚ್ಚಿನ = ವಿಶ್ವಾಸಿಸುವ.

೨೧೨. ಪ್ರಸ್ತರಂ = ಕಲ್ಲು. ದುಶ್ಚ್ಯವನಂ = ಇಂದ್ರಂ. ಈ ಪದವು ವಿಶೇಷವಾಗಿ ಪ್ರಯೋಗಿಸಲ್ಪಡುವುದಿಲ್ಲ.

೨೧೩. ಬಹುಸಂಸ್ಕಾರಂ = ಬಹಳವಾದ ಪೂರ್ವವಾಸನೆಯು.

೨೧೪. ಬಾರ್ತೆಗೆಯ್ಯಳ್ = ಲಕ್ಷ್ಯಮಾಡುವುದಿಲ್ಲ. ಬಿಪ್ಪಂಡಿಪಳ್ = ದೂಷಿಸುವಳು. ಗಾಂಪಂ = ಎಗ್ಗಂ, ಹೆಡ್ಡಂ.

೨೧೫. ಅಭಿಜಾತನಂ = ಸತ್ಕುಲ ಪ್ರಸೂತನಾದವನನ್ನು. ಅರಿಗುಂ = ಕಡಿಯುವನು ಧಾ. ಅರಿ—ಕೃಂತನೇ ಶ. ದ. ಗಳಪಂ = ಹರಟುವನೆಂದು. ಏಱಿಪಳ್ = ಹಾಸ್ಯ ಮಾಡುವಳು. ಪುರುಡಿಂ = ಮಾತ್ಸರ್ಯದಿಂದ.

೨೧೭. ಮೃಗ ಪ್ರಕರಕ್ಕೆ = ಜಿಂಕೆಗಳ ಗುಂಪಿಗೆ. ಗೋವಿಯದನಿ = ಕೊಳಲಗಾನಂ. ಕರ್ಪೊಗೆ = ಕರಿದು + ಹೊಗೆ.

೨೧೮. ಗರ = ಗೃಹ. ತೋಲ = ಚರ್ಮದ. ಮನುಜರಗೆಯ್ತುಮಂ = ಮಾನುಷ ವ್ಯಾಪಾರವನ್ನು. ದೇವರೆವು = ನಾವುದೇವರು. ಮುಯ್ಯೊನೆ = ಭುಜದ ತುದಿ. ಇಲ್ಲಿ ವಿಗ್ರಹವಾಕ್ಯ ಹೇಗೆ ?

೨೨೧. ಬೆಸನಂಗಳ್ = ದ್ಯೂತಮದ್ಯಾದಿ ಸಪ್ತ ವ್ಯಸನಗಳು. ತನುವ = ತನುವಂ. ಚಟೂರಿಸು = ಮೋಸ ಮಾಡು. ಪ್ರತಾರಿಸು = ವಂಚಿಸು.

೨೨೨. ಉಬ್ಬೆಗಂ = ದುಃಖಂ, ಉದ್ವೇಗಂ (ತ್ಸ)

## 11. ಶರದೃತು ವರ್ಣನೆ.

೨೨೩. ಜಳವಮಾಗುಳ್ದುವುವಿಲ್ಲೆನಲ್ = ಉಷ್ಣವಾಗಿರುವುವುಗಳಿಲ್ಲವೆಂಬಷ್ಟು. ಪೆಱಪಿಂಗೆ = ಹಿಂದುಳಿಯಲು. ವಿಗ್ರಹವಾಕ್ಯಹೇಗೆ? ಉದಂಚತ್ = ಏಳುತ್ತಿರುವ.

೨೨೪. ಒಸರಿಸು = ಒರೆಯಾಗು, ಸುರೆಯಾಗು. ಬಿಂದುದ್ವಯಂ = ಎರಡು ಬಿಂದುಗಳು, ಪಾ. ಹನಿಗಳು. ಪಳಂಚಿದ = ಒಂದಕ್ಕೊಂದು ಹೊಡೆದ.

೨೨೫. ಪ್ರಸನ್ನಂ = (1) ಸ್ವಚ್ಛವಾದ (2) ಪ್ರಸನ್ನ ಎಂಬುದೊಂದು ಕಾವ್ಯಗುಣಂ. ಕಾವ್ಯಾ. ಅತಿರೂಢಾರ್ಥಮಗೂಢಂ ಪ್ರತೀತಿ ಸುಭಗಂ ಪ್ರಸನ್ನಂ. ಯಾವದರ್ಥಕ ಪದಾತ್ಮ್ಯರೂಪ ಮರ್ಥವೈಮಲ್ಯಂ ಪ್ರಸಾದಃ. ರುಚಕಭೂಷೆ = ಮಾಂಗಲ್ಯಾಭರಣಂ. ಕಂಠ = (1) ಕತ್ತು, (2) ನದಿಯ ಒಳಭಾಗ. ಮೃದುಪದನ್ಯಸನೋಚಿತಂ = (1) ಮೃದುವಾದ ಶಬ್ದ ಪ್ರಯೋಗಕ್ಕೆ ಅರ್ಹವಾದ, (2) ಕಾಲಿಡುವುದಕ್ಕೆ ಅರ್ಹವಾದ.

೨೨೬. ವರಚಂದನಚರ್ಚಾಪರಿಕರಂ = ಶ್ರೇಷ್ಠವಾದ ಗಂಧಾನುಲೇಪನಗಳಿಂದಲಂಕೃತವಾದ.

೨೨೭. ವನರುಹಷಂಡದ = ಕಮಲಾಕರದ. ತಸಿಗೊಬ್ಬುಗೆ = ಹೊಸ ಉಬ್ಬರವು. ಇನ = ಸೂರ್ಯಂ, ಪ್ರಿಯ.

೨೨೮. ಜಾತಿ = ಬ್ರಾಹ್ಮಣಾದಿ ಜಾತಿ, ಜಾಜಿಯ ಹೂ. ಪೊದೞ್ದ = ಮೇಲಕ್ಕೆದ್ದ. ಬಗವುದು = ಕಾಣಿಸಿಕೊಂಡಿತು. ಧಾ. ಬಗ = ಜನನೇ ಶ. ವ.

೨೨೯. ಪುಂಡ್ರಾಂಬುಜ = ಬಿಳಿಯ ಕಮಲ. ಎನಸುಂ = ವಿಶೇಷವಾಗಿ. ದ್ವಿಗುಣಿಸುತ್ತ = ಇಮ್ಮಡಿಯಾಗಿ ಮಾಡಿ.

೨೩೦. ಬೆಳ್ಸರಿಗಳ್ = ಬಿಳಿಯ ಹನಿಯ ಧಾರೆಗಳು. ತೆಱಂಬೊಳೆದು = ತೋರ್ಕೆವಡೆದ ಕಾಂತಿಯನ್ನು ಹೊಂದಿ.

೨೩೧. ಪಾಠೀನ ಸಮಾಜಂ = ಮೀನುಗಳ ಗುಂಪು.

೨೩೨. ಮೌಕ್ತಿಕ ಯುಕ್ತದಿಂ ಪೊಗೆದು = ಮುತ್ತುಗಳ ಸಮೇತ ಕೂಡಿದು. ಶುಕ್ತಿಜಂಗಳ್ = ಮುತ್ತುಗಳು. ಪಯೋದವ್ರಜಂ = ಮೇಘಬೃಂದಂ.

೨೩೩. ವಿಪುಳ ವಿಪುಳಾಂತರದೊಳ್ = ವಿಸ್ತಾರವಾದ ಭೂಮಿಯ ಮೇಲೆ. ಅ. ವಿಪುಲಾಗಹ್ವರೀಧಾತ್ರೀ.

## 12. ಚಂದ್ರೋದಯು.

೨೪೪. ಕೆಂಗುಡಿ = ಹವಳ. ವಿಹಾಯಸ = ಆಕಾಶ. ಪೊನ್ನುಡೆ = ಪೀತಾಂಬರಂ. ಅದಭ್ರಗೈರಿಕರಜಂಗಳೊಳ್ = ಬಹಳವಾದ ಗೈರಿಕಾದಿ ಧೂಳಿಗಳಲ್ಲಿ. ಓಜದೊಳ್ = ಪರಾಕ್ರಮದಲ್ಲಿ ಸಂಜೆಗೆಂಪು ಕಾಮಿಗಳಿಗೆ ಉದ್ದೀಪಕವಾಗಿದ್ದಿತೆಂಬ ಅಭಿಪ್ರಾಯವು.

೨೪೫. ವನಸ್ಥನಾವಂ = ಜಲರಾಶಿಯುಳ್ಳದ್ದು ಹಡಗು. ಅಭ್ರಾಂಜನಾವನಿಭೃದ್ಗೈರಿಕಸಾನು = ಅಭ್ರವೆಂಬ ಅಂಜನ ಪರ್ವತಕ್ಕೆ ಗೈರಿಕಾದ ನವಧಾತುಗಳುಳ್ಳ ಬೆಟ್ಟದ ತಪ್ಪಲು. ವಿಷ್ಣುಪದ = ಅಂತರಿಕ್ಷ. ಹ್ರದ = ಮಡುವು. ಉತ್ಫುಲ್ಲ = ವಿಕಸಿತವಾದ. ಜಂಬಾಳಂ = ಕೆಸರು.

೨೪೬. ಜೃಂಭತ್ = ಹೆಚ್ಚುತ್ತಲಿರುವ. ಶಿಖಾ = ಜ್ವಾಲೆ. ಉತ್ತಾಲನೃತ್ತಾರಂಭ ಕ್ಷುಭ್ಯದ್ಗಿರೀಶ ಪ್ರಚುರತರ ಜಟಾಮಾಲಂ = ಎತ್ತಿದ ತಾಳದೊಡಗೂಡಿದ ನರ್ತನದ ಮೊದಲಲ್ಲಿ ಹಾರಾಡುತ್ತಿರುವ, ಈಶ್ವರನ ತಲೆಯ ಜಡೆಯ ಸಮೂಹಂ. ಇದು ಸಾಂಧ್ಯ ರುಚಿ ಎಂಬುದಕ್ಕೆ ವಿಶೇಷಣ. ಮಸಗಿತು = ವೃದ್ಧಿಯಾಯಿತು. ದ್ರಾಮಿಡೀಗಂಡಪಾಳೀಶುಂಭತ್ಸಿಂದೂರಕಂ = ದ್ರಾವಿಡಸ್ತ್ರೀಯ ಕಪೋಲಪ್ರದೇಶದಲ್ಲಿ ಪ್ರಕಾಶಿಸುತ್ತಿರುವ ಸಿಂದೂರ ಬಣ್ಣ. ಇದು ಸಾಂಧ್ಯ ರುಚಿ ಎಂಬುದಕ್ಕೆ ವಿಶೇಷಣ. ಉತ್ಕೃತ್ತ = ಕತ್ತರಿಸಲ್ಪಟ್ಟ. ಮಂದೇಹ = ಮಂದೇಹನಾಮಕ ರಾಕ್ಷಸರು.

೨೪೭. ದಿನವಣಿಜಂ = ಹಗಲೆಂಬ ವರ್ತಕನು. ದಿನಮಣಿಯಂ = ಸೂರ್ಯನೆಂಬ ರತ್ನವನ್ನು, ಅಪಲಪಿಸು = ಕೊಟ್ಟುದನ್ನು ಇಲ್ಲವೆಂದು ಹೇಳು. ಕಷಾಯಾಂಬರಂ = ಕಾವಿಯ ಬಟ್ಟೆ.

೨೪೮. ಧೂಮ್ಯಂ = ಧೂಮಸಮೂಹಂ. ರಸಾಲಂ = ಮಾವು. ಅತಿಮೇದಸ್ವಿ = ಬಹಳ ಕೊಬ್ಬುಳ್ಳ. ರಜನೀಮುಖಂ = ಪ್ರದೋಷ ಸಮಯಂ. ಜರ್ಜಿ = ಗದರಿಕೊಂಡು. ಧ್ವಾಂತಂ = ಕಗ್ಗತ್ತಲೆ.

೨೪೯. ತಣ್ಪಿಟ್ಟನೋ ಕಾರಗಿಲ್ವೂಳಿಂ = ಕೃಷ್ಣಾಗರುವಿನ ಧೂಳಿಯಿಂದ ತಂಪು ಮಾಡಿದನೋ. ಅಣ್ಪಿಡಿದನೊ = ಲೇಪಿಸಿದನೊ. ಬಯ್ತಿಟ್ಟು ಕಾಪಿಟ್ಟನೋ = ಬಚ್ಚಿಟ್ಟು ಸಂರಕ್ಷಿಸಿದನೋ. ನನ್ನಿ = ನಿಶ್ಚಯಂ. ಪ್ರಾವರಣಾಂಶುಕಂ = ಹೊದೆವಬಟ್ಟೆ.

೨೫೦. ಉಳ್ಳಲರ್ = ಮೂರು ಪಾಲು ಅರಳಿದ ಹೂ. ವಿಕಚ = ವಿಕಸಿತವಾದ ಅರಳಿದ.

೨೪೧. ಗೆಂಟು = ದೂರಂ, ಇಲ್ಲಿ ಭೇದಂ. ಪೊಸವಗೆಯುಂ = ಹೊಸರೀತಿಯು ನ್ನು. ನಿರ್ವಿಶೇಷ = ಆವ ವಿಧವಾದ ಗುಣವಿಲ್ಲದೆ.

೨೪೨. ತುಳ್ಕ = ತುಳುಕಾಡಲು, ಕಲಕಿನೋಡಲು. ಧಾ. ತುಳ್ಕು = ಸೇಚನೇ.

೨೪೩. ದೂವಟದೆರೆ = ಎರಡು ಮಡಿಕೆಯು ತೆರೆ. ದೂವಟ = ದ್ವಿಪಟ. (ತ್ಸ) ಅಮರೇಂದ್ರನಲರ್ಚಿದಕಣ್ಗಳಂತೆವೊಲ್ = ಇಂದ್ರನ ತೆರೆದ ಅನೇಕ ಕಣ್ಗಳಂತೆ. ತುಂಬುವೆಟ್ಟೆ = ಪೂರ್ಣಚಂದ್ರಂ.

೨೪೪. ಚಮೂಳಿ = ಚಮೂಣಿ ಅಂದರೆ ಸೇನೆಯ ಮುಂಭಾಗ. ದಾಱಗಂ = ಮು ತ್ತಿಗೆಗೊ. ಧೂಮದುರ್ಬು = ಹೊಗೆಯರಾಸಿ. ಅಱಿಲ್ = ನಕ್ಷತ್ರಂ. ಅಟ್ಕದ = ಭಯಪಡದ. ಆರ್ದಿಸೆ = ಭಯಪಡಿಸಲು.

೨೪೫. ಕೂರ್ಗೆಯಗ್ಗ = ಹರಿತಮಾಡಿ. ಮಘವದಾಶಾಕನ್ಯೆ = ಪೂರ್ವದಿಕ್ಕೆಂಬ ಕನ್ಯೆಯು. ಲಾಜ = ಅರಳು. ಜೀವಂಜೀವ = ಚಕೋರಪಕ್ಷಿ. ಚಂಬೊನ್ = ಕೆಂಪಾದ ಹೊನ್ನು. ಕೆಚ್ಚನೆ + ಪೊನ್. ಶ. ದ.

೨೪೬. ಮಾರುತಿ = ಹನುಮಂತನು. ಪೊಗರೇರೆ = ಕಾಂತಿ ಹೆಚ್ಚಲು. ನುಣ್ಮ ಣಿ = ನುಣ್ಣಿತು + ಮಣಿ. ಇಲ್ಲಿ ಆಂಜನೇಯನು ಸೀತೆಯಿಂದ ತೆಗೆದುಕೊಂಡು ಬಂದ ಚೂಡಾರತ್ನವನ್ನು ಶ್ರೀರಾಮನಿಗೆ ಅ ರ್ಪಿಸಿದ ರಾಮಾಯಣದ ಕಥಾ ಸಂದರ್ಭವನ್ನು ತೆಗೆದುಕೊಳ್ಳ ಬೇಕು.

೨೪೭. ಜನತಾ = ಜನಸಮೂಹಂ. ಚಂದ್ರಂ = 1 ಚಂದ್ರನು, 2 ಪಚ್ಚಕ ರ್ಪೂರ. ಶಿಷ್ಟ ಕಾಂತಾನುರಂಜನಮಂ = (1) ಮುಖ್ಯಳಾದ ಪತ್ನಿಗೆ ಸಂತೋಷವನ್ನು, (2) ಅನುರಾಗಿಗಳಾದ ಪ್ರಿಯ ಪ್ರಿಯೆಗಳನ್ನು ಪರಸ್ಪರ ಪ್ರೀತಿಸುವ ಹಾಗೆ ಮಾಡುವುದು. ರಾ ಜಂ = (1) ಧೊರೆಯು (2) ಚಂದ್ರನು. ಅಮಲ ಶ್ರೀಕಾಂತಂ = (1) ನಿರ್ಮಲಳಾದ ಲಕ್ಷ್ಮಿಯ ಪತಿಯು, (2) ನಿರ್ಮಲವಾದ ಕಾಂತಿಯಿಂದ ಮನೋಹರನಾದವನು. ವಿಧು = ಚಂದ್ರಂ, ವಿಷ್ಣು. ಸತ್ಸಮಾಗಮಂ = (1) ಸತ್ಪುರುಷರೊಡನೆ ಸೇರಿರುವುದು, (2) ನಕ್ಷತ್ರಗಳೊಡನೆ ಸೇರಿರುವುದು. ಅಬ್ಜಂ = (1) ಚಂದ್ರ, (2) ಕಮಲ. ದ್ವಿಜರಾಜಂ = (1) ಬ್ರಾಹ್ಮಣ ಶ್ರೇಷ್ಠ, (2) ನಕ್ಷತ್ರ ಗಳಿಗೆ ಒಡೆಯ.

೨೪೮. ಅಳುರ್ವ = ವ್ಯಾಪಿಸುವ. ತಮಮಂ = ಅಂಧಕಾರವೆಂಬ ತಮೋಗುಣ ವನ್ನು. ವಿಷ್ಣು ಪದಾಗಮದಿಂ = ಅಂತರಿಕ್ಷವೆಂಬ ವಿಷ್ಣು ಪದಾಗ ಮದಿಂದ. ಬ್ರಾಹ್ಮಣನು ರಜಸ್ತಮೋಗುಣಗಳನ್ನು ಬಿಟ್ಟು ಪರಬ್ರ

ಹ್ಮ ಸೇವೆಯಿಂದ ಪಾಪರಹಿತವಾದ ವೈಕುಂಠದಲ್ಲಿ ಶುದ್ಧ ಸತ್ವರೂಪವನ್ನು ಹೊಂದುವ ರೀತಿಯುಳ್ಳಿ. ಎಂದು ಭಾವವು

ಇಲ್ಲಿ ಶ್ಲೇಷೆಯು ಬಹಳ ಚೆನ್ನಾಗಿದೆ.

೨೪೯. ಬಲ್ಸರಿ = ಬಹಳವಾದ ಮಳೆಯು. ಪೊಚ್ಚ = ಪ್ರವಾಹ. ಹೇಮಗರ್ಭಂ = ಬ್ರಹ್ಮನು. ಉಗಿಸುವ = ಸುರಿಯಿಸುವ. ಓಜೆಯಂ = ವರಸೆಯನ್ನು. ಬಳ್ಳರಲ್ಪೊಗರ್ = ಬಳ್ಳಿಯ ಪುಷ್ಪಕಾಂತಿ. ತ್ರಿವಿಕ್ರಮಂ = ಮೂರು ಹೆಜ್ಜೆಗಳಿಂದ ಪ್ರಪಂಚವನ್ನಳೆದ ವಾಮನನು. ಬಟ್ಟುಗುರು = ಗುಂಡಾದ ಉಗುರು.

೨೫೦. ಬವಣಿ = ಭ್ರಮಣ, ತಲೆಸುತ್ತುವುದು, ಪೈತ್ಯ. ಪೈತ್ಯ ಹಿಡಿದವರಿಗೆ, ಮತ್ತು ತಲೆಸುತ್ತುವವರಿಗ ತಲಗ ಸಿಂಬೆಯ ಹಣ್ಣನ್ನು ಹಿಂಡುವ ವಾಡಿಕೆ ಇದೆ.

೨೫೨. ತಿಂಗಳ್ = ಚಂದ್ರಂ. ನಿರೂಪಕಾಂತಃಕರಣಕ್ಕೆ = ಚೆನ್ನಾಗಿ ನೋಡುವರ ಮನಸ್ಸಿಗೆ.

೨೫೩. ತುಪ್ಪುಳ್ವಕ್ಕಿಗಳೊ = ಪಕ್ಷಿರೋಮಗಳೊ. ಎರಲೆ = ಜಿಂಕೆಯು. ಮೆಲ್ಕಿಂ = ಮೆಲುಕು ಹಾಕುವುದರಿಂದ. ಕೂರ್ನೋಟದೆ = ಕ್ರೂರವಾದ ದೃಷ್ಟಿಯಿಂದ. ಭ್ರಾಂತಿಮದಲಂಕಾರಂ.

೨೫೪. ಭಾನು = ಕಿರಣಂ. ರುಕ್ಕು = ರೋಗಂ, ಕಾಂತಿ. ಇಂಗದಿರುಣಿವಱಿವಿಂಡಿಂಗೆ = ಚಕೋರಗಳ ಮರಿಗಳ ಹಿಂಡಿಗೆ. ಘೃಷ್ಟಿ = ಕಿರಣಂ, ಮಯೂಖಂ = 1 ಕಿರಣಂ, 2 ಅಗ್ನಿಜ್ವಾಲೆ. ರಶ್ಮಿ = 1 ಕಿರಣ, 2 ಪಗ್ಗ. ನಾರಾಯಣನ ನಯನಂ = ವಿಷ್ಣು ನೇತ್ರಂ. ಆಲೋಕಂ = ಕಾಂತಿ; ವಿಷ್ಣುವಿಗ ಚಂದ್ರ ಸೂರ್ಯರೇ ನೇತ್ರಗಳು. ಈ ಶ್ಲೋಕದಲ್ಲಿ ಮೊದಲನೆಯ ಪಾದವು ತಪ್ಪು ಬಿದ್ದಿರುವಹಾಗೆ ತೋರುತ್ತದೆ.

೨೫೫. ತಿಂಗಳ್ಗೊಳದೊಳಗ = ಚಂದ್ರನೆಂಬ ಅಮೃತ ಸರೋವರದಲ್ಲಿ. ಇಂದುನಾರದಂ = ಚಂದ್ರನೆಂಬ ನಾರದನು. ಮಿಗದೊವಲ್ = ಕೃಷ್ಣಾಜಿನಂ. ಚಂದ್ರಬಲಂ = ಚಂದ್ರನ ಶರೀರಂ. ಸಿತಾಂಶು ಹಂಸ ಗರುತದೊಳ್ = ಚಂದ್ರನೆಂಬ ಹಂಸದ ಪಕ್ಷದಲ್ಲಿ.

---

## 13. ಚೈತ್ರಯಾತ್ರೆ.

೨೫೮. ಯೋಗಿನುತಂ ಹರ ರವಿಬಿಂಬದೊಳಾಗಿರೆ, ಭೋಗಿನುತಂ ಮಗನಂ ವಿಧುಬಿಂಬದೊಳ್ ಕಱೆಯ ನೆವದೊಳಾದಾ ಎಂದು ಅನ್ವಯಂ. ಅರ್ಥಾಂತರನ್ಯಾಸಾಲಂಕಾರಂ.

೨೬೦. **ಪೊಡರ್ವ** = ಮೆರೆಯುವ. ಧಾ. ಪೊಡರ್ = ಸ್ಫುರಣೇ. ರಾಜವಂಶವನಮಂ = ರಾಜಕುಲವೆಂಬ ಬಿದಿರನಕಾಡನ್ನು. ಬಿಡೆಕೇಳ್ವಾಗ್ರಹಮಂ = ಕೇಳಿಬಿಡುವ ಕುತೂಹಲವನ್ನು. ಅಪ್ಪುಕೆಯ್ = ಅಂಗೀಕರಿಸು.

೨೬೩. ವಾಚಾಳ = ಕುತ್ಸಿತಬಹುಭಾಷಿಗಳಾದ. ನಿರ್ಘಾತವಾತ ರವಂ = ಪ್ರಬಲವಾದ ಸುಟ್ಟುರೆಗಾಳಿಯ ಧ್ವನಿ. ಆತೋದ್ಯಂ = ವಾದ್ಯಂ. ಸೌವರ್ಣ ಕೋಣಾಹತಿ = ಚಿನ್ನದ ಕೋಲಿನ ಹೊಡೆತ.

೨೬೪. ಅಭ್ರಮಾರಮಣಂ = ಐರಾವತಂ. ಬಟ್ಟಜೆಗೆಟ್ಟುದು = ಚದುರಿಹೋಯಿತು. ತಡಂಗಡೆದುದು = ಎಡವಿಬಿದ್ದುದು. ಉರ್ಪಡಗು = ಗರ್ವಗಡು. ಬಿಟದರ್ದು = ಸ್ಥಳಬಿಟ್ಟು ಕದಲಿತು. ಅಷ್ಟದಿಗ್ಗಜಗಳು ಭೇರೀರವಕ್ಕೆ ಹೆದರಿದುವು ಎಂದು ಭಾವವು.

೨೬೫. ಕಂಪಲ್ಮುಸಗಿಸೆ = ವಾಸನೆಯು, ವ್ಯಾಪ್ತವಾಗಲು. ದಿಗ್ರದನಿ = ದಿಗ್ಗಜ. ಪುಷ್ಪಕಾನದ್ಧ ನಾನಾ ಕದಳೀ ಜಾಲಾಂಬರಂ = ಹೂವಿನಹಾರಗಳನ್ನು ಕಟ್ಟಿದ ಅನೇಕ ವಿಧವಾದ ಧ್ವಜಗಳ ಪಟಗಳು. ನಾ.ರ.ಮಾ. ‘ಕದಳೀಮೃಗ, ರಂಭಾಯಾಂ ವೈಜಯಂತ್ಯಾಂಚ’. ಉಟತರಿಪು ಮನೋದೈನ್ಯಂ = ಶತ್ರುಗಳ ಮನಸ್ಸಿಗೆ ದೈನ್ಯವನ್ನುಂಟುಮಾಡುವ.

೨೬೬. ಸೌಪರ್ಣನಂ = ಗರುಡನನ್ನು. ಅನೂನಾನ್ವಯ ಶ್ರೀಯಿಂ = ನ್ಯೂನತೆಯಿಲ್ಲದಿರುವ ಒಳ್ಳೆಯ ಜಾತಿಯ ಸಂಪತ್ತಿನಿಂದ. ಆಂಜನೇಯನು, ಕೇಸರಿಯ ಪತ್ನಿಯಾದ ಅಂಜನಾ ಎಂಬುವಳಿಗೆ ವಾಯುವಿನಿಂದ ಹುಟ್ಟಿದವನಾದುದರಿಂದ ವಂಶದಲ್ಲಿ ಅವನಿಗೆ ನ್ಯೂನತೆ. ಪಲ್ಲಣಂಗಟ್ಟಿ = ಜೀನಿನಿಂದಕೂಡಿ. ಅನ್ಯಚಕ್ರಕ್ಕೆ = ಪರಸೈನ್ಯಕ್ಕೆ. ಚಕ್ರವೆಂಬುವುದಕ್ಕೆ ನಾನಾರ್ಥಗಳಾವುವು ?

೨೬೭. ಪಲ್ಮೊಱೆದನೆ = ಕೋಪಿಸಿಕೊಂಡನ ? ಗುರುಚಕ್ರಕ್ಷುಣ್ಣಮಾರ್ಗಂ = ದೊಡ್ಡವಾದ ಚಕ್ರಗಳು ಹರಿಯುವುದರಿಂದ ಪುಡಿಪುಡಿಯಾದ ಮಾರ್ಗವುಳ್ಳ.

೨೬೮. ಗೊಂದಣಿಸಿದ = ಗುಂಪುಗೂಡಿದ. ಅಡ್ಡಣದೊಡ್ಡಣಂ = ಗುರಾಣಿ ಹಿಡಿದುಕೊಂಡಿರುವ ಸೈನ್ಯಂ. ಬಿಲ್ಲಣಿಯ ತೆರಳ್ಕೆ = ಬಿಲ್ಲಾಳುಗಳ ಗುಂಪು. ತಿಂತ್ರಿಣಿ = ಸಮೂಹಂ. ಪಱೆ = ವಾದ್ಯವಿಶೇಷಂ, ತಮ್ಮಟೆ.

೨೬೯. ಪುಷ್ಕರ ಶೀಕರ = ಸೊಂಡಲಿನ ತುಂತುರು. ಸೇಸೆ = ಅಕ್ಷತೆ. ಗಾವರಿಸುತಿರ್ಪಂತೆ = ಧ್ವನಿಮಾಡುವಹಾಗೆ (ಗಾನಮಾಡುವ ಹಾಗೆ)

ದಾನಭ್ರಮತ್ಕಳಭೃಂಗೀರವದಿಂದೆ = ಮದೋದಕಕ್ಕೆ ಸುತ್ತುತ್ತಿರುವ ಅವ್ಯಕ್ತ ಮಧುರವಾಗಿ ಗಾನಮಾಡುವ ತುಂಬಿಗಳ ಗಾನದಿಂದ. ವ್ಯಾಳೇಭ = ದುಷ್ಟಗಜ.

೨೩೦. ಅಖಿಲಾಶಾಂತಂ = ಸಮಸ್ತದಿಗಂತವೂ. ಕಟಕಂ = ಸೈನ್ಯಂ.

೨೩೧. ಪೆರ್ವಡೆ = ದೊಡ್ಡ ಹಡೆ. ಕಂದಳಂ = ಕಪೋಲಪ್ರದೇಶಂ. ಖರ್ಪರ = ಚಿಪ್ಪಿನ ಮೂಳೆ. ಉಳಿಗಿತ್ತು = ನಿಂತಿತು. ಕಿಱುಂದಲೆ = ಬಗ್ಗಿದ ತಲೆಯುಳ್ಳುದಾದುದು.

೨೩೨. ಪದೆಪಿಂ = ವಿಶ್ವಾಸದಿಂದ.

೨೩೩. ಪಡೆವಳವೆಸನಂ = ಸೇನಾಪತಿಯ ಅಪ್ಪಣೆಯುನ್ನು.

೨೩೪. ಅನೇಕ ಏಕವಚನ ಕರ್ತೃಗಳಿಗ ಒಂದೇ ಏಕವಚನಕ್ರಿಯಾಪದವನ್ನು ಪಯೋಗಿಸಿರುವುದು. ಮುಗ್ಧಾಲೋಕವಾಗಿದ್ದ = ಕಣ್ಣು ಮುಚ್ಚಿಕೊಂಡಿದ್ದ.

೨೩೫. ಮುಱುಗಿಸಿ = ಶಮನಮಾಡಿ. ಅಡಗಿಸಿ. ಯಾನಲೀಲೆ = ಪ್ರಯಾಣ ವಿಲಾಸವನ್ನು. ಕಣ್ಣಾರ್ಪಿನಂ = ನೋಡಿದಣಿವಂತೆ.

೨೩೬. ತೊೞ್ತುೞಿಯಿಂ = ತುಳಿತದಿಂದ, ಕುಟಿಯುಂ ತೆಮರುಂ = ಹಳ್ಳಮೂತಿಟ್ಟು. ನದೀನದೌಘಂ = ನದೀ ಮತ್ತು ನದಗಳ ಸಮೂಹಂ. ಮಲ್ಲಿನಾಥ ಹೇಳುವ ರೀತಿಯಲ್ಲಿ "ಪ್ರಾಕ್ಸ್ರೋತಸೋನದ್ಯಃ ಪ್ರತ್ಯಕ್ ಸ್ರೋತಸೋನದಾ ನರ್ಮದಾಂವಿನಾ"

೨೩೭. ಬರ್ದುಂಕುನಂ = ಜೀವಿಸೋಣ. ಧಾ. ಬರ್ದುಂಕು. ಬರ್ಮಗೆ = ಬಂದು ಬಾರ.

೨೩೮. ಅಸುಪಿಟ್ಟವರ್ = ಪ್ರಾಣವನ್ನುಳಿಸಿಕೊಂಡವರು. ಬೆಸಕಯ್ವಂ = ಅಧೀನರಾಗೋಣ.

೨೩೯. ಅನತಕ್ಷತ್ರಿಯರೊತ್ತುಗೊಂಡ = ಶರಣಾಗತರಾಗದ ಕ್ಷತ್ರಿಯರು ಆಶ್ರಯಿಸಿದ. ಗಿರಿದುರ್ಗಕ್ಕುಗ್ರವಜ್ರಾಗ್ನಿ—ಗಿರಿ ಮತ್ತು ವಜ್ರ ಈ ಪದಗಳ ಔಚಿತ್ಯವೇನು? ಔರ್ವಾಗ್ನಿ = ಬಡಬಾನಲಂ. ವಿಗುರ್ಪಿಸಲ್ = ಭಯಪಡಿಸಲು, ಆಶ್ಚರ್ಯವನ್ನುಂಟುಮಾಡಲು. ವಿಕ್ರಾಂತಮಂ = ಪರಾಕ್ರಮವನ್ನು.

೨೪೦. ಉಜ್ಜಿದ = ಪರಾಕ್ರಮವುಳ್ಳ. ಪರಿಮುತ್ತುಗೊಂಡು = ಮುತ್ತಿಗೆ ಹಾಕಿ, ಲೂಟಿಮಾಡಿ. ಆಯ್ಕುಳಿಗೊಂಡಂ = ಆಯ್ದುಕೊಂಡನು, ಶೇಖರಿಸಿಕೊಂಡನು. ಉದ್ಘ = ಶ್ರೇಷ್ಟವಾದ.

೨೪೧. ಕಜುತ್ತು = ಗುರಿಯಿಟ್ಟು, ಅಡಿಗಿಡಲ್ = ನಿರ್ಮೂಲವಾಗುವಂತೆ.

೨೮೨. ಪಾಥೋನಿಧಿ = ಸಮುದ್ರಂ. ತವಿಸಲ್ = ನಾಶಮಾಡಲು. ನೀರ್ವಾನಸರ್ = ನೀರಮನುಷ್ಯರು.

೨೮೩. ಬೆಸಕೆಯ್ಯದ = ಆಜ್ಞಾಧಾರಕರಾಗಿ ನಡೆಯದ. ಬೇಡವೆಟ್ಟು = ಬೇಡರ ಪಾಳೆಯಂ. ಇಱುಂಬುಗೊಂಡು = ಸಂಕಟದಲ್ಲಿ ಸಿಕ್ಕಿ.

೨೮೪. ಉದ್ದಂಡತೆ = 1 ಔದ್ಧತ್ಯಂ, 2 ಕಾವುದ್ದವಾಗಿರುವಿಕೆ. ಕಂಟಕ = 1 ಬಾಧೆ, 2 ಮುಳ್ಳು. ರಾಜಲೀಲೆ = 1 ಅರಸರ ವಿಲಾಸ, 2 ಚಂದ್ರವಿಲಾಸ. ಗುರುಸ್ಫೂರ್ತಿ = 1 ದೊಡ್ಡತನ, 2 ಬೃಹಸ್ಪತಿಯ ತೋರ್ಕೆ. ಚಪಲತೆ = 1 ಚಾಪಲ್ಯ, 2 ಮಿಂಚು. ವಿಪಕ್ಷತ್ವಂ = 1 ಶತ್ರುತ್ವಂ, 2 ರೆಕ್ಕೆಗಳಿಲ್ಲದಿರುವಿಕೆ. ಕೋಶವಿಭೂತಿ = 1 ಬಂಡಾರದ ಐಶ್ವರ್ಯ, 2 ಮೊಗ್ಗಿನ ಸೊಗಸು. ಇಲ್ಲಿ ಕೊಟ್ಟಿರುವ ಮೊದಲನೆಯ ಅರ್ಥವು ರಾಜರಲ್ಲೊಪ್ಪದು. ಎರಡನೆಯ ಅರ್ಥವು ಆಯಾ ಸಪ್ತಮ್ಯಂತ ಪದಗಳಲ್ಲಿ ಅನ್ವಯಿಸತಕ್ಕುದಾಗಿರುವುದು.

---

## 14. ಚಾರದತ್ತ ಚರಿತ್ರಂ.

೨೮೫. ಬಸೆದಿರೆ = ಸಂತೋಷದಿಂದಿರಲು. ಧಾ. ಬಸೆ = ಪ್ರಸನ್ನೇ. ಕೆಲವಾನುಂ ಇಲ್ಲಿ ಕೆಲವು ಎಂಬುದರ ಮೇಲಿರುವ ಪ್ರತ್ಯಯವು ಆವ ಅರ್ಥದಲ್ಲಿ ಬಂದಿದೆ ?

೨೮೬. ಬಸಗೆ = ಉತ್ಸವಂ.

೨೮೭. ಪರದಂ = ವರ್ತಕಂ. ಮೊದಲಂ = ಮೂಲಧನವನ್ನು. ನೆರವಂಪಾರ್ಪೊಡೆ = ಸಹಾಯವನ್ನಪೇಕ್ಷಿಸಿದರೆ.

೨೮೮. ಅಕ್ಷೀಣ ದೋರ್ದ್ರವಿಣಂ = ಕೊರತೆಯಿಲ್ಲದ ಬಾಹು ಪರಾಕ್ರಮವೆಂಬ ಐಶ್ವರ್ಯವುಳ್ಳವಂ. ಸಾರ್ಥ್ಯಂ = ವರ್ತಕರ ಗುಂಪು. ಮಾತುಳಂ = ಮಾವನು. ಗಂಧಯುಕ್ತಿ = ವಾಸನಾದ್ರವ್ಯಗಳ ಸೇರ್ಕೆ. ನಿ. 'ಮೇದಿನೀ. ಯುಕ್ತಿ, ಸ್ತ್ರೀ ನ್ಯಾಯಯೋಗಯೋಃ.' ಪೊಱೆಗಟ್ಟಿ = ಹೊರೆಯನ್ನು ಕಟ್ಟಿ.

೨೯೦. ನೆಱಪಿದ = ಸಂಗ್ರಹಿಸಿದ. ಕಾರ್ಪಾಸಂ = ಹತ್ತಿಯಬಟ್ಟೆ.

೨೯೧. ಕೇಡೆಂಬುದು ತನ್ನಮನಂ ನೋಡಲ್ಕಾಗಿರ್ಕುಂ = ಕೇಡು ಒಬ್ಬ ಪ್ರಾಣಿಯ ಮನಃ ಪರಿಕ್ಷಾರ್ಥವಾಗಿ ಪ್ರಾಪ್ತವಾಗಿರುವುದು. ಸಮನಿಸದೇ = ಪ್ರಾಪ್ತವಾಗದೆ ಹೋಗುವುದೆ ?

೨೯೨. ಈರಾಱುಮೆಲ್ಲಂ ಎಂದಿರಬೇಕು. ಉದಾತ್ತಂ=ಪ್ರಖ್ಯಾತನಾದ. ನಿರತಂ=ಸತ್ಯಶೀಲಂ. 'ವಸ್ತೂತ್ಕರಂ' ಎಂದಿರಬೇಕು.

೨೯೩. ಉಚ್ಚಳಿಸಲ್=ಮೇಲಕ್ಕೆ ಹಾರಲು. ಸೀಯಂ ಪರಿಯೆ=ಹಡಗಿನ ಪರಸ್ಪರ ಸೇರಿದ ಭಾಗಗಳು ಬಿಟ್ಟುಹೋಗಲು. ಸೀಯಂ=ಸೀವ್ಯಂ (ತ್ಸ.) ಕೂವಕಂಬಂ=ಧ್ವಜಸ್ತಂಭವು. ವಾರಿಕರ್=ನಾವೆಯನ್ನು ನಡೆಯಿಸುವರು.

೨೯೪. ಸೆಡೆದಿರ್ಪುದು=ಅಂಜಿಕೊಂಡಿರುವುದು. ಮನುಚರಿತಂ=ಮನುಷ್ಯನಂತಾಚರಿಸುವವನು. ಪಾಯಲ್=ಲಂಘಿಸಲು. ಸದುದ್ಯಮಂ=ಒಳ್ಳೆಯ ಕೆಲಸ. ಸೆಱೆಗೆಯ್ದ=ಕಟ್ಟಿಹಾಕಿದ್ದ. ಪ್ರಮಾದವಲಗೆ=ಪ್ರಮಾದಸಂಭವಿಸಿದ ಕಾಲದಲ್ಲಿ ತಪ್ಪಿಸಿಕೊಳ್ಳಲು ಅರ್ಹವಾದ ಸಾಧನಂ. ಕುಱುವಂ=ದ್ವೀಪಂ.

೨೯೫. ಸೂತವಿದ್ಯಾ=ರಸವಿದ್ಯೆ. ಮೇದಿನೀ. ನಿ. ಸೂತಸ್ತು ಸಾರಥೌ, ಕ್ಷತ್ರಿಯಾದ್ಬ್ರಾಹ್ಮಣೀಸುತೇ, ನಂದಿಪಾರದಯೋಃ ಪುಂಸಿ.

೨೯೬. ಅರ್ಬಿಸುವ=ಭಯಂಕರವಾದ.

೨೯೭. ಸೂರೆಯ ಗುಂಡಿಯೊಳ್=ಸೋರೆಯ ಬುರುಡೆಯಲ್ಲಿ. ನೀಡಿರದೆ ನೀಡಿದನೇಣಂ=ಒಡನೆ ಕೊಡುವ ಹಗ್ಗವನ್ನು. ಪೊೞ್ತರ್=ಹೊತ್ತು, ಕಾಲ.

೨೯೮. ಸಮಾಧಿ=ಚಿತ್ತೈಕಾಗ್ರತೆ.

೨೯೯. ಗೊರವಂ=ಗುರು.

ತೃಷಾಪರನೆಂ=ದಾಹ ಪೀಡಿತನಾದ ನಾನು. ಕೊಳೆದಳಿದು=ಕೊಳೆತು ನಾಶವಾಗಿ.

೩೦೦. ಅದಯಂ=ಕರುಣೆಯಿಲ್ಲದ. ಅಘಟಂಕರ್ಮನಿರ್ಮಾಪಣಂ=ಕರ್ಮದ, ಪ್ರಭಾವವು ಅತಿಶಯವಾದುದೆಂದು ಭಾವವು.

೩೦೧. ಶಿಲೋಚ್ಚಯಂ=ಗುಡ್ಡ.

೩೦೨. ಅಮಿತಗತಿಗಳೆವು=ಅಮಿತಗತಿಗಳಾಗಿದೇವೆ.

೩೦೩. ಪವನ ಪಥದಿಂ=ಆಕಾಶಮಾರ್ಗದಿಂದ.

೩೦೪. ಗಭಸ್ತಿಗಳಿಂ=ಕಿರಣಗಳಿಂದ.

೩೦೫. ವಂದನ ಮಾಲಾಪ್ರಸರಂ=ಅನೇಕ ತೋರಣಗಳು. ಪರಕೆಯಂ=ಆಶೀರ್ವಾದವನ್ನು.

## 15. ಕಾನನ ವರ್ಣನೆ.

೨೦೬. ಎಕ್ಕಲಂ = ಹಂದಿ. ಕೊಟಾರಂ = ಕೋಷ್ಠಾಗಾರಂ (ತ್ಸ). ಎಂಟಡಿ = ಶರಭಮೃಗ. ಕಾಟಿ = ಕಾಡೆಮ್ಮೆ. ಅರಸುಮಿಗಂ = ಸಿಂಹಂ. ಎಲರುಣಿ = ಸರ್ಪ. ಖಡ್ಗ = ಖಡ್ಗಿಮೃಗ.

೨೦೮. ಸುಜ್ಜಲು = ಚುಜ್ಜಲು. ಉದಿ = ಊದಿಮರ. ಬೆಜ್ಜಲು = ಬೆದ್ದಲು, ಬಯಲಲ್ಲಿ ಬೆಳೆವ. ಅರಿಟಣ = ಅಂಟುವಾಳ. ಕರಂಜಿಗ = ಗರ್ಜಿಗೆ ಕಡವ = ಕದಂಬ (ತ್ಸ). ಸಸಿನೇಸಱಬೆಳಗಿಗೆ ವಜ್ಜಗೂಡದೆ = ಸೂರ್ಯಚಂದ್ರರ ಬೆಳಕಿಗೆ ರಂಧ್ರ ಕೂಡದಂತೆ. ಬಿಂಜಂ = ವಿಂಧ್ಯಂ (ತ್ಸ.)

೨೦೯. ಪಂದರಿಸಿ = ಚಪ್ಪರವಾಗಿ, ತೂಱಲ್ಗೊಂಬಿನ = ದೂರಹೋದ ಕೊಂಬುಗಳ.

೨೧೦. ಬಾಕುಳಿತನಂ = ಪಿರಿದಾಸೆ.

೨೧೧. ಸೊಣಗ = ಶುನಕ (ತ್ಸ). ಮರೆ = ಒಂದುಜಾತಿಯ ಜಿಂಕೆ. ಮೊಗರಿ = ಮುಂಗಿಸಿ. ಕೂರಂಗಿ = ಹೆಣ್ಣುಸಾರಂಗ. ಮುಸು = ಸಿಂಗಳೀಕ. ಸೀಱುಡು = ಜೀರುಂಡೆಹುಳ. ಎರಡುತಲೆಯಪಕ್ಕಿ = ಅಮಟ್ಡಲವಕ್ಕಿ, ಗಂಡಭೇರುಂಡ.

೨೧೨. ಠವಣೆಕೋಲ್ = ವಿವಿಧ ಸಂಕಲನ ವ್ಯವಕಲನ ತೋರಿಸುವ ಕೋಲು. ಕವಳಿಗೆಗೆದರ್ದ = ಬಿಡಿಸಿದ. ಉಪರಿಮದೊಳಗೆ = ಎತ್ತರವಾದ ಸ್ಥಳದಲ್ಲಿ.

೨೧೩. ಜಂಗಿಸಿ = ನೆಗೆದು. ಆವಱಿತು = ಉಗುರಿನಿಂದ ಪರಚಿತು. ಇಲ್ಲಿ ಅರ್ಥಾಂತರನ್ಯಾಸಾಲಂಕಾರಂ.

೨೧೪. ಎರೆ = ಒಂದುಬಗೆಯ ಕ್ರಿಮಿ. ಭರಿಕ್ಕೈಯಿಂದ = ಸೊಂಡಲಿಂದ. ಉರವಣೆ = ವೇಗ.

೨೧೫. ತಮುತ್ತಿರ್ದರುಮಂ = ತಮ್ಮಿಬ್ಬರನ್ನೂ. ಶ. ದ. ಸೂ 122.

೨೧೬. ತೆಗಳ್ವ = ನಿಂದಿಸುವ. ಏಡಿಪ = ಹಾಸ್ಯಮಾಡುವ. ಕಬರಿ = ಕೇಶಪಾಶ.

೨೧೮. ಸೂಡಿ = ಮುಡಿದುಕೊಂಡು. ಪಾಡಱಿದುಟ್ಟು = ಸರಿಯಾದ ರೀತಿಯಲ್ಲಿ ಉಟ್ಟುಕೊಂಡು.

## 16. ಮದಗಜ ವರ್ಣನೆ.

೩೧೯. ಸುಧಾವಮಂ = ಬೆಳ್ಳಿಯಕಾಂತಿಯುಳ್ಳ, ಬೆಳ್ಳಿಯದೇಹವುಳ್ಳ.

೩೨೦. ಜವನಂ = ವೇಗವುಳ್ಳುದು. ಜವನಂ = ಯಮನನ್ನು. ಇಳಿಸೆ = ಅಧಃಕರಿಸಲು.

೩೨೧. ಗಂಧಸಿಂಧುರಂ = ಮದಿಸಿದ ಆನೆಯು.

೩೨೨. ಕದುಪು = ಮಂದೆ. ಪದಪಿನೆ = ಸಂರಂಭದಿಂದಲೆ, ಸಡಗರದಿಂದಲೆ. ಊಡಿಸಿ = ಕುಡಿಸಿ.

೩೨೪. ತಿಳಕಂ = ಹಣೆಯಬೊಟ್ಟು. ತಿಳಕೆ = ಮಚ್ಚೆ. ಅರ್ಧಕಪೋಲೆ = ಅರ್ಧಗಂಡಸ್ಥಳವುಳ್ಳ. ಇದು ತಿಳಕೆ ಎಂಬುವುದಕ್ಕೆ ವಿಶೇಷಣ.

೩೨೫. ಎರಡುಂಕಟಂ = ಎರಡು ಗಂಡಸ್ಥಳಗಳೂ. ಪುಷ್ಕರಂ = ಸೊಂಡಿಲತುದಿ. ಪ್ರಣಾಳೀ = ನಲ್ಲಿ, ನಾಲೆ.

೩೨೯. ಕುಂಜರಕುಭೃತ್ಕುಂಜಕ್ಕೆ = ಕುಂಜರ ಶೈಲದ ಲತಾಗೃಹಕ್ಕೆ.

೩೩೦. ನೀಲಕಂಠಕಲಿತ = ಕಪ್ಪಾದಕಂಠದಿಂದ ಕೂಡಿದ. ವಿಷಮಾನಲ ಭೀಮಲೋಚನಂ = ಬೆಸನಾಗಿರುವ ಅಗ್ನಿಯಂತಿರುವ ಭಯಂಕರವಾದ ನೇತ್ರವುಳ್ಳ, ಉಗ್ರವಾದ ಅಗ್ನಿಯಂತಿರುವ ಭಯಂಕರವಾದ ನೇತ್ರವುಳ್ಳ. ಪದನತದಾನವಾರಿ = ನಮಸ್ಕರಿಸಲ್ಪಟ್ಟ ದೇವತೆಗಳುಳ್ಳ, ಕಾಲಿನವರಿಗೂ ಸ್ರವಿಸುವ ಮದೋದಕವುಳ್ಳ. ಗಿರಿಜಾತ ವಿನೂತಕೇಳಿ = ಪಾರ್ವತಿಯು ನವಕೇಳಿಯುಳ್ಳ, ಬೆಟ್ಟದಲ್ಲಿ ಉಂಟಾದ ಹೊಸ ಆಟ ಉಳ್ಳ.

೩೩೧. ? ಈ ಪದ್ಯದ ನಾಲ್ಕನೆಯ ಪಾದವು ಸರಿಯಾಗಿಲ್ಲ. "ಮದೋನ್ನಿಬಂಧದಿಂ" ಎಂದಿರಬಹುದು.

೩೩೨. 'ಕಂಧರದೋಳ್' ಎಂಬುದಕ್ಕೆ ಬದಲಾಗಿ '**ಕುಧರದೊಳ್**' ಎಂದಿರಬೇಕು.

೩೩೩. ಕಟನಿಕಟೋತ್ಕಟ ಮದದಿಂ = ಗಂಡಸ್ಥಲ ಸಮೀಪದಲ್ಲಿರುವ ಅಧಿಕವಾದ ಮದೋದಕದಿಂದ.

೩೩೪. ಎಡೆಯುಡುಗದದಾನಿಗೆ = ಅವಿಚ್ಛಿನ್ನವಾಗಿ ಕೊಡುವದಾತೃವಿಗೆ, ಎಡೆಬಿಡದೆ ಸುರಿಯುವ ಮದೋದಕವುಳ್ಳುದಕ್ಕೆ. ಎಡೆಯಱಿಯುತೆ = ವಿಚ್ಛಿನ್ನವಾಗಿ. ಎಡೆಗಿಱಿದ = ಮುತ್ತಿಕೊಂಡಿರುವ.

೩೩೫. ಮಾತಂಗದಾನವಿಭವಂ = (1) ಹೊಲೆಯನ ದಾನವೈಭವವು. (2) ಆನೆಯ ಮದೋದಕದ ವೈಭವವು. ಇನಿಪಿರಿದು = ಇಷ್ಟದೊಡ್ಡದು. ವಿಜಾತಿಗೆ ಮಧುಪವ್ರಜಕ್ಕೆ = (1) ಪಕ್ಷಿಜಾತಿಯಾದ

ತುಂಬಿಗಳ ಗುಂಪಿಗೆ (2) ನೀಚಜಾತಿಯಾದ ಹೆಂಡಕುಡುಕರ ಗುಂಪಿಗೆ.

೧೩೬. ಇಡುವುಗಳು = ಹಳ್ಳಗಳು.

೧೩೮. ಮಸಕವಮಂ = ಕೋಪೋದ್ರೇಕವನ್ನು. ಮಸಕವಮಂ = ವಿಜೃಂಭಣೆಯನ್ನು.

೧೩೯. ಉಚ್ಛೃಂಖಲ = ತಡೆಯೇ ಇಲ್ಲದ. ಉಜ್ಜೃಂಭಿತ........ಕ್ಷೋಭವೇ, ವಿಳಯಾ........ಕ್ಷೋಭಂ; ಆತ್ಮೀಯ........ಕೋಪವೇ, ಉದ್ದೀಪ್ತ........ನಲಂ; ವೇಗವೆ, ಪ್ರಳಯ....ನಿಲಂ; ತಾನೆ–ಉಚ್ಛೃಂಖಲ....ಅಂತಕಂ. ಎಂದು ಅನ್ವಯಿಸಿಕೊಳ್ಳುವುದು.

೧೪೦. ಕೋದು = ಪೋಣಿಸಿ, ಚುಚ್ಚಿ. ತಿರಿಕಲ್ = ಅಣ್ಣೆಕಲ್ಲು. ಕಾಯ್ಪಂ = ಕೋಪವನ್ನು.

---

## 17. ತಪೋವನ ವರ್ಣನೆ.

'ವಿಲಸದ್ಭಾರತ ವರ್ಷ' ವೆಂದಿರಬೇಕು.

೧೪೧. ಚಕ್ರರಾಜಂ = ಸುದರ್ಶನಂ.

೧೪೮. ಇಡಿದ = ತುಂಬಿದ.

೧೪೯. ಅಜರಾಮರತ್ವಮಂ = ಮುಪ್ಪೂಸಾವೂ ಇಲ್ಲದಿರುವುದನ್ನು.

೧೫೧. ಕಂಡೂತಿ = ನವೆ, ತಿನಿಸು.

೧೫೨. ಶೋಧನಂ = ಗುಡಿಸುವುದು.

೧೫೪. ಅಱ್ಗಸಲ್ = ಕೃಶವಾಡಲು. ತಪಸಿ = ತಪಸ್ವಿ (ತ್ರೀ). ಮರಂದ = ಪುಷ್ಪರಸಂ.

೧೫೫. ಚಾಂದ್ರಾಯಣ—ಏಕೈಕಂಹ್ರಾಸಯೇತ್ಪಿಂಡಂ ಕೃಷ್ಣೇಶುಕ್ಲೇಚವರ್ಧಯೇತ್। ಉಪಸ್ಪೃಶಂಸ್ತ್ರಿಷವಣ ಮೇತಚ್ಚಾಂದ್ರಾಯಣಂ ಸ್ಮೃತಂ॥ ಮನುಸ್ಮೃತಿ.

೧೫೫. ಕೃಛ್ರ = ಪ್ರಾಜಾಪತ್ಯಾಗ್ನೇಯಾದಿ ಪ್ರಾಯಶ್ಚಿತ್ತರೂಪ ಕೃಛ್ರಗಳು. ಓತುಮಾಳ್ಪ = ವಿಶ್ವಾಸದಿಂದಮಾಡುವ.

೧೫೬. ಯಮ = ಇಂದ್ರಿಯನಿಗ್ರಹ. ನಿಯಮ = ಉಪವಾಸ ಜಾಗರಣಾದಿ ವ್ರತಗಳು. ಅಣಿಯುತ್ತುಂ = ಅಪ್ಪಳಿಸುತ್ತಲೂ.

೧೫೮. ಸಡೆಯೆ = ಸ್ಥೂಲವಾಗಲು.

೧೬೦. ಸಾತ್ವಿಕೋನ್ನತಿ = ಸತ್ವಗುಣಾಧಿಕ್ಯವು.

---

## 18. ಅರ್ಜುನನ ತಪಸ್ಸು.

೩೬೧. ಅವಿದ್ಯೆ = ಮಾಯೆ. ಅನಕ್ಷರಂ = ನಾಶರಹಿತಂ. ಅಭವಂ = ಹುಟ್ಟಿಲ್ಲದವನು. ಚಿದಖಂಡರೂಪಂ = ಅಖಂಡಜ್ಞಾನಸ್ವರೂಪಂ.

೩೬೨. ಇೞಿದೇಱದೆ ನೆಟ್ಟಗೆನಿಂದಸುಯ್ = ಉಚ್ಛ್ವಾಸ ನಿಶ್ವಾಸಗಳಿಲ್ಲದೆ ನಿಶ್ಚಲವಾಗಿ ನಿಂತ ಉಸಿರು.

೩೬೩. ಪಱಿದಿಕ್ಕಿ = ಧ್ವಂಸಮಾಡಿ.

೩೬೪. ನಾದ = ಸನ್ಮಾತ್ರವಾದ ಅಕಾರ ಸ್ವರೂಪವಾದುದು. ಬಿಂದು = ಚಿನ್ಮಾತ್ರವಾದ ಉಕಾರಸ್ವರೂಪವಾದದು. ಅಳುಂಬಂ = ಅತಿಶಯಂ.

೩೬೬. ನಿಗಮಾಂತಮೃಗ್ಯಂ = ಉಪನಿಷತ್ತುಗಳಿಂದ ಹುಡುಕುವುದಕ್ಕೆ ಅರ್ಹನಾದವನು, ಚಿದಚಿತ್ಪ್ರಪಂಚ = ಜೀವಪ್ರಕೃತ್ಯಾತ್ಮಕವಾದ ಪ್ರಪಂಚ.

೩೬೭. ಫಲೋದನಂ = ಫಲಾಹಾರಂ. ವಾತಾಶನಂ = ವಾಯ್ವಾಹಾರಂ.

೩೬೯. ಅವಗಾಹಮಿರ್ದಂ = ಮುಳುಗಿದ್ದನು. ಅವಂ—ಕರ್ತೃಪದ.

೩೭೦. ಪಳುಕು ಗೊಡದ = ಸ್ಫಟಿಕದ ಕುಂಭದ. ಬೆಚ್ಚವೊಲಿರ್ದಂ = ಬೆಸಿಗೆ ಹಾಕಿದಂತೆ ಇದ್ದನು.

೩೭೧. ಶೃಂಗಾಟಕ = ನಾಲ್ದಾರಿ ಕೂಡಿದ ಚೌಕಂ.

೩೭೨. ಸಮರಸದ ಭಾವಂ = ಐಕ್ಯಭಾವಂ, ಅದ್ವೈತಭಾವಂ.

---

## 19. ಗದಾಯುದ್ಧ.

೩೭೪. ಭ್ರುಕುಟಿ = ಹುಬ್ಬುಗಂಟಿಕ್ಕುವುದು. ಅಟ್ಟಾಸುರರ್ = ಭಯಂಕರರಾದ.

೩೭೭. ಎನಸುಮುೞ್ಕಿಸಲ್ಕಾರದೆ = ಸ್ವಲ್ಪವೂ ಅರಗಿಸಿಕೊಳ್ಳಲಾರದೆ.

೩೮೦. ದಂಡೆಯಾನಿಕ್ಕುವ—ಇಲ್ಲಿ ದ್ವಿತಿಯಾ ವಿಭಕ್ತಿಯಲ್ಲಿ ದೀರ್ಘಪ್ರಯೋಗಕ್ಕೆ ಶ. ದ. ಸೂತ್ರ ನೋಡು.

೩೯೧. ಕಡುಕೆಯ್ದು = ತೀವ್ರವಾಗಿ. ನಿಘಾತ = ಹೊಡೆತ, ಏಟು. ಆಂಕೆಗೊಂಡು = ಹಿಡಿದುಕೊಂಡು.

೩೯೪. ಪೊಱವಾಱು = ನಿತಂಬಂ. ಉಡಿ = ಕಟಿಪ್ರದೇಶಂ. ಮುಯ್ವು = ಭುಜಾಗ್ರಂ. ಮುಡುಪು = ಹೆಗಲು.

೩೮೫. ಸೂಟಿ' = ಬಾರಿ.

೩೮೬. ನೊಣೆದ = ನುಂಗಿದ. ಧಾ. ನೊಣೆ = ಗಿಲನೇ

೩೮೭. ಪಾಂಚಾಲೀ ಪ್ರಪಂಚಕ್ಕೆ = ದ್ರೌಪದಿಯ ಮಾನಭಂಗಕ್ಕೆ

೩೮೮. ಗೆಂಟು = ದೂರ

೩೮೯. ಸೆಣಸಿ = ಯುದ್ಧ ಮಾಡಿ.

೩೯೦. ಕೋವರ್ = ಕುಂಬಾರರು.

೩೯೧. ನೇಱಿದಂ = ಕಟ್ಟಿದನು (ಎಂದು ಭಾವವು.)

೩೯೪. ಏವಂ = ಏನಮಾಡಬಲ್ಲನು? ಉಮ್ಮಳಿಸಿದರ್ = ಚಿಂತಿಸಿದರು.

೩೯೬. ನನ್ನಿ = ಸತ್ಯ. ಎರ್ದೆಗಲಂಕಿ = ಚಿತ್ತಕ್ಷೋಭೆಯುಂಟಾಗಿ, ಕಣ
ರ್ವು = ದೃಷ್ಟಿಯಿಂದ ಜಬರಿಸುವುದು. ಧಾ. ಜರ್ವು—ಆಕ್ರಮ
ಣಧ್ವನೌ.

೩೯೮. ಬಿಱುಬಿಂದಂ = ಬಿರುಸಿನಿಂದ. ಕೋಳಂ = ಕೊಳ್ಳಿ, ಗಾಳಿಯ ಹೊ
ಡೆತ. ಅರ್ಥಾಂತರನ್ಯಾಸಾಲಂಕಾರಂ.

೩೯೯. ದಾನಿಯುಂ ಗದಾನಿಲಂ (ಗದ + ಅನಿಲಂ) ಎಚ್ಚರಿಸುವುದು. ಶೂರ
ನಂಗದಾನಿಲಂ (ಗದಾ + ಅನಿಲಂ) ಗದೆಯ ವಾಯುವು ಎಚ್ಚರಿ
ಸುವುದು. ಪಂದೆ = ಹೇಡಿ.

೪೦೦. ಪೊಡೆಯುಲರಾತಂ = ಪದ್ಮನಾಭಂ, ಕೃಷ್ಣಂ. ನೆಱಂ = ಜೀವಸ್ಥಾನ,
ಮರ್ಮಸ್ಥಾನ. ಪೊಲಗಿಡದೆ = ತಪ್ಪದೆ.

೪೦೧. ಸತ್ತಿಗಂ = ಬಲಶಾಲಿಯಾದವನು. ಕುರುಕುಭೃತ್ = ಕುರುರಾಜಂ, ಕು
ಭೃತ್ ಎಂಬುದರ ಅವಯವಾರ್ಥ ಹೇಗೆ? ನೆಱಂ = ಮರ್ಮಸ್ಥಾನಂ.

೪೦೨. ಉಡಿದು = ಮುರಿದು. ಧಾ. ಉಡಿ = ಮೋಟನೇ.

## 20. ಕರ್ಣಾರ್ಜುನ ಸಂಗ್ರಾಮ.

೪೦೩. ಅಗುರ್ವಿನಸೂನು = (ಶತ್ರು) ಭಯಂಕರ ಪುತ್ರನಾದ ವೃಷಸೇನನು.
ಪಾಟಿಯೆ = ಕ್ರಮವೆ? ಸರಿಯೆ?

೪೦೪. ಅಣುಗದಮ್ಮನ = ಮಕ್ಕಳ ಮತ್ತು ತಮ್ಮನಾದ ದುಶ್ಶಾಸನನ. ಮಾ
ಣ್ಬ = ಬಿಡುವೆಯಾ?

೪೦೫. ಉಕರ್ಮ = ಔದ್ಧತ್ಯ. ಅಘಟು = ಪರಾಕ್ರಮಂ. ಕಾನೀನ = ಕನ್ಯೆಯ
ಲ್ಲಿ ಹುಟ್ಟಿದವನೆ? ಸೆಟ್ಟೆಯುಬಳ್ಳಂಕಿಱಿದು = ಸ್ವಭಾವವಾಗಿ ನೀನು
ಹೀನಸತ್ವನೆಂದು ಭಾವವು. ನಿಕ್ಕುವಂ = ನಿಶ್ಚಯಂ

೪೦೬. ಬೞ್ದಪರ = ಜೀವಿಸ ಬಲ್ಲರೆ?

೪೦೭. ಪಸುಗೆಯನುಡಿ = ಭೇದಕಗಳಾದ ಮಾತು, ಮರ್ಮೋದ್ಘಾಟನೆಯ ಮಾತು. ದಶಶತಕರ ತನೂಜಂ = ಸೂರ್ಯಪುತ್ರನಾದ ಕರ್ಣನು. ಎಳೆಯಂ = (ಇನ್ನೂ) ಹುಡುಗನು. ಕೊಳ್ವಟ್ಟುಂ = ಕೊಳ್ಳೆಗೊಳಗಾಗಿಯೂ ಎಂದರೆ ಇದ್ದುದನ್ನು ಕಳೆದುಕೊಂಡೂ ಅಥವಾ ಎಳೆಯಂ ಕೊಳ್ವಟ್ಟುಂ = ಭೂಮಿಯನ್ನು ಕಳೆದುಕೊಂಡೂ. ಬಳೆದೊಟ್ಟುಂ = (ವಿರಾಟನಗರದಲ್ಲಿ ಶಿಖಂಡಿಯಾಗಿ) ಬಳೆಯನ್ನು ತೊಟ್ಟುಕೊಂಡೂ. ಬಳ್ವಳನೆ = ಬಲುದೊಡ್ಡದಾಗಿ, ಅಳವುಂ = ಸಾಮರ್ಥ್ಯವೂ. ಆಯಮುಂ = ಅರ್ಹತೆಯೂ.

೪೦೮. ನಾಡ್ಕಿಡಿಗಳೆವೊಡೆ = ರಾಜ್ಯಭ್ರಷ್ಟರನ್ನಾಗಿ ಮಾಡಲು. ಬೀರಂ ಬಿಱಿಕ್ಕೆಯುಮ = ಬೀರನ್ನೂ ಬಿಕ್ಕೆಯು ಕಾಯುನ್ನೂ. ಅಟ್ಕಿಡಿದ ಬೀರಂ = ನಿಶ್ಶೇಷವಾದ ಶೌರ್ಯವು. ಧಾ. ಅಟ್ಕಿಡು = ನಿರವಶೇಷೇ.

೪೦೯. ಮತ್ತನಯಂ = ನನ್ನ ಮಗನಾದ ವೃಷಸೇನಂ. ಬೆಳ್ಕುತ್ತಿರ್ದನಪ್ಪೊಡೆ = ಹೆದರುತ್ತಿದ್ದನಾದರೆ. ಪತೊದಳ್? = ಏನುಸುಳ್ಳು?

೪೧೦. ಕಸವರದ = ಚಿನ್ನದ. ಭಯರಸಕದ = ಭೀತಿರಸದ. ಏೞುಗುಮೆ? = ಉಜ್ಜೀವಿಸುವುದೆ?

೪೧೧. ಅಱುವಡಮಾತಂ = ಕೆಟ್ಟಮಾತನ್ನು. ಕೆಮ್ಮನೆ = ಸುಮ್ಮನೆ.

೪೧೨. ಉರ್ಚು = ಧಾ. ಆಕರ್ಷಣೇ. ತಿರುವಾಯ್ವೆಱರ್ಚೆ = ಜ್ಯಾಸಂಧಾನಮಾಡಿ. ತೆಗೆನೆಱೆವ = ಆಕರ್ಣಾಂತವಾಗಿ ಸೆಳೆಯುವ. ಪಂದರ್ = ಚಪ್ಪರ.

೪೧೪. ಅೞ್ವು = ನಾಶಮಾಡಿ. ಧಾ. ಅೞ್ವು— ದಹನಾತಿ ಕ್ರಮಣೇ. ಅಜಾಂಡದಂತವರಂ = ಬ್ರಹ್ಮಾಂಡದಂತ್ಯದವರೆಗೂ. ಅಗುರ್ವು = ಭಯಂಕರವಾಗಿರುವ ಭಾವಂ. ಅರ್ಬಿಸೆ = ಆರ್ಭಟಿಸುವಹಾಗಿರಲು.

೪೧೫. ಇಸಲ್ಕೆ = ಪ್ರಯೋಗಿಸಲು. ತುಡುವಾ? = ಸಂಧಾನಮಾಡುವೆಯಾ?

೪೧೬. ನನ್ನಿ ಬನ್ನ........ ಮಾೞ್ಪೆನೇ = ಸತ್ಯವನ್ನು ಚ್ಯುತಿಗೊಳಗಾಗುವಂತಹುದನ್ನಾಗಿ ಮಾಡುವೆನೇ?

೪೧೮. ವೈಕರ್ತನಂ = ಸೂರ್ಯಪುತ್ರಂ, (ಕರ್ಣಂ). ನನ್ನಿಯಂನಿಱಿಸಲ್ಕಾರ್ಕುಂ = ಸತ್ಯವನ್ನು ಕಾಯಲು ಶಕ್ತನಾಗುವನು. ಪೆಂಪು = ಔನ್ನತ್ಯಂ, ಖ್ಯಾತಿ. ಕಟ್ಟಾಯಮಂ = ಮಹಾಪ್ರತಿಜ್ಞೆಯನ್ನು

೪೨೦. ಆಗಡೆ = ಆಗಲಿ. ಎಱೆವ = ಎರಗುವ.

೪೨೨. ಬಳಗಱಿಯದೆ = ಗುಟ್ಟು ತಿಳಿಯದೆ. ಉಳ್ಕಂ = ಉಲ್ಕ (ತ್ಸ)

೪೨೩. ಅರಿಗನ = ಅರ್ಜುನನ. ಬಟ್ಟನಂಬುಗಳ = ಚಕ್ರಾಕಾರವಾದ ಬಾಣಗಳ.

೪೨೪. ಬಲ್ಲಣಿಗೆ = ಹಿಂಡುವ ಸಾಧನಂ. (?) ಧಾ. ಕೊಕ್ಕರಿಸು = ವಿಭತ್ಸ್ರನೇ. ಬಱಿವಂ = ಸಹಾಯ ಸಾಧನವಿಲ್ಲದವಂ. ಬಱಿದು ಎಂಬುವರಿಂದ ವ್ಯುತ್ಪನ್ನವಾದ ಶಬ್ದಂ.

೪೨೫. ಆಣ್ಮಂ = ಒಡೆಯಂ, ನಾಯಕಂ.

೪೨೬. ನೆಲಂ ಪಿಡುಗಿತ್ತು = (?) ಭೂಮಿಯು ವಜ್ರಾಯುಧದಿಂದ ಹೊಡೆದ ಹಾಗೆ ಆದುದು.

೪೨೭. ಆಟಂದಳರುತ್ತುಂ ಖಂದು = ವಿಲಾಸದೊಡನೆ ವೇಗದಿಂದ ಬಂದು.

೪೨೮. ಒಡಂಬಡಂಪಡೆಯೆ = ಸಾಮ್ಯವನ್ನು ಪಡೆಯಲು. ಪಿಱಿ = ಔನ್ನತ್ಯಂ. "ಪಡೆವನಾಱು" ಇದು "ಪಡೆವನಾತು" ಎಂದಿರಬಹುದು.

---

## 21. ಶಿಶುಪಾಲವಧೆ.

೪೩೦. ಪಿಪಚ್ಛಂ = ಪಿನ ಭೂಷಣ.

೪೩೪. ಪೂರ್ವದೇವಂ = ಪೂರ್ವದದೇವಂ. (ರಾಕ್ಷಸಂ).

೪೩೫. ಅಲಗೆ = ಹಲಗೆ, ಒಂದು ತೆರದ ತಮ್ಮಟೆ. ಕಲ್ಲಿ = ಹೆಣೆದ ಬಟ್ಟೆಯ ಚೀಲ. ಚೆಲ್ಲಿ = ಛಲ್ಲೀ (ತ್ಸ) ಮರದ ನಾರು. ಪೀಲಿ = ನವಿಲ್ಗರಿ.

೪೩೬. ಬೇಳ್ದ = ಆಹುತಿಮಾಡಿದ.

೪೩೭. ಅಭಿಮತರಾದರ್ = ಮಾನ್ಯರಾದರೂ.

೪೩೮. ದುಷ್ಟಮನ = ಇದು ಸಂಬೋಧನಾ ವಿಭಕ್ತಿ.

೪೪೧. ಒರೆಯಿಡಲ್ = ಹೋಲಿಸಲು.

೪೪೨. ಪಂಚಮಹಾಶಬ್ದಂ = 1. ಕೊಂಬು, 2. ತಮ್ಮಟೆ, 3. ಶಂಖ, 4. ಭೇರಿ. 5. ಜಾಗಟೆ.

೪೪೩. ರಸನಾಶಿಖಿ = ನಾಲಿಗೆ ಎಂಬ ಜ್ವಾಲೆಯುಳ್ಳ. ತುಂಡ = ಬಾಯಿ.

೪೪೪. ಮುಖರಂ = ಶಬ್ದಾಯಮಾನವಾಗಿರುವಂತೆ. ಪ್ರಬಳನಂ ಬಳನಂ = ಬಲಿಷ್ಠನಾದ ಬಲರಾಮನನ್ನು. ಕೃತಾಂತ ಶರಣಂ = ಯಮನ ಮನೆಯು. ಗಳಮಂಗಳಮಂ = ಕಂಠಮಂಗಳವನ್ನು.

೪೪೫. ಬಾಣಸಂ = ಮಹಾನಸಂ (ತ್ಸ) ಅಡುಗೆಯಮನೆ.

೪೪೮ ಪಗರಣಿಗರ್ = ನಾಟಕದಲ್ಲಿ ವೇಷ ಧರಿಸುವರು.

೪೪೯. ಇಲ್ಲಿ ಅರ್ಥಾಂತರ ನ್ಯಾಸಾಲಂಕಾರಂ.

೪೫೧. ಪೊಂಬುಂ = ಧೀರವಡೆದಂ. (ಚತುರಾಸ್ಯ ಬೊಮ್ಮಂಟು), ಮಹಾಧೀರಂ.

೪೫೨. ಪರಪುಷ್ಟಂ = ಪರಪುಷ್ಟಂ (ತ್ಸ). ಕಾರ್ಷ್ಣ್ಯಂ = ಕಪ್ಪು.

೪೫೩. ಪೇಸದೆ = ಹೇಸದ.

೪೫೪. ಮಱ್ತಿಯುಂ = ಮತ್ತಿಮರವನ್ನು. ( ಯಮಳಾರ್ಜುನರನ್ನು )

೪೫೫. ಎಂಗುಮೆ ? = ಎನ್ನುವುದ ?

೪೫೬. ವಜ್ರನಿರ್ಘೋಷಘೋಷಣಂ = ವಜ್ರಾಯುಧದ ಹೊಯ್ಲಿನ ಶಬ್ದಕ್ಕೆ ಸಮಾನವಾದ ಘೋಷವುಳ್ಳ. ನಿರ್ಘಟಿಸಿ = ಎತ್ತಿಹಾಕಿ, ಅಪಹಾಸ್ಯ ಮಾಡಿ.

೪೬೦. ಜಯೋತ್ಕಂಠೆ = ಜಯಿಸಬೇಕೆಂಬ ಆತುರತೆಯು. ಜರೋಪಹಾಸಿದ = ಅಪಹಾಸ್ಯಮಾಡಿ ನಕ್ಕು. ಜರೋಪಹಾಸ = ನಿಕೃತಾಂಗಾಪಹಸನೇ. ತಳಿಗ = ತಟ್ಟೆ.

೪೬೧. ಖರರೋಚಿರ್ಮಂಡಲಂ = ಸೂರ್ಯಮಂಡಲವು.

೪೬೨. ಪೊಂಬರಿಯಣಂ = ಪೊಂದಟ್ಟೆ. ಅಮತ್ರಂ = ಪಾತ್ರಂ. (ಅರ್ಘ್ಯಪಾತ್ರಂ)

೪೬೫. ಕಡವು = ಕದಂಬ. ಕದಂಬ (ತ್ಸ). ಉಳ್ಳಲರ್ದಂತೆ = ಅರಳಿದಂತೆ.

---

## 22. ಹೇಮಂತಋತುವರ್ಣನೆ.

೪೬೬. ಉರ್ಚಿಕೊಳುತ್ತಂ = ಹಿಡಿದು ಸೆಳೆಯುತ್ತಲೂ, ಅಲ್ಲಾಡಿಸುತ್ತಲೂ. ರುತಂ = ರೋದನಧ್ವನಿ.

೪೬೭. ಮಾಗಿಯು ಪಕ್ಷಿಯಾದ ಗಾಳಿಯೆಂಬ ವಾಹನವನ್ನೇರಿ, ಹಿಮವೆಂಬ ಉಗ್ರವಾದ ಕತ್ತಿಯನ್ನು ಝಳಪಿಸುತ್ತಾ, ಲತೆಗಳ ಪುಷ್ಪವನ್ನೆಲ್ಲಾ ನಿರ್ಮೂಲಮಾಡುತ್ತಾ ಬಂದುದು ಎಂದು ಭಾವವು. ಅಭೀಲತೆ = ಭಯಂಕರವಾದ ಭಾವಂ.

೪೬೯. ಧಾತ್ರೀಫಲಂ = ನೆಲ್ಲಿಯಕಾಯಿ. ಹರಣಭರಣಕಾರ್ಯಕ್ಷಮನೋ ! ಶಿಕ್ಷಾ ರಕ್ಷಣ ಕಾರ್ಯಗಳಲ್ಲಿ ಸಮರ್ಥನೋ ! ಅರ್ಥಾಂತರನ್ಯಾಸಾಲಂಕಾರಂ.

೪೭೩. ಅಳಿ ಅಂಬುಜದ ಇಱುಂಬಿನೊಳ್ ಮಿಡುಕದು ಎಂದು ಅನ್ವಯವು. ಇಱುಂಬು = ಇಕ್ಕಟ್ಟಾದ ಸ್ಥಳ.

೪೭೪. ಸಾರ್ಗೆ = ಸಮೀಪಕ್ಕೆ. ಅಸ್ಖಲಿತದಿಂ = ನಿಶ್ಚಲವಾಗಿ, ಭಯಪಡದೆ

೪೭೭. ಸವಿರ್ = ಮೆಯ್ಯುರೋಮ. ಕೋಡಿ = ಶೈತ್ಯದಿಂದ ಸೆಳೆದು. ಕಬ

ಗಳ ಗುಂಪು ಪ್ರಕಾಶಿಸುತ್ತಿದ್ದ ರತ್ನದ ಬಂಡೆಯನ್ನು ದವಾಗ್ನಿಯು ಕಿಚ್ಚೆಂದು ಭಾವಿಸಿ ಕೈನೀಡಿ ಅದಕ್ಕೆ ಹತ್ತಲು ಹೋಗುವುದು ಎಂದು ತಾತ್ಪರ್ಯ.

೪೭೮. ಕುಲಾಯಂ = ಗೂಡು. ಸ್ವಭಾವೋಕ್ತ್ಯಲಂಕಾರಂ.

೪೮೦. ಸಂಕ್ರಮಿಸಿದ = ವ್ಯಾಪ್ತವಾದ.

೪೮೧. ಪೊಡಕರಿಸಿದ = ಕಾಣಿಸಿಕೊಂಡ.

೪೮೨. ನಲ್ಲುಣಿಸು = ಬಳ್ಳಿಯ ಆಹಾರ. ಘುಸೃಣ = ಕುಂಕುಮ. ಕದಂಬದಂಬುಲಂ = ವಿಶೇಷವಾದ ಹೀಳಿಯ ಮಲೆ ಅಟಕ. ಎಸಕದ = ಪ್ರಕಾಶಮಾನವಾದ.

---

## ೨೩. ವಾಮನಾವತಾರದ ಕಥೆ.

೪೮೪. ಕಪಿಲ್ತುಕಾಸೆ = ಕಪಿಲವರ್ಣವಾದ ವಸ್ತ್ರ. ಜನ್ನಿವರಂ = ಜನಿವಾರ. ಬಾದಸ = ದ್ವಾದಶ (ತ್ಸ). ಬೊಟ್ಟಿನೊಳ್ = ಬೆರಳಿನಲ್ಲಿ. ನೆಗೆದ = ಮೇಲಕ್ಕೆದ್ದ.

೪೮೫. ಮಾಣಿ = ವಟು. ಬೆಕ್ಕಸಂಪಟ್ಟು = ವಿಸ್ಮಯವನ್ನು ಹೊಂದಿ. ಕುಳ್ತಡಿ = ಚಿಕ್ಕವಾದ. ಶಬ್ದ. ದ. ೧೮೪ನೇ ಸೂತ್ರ ನೋಡು. ಮದಿಲ್ = (ಉದ್ದವಾದ) ಗೋಡೆ. ಅಟಮಟಿಗಂ = ಮಾಯಾವಿ.

೪೮೬. ಕಾಲೊಗ್ಗಿದಂ = ಕಾಲನ್ನಿಟ್ಟನು. ಸೆಂಡು = ಚೆಂಡು. ಗಲ್ಪ್ಯಮನಂ = ಜಯಿಸುವ ಮನಸ್ಸುಳ್ಳ.

೪೭೮. ಪಟಿತ = ಪ್ರಕಾಶಿಸುತ್ತಿರುವ "ತರ್ಪಿನಮುಸುಕ್ರಮದಿಂ" ಎಂದಿರಬೇಕು. ಈ ವಾಮನನಿಗೆ ಮೊದಲು ಸತ್ತಿಗೆಯ ರೂಪವಾದ ಸೂರ್ಯನು, ಇವನು ಬೆಳೆದಹಾಗೆಲ್ಲಾ ಕ್ರಮಕ್ರಮವಾಗಿ ತಗ್ಗಿ ನಾಭಿಯ ರೂಪವಾಗಿ ಪರಿಣಮಿಸಿದನು ಎಂದು ತಾತ್ಪರ್ಯ.

೪೮೮. ಅಭ್ರೋತ್ಪಟಕೇತು = ಮೇಘಮಂಡಲವೆಂಬ ಮೇಲಕ್ಕೆತ್ತಿದ ತೆರೆಯ ಗಂಡಿಗೆ. ಸುಟ್ಟುರೆಯಿಂದ = ಚಕ್ರಾಕಾರವಾದ ವಾಯುಮಂಡಲದಿಂದ. ವರ್ಧಿಷ್ಣುವಾದಂ = ಬೆಳೆಯುತ್ತಾಹೋದನು.

೪೯೦. ಎಳಮೀಂಗಳ್ = ಬಾಲನಕ್ಷತ್ರಗಳು. ತಪ್ತಕಂದಳಿತಂ = ಬಿಸುಪಾದ ಮತ್ತು ಹೊಸದಾಗಿ ಪ್ರಾದುರ್ಭವಿಸಿದ. ಇದು ಸೂರ್ಯಾತಪಕ್ಕೆ ವಿಶೇಷಣ. ವಿಕ್ರಿಯಾ = ಮಾರ್ಪಡುವಿಕೆ. ಭಂಜಿತಮಹಾಮಂತ್ರಿ

ಕ್ರಮಂ = ಯಾರಿಂದ ಮಂತ್ರಿಯಾದ ಶುಕ್ರಾಚಾರ್ಯರ ಆಲೋಚನೆಯು ಏರ್ಪಡದು ನಡೆಯದಹಾಗೆ ಆಯಿತೋ ಅಂಥ.

೪೯೧. ಪೊಲಗೆಟ್ಟು = ಭ್ರಾಂತರಾಗಿ. ತಾಗಿನಂ = ತಾಗುವಿನಂ. ತಗಲುವ ಹಾಗೆ.

೪೯೨. ಈಪದ್ಯದ ಮೂರನೆಯ ಪಾದವು ಸರಿಯಾಗಿಲ್ಲ.

೪೯೩. ಸಿತಗಂ = ದುಷ್ಟನು, ಕೆಟ್ಟಮನುಷ್ಯ. ಪ್ರಯೋಗ. "ಶ.ದ. ಬಿರ್ಚಿ ಬಿಗೊಳಿಸುಸಿತಗನ ಕಪ್ಪಡಮುಂ" ಅತಿವರ್ತಿ = ಮೀರಿನಡೆಯುವನು. ಸಂತಮಿರಲಕ್ಕುಮೇ? = ಸುಮ್ಮನೆ ಇರಲಾಗುವುದೆ ?

೪೯೫. ಸಿಱಿಗೊಂಡಳಲ್ವ = ಕ್ರಮವಾಗಿ ಜೋಲಾಡುವ.

೪೯೬. ಧೂಮಧ್ವಜಂ = ಅಗ್ನಿ. ನಂದಿಪೋದತ್ತು = ಅಡಗಿಹೋಯಿತು.

---

## 24. ನಗರಪ್ರವೇಶ.

೪೯೭. ಬಿಱಿಯಂ ನಾಣ್ಗೊಡಬೆಂಕೊಂಡವಂ = ನಾಚಿಕೆಗೆಟ್ಟು ಓಡಿದ ಬ್ರಹ್ಮನನ್ನು ಹಿಂದಟ್ಟಿದ. ಪಟ್ಟನ = ಮಲಗಿದವನ. ಧಾ. ಪಡು = ಶಯನೆ. ಅದಟಂ = ಶೂರನು. ಪಡೆವಳ್ಗರ್ = ಸೇನಾನಾಯಕರು.

೪೯೮. ಪಱೆ = ಭೇರಿವಾದ್ಯಂ. ಬಸಗ = ಉತ್ಸವ.

೪೯೯. ಕುಂಚ = ಒಂದು ತರದ ಬೀಸಣಿಗೆ. ಅಡಪ = ತಾಂಬೂಲದ ಪೆಟ್ಟಿಗೆ. ತವಕ = ಕಾಳಾಂಜಿ. ಕಜ್ಜಳ = ಕಣ್ಕಪ್ಪು. ಇಚ್ಛೆಗಾರ್ತಿ = ರತಿ. ಎಕ್ಕಸರಂ = ಏಕಾವಳಿ ಹಾರ. ಪರಿವಡೆದಿರೆ = ರಮ್ಯವಾಗಿರಲು.

೫೦೦. ಎಡೆನೆಱೆಯದು = ಸ್ಥಳಸಾಲದಹೋಯಿತು. ಅಣಿ = ಪಡೆ, ದಟ್ಟಿ.

೫೦೧. ಪುತ್ತಿಕಿಸಿದುವು = ಗೆಟ್ಟಿಯಾಗಿ ಹಿಡಿದುಕೊಂಡುವು. ಸೂಡಕ = ಕಿಪಿ. ತುಱುಂಗಮಂಗಳ್ಗಳ್ = ವಿಶೇಷವಾಗಿ ಬೆಳೆದ ರೆಪ್ಪೆಯು ಕೂದಲುಳ್ಳ ಕಣ್ಣುಗಳು.

೫೦೨. ಜಗುಳ್ದು = ಜಾರಿ. ಧಾ. ಜಗುಳ್ = ಅಪಸರಣೇ. "ಉಡಿಯೊಳ್" ಎಂಬುದಕ್ಕೆ ಬದಲಾಗಿ "ಉಡೆಯೊಳ್" ಎಂದಿರಬೇಕು. ದಾಳಂ = ಕಾಂತಿ.

೫೦೩. ಪೊಣರ್ಗಳ್ = ಯುಗ್ಮಂ.

೫೦೩. ಕೈವಂದ = ಫಲಿತವಾದ. ಅಳವಱಿದು = ಯೋಗ್ಯತೆಯನ್ನರಿತು.

೫೦೪. ಬಿಜ್ಜೋದರಿ. (ತ್ಸ) ವಿದ್ಯಾಧರಿ.

೫೦೫. ನೇವುರಂ, (ತ್ಸ) ನೂಪುರಂ = ಕಾಲಂದಿಗೆ. ಓಸರಿಸೆ = ಜಾರಲು.

೫೦೬. ಬಂಬಲೋ = ಸಮೂಹವೊ. ಕೂರ್ಪುಗಿರ್ದ = ಹರಿತವಾಗಿದ್ದ. ಕಾಂಗೊ = ಅಡಕೆಯುಮರವೊ. ಬೞಿಸಲ್ವಿನಂ = ಹಿಂದೆಬರುತ್ತಿರಲು.

೫೦೭. ಸೀಳ್ದ = ಉದ್ದವಾದ. ತಕ್ಕಿನೊಳ್ = ಪ್ರೀತಿಯಿಂದ. ಅಗುರ್ವಿಸ = ವಿಸ್ಮಯವನ್ನುಂಟುಮಾಡುವ.

೫೦೮. ಗಾಡಿ = ಸೊಬಗು. ಜಿನುಂಗುತಿರ್ಪಿನಂ = ಅವ್ಯಕ್ತಧ್ವನಿಯಂ ಮಾಡುತ್ತಿರಲು, ಝೇಂಕಾರವಮಾಡುತ್ತಿರಲು. ನಱುಸುಯ್ಗೆ = ವಾಸನಾಯುಕ್ತವಾದ ಉಸಿರ್ಗೆ. ಪೊಗೞುಲಿ = ಹೊಗಳುವ ಶಬ್ದಂ.

೫೦೯. ಓರಗೆಯಾಗೆ = ಸಮನಾಗಲು.

---

## 25. ವಸಂತಋತು ವರ್ಣನೆ.

೫೧೦. ಉದ್ಘ = ಶ್ರೇಷ್ಠವಾದ. ಮೆಯ್ವೆತ್ತದೇಂಬಂದುದೊ ? = ಏನುಮೂರ್ತಿ ಧರಿಸಿಬಂದುದೊ ?

೫೧೧. ಬಂಧುರ = ಮನೋಹರವಾದ. ಅೞ್ದಿಕೊಳುತುಂ = ಮುಣುಗುತ್ತಲೂ.

೫೧೨. ಅವರ್ಚಿದಂ = ಹತ್ತಿರಕ್ಕೆ ಬಂದನು. ಅಡುರ್ಕೆ = ಮುತ್ತುವುದು. ಸಮ್ಮನಿಸಿದ = ಹತ್ತಿರದಲ್ಲಿರುವ. ಪೋಪೆಱತಾವುದು = ಹೋಗು ಇನ್ನು ಬೇರೆ ಏನು.

೫೧೩. ಉಗ್ಗಲಿಸಿರ್ದ = ಹಬ್ಬಿದ. ತೂಳ್ದಿದತ್ತು = ಓಡಿಸಿತು, ಹೋಗಲಾಡಿಸಿಕೊಂಡಿತು. ಉತ್ಕಲಿಕಾ = ವಿರಹಚಿಂತೆ.

೫೧೪. ಪಸಾಯ = ಉಡುಗೊಱೆ. ಪೊಸಪಚ್ಚಂ = ನೂತನವಾದ ಆಭರಣ.

೫೧೫. ತಿಮಿರ್ = ಅನುಲೇಪನಂ. ಬಂದಮಾವುಗಳ್ = ಹಣ್ಣುಬಿಟ್ಟಿರುವ ಮಾವಿನ ಮರಗಳು.

೫೧೬. ಸೞಿಗೊಂಬು = ಚಿಕ್ಕದಾದಕೊನೆ. ಕೀೞಾಳವನಂ = ಸೇವಕನಾದವನನ್ನು (?)

೫೧೭. ಅನ್ಯಪುಷ್ಟ = ಕೋಗಿಲೆ. ಅಗದಂಗಳಾದ = ಔಷಧಗಳಾದ. ಸಮಾಖ್ಯೆ = ಪ್ರಸಿದ್ಧವಾದ ಹೆಸರು.

೫೧೮. ಅಱುತ = ದಾಹದಿಂದ ಒಣಗಿಹೋದ. ಧಾ. ಅಱು—ನಿರ್ದ್ರವೇ.

ಮುಕ್ಕುಳಿಸಿ = ಕುಟುಕುಕೊಟ್ಟು. ನಲ್ಲುಣಿಸು = ಒಳ್ಳೆಯ ಆಹಾರ.

೫೨೦. ತೆಮಳ್ದುಕೊಂಡು = ಕೂಡಿಸಿಕೊಂಡು. ಧಾ. ತೆಮಳ್ದು—ಚಯನೇ. ಮರುಳ್ದು = ಮೋಹಗೊಂಡು. ಆಗರಂ, (ತ್ಸ) ಆಕರಂ.

೫೨೨. ಪೇಱಿದತ್ತು. ಇದಕ್ಕೆ ಕರ್ತೃ—'ಪೂಸಗೊಂಚಲಂ'

೫೨೩. ಅಲಂಪನು = ವಿಭವವನ್ನು.

೫೨೪. ಭಾಜನಾಂಗಮಹೀಜಂ = ಕಲ್ಪವೃಕ್ಷಂ. ಅಲಗಣಸು = ತಿರಸ್ಕಾರ, ಅಲಗಳೆಯುವಿಕೆ. ಕೊಸಗು = ಬೆಟ್ಟದಾವರೆ. ಮಲರ್ದುದು + ಅಲರ್ದುದು + ಉಳ್ಳಲರ್ದುದು = ಮಲರ್ದಲರ್ದುಳ್ಳಲರ್ದುದು.

೫೨೫. ಗೊಂದಳದಿಂ = ಗುಂಪಾಗಿಸೇರಿ.

೫೨೬. ದೊರೆವಂದುವೊ = ಸದೃಶವಾದುವೊ.. ಉನ್ನಾಳ = ಮೇಲಕ್ಕೆದ್ದದಂಟುಗಳುಳ್ಳ.

೫೨೭. ಕಿಱುಮಡುಗೊಂಡ = ಚಿಕ್ಕಮಡುವಾಗಿರುವ. ಕುತ್ತೆಸೆಱ್ಗುಱುವ ದೊಳ್ಮೆಯ್ಗರೆದು = ಚಿಕ್ಕಪುಷ್ಪದಳವೆಂಬ ದ್ವೀಪದಲ್ಲಿ ಅಡಗಿ. ಕೀೞೆಸಳ್ವೞಿಯಿಂ = ಕೆಳಗಿರುವ ಪುಷ್ಪದಳದ ದಾರಿಯಿಂದ. ಪೞಿವಡಿಸಿತ್ತು = ನರವೇರಿಸಿತು.

೫೨೮. ಕನಕಪದ್ಮಕೋಶ = 1 ಚಿನ್ನದ ಕಮಲದ ಮೊಗ್ಗು 2 ಪದ್ಮಸಂಖ್ಯೆಯುಳ್ಳ ಕನಕದ ಬೊಕ್ಕಸ.

೫೨೯. ದೂಸಂ = ವಸ್ತ್ರಂ.

---

## 26. ವನ ವರ್ಣನೆ.

೫೩೧. ಕರಂತಕ = ಭರಣಿ. ನೇಱಿದಂ = ತೂಗುಹಾಕಿದನು. ಬಿಣ್ಗೋಲ = ದಪ್ಪವಾದಕೋಲೆ. ಈಳೆ = ಹೇರಿಳೆ, ಕಿತ್ತಿಳೆಮರ.

೫೩೨. ತುಂಡಂ = ಕೊಕ್ಕು.

೫೩೩. ಉಪ್ಪರವಟ್ಟಂ = ಮೇಲ್ಭಾಗದ ಅಲಂಕಾರ.

೫೩೪. ಕುಳಂಬಿತವಿಟಪಂ = ನೆಲವಮೇಲೆ ಜೋಲಾಡುವ ಕೊಂಬೆಗಳುಳ್ಳ. ಅವನಿಸಂಸ್ಥಾವಕುಳಂ = ನೆಲದಮೇಲೆ ಎಲ್ಲೆಡೆಯಲ್ಲಿಯೂ ಬಿದ್ದಿರುವ ವಕುಳಪುಷ್ಪಗಳುಳ್ಳ.

೫೩೫. ಸುಮನಃಕಲಮಂಜುಳಕಂ = ಹೂಗಳಲ್ಲಿ ಅವ್ಯಕ್ತಮಧುರವಾಗಿ ಶಬ್ದ

ಮಾಡುವ ಮಂಜುಳಕವೆಂಬ ಪಕ್ಷಿಯುಳ್ಳ. ಅತನುಕೀರ್ತ್ಯುಜ್ಜ್ವಳಕಂ = ಮನ್ಮಥನ ಕೀರ್ತಿಯನ್ನು ಪ್ರಕಾಶಗೊಳಿಸುತ್ತಿರುವ.

೫೩೬. ಎಱಪ = ಎರಗುವ.

೫೩೮. ಬಾಳದಸಾಲ್ = ಲಾಮಂಚದಸಾಲು. ಮಡಲಿಡು. ಧಾ. ಮಡಲ್—ವಲ್ಲೀವೃದ್ಧೌ.

೫೪೦. ಉದವಾಸಿತರುದ್ವಿಹಂಗ ಸಮ್ಮದಕಲಹಂ = ನೀರಿನಲ್ಲಿರುವ ತಮ್ಮ ಗೂಡುಗಳಲ್ಲಿ ಶಬ್ದಮಾಡುವ ಪಕ್ಷಿಗಳ ಸಂತೋಷಸೂಚಕವಾದ ಕಲಹವುಳ್ಳ. ಸದನಿಳಯಂ = (ಮರದಿಂದಬಿದ್ದ) ಹಣ್ಣುಗಳಿಗೆ ಆವಾಸಸ್ಥಾನಂ. (?)

೫೪೧. ಲಯ = (ಸಂಗೀತಶಾಸ್ತ್ರರೀತಿಯಲ್ಲಿ) ದ್ರುತ, ಮಧ್ಯ, ವಿಲಂಬಿತಕಾಲ

೫೪೨. ನಿಶಾಂತಂ = ಮನೆ.

ಪದಚ್ಛೇದವನ್ನು ಮುಂದೆ ಹೇಳುವಂತೆ ಮಾಡಬೇಕು :—
ವನವಂ + ಅವನ ತಲತೋಜ್ಜೇವನವನವಂ + ಅವನ
ವು + ಅತನು ಶಿಖಿಗೆ = ವನವ ........................ಶಿಖಿಗೆ.
ಜಗತ್ಪಾವನವನವಂ + ಅಳಿವಿಳಾಸಭವನವಂ + ಅವಂ + ಅಜಾತ
ಪೂರ್ವಂ = ಜಗತ್ಪಾವನ ..................ಜಾತಪೂರ್ವಂ. ಅವನ
ವು = ಸಂರಕ್ಷಣರೂಪವಾದುದು.

## 27. ವನ ವಿಹಾರ.

೫೪೪. ಅಭಿನಯಂ. ಸಾಹಿತ್ಯದರ್ಪಣದಲ್ಲಿ ಲಕ್ಷಣಂ :—"ಭವೇದಭಿನಯೋಽವಸ್ಥಾನುಕಾರಸ್ಸಚತುರ್ವಿಧಃ । ಆಂಗಿಕೋವಾಚಿಕಶ್ಚೈವಮಾಹಾರ್ಯಸ್ಸಾತ್ವಿಕಸ್ತಥಾ" ಲಲಿತಂ. ಸಾಹಿತ್ಯದರ್ಪಣದಲ್ಲಿ ಲಕ್ಷಣಂ :—"ಸುಕುಮಾರತಯಾಂಗಾನಾಂ ವಿನ್ಯಾಸೋ ಲಲಿತಂ ಭವೇತ್."

೫೪೫. ಊಳ್ವ = ಶಬ್ದಮಾಡುತ್ತಿರುವ. ಧಾ. ಊಳ್—ದೂರಾದಾಹ್ವಾನೇ. ಬಲ್ಮಿಡಿಯ = ಬಹಳ ಬಟ್ಟಾಗಿರುವ. ತೂಗುಂಗೊಂಬು. ಶ. ದ. ಸೂ. 170 ನೋಡು. ಬೆಸಂ = ವಿಧಾಯುಕವಾದ ಕೆಲಸ, ಅಪ್ಪಣೆ ತಂತ್ರಂ = ಸೇನೆ.

೫೪೬. ನೀಜಂ = ಪ್ರಿಯಂ.

೫೪೭. ಪಸದನಬಸನಿ = ಅಲಂಕಾರದಲ್ಲಿ ವಿಶೇಷಾಸಕ್ತಿಯುಳ್ಳವಳು. ಪಚ್ಚೆಸಾರವಂ = ಪಚ್ಚೆಯ ಸರವನ್ನು

೫೪೮. ಬಾಸಿಗಂ ನೆತ್ತಿಯಮೇಲೆ ಧರಿಸುವ ಹೂವಿನದಂಡೆ, ಬಾಸಿಂಗ. ಧಾ. ಪ್ರಾಂಕರಿಸು—ಅವಜ್ಞಾಯಾಂ. ಪಿಂಡುಗಂಕಣಂ = ಕೈಯಲ್ಲಿತೊಡುವ ಅನೇಕಬಳೆಗಳು.

೫೪೯. ಲಂಬಣಂ = ಕಂಠದಿಂದ ನಾಭಿಯವರೆಗೂ ಜೋಲಾಡುತ್ತಿರುವಹಾರಂ. ಪಸವಟ್ಟು = ವಿಶೇಷಾಪೇಕ್ಷೆಯಿಂದ. ಸಂಗೆ = ಬಂದಿ. ಅಟ್ಟಿಯೆ = ಪ್ರೀತಿಯಿಂದ.

೫೫೦. ಮರಗಳು ಪುಷ್ಪಫಲಗಳನ್ನು ಬಿಡದೇಯಿರುವ ಸಂದರ್ಭದಲ್ಲಿ, ಅವುಗಳನ್ನು ಸ್ತ್ರೀಯರು ಒದೆಯುವುದು, ಮತ್ತು ಅವುಗಳಮೇಲೆ ಉಗಿಯುವುದು—ಇವುಗಳನ್ನು ಮಾಡಿದಪಕ್ಷ, ಅವುಗಳು ಪುಷ್ಪಫಲಗಳನ್ನು ಬಿಡಲು ಪ್ರಾರಂಭಿಸುವುವು ಎಂಬ ಪ್ರತೀತಿಯನ್ನು ತೆಗೆದುಕೊಂಡು ಇಲ್ಲಿ ಕವಿಯು ಉತ್ಪ್ರೇಕ್ಷಿಸಿರುವನು.

೫೫೧. ಬಿಗದಪ್ಪುದು = ಬಿಗಿದಪುದು. ಶ. ದ. ಸೂ. 283 ನೋಡು.

೫೫೩. ನುಡಿಯಲಕ್ಕುಮು ಪೂಗಳೆಲಕ್ಕುಮಂ = ಹೂವುಗಳೆಂಬುದಾಗಿ ಎಣಿಸಲ್ಕಾಗುವುದೆ ?

೫೫೪. ಅಲೆದಪಂ = ಧಿಕ್ಕರಿಸುತ್ತಾನೆ.

೫೫೫. ನಲ್ಲಂಬುಗಳು = ಉತ್ತಮಬಾಣಗಳು.

೫೫೬. ಪೂಗೆಯ = ಹೂಗಳು. ಶ. ದ. 230ನೇ ಸೂ. ನೋಡು.

೫೫೮. ಎರಡುಮನೊಡೆವಳೆದ = ಎರಡೂಸೇರಿ ಬೆಳೆದಿರುವ

೫೫೯. ಪೀರಲ್ = ಪಾನಮಾಡಲು, ಹೀರಲು. ತವದೆ = ಕ್ಷೀಣವಾಗದ. ಅವಿಚಲಿದ. = ಬೇಸರಿಯಿಲ್ಲದೆ. ತಿರಿದು = ಸುತ್ತಾಡಿ.

೫೬೦. ಮಲೆಪುಂ = ಔದ್ಧತ್ಯಂ. 'ಅಲರ್ದರಗಳಿಗೆಯು' ಎಂದಿರಬೇಕು. ಪೊಂಕಮುಂ = ಅಹಂಕಾರವೂ.

೫೬೧. ಮುಕ್ಕುಳಿಸಿದ = ಹೊರಗೆಬಿಡುತ್ತಿರುವ.

೫೬೨. ತಗುಳ್ದಂ—ಧಾ. ತಗುಳ್—ಅನುಧಾವನೇ. ಮೆಲ್ಪು = ಮಾರ್ದವಂ, ಸೌಕುಮಾರ್ಯಂ.

೫೬೩. ಗೊಜ್ಜಗೊಜ್ಜಗೆ = ಒಂದುಬಗೆ ಸೇವಂತಿಗೆ. 'ವಲ' ಎಂಬಿರಬೇಕು.

೫೬೪. ಮಟ್ಟನಾದುವು = ಸಮನಾದುವು, ಸರಿಹೋದುವು.

೫೬೫. ಕಡುನಾಣಪುತ್ತು = ಬಹಳ ನಾಚಿಕೆಗೆ ಆಕರಂ. ಪೂಣ್ಟ—ಧಾ. ಪೂಣ್ಟ = ಆಚ್ಛಾದನೇ. ಇನ್ = ಇನ್ನು. ಸೀಧು = ರಸಂ. ಮದೋ

ತ್ಕಟಚೇಷ್ಟಿತಂಗಳಂ = ಮದಿಸಿ ಮಿತಿಮೀರಿ ಮಾಡಿದ ವ್ಯಾಪಾರಗಳನ್ನು

೫೬೬. ತೊಂಗಲ್ = ಜೊಂಪ. ಬಳ್ವಳಪ್ಪ = ಅಲ್ಲಾಡುತ್ತಿರುವ. ತೆರಳ್ಚಿ = ಬಿಡಿಸಿ.

೫೬೭. ಭಂಗಿ = ಮುರಿಯುವಿಕೆ. ಸಂಗಡಂ = ಸಂಕಟ. ಕಿಸುರ್ = ಕೋಪಂ.

೫೬೮. ಉತ್ತಂಸವತಂಸ = ಶಿರೋಭೂಷಣಂ. ಪಱಿದೆವು = ಕಿತ್ತೆವು.

೫೬೯. ಪುಗಲ್, ಪುಗಲ್ ಎಂಬುವುದು ಕೋಕಿಲಧ್ವನಿ.

---

## ೨೮. ದಧಿಮುಖನ ಶಿರಂ ಪತ್ತಿದ ಕಥೆ.

೫೭೧. ಭಂಗಿ = ಬಳುಕುವಿಕೆ. ಇಲ್ಲಿ ಅಕ್ಷಿವಿಕ್ಷೇಪದ ಪೊಳಪು, ಆನನಶ್ರೀವಿಲಾಸಂ, ಅಂಗೋಪಾಂಗಭಂಗಿ ಇವುಗಳನ್ನು ಕ್ರಮವಾಗಿ, ನೀಲೋತ್ಪಲ, ಪದ್ಮ, ವನಲತಾ, ಇವುಗಳೊಡನೆ ಅನ್ವಯಿಸಿಕೊಳ್ಳಬೇಕು.

೫೭೨. ಕುಳ್ಳಿದಂ = ಕುಳಿತುಕೊಂಡನು.

೫೭೪. ಆಗಮಂ = ತಂತ್ರಶಾಸ್ತ್ರಂ.

ಕಾವ್ಯಂ. ಲಕ್ಷಣಂ:—ನಿರ್ದೋಷಾಲಕ್ಷಣ ವತೀ ಸರೀತಿರ್ಗುಣಭೂಷಿತಾ। ಸಾಲಂಕಾರರಸಾನೇಕವೃತ್ತಿರ್ವಾಕ್ಕಾವ್ಯನಾಮಭುಕ್॥ ನಾಟಕಂ. ಲಕ್ಷಣಂ:—ಸಾಂಗೈರ್ಮುಖಪ್ರತಿಮುಖ ಗರ್ಭಾವಮರ್ಶೋಪಸಂಹೃತೈಃ । ಪೂರ್ವಂ ಪ್ರಕೃತಿರನ್ಯೇಷಾ ಮಾಧಿಕಾರಿಕವೃತ್ತವತ್ ॥ ವೀರಶೃಂಗಾರಯೋರೇಕಃ ಪ್ರಧಾನಂಯತ್ರವರ್ಣ್ಯತೇ । ಪ್ರಖ್ಯಾತನಾಯಕೋಪೇತಂ ನಾಟಕಂ ತದುದಾಹೃತಂ.

೫೭೫. ಶ್ವೇತಾಂಬರರು = ಜೈನರಲ್ಲಿ ಒಂದು ಬಗೆಯವರು. ಕಥೆಯನ್ನರು = ಕಥೆಯಂತಿರುವರು. ಅಣ್ಮು—ಧಾ. ಅಣ್ಮು = ಪೌರುಷೇ. ನಿತ್ತರಿಸದೆ = ಸಹಿಸಲಾರದೆ. ನಿಸ್ತರ (ತ್ಸ)

೫೭೬. ಸನ್ನುತಮಾಗಲ್ಕೆ = ಸ್ತೋತ್ರಾರ್ಹವಾಗುವಂತೆ.

೫೭೮. ಸೋಶೀರ ಶ್ರೀಚಂದನಂ = ಲಾಮಂಚದೊಡನೆ ಕೂಡಿಕೊಂಡಿರುವ ಗಂಧದಮರವು.

೫೭೯. ಕಡುಸೇದೆ = ಬಹಳ ಆಯಾಸ. ಪುಳ್ಳಿಯುಂ = ಒಣಗಿದಕಡ್ಡಿ, ಅಥವಾ ಕಟ್ಟಿಗೆಯನ್ನು.

೫೮೦. ಪಱಿಪಡೆ = ನಿವಾರಣೆಯಾಗಲು.

೫೮೧. ಇಂಧನಂ = ಕಟ್ಟಿಗೆ. ಸೂಱೆ = ಬೀರಿ. ಪರಕೆ = ಆಶೀರ್ವಚನಂ.

೫೮೨. ಗುದ್ದಲಾಟಿಸಿ = ಮುಷ್ಟಿಯಿಂದ ಹೊಡೆದಾಡಲು ಪ್ರಯತ್ನಿಸಿ.

೫೮೪. ಪೊಲ್ಲಮೆ = ಕೆಟ್ಟುದು. ಒಮ್ಮೆಂದೊಡೆ ತೊಮ್ಮೆನುತ್ತೆ = ಒಬ್ಬರು ಹೇಳಿದುದಕ್ಕೆ ಮತ್ತೊಬ್ಬರು ಒಪ್ಪದೆ ಬೇರೆ ಹೇಳುತ್ತ.

೫೮೫. ಅನುವಶನಾಗಿರ್ಪ = ಹೇಳಿದಹಾಗೆ ಕೇಳಿಕೊಂಡಿರುವವನು.

೫೮೬. ಮಮ = ಇದು ಸಂಸ್ಕೃತ ಅಸ್ಮಚ್ಛಬ್ದದ ಷಷ್ಠೀವಿಭಕ್ತಿಯರೂಪ. ದೊಳ್ಳಾಯ್ತು = ಪೋಟೆಬಿದ್ದುಹೋಯಿತು.

೫೮೮. ಸುಖಗೋಷ್ಠಿ = ಸುಖವಾಗಿ ಸೇರಿರುವುದು. ಸವಡಿ = ಜೋಡಿ. ಸಿತಾನ್ವಿತಂ = ಸಕ್ಕರೆಯೊಡನೆ.

೫೮೯. ಸಾಸಿಗಂ = ಸಾಹಸಿಕಂ (ತ್ಸ). ಓಸರಿಸದೆ = ಹಿಂಜರಿಯದೆ. ಆಸಂಕಿಸದೆ = ಭೀತಿಪಡದೆ.

೫೯೦. ಅಳಿಪಿ = ಬಹಳವಾಗಿ ಅಪೇಕ್ಷಿಸಿ.

೫೯೧. ಮೋನಂ = ಮೌನ (ತ್ಸ)

೫೯೨. ವಧೂಟಿ = ಚಿಕ್ಕಪ್ರಾಯದ ಹೆಂಗಸು. ಎಂ = ವರೆಗೂ.

೫೯೩. ಓರಂತೆ = ಒಂದೇತೆರನಾಗಿ. ಬಹ್ವಾಶಿ = ಬಹುಭಕ್ಷಕನು. ಪುರುಳಾಡುವರ್ = ಪುಚ್ಛನನ್ನುವರು. ನೇಸರ್ಪಡುವುದುಂ = ಸೂರ್ಯಾಸ್ತಮನವಾಗಲು. ಪಟ್ಟದ—ಧಾ. ಪಡು—ಶಯನೇ. ನೇರ್ಪಡಿಸಿ = ಸರಿಮಾಡಿ.

೫೯೪. ಪೇಗಲ್—ಧಾ. ಪೇಗು—ಸ್ಫುಲ್ಯೇ. ಅರ್ತತೆ = ಆಸ.

೫೯೫. ಸೋಜಿಗ = ಆಶ್ಚರ್ಯಂ.

೫೯೬. ಒಟ್ಟ = ಮೊಬರ್ಳಾದ ಸ್ತ್ರೀ.

೫೯೭. ಅನುವು = ನಿವಾರಣೆ ಮಾಡುವ ಉಪಾಯವು. ಹಾಲಸಿಗಂ = ವೈದ್ಯನು. ಗುಲ್ಮಂ = ರೋಗದಿಂದ ಹೊಟ್ಟೆಯಲ್ಲಿ ಗಡ್ಡೆಯಾಗುವುದು. ರೋಗನಿದಾನಚಿಕಿತ್ಸೆ = ರೋಗದ ಮೂಲವನ್ನು ಕಂಡುಹಿಡಿದು ಔಷಧವನ್ನು ಕೊಡುವುದು. ಗದ್ಯಾಣ ಕನಪರೆಮಂ = ೪೨ ಅಥವಾ ೬೪ ಗುಂಜದ ತೂಕಕ್ಕೆ ಒಂದು ಗದ್ಯಾಣಂ—ಇಷ್ಟು ತೂಕವುಳ್ಳ ಚಿನ್ನವನ್ನು. ಪಾಳಿಸಿ = ಚುಚ್ಚಿ, ಅಗಲಿಸಿ. ಪೊಳಕ್ಕನೆ = ಜಾಗ್ರತೆಯಾಗಿ.

೫೯೯. ಸುಖಮುಖ = ಒಬ್ಬ ಯಕ್ಷನ ಹೆಸರು. ಪರತ್ರೈಕಚಿತ್ತಂ = ಪರಲೋಕವಿಷಯದಲ್ಲಿ ಮಗ್ನವಾದ ಮನಸ್ಸುಳ್ಳ. ಗಾವುಂಡರ್ = ಗೌಡರು. ಮಿಱುಪ = ಪ್ರಕಾಶಿಸುತ್ತಿರುವ. ಒರಗಿದ = ನೆಲಕ್ಕೆ ಬಗ್ಗಿದ

ಬೆಳಸಂ = ಬೆಳ್ಳವತ್ತದವರ. ಮಿಡಿಮಿಡಿಗೊಳುತ್ತ = ತಳ್ಳಂಕಪಡುತ್ತ, ತವಕಿಸುತ್ತ.

೬೦೦. ಕತ್ತಿಗ = ಕತ್ತಿ. ಕೃತ್ತಿಕಾ (ತ್ಸ)

೬೦೧. ಸಾಲ್ವಿನಗಂ = ಸಾಕಾಗುವಷ್ಟು. ಕೆಟ್ಟುಪೋಗಲ್ಕೆ = ಕಣ್ಣಿಗೆ ಕಾಣಿಸಿಕೊಳ್ಳದೆ ಹೋಗಲು ಎಂದು ಭಾವವು.

೬೦೫. ಉರ್ವೀರುಹಂ = ವೃಕ್ಷಂ. ಚೋದ್ಯಂ = ಆಶ್ಚರ್ಯಂ.

೬೦೬. 'ಇಱಿದು' ಎಂಬುದಕ್ಕೆ ಬದಲಾಗಿ "ಇಱಿದು" ಎಂದು ಇರಬೇಕು ಪಿಳಿದಂಗಯ್ವೆರ್ = ಹಾಸ್ಯಮಾಡುವಿರಿ.

೬೦೭. ಕಾರ್ಗಾಲಂ = ಮಳೆಗಾಲ. ಮೊಳಗ = ಧ್ವನಿಮಾಡಲು.

೬೦೮. ಅಟ್ಟವನಾ. ಇಲ್ಲಿ ದೀರ್ಘಕ್ಕೆ ಕಾರಣವೇನು ? ನಲಹಂ = ನಲುವನ್ನು ಆರ್ತದಿಂ = ಆತುರತೆಯಿಂದ

೬೦೯. ಅಭ್ಯಾಗತತೆಯಂ ಮಾಡಿಸಲಾರ್ಪ = ಅತಿಥಿಪೂಜೆಯನ್ನು ಮಾಡಿಸಲು ಸಮರ್ಥನಾಗುವೆ ಎಂದು ತಾತ್ಪರ್ಯ. ಅಬ್ಬಾ = ಅವ್ವಾ. ಕೆಲವಾನುಂ—ಶ. ದ. 303ನ ಸೂತ್ರನೋಡು. ಬದುಕಲಾರ್ಪ = ಜೀವಿಸಲರ್ಹವಾದ.

೬೧೦. ಬಟ್ಟೆ = ದಾರಿ. ವರ್ತ್ಮ (ತ್ಸ). ಕಟುತಲೆ = ಗುರಾಣಿ.

೬೧೧. ಒಪ್ಪಕ್ಕೆ = ಸೌಂದರ್ಯಕ್ಕೆ

೬೧೨. ಧರ್ಮಾಧಿಕರಣಂಗಳ್ = ನ್ಯಾಯದರ್ಶಿಗಳು. ಮರುಮಾತಂ = ಪ್ರತ್ಯುತ್ತರವನ್ನು.

---

## 29. ಘೋಷ ವರ್ಣನೆ.

೬೧೩. ತಳ್ತತೋಷಂ = ಹೊಂದಿದ ತೃಪ್ತಿಯುಳ್ಳ, ಸಂತೋಷದಿಂದ ಕೂಡಿದ. ಪಿಹಿತಾಸೂನಮದವೃಷಭಪೋಷಂ = ಕೊಬ್ಬಿದ ಬಳ್ಳಿಯ ಎತ್ತುಗಳನ್ನು ಪೋಷಣೆಮಾಡುತ್ತಿರುವ. ಘೋಷಂ = ಆಕಳಿರುವ ರೊಪ್ಪ.

೬೧೪. ದೂಬಿಸಿ = ಚಿಂತಿಸಿ, ತೂರಿಸಿ. ಮೆಲ್ಕನೂಕ್ಕು = ಮೆಲುಕುಹಾಕುತ್ತಿರುವ ಹುಲ್ಲನ್ನು ಬಾಯಿಂದ ಬಿಡುತ್ತ. ಧಾ. ಉಗು—ವಿಸರ್ಜನೇ. ಮುಂದುಮುವಾಯ್ತರ್ಪ = ಮುಂದೆ ಮುಂದೆ ಓಡಿಬರುತ್ತಿರುವ ತೊಱೆದು = ಹಾಲುತುಂಬಿಕೊಂಡು.

೬೧೫. ಪರಿಯುಡುಗಿರ್ಪುದು = ಹರಿಯುವುದು ನಿಂತುಹೋಗುವುದು. ತೆಱೆಯು,

ನೆಱೆಯೆ = ವಿಸ್ತಾರವಾಗಿ ಯಾಗಲಿ ಬಟ್ಟಾಗಿಯಾಗಲಿ. ನೆಱೆ ಯೆಂ = ಅಶಕ್ತನಾಗಿರುವೆನು.

೬೧೬. ಸಂಕಿಲವಾದ = ಕೆಸರಾದ, ಮೆಲ್ಕಿಱಿವ = ಮೆಲುಕುಮಾಡುವಾಗ ಹೊರಗೆ ಹೊರಡುತ್ತಿರುವ. ಪೂರಂ = ಪ್ರವಾಹಂ. ಕೂಲಂಕಷಂ = ಎರಡು ದಡವೂ ಕಿತ್ತುಕೊಂಡು ಹೋಗುವಹಾಗೆ ತುಂಬಿಹರಿಯುವುದು.

೬೧೭. ಗಡಗೂಂಡು = ಬಟ್ಟಾಗಿಸೇರಿ. ಉತ್ತರ್—ಇದು 'ಉಱು' ಎಂಬ ಧಾತುವಿನಿಂದ ಬಂದಿರುವಹಾಗೆ ತೋರುತ್ತದೆ.

೬೧೮. ಮಿಳ್ಳಗೊಂಡು = ಸಗದಾಡುತ್ತ. ಧಾ. ಮಿಳ್—ಲುಠನೇ. ಗಾಳ್ಪೇಳಿಸ್ವುತ್ತುಂ = ಶಬ್ದಮಾಡುತ್ತಲೂ, ಹೂಂಕರಿಸುತ್ತಲೂ.

೬೧೯. ಅಡೆಯಂಕೋಲು = ಪಕ್ಕದಗರೆಯನ್ನು (ತನ್ನ ಕೊಂಬಿನಿಂದ) ಹಾಯ್ದು. ತಿಂತಿಣಿ = ಸಮೂಹಂ. ಶೀರ್ಣ = ಸೀಳಿದ. ಮಾಮರ್ದಡೆಯುತ್ತುಂ = ತಿರುಗಿ ಬಡಿಸುತ್ತಲೂ. ಗಂಡಂಸೂಸುತುಂ = ಶಕ್ತಿಯನ್ನು ಪ್ರಕಟಪಡಿಸುತ್ತಲೂ.

೬೨೦. ಗಾಳಿಗ = ಅಬ್ಬರಿಸುವ ಶಬ್ದಕ್ಕೆ, ಬಯ್ಗುಳದ ಸದ್ದಿಗೆ. ಪರಲ್ಗಳಂ = ಕಲ್ಲುಗಳನ್ನು. ಅಡಸುತ = ಸೇರುತ್ತ. ಧಾ. ಅಡಸು—ಗಾಢಪ್ರವೇಶೇ. ಕಂಪನಂ = ಕರುವನ್ನು. "ಕಂಠವುಂ" ಎಂದಿರಬಹುದು (?)

೬೨೧. ಇರಪೆಡುತುಂ = ಸೊರವುಬಿಡುವುದರಿಂದ ಹಾಲುತೊಟ್ಟಿಕ್ಕುತ್ತಲೂ. ಪಯಂಗಳ್ = ಆಕಳು.

೬೨೩. ಗೂಂತಂ = ಗಂಪಳ. ಪುರುಳಿಗಳಂ = ಬಳ್ಳಿಯ ಜಾತಿಯ ಪರಿಗಳನ್ನು.

೬೨೪. ಅರ್ಥಾಂತರನ್ಯಾಸಾಲಂಕಾರಂ.

೬೨೫. ವಲ್ಲವರ್ = ಗೊಲ್ಲರ ಹುಡುಗರು. ಅಳಿಕಲಲತ್ಸಲ್ಲವರ್ = ಹತ್ತಿಯುಂಮೇಲೆ ಅಲ್ಲಾಡುತ್ತಿರುವ (ಭೂಷಣರೂಪವಾದ) ಚಿಗುರುಗಳುಳ್ಳ.

೬೨೬. ತುಱುಂಬೆಯ = ತುರುಬಿನ. ಸಗ್ಗಳ = ಸೇಗಿಲುಹೂ. ಸಱುಸಱು = ಕಪ್ಪಾಗಿರುವತುಪ್ಪ.

೬೨೭. ಖಲ್ವರವಿ = ದೊಡ್ಡಗಡಿಗೆ. ಪಾಪಳಿರ್ = ಪಚ್ಚನ+ತಳಿರ್. ಸೋಂಕಿಲ ತೊರೆತೀವಿ = ಮುಂಭಾಗದ ಮಡಿಲುತುಂಬಿ. ಕೊರಲೊಳ್ಮದ್ಯವದ ಪೊನ್ನಾಳ್ = ಕತ್ತಿನಲ್ಲಿ ತಂತವನ್ನು ವಾಸುದೇವರ ವಿಗ್ರಹಕತ್ತಿರುವ ಚಿನ್ನದ ತಾಳಿಗಳನ್ನು ಧರಿಸಿ ಎಂದು ಭಾವವು. ಅಳ್ = ಕಱಿಲ್, ಮೊಸರು.

೬೨೮. ವಶಾ=(1) ಹೆಣ್ಣಾನೆ (2) ಗೊಡ್ಡಿಯಾದ ಆಕಳು. ಸಂಧಿನೀತಿನಿರತಂ=(1) ಸಂಧಿ ಮತ್ತು ನೀತಿ ಇವುಗಳಲ್ಲಿ ಆಸಕ್ತವಾದ (2) ಸಮಯವಿಲ್ಲದೆ ಕರೆಯುವ ಆಕಳಿನ ಅತಿಬಾಧೆಯಿಂದ ಕೂಡಿದ. ರೋಹಿಣೀ ಪರಿಗತಂ=(1) ಕೆಂಪು ಆಕಳು ಮತ್ತು (2) ರೋಹಿಣೀ ನಕ್ಷತ್ರ ಇವುಗಳಿಂದ ಕೂಡಿರುವ. ಸುವ್ರತಾ=(1) ಸಾಧುವಾಗಿ ಹಾಲುಕರೆಯುವ ಆಕಳು. (2) 15ನೆ ಅವತಾರದಲ್ಲಿ ಜಿನದೇವನ ತಾಯಿ.

೬೨೯. ಕೆಂದಲಂ=ಮಣ್ಣಿನ ಪಾತ್ರೆಯನ್ನು. ಆವಂ=ಹಸುವನ್ನು. ತಳೆಯಿಕ್ಕು=ಹಗ್ಗಹಾಕು. ಸರಂ=ಸ್ವರಂ (ತ್ಸ)

೬೩೦ ಅಳವಡು=ಸರಿಯಾಗು.

೬೩೧. ಇರದು=ಕರೆದು. ತೀವಿತೆ ಗೆತ್ತು=ತುಂಬಿತೆಂದು ಭಾವಿಸಿ. ತಾತ್ಪರ್ಯ. ತನ್ನ ಕಣ್ಬೆಳಕಿನ ಕಾಂತಿಯಿಂದ ತುಂಬಿದ ಪಾತ್ರೆಯನ್ನು ತಾನು ಕರೆದ ಹಾಲಿನಿಂದ ತುಂಬಿತೆಂದು ಭಾವಿಸಿ ಎದ್ದು ಅವಳ ಗಂಡನನ್ನು ಎಬ್ಬಿಸಿದಳೆಂದು ಭಾವವು.

೬೩೨. ತುರುಬಾಗಿ=ಹೆಬ್ಬಾಗಿಲು. ಪೊಱಟ್ಟ ಪೊಱಸಿರಿ. ಇಲ್ಲಿ ವಿಭಕ್ತಿಗೆ ಏನುಕಾರಣ?

---

## 30. ಮಾತಂಗಕನ ಇಷ್ಟಸಿದ್ಧಿ.

೬೩೪. ಸೇಡುಗೋಲ್=ಬಿಗಿದಕೋಲು. ಅಸಮಂ=ವಿಲಕ್ಷಣ ಸ್ವಭಾವವುಳ್ಳ.

೬೩೫. ಅಱುನೀರ್ವಳ್ಳಂ=ನೀರುಬತ್ತಿಹೋಗಿರುವ ಹಳ್ಳ. ಪಱಿಗೆಟ್ಟಪ್ಪರ್=ರೀತಿಗೆಟ್ಟಿರುವ, ಚೆನ್ನಾಗಿ ಕಾಣದಿರುವ.

೬೩೬. ಮಾತಂಗವೈರಿಸತ್ವಂ=ಸಿಂಹಬಲವುಳ್ಳ.

೬೩೭. ಕಳ್ದುಱಿದು=ಕದ್ದು ತಿರುಗಿ.

೬೩೮. ಪದಂ=ನಾ ನಂ. ಇದರ ನಾನಾರ್ಥಗಳಾವುವು? ಅರಮಸದೆ=ವಿಚಾರಮಾಡದೆ.

೬೪೦. ಪಾಕುಳಂ=ಪ್ರಾಕಾರಂ (ತ್ಸ). ಬಾಲವುಳು, ಸಿಂಬುಳು ಇವುಗಳು ಕ್ರಿಮಿಭೇದ.

೬೪೧. ಪಂಚಮಹಾಪಾತಕಗಳು=1 ಸ್ವರ್ಣಸ್ತೇಯ, 2 ಸುರಾಪಾನ, 3 ಬ್ರಹ್ಮಹತ್ಯೆ, 4 ಗುರುತಲ್ಪಗಮನ 5 ಈ ನಾಲ್ಕು ಪಾತಕಗಳನ್ನು ಮಾಡುವವರ ಸಹವಾಸ. ಸಂಚ=ಸಂಚಯ (ತ್ಸ)

೬೪೦. ಮಗುೞ್ದು = ತಿರುಗಿ. ಸಂಸ್ಕರಿಸಲು = ಮಂತ್ರಾಗ್ನಿಯಿಂದ ದಹಿಸಲು.

೬೪೧. ನೀಡುಂ = ಚೆನ್ನಾಗಿ. ದೌವಾರಿಕಂ = ಬಾಗಿಲುಕಾಯುವವನು.

೬೪೯. ವಚೋವೃತ್ತಕಮಂ = ಮಾತಿನ ಸಮಾಚಾರವನ್ನು.

೬೫೦. ಮಂತ್ರಜಾಪ್ಯದಿಂ = ಮಂತ್ರವನ್ನು ಜಪಿಸುವುದರಿಂದ. ಅಮೋಘವಾಚಕಂ = ಸಫಲವಾದ ಮಾತು.

೬೫೨. ಲೆಪ್ಪವಣ್ಕೆ = ಗಾರೆಯ ಮಣ್ಣು. ಹುಲ್ಲಹಾಸೆ = ನಿಷ್ಪ್ರಯೋಜನವಾದ ಬೊಂಬೆ.

೬೫೬. ಎಚ್ಚಿಕೊಳಲು = ಹತ್ತಿಸಿಕೊಳ್ಳಲು. ಕಜ್ಜಳಂ = ಕಣ್ಕಪ್ಪು. ಮಬ್ಬುರ್ = ಕತ್ತಲೆ. ದಿಶಾಭಿತ್ತಿಯೊಳ್ = ದಿಗಂತಪ್ರದೇಶದಲ್ಲಿ.

೬೫೩. ಸತ್ವೋದಯದಿಂ = ಬಲಪ್ರಾದುರ್ಭಾವದಿಂದ.

೬೫೮. ಕರುಳಿಂ = ಧೈರ್ಯದಿಂದ, ದೃಢಚಿತ್ತತೆಯಿಂದ. ಅಮಾತ್ಯಂಗಳ್ಗೆ = ಮಂತ್ರಿಗಳಿಗೆ.

೬೫೯. ತಳ್ಕೈಸಿಕೊಂಡು = ಆಲಿಂಗಿಸಿಕೊಂಡು

೬೬೦. ಭುಜಂಗಂ = ಬೋಜಗಂ (ದ್ಭ). ವಿಟಂ.

೬೬೨. ಆರ್ಪು = ಪರಾಕ್ರಮಂ.

೬೬೪. ಸಾರ್ದತ್ವ = ನೇರತೆ. ಬಾಣಾಸ = ಮಾನವನಾಹುವ ಇಚ್ಛೆ, ನಿರಾಶೆ. ಹಿಂಗಿರ್ಪುದು = ಅಡಗಿರುವುದು. ಭಾಜನಂ = ಸತ್ಪಾತ್ರವು.

೬೬೫. ನಾಡಾಡಿಯ = ಕೇವಲ ಸಾಮಾನ್ಯವಾದ. ಪಾಡಿವದೆಳವಜಿಯಂ = ಪಾಡ್ಯದ ಬಾಲಚಂದ್ರನನ್ನು. ತಳರಲ್ = ಹೊರಡಲು.

೬೬೬. ಪದಪಿನಿಂ = ಪರಮೋತ್ಸಾಹದಿಂದ. ಅಭಂಗವಿಕ್ರಮಂ = ನ್ಯೂನತೆಯಿಲ್ಲದ ಪರಾಕ್ರಮವುಳ್ಳ.

---

## 31. ಗ್ರೀಷ್ಮಋತು ವರ್ಣನೆ.

೬೬೭. ಬಗೆದಾಗಳ್ = ಹುಟ್ಟಿದಾಗಲೇ ಧಾ. ಬಗ—ಜನನೆ. ತೊಳ್ದು—ಧಾ. ತೊಳ್—ಅಪಸರಣೇ. ಪಸರಂ = ಪ್ರಸಾರಂ. (ತ್ಸ) ಕಾಪ್ಪಿನಿಂ = ಸೆಕೆಯಿಂದ, ಬಿಸಿಲ್ಝಳದಿಂದ.

೬೬೮. ವಾತೂಳಿಕಾ = ಚಕ್ರಮಾರುತಂ. ಸುಟ್ಟುರಗಾಳಿ

೬೬೯. ಅಡಿವಣಲ್ = ತಳದಲ್ಲಿರುವ ಮಳಲು. ಮರುತ್ಪಾತದಳಂಗಳ್ ಪೊತ್ತ = ವಾಯುವಿನಿಂದುದಿರಿದ ಎಲೆಗಳು ಹೊತ್ತಿಕೊಳ್ಳಲು. ಬಿಸುಪಂ = ಉಷ್ಣತ್ವವನ್ನು.

೬೩೦. ಅರೆಸೀಕರಿಯಾದುವು = ಸುಟ್ಟು ಬೂದಿಯಾದುವು. ಅಳುಂಬಂ = ಆಧಿಕ್ಯಂ, ಹೆಚ್ಚು.

೬೩೧. ಅಳುರ್ಕೆ—ಧಾ. ಅಳುರ್—ವ್ಯಾಪ್ತೌ. ಚೀರುತಿರ್ಪ = ಸಂಕಟದಿಂದ ಶಬ್ದಮಾಡುವ, ಕಿರಿಚಿಕೊಳ್ಳುವ.

೬೩೨. ಪಿಚ್ಚು = ಕೆಸರ್ಮಣ್ಣು. ಬಱತು = ಬತ್ತಿಹೋಗಿ.

೬೩೩. ಬೆಂಚೆ = ಸರಸಿ, ಕೊಳ. ಕದುಷ್ಣಂ = ಸ್ವಲ್ಪ ಬಿಸಿಯಾಗಿರುವುದು. ಬಿದಿರ್ಚಿ = ಅಗಲಿಸಿ. ಬಲಸಱಿಯುತ್ತುಂ = ಕಂಗಡುತ್ತ.

೬೩೪. ಉರುವರಿಯುತ್ತುಮಿರ್ಪ = ಎಲ್ಲೆಡೆಯಲ್ಲಿಯೂ ವ್ಯಾಪಿಸುತ್ತಿರುವ ಜ್ವಾಲೆಯುಳ್ಳ. ಖರ್ಪಂ = ರೆಕ್ಕೆ. ಸಂಕೆಯುಗುೞ್ಕು = ಭಯವನ್ನುಬಿಟ್ಟು. ಧಾ. ಉಗು—ವಿಸರ್ಜನೇ.

೬೩೫. ಪೊಸ = ಸ್ವಲ್ಪ ನೀರಿರುವಪಳ್ಳ. ಬಿದಿರ್ದು = ಅಲ್ಲಾಡಿಸಿಕೊಂಡು. ಬಱಿಂದುದು—ಧಾ. ಬಱಿ—ರಾನೇ

೬೩೬. ಎನಸುಂ = ಸ್ವಲ್ಪವಾದರೂ.

೬೩೮. ಮುೞ್ಗಿಪೋದ = ಅಡಗಿಹೋದ. ಧಾ. ಮುೞ್ಗು—ಪತನೇ. ಗತಜೀವನಂ ಹೋದಜೀವ ಉಳ್ಳುದು ; ಹೋದನೀರುಳ್ಳುದು.

೬೩೯. ಕಚ್ಛಪಕುಲಂ = ಆಮೆಯಗುಂಪು. ನೀಳಾಘಾತಂಗನಿವೇಶ = ತೀರದಲ್ಲಿರುವ ಬಿಲಗಳು.

೬೪೧. ತಳ್ಪೊಯ್ವ = ಹೊಡೆಯುತ್ತಿರುವ ಧಾ. ತಳ್ಪೊಯ್—ಪ್ರತಿಹತೌ ಉರುವಸರಕ್ಕೆ = ಜ್ವಾಲೆಯ ಹರಹುವಿಕೆಗೆ. ಮೊಗಯಲ್ = ತಲೆಯುಸ್ಸುಡಲು, ಸ್ನಾನವಾಡಲು. ವಿಸ್ಫುಲಿಂಗ = ಬೆಂಕಿಯಕಿಡಿ. ನಿಕೃಷ್ಟೋತ್ಕೃಷ್ಟರೇಣುವ್ರಜಂ = ಚಿಕ್ಕದಾದ, ಕಾಯ್ದ, ಧೂಳಿಯಸಮೂಹ. ಪೃಷ್ಠ..ಂ = ನೊಂಟಲು.

೬೪೨. ತ್ರುಟುಕಿ = ಹಿಡಿದು.

೬೪೩. ಪಿಡಿದುಬಿಬರ್ದು = ಸಿಡಿದು ಸಿಡಿದು.

೬೪೪. ಜಂಬಾಳದೊಳ್ = ಕೆಸರಿನಲ್ಲಿ. ನಸುದೋಱಿದಂತೆ = ಸ್ವಲ್ಪವೂ ತೋರದಹಾಗೆ. ಗಾತ್ರ ಸಂಕುಳದೊತ್ತೊತ್ತುಗಳಿಂ = ದೇಹಭಾಗಗಳನ್ನು ಸಂಕೋಚಮಾಡಿಕೊಂಡು. ಕ್ರೋಡವ್ರಜಂ = ಮುಳ್ಳುಹಂದಿಯ ಗುಂಪು. ಈ ಪದ್ಯದ ಮೂರನೆಯ ಪಾದದ ಅರ್ಥವು "ಲವಲೇಶಾದ್ವಕ್ರ" ವೆಂದಿದ್ದಪಕ್ಷದಲ್ಲ, ಸರಿಯಾಗಬಹುದು (?).

೬೪೫. ಪ್ರಳಚುಪಿೞಲ್ಕೆ = ಬೊಬ್ಬೆಯಾಗಲು. ಪೊಂಕು = ಭ್ರಾಂತಿ. ಎಳಲೆ = ಜೋಲುತ್ತಿರಲು. ಕಂಪಲ್ಮಡುಗೊಂಡು = ಗಂಗದೊವಲನ್ನು ಮ

ಡಿಸಿಕೊಂಡು. ಕಂಬಲ್—(ತ್ಸ) ಕಂಬಳ. ಅಬ್ಬುತಂ=ಅದ್ದುತ್ತಲೂ. ಆಖಿಲ್‌ಗುಡದೆ=ಆಖಿಲವಕಾಶಕೊಡದೆ. ಸ್ವೈರದಿಂ=ಯಥೇಚ್ಛವಾಗಿ. ಸ್ವೈರಿಭಂಗಳ್=ಕಾಡೆಮ್ಮೆ ಮತ್ತು ಕೋಣ ಇವುಗಳು.

---

## 32. ಸೂರ್ಯೋದಯ ವರ್ಣನೆ.

೬೮೬. ಬಡಚರ್ಪುದು. ಧಾ. ಬಡಚರ್—ಉದ್ಯಮೇ. ನಗೆ ಅಗೆಯೆಬ್ದು ಪೋಗಲುಜ್ಜುಗೆಯ್ದುದು=ನಗೆಯು ಮೊಳಕೆಯು ಎದ್ದು ಹೋಗಲು ಪ್ರಯತ್ನಮಾಡಿತು. ಅಪ್ಪುಕೆಯ್ವುದುಂ=ಅಂಗೀಕರಿಸುತ್ತಿರಲು.

೬೮೭. ಪೊಮಳ್ಕು=ಪ್ರಕಾಶಂ. ನವ್ಯಕಳಾವಿಸರಂ=ನೂತನವಾದ ಕಾಂತಿಯು ಹರಡುವಿಕೆಯು. ಮುಸುಬ್ದು=ಮುಚ್ಚಿ ಹೋಗಿ.

೬೮೮. ನಿರಪಿಪೊಡೆ=ಅಪ್ಪಣೆಮಾಡಲು.

೬೮೯. ತೀವ್ರಪಾದದಿಂ=ತೀವ್ರಕಿರಣದಿಂದ ಮತ್ತು ಕಾಲಿನಿಂದ ಅಮರ. ಪಾದಾರಶ್ಮ್ಯಂಘ್ರಿತುರ್ಯಾಂಶಃ. ಉಮ್ಮಳಂ=ಉದ್ವೇಗಂ, ಚಿಂತೆ. ಭಗಣಂ=ನಕ್ಷತ್ರಸಮೂಹಂ. ಅಮರ. ನಕ್ಷತ್ರಮೃಕ್ಷಂಭಂ ತಾರಾ.

೬೯೦. ಪಳಹಳನಾದುವು=ಬೆಳ್ಳಗಾದುವು. ಅಳವಳಿದುವು=ರೂಪಗೆಟ್ಟುವು. ಪೆಳಱಿದುವು=ಭಯಪಟ್ಟುವು. ಧಾ.—ಪೆಳಱು—ಭಯೇ.

೬೯೧. ಅಡ್ಗಿಪೋಯ್ತು=ಅಡಗಿ ಹೋಯಿತು. ಧಾ. ಅಡ್ಗು—ಲಯೇ. ಮುನ್ನೇಸಱಿನೊಳ್=ಸೂರ್ಯೋದಯ ಕಾಲದಲ್ಲಿ, ಅರುಣೋದಯ ಕಾಲದಲ್ಲಿ.

೬೯೨. ಅವದರ್—ಧಾ. ಅವುರ್—ಗಾತ್ರವಿಶ್ಲೇಷೆ. ಬಿಸ್ಕು=ತ್ಯಜಿಸಿ, ಬಿಟ್ಟು. ವಿಭ್ರಮಂ=ಭ್ರಾಂತಿ. ಬೀಱುತಿರ್ದುದು. ಧಾ. ಬೀಱು—ಸ್ವೇಚ್ಛಾಪ್ರಧಾನೇ.

೬೯೩. ಸನೆವೊಯ್ದುಣ್ಕಿಸುತಂ=ಸಂಪೂರ್ಣವಾಗಿ ಹುಟ್ಟಿಸುತ್ತಲೂ. ತೂಂಕಡಂ=ನಿದ್ರೆಯನ್ನು, ತೂಗಡಿಸುವುದನ್ನು. ಅಲರ್ಕೆಯುಂ=ವಿಕಾಸವನ್ನು. ಮುಯ್ವ್ಯಾರ್ಚಿ=ಪೆರ್ಮೆಯಿಂದ. ಎನಸುಂ=ಸ್ವಲ್ಪವಾಗಿ.

೬೯೪. ವಳಿಗೊಳಿಸಿ=ಅಲೆಗಳುಂಟಾಗುವ ಹಾಗೆ ಮಾಡಿ. ತೀಡಿತ್ತು=ಬೀಸಿತು ಧಾ. ತೀಡು—ವಾಯುಸ್ಪರ್ಶನೆ.

೬೯೫. ಪಟ್ಟ=ಮಲಗಿರುವ. ಧಾ. ಪಡು—ಶಯನೇ. ಪೋತಂಗಳಂ=ಮರಿಗಳನ್ನು. ಉಚರ್ತ್ತಿ. ಧಾ. ಉರ್ಚು—ಆಕರ್ಷಣೇ. ನುಣ್ಣವಿರ=ನುಣ್ಣಿತು+ನವಿರ=. ತೊನೆದು=ಹಿಂದಕ್ಕೂ ಮುಂದಕ್ಕೂ ಅಲ್ಲಾಡಿಸಿ. ಗೋಣಂ=ಕುತ್ತಿಗೆಯನ್ನು.
ಸ್ವಭಾವೋಕ್ತ್ಯಲಂಕಾರಂ.

೬೯೬. ಬಿದಿರ್ಚಿ=ರೆಕ್ಕೆಯನ್ನು ಹರಡಿಕೊಂಡು ಒದರಿ. ನಿಮಿರ್ಚಿ=ನೆಟ್ಟಗೆಮಾಡಿ ಧಾ. ನಿಮಿರ್ಚು—ಪ್ರಸಾರಣೇ. ಅಕ್ಕುಬುಗುಟುಕಂ=ಪ್ರೀತಿಯಿಂದ ತಾಯಿ ಮರಿಗೆ ಕೊಡುವ ಆಹಾರವನ್ನು.

೬೯೭. ನೆಮಿರ್=ಒದಗಿಕೊಂಡು. ಆಲಾನಂ=ಆನೆಯನ್ನು ಕಟ್ಟಿಹಾಕುವ ಕಂಭ.

೬೯೮. ಬಯ್ತಿರಿಸಿಟ್ಟರಿ=ಕಾಣದ ಹಾಗೆ ಮುಚ್ಚಿಟ್ಟರಿ. ಅನುವಿಸೆ=ವಿನಯದಿಂದ ಬೇಡಲು.

೬೯೯. ಹರಿದಿಕ್=ಪೂರ್ವದಿಕ್ಕು.

೭೦೦. ಐಂದ್ರೀತನೂದರಿ=ಇಂದ್ರದಿಕ್ (ಪೂರ್ವ) ಎಂಬ ಸ್ತ್ರೀ.

೭೦೧. ನಾನಲಂ=ಜೊಂಡು ಬೆಳದಿರುವ ಸ್ಥಳವನ್ನು. ಕರಾಳಿ=ಕಿರಣಗಳ ರಾಶಿ.

---

## 33. ಕೋಳೂರು ಕೊಡಗೂಸಿನ ಕಥೆ.

೭೦೨. ಪರಿಖಾ=ಅಗಳು, ಕಂದುಕ. ಸಾಲಂ=ಪ್ರಾಕಾರಂ.

೭೦೩. ಗೋಪಧ್ವಜಂ=ವೃಷಭವನ್ನೇ ಧ್ವಜದಲ್ಲಿ ಉಳ್ಳವನು, ಈಶ್ವರ

೭೦೫. ಓವರಿ=ಕೋಣೆ. ಬಗೆಪಿಂಗ=ಯಥೇಷ್ಟವಾಗಿ ಎಂದು ಭಾವವು.

೭೦೬. ಪ್ರಸ್ಥಿತ್ರಕಮಿತದ=ಒಂದು ಸೇರೆ ಅಳತೆಯುಳ್ಳ. ಕೊಡಗೂಸು=ಕನ್ನಿಕೆ.

೭೦೭. ಬಿಸಿಮುಸಗುವಸಿಡುಸುಯ್=ಬಿಸಿಬಿಸಿಯಾಗಿ ಹೊರಡುತ್ತಿರುವಸಿಟ್ಟುಸಿರು. ಇರ್ಪೋಡಿಡದ ಬಾಯ್=ಒಣಗಿ ಹೋದಬಾಯಿ.

೭೦೯. ಕಣ್ಣೆಂಜಲು=ದೃಷ್ಟಿದೋಷಂ.

೭೧೫. ಪರ್ವಕ್ಕೆ=ಹಬ್ಬಕ್ಕೆ. ಉಗ್ರಂ=ಈಶ್ವರನು.

೭೧೬. ಸುಗಿಯುತುಂ=ಭಯಪಡುತ್ತಲೂ. ಸೈಗೆಡೆಯುತ್ತುಂ=ನೆಲದಮೇಲೆ ಧೊಪ್ಪನೆ ಬೀಳುತ್ತಲೂ. ಡೆಂಡಣಿಸುತುಂ=ವ್ಯಸನ ಪರವ

ಶಳಾಗುತ್ತಲೂ. ಕೋಟಲೆಗೆ ಪಕ್ಕಾಗಿರ್ದಳ್ = ಬಹಳ ತೊಂದರೆಗೆ ಸಿಕ್ಕಿದಳು.

೨೧೦. ಮುಗ್ಧೋಕ್ತಿಯುಂ = ಮುದ್ದು ಮಾತನ್ನು. ನಿಘಂಟು. ಮುಗ್ಧಸ್ಸುಂದರ ಮೂಢಯೋಃ.

೨೧೧. ಸಾರೆಯೊಳ್ = ಹತ್ತಿರ.

೨೧೨. ತರುವಲಿ = ಕೊಡಗೂಸು, ಕನ್ನಿಕೆ. ಉಕ್ಕಲಿಸದೆ = ಚೆಲ್ಲದೆ.

೨೧೫. ತೊದಳ್ = ಸುಳ್ಳು.

೨೧೬. ಸಿತಗಳಂ = ಈಶ್ವರನು.

೨೧೭. ಸೈತಿರೆ = ಸುಮ್ಮನಿರಲು. ಕಾಯ್ಪಿನಿಂ = ಸಿಟ್ಟಿನಿಂದ.

೨೧೮. ಅರೆಯಟ್ಟಲೊಡಂ = ಹೋಗೆಂದು ಧಿಕ್ಕರಿಸಲು.

೨೨೦. ಚಂಡಿಕೆ = ಕೇಶಪಾಶಂ.

೨೨೧. ಅಮರ್ದವಳ್ = ತನ್ನ ಸೇರಿದವಳ. ಅಮರ್ದಂ = ಹಾಲನ್ನು, ಮತ್ತು ಮೋಕ್ಷವನ್ನು. ಅಮರ್ದುಣಿಗಳ್ = ದೇವತೆಗಳು.

---

## 34. ವರ್ಷರ್ತು ವರ್ಣನೆ.

೨೨೨. ಕರಟಂ = ಆನೆಯ ಗಂಡಸ್ಥಳಂ. ದಾನ = ಮದೋದಕ. ಉನ್ನಿದ್ರಕೈತಕ್ಯ ಪರಾಗ ಶ್ರೇಣಿ = ಅರಳಿದ ತಾಳೆಯ ಹೂವಿನ ಧೂಳಿ ಸಮೂಹವೆಂಬ. ಚಂಚಚ್ಚಪಲಂ = ಚಲಿಸುತ್ತಿರುವ ಮಿಂಚುಳ್ಳ. ಸಂಘೃಷ್ಟ = ಒಂದಕ್ಕೊಂದು ತಗುಲಿದ. ಈ ಪದ್ಯದಲ್ಲಿ ವಾಯುವನ್ನು ಮಳೆಗಾಲದಂತೆ ವರ್ಣಿಸಿದೆ.

೨೨೪. ತೊಡಂಬೆ = ಗೊಂಚಲು. ನಣ್ಪು = ಸಂತೋಷಂ.

೨೨೫. ಪಲ್ಲವದಂತೆ = ಝಲ್ಲರಿಯಂತೆ. ಭರ್ಮಕಲಶಂ = ಸುವರ್ಣಕಲಶಂ. ಪೀಲಿ = ನವಿಲ್ಗರಿ. ಮೇಲಕ್ಕೆ ಸುಟ್ಟುರೆಗಾಳಿಯೊಡನೆ ಸುತ್ತಿಕೊಂಡು ಹೋಗುವ ಧೂಳೀಸಮೂಹವು ದಂಡಿಗೆಯಂತೆಯೂ, ದುಂಡಾಗಿರುವ ಮೇಘವೇ ಸತ್ತಿಗೆಯ ಮೇಲ್ಭಾಗದಂತೆಯೂ, ಮೇಘದ ಸುತ್ತಲೂ ಇರುವ ಸೂರ್ಯ ಕಿರಣವು ಝಲ್ಲರಿಯಂತೆಯೂ, ಸೂರ್ಯಮಂಡಲವೇ ಸತ್ತಿಗೆಯ ಸುವರ್ಣಕಲಶದಂತೆಯೂ ಇದ್ದುವು ಎಂದು ಅಭಿಪ್ರಾಯವು.

೨೨೬. ಭ್ರಾಂತಿ ಮದಲಂಕಾರಂ.

೨೨೭. ಧೃತಚಂಚಲಂ = (1) ಧರಿಸಲ್ಪಟ್ಟ ಮಿಂಚುಳ್ಳ, (2) ಪೋಷಿಸಲ್ಪಟ್ಟ

ವಿಟನುಳ್ಳ. ಜಡಭರಿತಂ=(1) ಮಂದಬುದ್ಧಿಯಿಂದ ತುಂಬಿರುವ, (2) ಜಲದಿಂದ ತುಂಬಿರುವ, "ಲಡಯೋರಭೇದಃ." ನುತಹಂಸಂ=(1) ಯೋಗ್ಯವಾದ ಹಂಸಪಕ್ಷಿಯು, (2) ಯೋಗ್ಯನಾದ ಯತಿಯು. ತಳರ್ದುದು=ಧಾ ತಳರ್—ಚಲನೇ. ಈ ಶ್ಲೋಕದಲ್ಲಿ ಅರ್ಥಾಂತರ ನ್ಯಾಸಾಲಂಕಾರಂ.

೨೩೮. ಕಿಱುವಱಿ=ಕಿಱಿದು+ವಱಿ. ಶ. ದ. ೬೭ನೇ ಸೂತ್ರ ನೋಡು. ಮರಾಳಿಗಳ=ಹೆಣ್ಣು ಹಂಸಪಕ್ಷಿಗಳ.

೨೩೯. ಕಿಱುಕಬ್ಬಿಗರ್=ಕುಕವಿಗಳು. ಗುಪ್ತಗೈದು=ಮುಚ್ಚಿ. ದೃಷ್ಟಾಂತಾಲಂಕಾರಂ.

೨೪೦. ಕಾನಕವಲ್ಲರಿ=ಸೌವರ್ಣಲತೆ. ಉಳ್ಕಿದುದು=ಹೊಳೆಯಿತು ಧಾ. ಉಳ್ಕು—ದೀಪ್ತೌ. ಮುಗುಳಂಬನೀಕ್ಷಣಂ=ಮನ್ಮಥನದೃಷ್ಟಿ.

೨೪೧. ಕೋಣಂ=ತಮ್ಮಟೆಯನ್ನು ಬಾರಿಸುವ ಚಿಕ್ಕಕಡ್ಡಿ ಅಗ್ರದ ಡಿಂಡಿಮನಾದದಂತೆ=ಮೇಲ್ಭಾಗದಲ್ಲಿಟ್ಟಿರುವ ಭೇರಿಧ್ವನಿಯಂತೆ. ತಗುಳಲ್=ಓಡಿಸಲು.

೨೪೨. ಶರಧಿ=1. ಬತ್ತಳಿಕೆ, 2. ಸಮುದ್ರ. ಶರಂ=1. ಬಾಣಂ 2. ನೀರೂ. ಹರಿಪ್ರಭಾ=ವಿಷ್ಣುವಿನ ಕಾಂತಿಯಂತೆ ಕಾಂತಿಯುಳ್ಳ ಅಂದರೆ ನೀಲವಾದ. ಚಂಚಲೇಕ್ಷಣಂ=1, ಚಲಿಸುತ್ತಿರುವ ನೋಟವುಳ್ಳ, 2. ಮಿಂಚೆಂಬ ದೃಷ್ಟಿಯುಳ್ಳ.

೨೪೩. ಗಱಿಮೂಡಿದಂತೆ=ರೆಕ್ಕೆಯು ಹುಟ್ಟಿದ ಹಾಗೆ. ಕಱುತ್ತು=ಗುರಿಯಿಟ್ಟು. ಬಿಱುಸಿಡಿಲ್=ಬಿಱುಸು+ಸಿಡಿಲ್.

೨೪೪. ಪ್ರೋತ್ಪಿಹಿತಾಂಗಂ=ಚೆನ್ನಾಗಿ ಮುಚ್ಚಿದ ಅವಯವವುಳ್ಳ. ಉದ್ಧೃತಘನಕ್ಷ್ಮಾಜವ್ರಜಂ=ಕಿತ್ತು ಹಾಕಲ್ಪಟ್ಟ ಮೇಘಗಳೆಂಬ ವೃಕ್ಷ ಸಮೂಹವುಳ್ಳ. ಭೂಧರೋತ್ಕರಸಂಚಾರಿ=ಪರ್ವತ ಶ್ರೇಣಿಗಳಲ್ಲಿ ಸಂಚರಿಸುವ. ರಟಜ್ಝಂಝಾಮರುತ್=ಘೀಳಿಡುತ್ತಿರುವ (ಸಶಬ್ದ) ಪ್ರಬಲವಾದ ಗಾಳಿ.

೨೪೫. ಕದಂಬ=ಸಮೂಹ. ಉತ್ಫಣಿತಾಹಿಶೀರ್ಷರತ್ನಜ ಘೃಣಿಮಾಲೆ=ಮೇಲಕ್ಕೆತ್ತಲ್ಪಟ್ಟ ಹಾವುಗಳ ಹೆಡೆಗಳಲ್ಲಿರತಕ್ಕ ರತ್ನಗಳಿಂದುಂಟಾದ ಕಿರಣಸಮೂಹಂ. ಈ ಶ್ಲೋಕದಲ್ಲಿ ಗಜಚರ್ಮವನ್ನು ಧರಿಸಿ, ರುಂಡಮಾಲೆಯಾಂತು, ಸರ್ಪಭೂಷಣವಂತನಾಳ್ದು, ಫಾಲಾಗ್ನಿಯುಳ್ಳ ಈಶ್ವರನು ನರ್ತಿಸುವಂತೆ ಘನಾಗಮವು ನರ್ತಿಸುವುದೆಂದು ವರ್ಣಿಸಿದೆ.

೨೪೬. ವಿಷಂ = 1. ನೀರು, 2. ಕಾಲಕೂಟಂ. ಜೀವನವುಂ = ನೀರನ್ನು, ಪ್ರಾಣವನ್ನು. ಇಲ್ಲಿನ ಶ್ಲೇಷೆಯು ಬಹುಸ್ವಾರಸ್ಯವಾಗಿದೆ.

೨೪೯. ಅಂಗುಳ್ = ನಾಲಗೆಯ ಮೇಲಣ ಅಟ್ಟ. ವಿಧುಂತುದಂ = ರಾಹು. ಅವಯವಾರ್ಥ ಹೇಗೆ ? ಪಾಂಗಂ = ರೀತಿಯನ್ನು.

೨೫೦. ಮುಲ್ಸರಿ = ಮುಳ್ಳಿಗ ಸಿಡಿಯುವ ಮಳೆ. ಸೂಸ್ಸರಿ = ಆಗಣಿಂದಾಗ ಬರ ತಕ್ಕ ಮಳೆ. ತೆಳ್ಸರಿ = ಸ್ವಲ್ಪ ಮಳೆ. ಪೊನಲ್ವರಿಯಿಪ = ಪ್ರವಾಹ ಹರಿಯಿಸುವ. ಬಂಬಲ್ಸರಿ = ಪ್ರಬಲವಾದ ಮಳೆ.

೨೫೧. ಆಲಿಸರಲ್ = ಆಲಿಕಲ್ಲು.

೨೫೨. ಸುರಚಾಪದ ಪನ್ನಿರಿ = ಇಂದ್ರ ಧನುಸ್ಸೆಂಬ ಸಿಂಹಂ. ವಿದ್ಯುತ್ಕರಜಾಗ್ರದಿಂ = ಮಿಂಚೆಂಬ ಉಗುರುಗಳ ತುದಿಯಿಂದ. ಘನಗಾಜೇಂದ್ರ ಗೋಪವ್ರಜಂ = ಆಲಿಕಲ್ಲುಗಳೆಂಬ ಮಿಂಚು ಹುಳುಗಳ ಗುಂಪು.

೨೫೩. ಅಪಹ್ನವಾಲಂಕಾರಂ.

೨೫೫. ಇಂದುರವಿಲ್ = ಕಾಮನಬಿಲ್ಲು. ಸೇಸೆ = ಅಕ್ಷತೆ.

೨೫೬. ನೋಣೆದು—ಧಾ. ನೋಣೆ—ಗಿಲನೇ. ನೀಲಕಂಠಂ = ಈಶ್ವರಂ. ವಿಷಧರದ = ಮೇಘದ.

೨೫೮. ಪೊಂಪುಳಿ ವೋದಂತಿರ = ರೋಮಾಂಚ ಉಂಟಾದಂತೆ, ಪುಲಕೋದ್ಗಮವಾದಂತೆ. ಮುದಶ್ರು = ಆನಂದಬಾಷ್ಪಂ. ಬಿಟೆತಂದೊ = ಸ್ರವಿಸಿತೊ.

೨೫೯. ಕಡಂಬು = ಕದಂಬವೃಕ್ಷಂ. ಪಂಗು = ಹಂಗು, ಸಹಾಯಂ. ಸಮಾನವಯಃಪ್ರವರ್ತನಂ = ಸ್ನೇಹಿತರ ನಡತೆ.

೨೬೦. ದಳದ್ದಳ = ದಳತ್ + ದಳ = ಅರಳಿದ ದಳಗಳುಳ್ಳ. ಗಳತ್ = ಬೀಳುತ್ತಿರುವ. ಗಾಮರಂ = ಝೇಂಕಾರವು. ಇಲ್ಲಿ ಮಧುವ್ರತಾಳಿ ಎಂಬುದು ಕರ್ತೃಪದಂ.

೨೬೧. ಪಂಕಿಳಂ = ಕೆಸರಾದ. ಕರ್ಚಿ = ತೊಳೆದು ಧಾ. ಕರ್ಚು—ಪ್ರಕ್ಷಾಳನೇ.

೨೬೨. ನಾಂದು = ತೇವವಾಗಿ, ಒದ್ದೆಯಾಗಿ. ಸೇಜುವಡೆದಿರೆ = ಚಳಿಯಿಂದ ಸೆಳೆದುಕೊಂಡಿರಲು. ಸಂಚಲದಳವನದಿಂದೆ = ಅಲ್ಲಾಡುತ್ತಿರುವ ಎಲೆಗಳುಳ್ಳ ವನದಿಂದ.

## 35. ಸೀತಾ ಸ್ವಯಂವರಂ.

೭೬೩. ಮಾಟಕೂಟಂಗಳಿಂ = ರಚನಾನೈಪುಣ್ಯದಿಂದ. ವಿತಾನಂ = ಕುಚ್ಚು

೭೬೪. ಉಗ್ರಾನ್ವಯದ = ಉಗ್ರಸೇನವಂಶದ.

೭೬೬. ಉರ್ಚೆ = ಸೆಳೆಯಲು. ಧಾ. ಉರ್ಚು—ಆಕರ್ಷಣೇ. ಹಿರಣ್ಮಯಮುಂ ವರರೂಥಮುಂ—ವಿಶೇಷಣವೂ ವಿಶೇಷ್ಯದ ವಿಭಕ್ತಿಯಲ್ಲಿಯೇ ಇರುವುದಕ್ಕೆ ಶ. ದ. ಸೂ. 140 ನೋಡಿ.

೭೬೭. ವಶ್ಯದೀಪಕಲಿಕಾ = ಜನರನ್ನು ವಶ ಮಾಡಿಕೊಳ್ಳುವ ಸಾಮರ್ಥ್ಯ ಉಳ್ಳ ದೀಪದ ಕುಡಿ. ಇದರಂತೆ ವಶ್ಯಾಂಜನಂ. ಅಂಗವಿಕಾರಂ = ಅಂಗಚೇಷ್ಟೆ, ಶೃಂಗಾರಚೇಷ್ಟೆ. ಮಧು = ವಸಂತಕಾಲಂ.

೭೬೮. ಲಾವಣ್ಯಂ = ಸೌಂದರ್ಯಂ. ಶ. ಕ. ದ್ರು. ಲಾವಣ್ಯ ಲಕ್ಷಣಂ :—

ಮುಕ್ತಾಫಲೇಷು ಛಾಯಾಯಾಸ್ತರಳತ್ವಮಿವಾಂತರಾ ।
ಪ್ರತಿಭಾತಿಯದಂಗೇಷು ತಲ್ಲಾವಣ್ಯಮಿಹೋಚ್ಯತೇ ॥

೭೬೯. ನಗೆ = ಹಾಸ್ಯಮಾಡುವ ಹಾಗಿರಲು. ಸವಗಿಸಿದಂ = ಸರಿಮಾಡಿಕೊಂಡನು.

೭೭೦. ಪರಭಾಗಂ ಬೆತ್ತಿರೆ = ಹಿಂಭಾಗಕ್ಕೆ ಹೋಗಿರಲು.

೭೭೧. ಪುದುವೆಸಿಸಿದುದಂ = ತಕ್ಕುದಾಗಿರುವುದೆಂದೆನಿಸುವ. ಇದು ಪೇರುರಮುಂ ಎಂಬುದರ ವಿಶೇಷಣಂ. ಭಂಗಿ = ವಿಲಾಸಂ.

೭೭೨. ತೋರ್ಪುವಡೆದುದಂ = ಪ್ರಖ್ಯಾತವಾದ. ಸಾರ್ಚವ—ಧಾ. ಸಾರ್ಚು—ಸಮೀಪಾಗಮನೇ.

೭೭೩. ಋಜುವಿಂದ ಮಧ್ಯ ಋಜುವಿಂದಂ ಸೂಚಿಯಿಂದ. ಸರಿಯಾದ ನೋಟದಿಂದಲೂ, ಓರೆ ನೋಟದಿಂದಲೂ, ಮನೋಭಾವ ಸೂಚಕ ವೃಷ್ಟಿಯಿಂದಲೂ. ನಿಷ್ಪಂದರಾಗಿರ್ಪುದುಂ = ಚಲನೆಯಿಲ್ಲದ ಹಾಗಿರಲು.

೭೭೪. ವಿಷಯಮುಮಂ = ತಮ್ಮ ತಮ್ಮ ವಿಷಯವಾದ ರಸಗಂಧಾದಿ ಗ್ರಹಣಗಳನ್ನು. ಅನಾಕುಳಂ = ನಿರ್ಯೋಚನೆಯಾಗಿ.

೭೭೫. ಪರಿವಿಡಿಯಿಂ = ಕ್ರಮದಿಂದ.

೭೭೬. ಕೇಕರಂ = ಅಪಾಂಗ, ಕಡೆಗಣ್ಣನೋಟ. ರಾಜಕ = ರಾಜಸಮೂಹಂ. ಗುಣೈಕದೇಶಮುಂ = ಗುಣಗಳಲ್ಲಿ ಯಾವುದೋ ಒಂದು ಭಾಗವನ್ನು.

೭೭೭. ಪ್ರಾಕೃತಂ = ಸಾಮಾನ್ಯನು. ಏಕವಾಕ್ಯಂ—" ರಾಮೋದ್ವಿರ್ನಾಭಿಭಾಷತೇ " ಎಂಬಂತೆ ಒಂದು ಬಾರಿ ಹೇಳಿದುದಕ್ಕೆ ತಪ್ಪಿ ನಡೆಯು

ಬರುವ. ಆಶಾಕರಿಕರ್ಣಚಾಮರಯುಗಂ = ದಿಗಂತ ವ್ಯಾಪಿಕೀರ್ತಿಯುಳ್ಳವನೆಂದು ಭಾವವು. ಚರಮಾಂಗಂ = ಮೋಕ್ಷಸನ್ನಿಹಿತವಾದ ದೇಹವುಳ್ಳ. ರಣಮೇರು = ಯುದ್ಧದಲ್ಲಿ ಮೇರುಪರ್ವತದಂತಚಲಂ. ಲೋಕಲುಂಟಾಕ ನಿದಾಘತಾಪ ಶರವರ್ಷಣ ಮೇಘಂ = ಲೋಕವನ್ನು ಲೂಟಿ ಮಾಡುವ ಅಂದರೆ ಲೋಕಕಂಟಕವೆಂಬ ಗ್ರೀಷ್ಮಕಾಲದ ತಾಪಕ್ಕೆ ಬಾಣವೆಂಬ ಮಳೆಯನ್ನು ಸುರಿಯುವ ಮೇಘದಂತಿರುವ. ಉದಾತ್ತಂ = ಘನತೆ ಮತ್ತು ಗಾಂಭೀರ್ಯವುಳ್ಳ.

೭೭೯. ಶಂಖಂ = ಪಾಂಚಜನ್ಯಾಯುಧಂ. ದಳ್ಳಿಸು = ಆವರಿಸಿಕೊಳ್ಳಲು.

೭೮೦. ಸಾಲ್ವ = ಸಾಕಾಗುವ. ದೋರ್ದಂಡಾವಷ್ಟಂಭಂ = ಬಾಹುಬಲ ಸಹಾಯವುಳ್ಳ. ಕರ್ಣಾವತಂಸಂ ಪಸರಿಸು = (ಎಲ್ಲರ) ಕಿವಿಗಳಿಗೂ ಕೇಳುವ ಹಾಗೆ ಹರಡಿಕೊಳ್ಳಲು. ಕಕುಭಾಸೀಕವಂ = ಸಮಸ್ತ ದಿಕ್ಕುಗಳನ್ನು.

೭೮೧. ಅಗುರ್ವು = ಅದ್ಭುತಂ. ವಿಗುರ್ವಿಸುವ = ಭಯಂಕರವಾಗಿರುವ.

೭೮೨. ಬಿಲ್ಲಿಕ್ಕುವಂ = ಬಿಲ್ಲಿಂಬಿಕ್ಕುಳ್ಳ. ಈಡಿಟ್ಟುಕೊಳ್ವ = ಸೆಳೆದುಕೊಳ್ಳುವ. ಕುಳಿಕದಂಷ್ಟ್ರಾಲಗ್ನನಂ = ಕುಳಿಕವೆಂಬ ಹೆಸರುಳ್ಳ ಸರ್ಪದ ದಾಡೆಯ ಹಲ್ಲಿಗೆ ಸಿಕ್ಕುವುದನ್ನು.

೭೮೪. ಅವಘಟಿತಂ = ಸಂಮೇಳನಂ, ಸೇರುವಿಕೆ.

೭೮೫. ಪಡಂಬುಗುಱಿ = ಪರಾಙ್ಮುಖರಾಗಲು.

೭೮೬. ಸೆಡೆವುದುಂ = ಭಯದಿಂದ ಹಿಂಜರಿಯಲು. ಭ್ರೂವಲ್ಲರೀಪಲ್ಲವಾದೇಶಂ = ಹುಬ್ಬಾಡಿಸುವುದರಿಂದ ಸಂಜ್ಞೆಯನ್ನು ಮಾಡಿದ ಎಂದು ಭಾವಂ.

೭೮೭. ಚಿಕ್ಕಸಮುತ್ತರಂ = ವಿಸ್ಮಯಾವಿಷ್ಟರಾದವರನ್ನು, ಬೆರಗಾದವರನ್ನು

೭೮೯. ಏರಂಡಕಾಂಡಮುಂ = ಹರಳುಕಡ್ಡಿಯನ್ನು. ಖರ್ಪರಂ = ಬೆನ್ನುಚಿಪ್ಪು. ನಳಿದು = ಬಗ್ಗಿ.

೭೯೦. ಇರ್ವೆರ್ = ಎರಡುಬಾರಿ. ಗೊಲೆಗೆ = ಕೊಪ್ಪಿಗೆ.

೭೯೧. ಜೇವೊಡೆಯೆ = ಧನುಷ್ಟಂಕಾರ ಮಾಡಲು.

೭೯೨. ಮಾಱೆಚ್ಚಂ = ಪುನಃಬಾಣಪ್ರಯೋಗ ಮಾಡಿದಂ.

೭೯೩. ಪೀಲಿಗಳೆಯುಂತಿರೆ = ನವಿಲ್ಗರಿಯಂತಿರಲು.

## 36. ಖೇಚರ ರಾಜ್ಯ ವೈಭವ.

೭೯೮. ಆಸ್ಥಾಯಿಕೆ = ಓಲಗಶಾಲೆ. ಚೂಳಿಕೆ = ಪರ್ವತಶಿಖರಂ.

೭೯೯. ಬೆಸಂ = ವಿಧಾಯಕವಾದ ಕಾರ್ಯಂ. ಅಪ್ಪಣೆ.

೮೦೧. ಬಳಗಂ = ಗುಂಪು. ಇಟಿಸೆ = ತಿರಸ್ಕರಿಸುತ್ತಿರಲು.

೮೦೩. ಮಧೂಳಿ = ಮಕರಂದಂ. ತೊಟಲ್ದು = ಬಹಳಕಾಲ ಸುತ್ತಿಸುತ್ತಿ. ಶಿರೋಜರಾಜಿ = ಕೇಶಪಾಶಂ. ವ್ಯಾಳಿ—ಇದು ಕೀರ್ತಿಗೆ ವಿಶೇಷಣ.

೮೦೪. ಪ್ರಸಾದಂ = ಅನುಗ್ರಹಂ, ಪ್ರಸನ್ನತೆ.

೮೦೫. ಕೇಸುರಿಗಳ್ = ಕೆಂಪಾದ ಜ್ವಾಲೆಗಳು.

೮೦೬. ಇಂತು + ಇದು + ಆರೆಂ = ಇಂತಿದಾರೆಂ. ಆರಂ = ಹಾರಂ. ಅಣಂ = ಬಹಳವಾಗಿ. ಅಧಃಕೃತತಾರಕಾಂತಿ = ತಿರಸ್ಕರಿಸಲ್ಪಟ್ಟ ನಕ್ಷತ್ರಕಾಂತಿಯುಳ್ಳ. ಹಿಮದೀಧಿತಿ = ಚಂದ್ರಂ

೮೦೭. ವಿರೂಕ್ಷಿಸಿದ = ದ್ವೇಷಿಸಿದ. ಸಾಮಜಕೃತಂ = ಆನೆಯ ಕಾರ್ಯಂ. ಅವಲೇಪನೊ = ಹೆಮ್ಮೆಯೋ.

೮೦೯. ಸುರಿಗೆ = ಚಿಕ್ಕಕತ್ತಿ. ಛುರಿಕಾ (ಸ್ತ್ರ)

೮೧೦ ವೃತ್ತತರಂ = ಅತಿದುಂಡಾಗಿರುವ. ಐರಾವತ ಪುಂಡರೀಕ ಕರಯುಗವಿತರ್ಕಮಂ = ಐರಾವತಪುಂಡರೀಕಗಳೆಂಬ ದಿಗ್ಗಜಗಳ ಸೊಂಡಿಲ್ಗಳೆಂಬ ಸಂಶಯುವನ್ನು.

೮೧೧. ಗುಲ್ಫಜಾನುಗಳ್ = ಹರಡು ಮತ್ತು ತೊಡೆಗಳು. ಗೂಢಂಗಳ್ = ಗುಪ್ತವಾಗಿರುವುವು. ರಕ್ತತರಂಗಳ್ = ಬಹಳ ಕೆಂಪಾಗಿರುವುವು, ಅನುರಾಗಉಳ್ಳುವು. ಇಲ್ಲಿ ಗೂಢ ಮತ್ತು ರಕ್ತತರ ಎಂಬುವ ಪದಗಳು ಶ್ಲೇಷಾರ್ಥವುಳ್ಳ ಪದಗಳಾಗಿವೆ.

೮೧೨. ಸಮವೃತ್ತ ಸಂಧಿಲಕ್ಷಣ ಸಮನ್ವಿತಂ = (1) ಸಮವಾಗಿಯೂ, ದುಂಡಾಗಿಯೂ, ಚೆನ್ನಾಗಿ ಕೀಲುಗಳು ಸೇರಿ, ಲಕ್ಷಣದೊಡನೆ ಕೂಡಿರುವ. (2) ಸಮವೃತ್ತಗಳಿಂದಲೂ, ಪದಸಂಧಿಗಳಿಂದಲೂ, ಜಹಲ್ಲಕ್ಷಣಾದಿಗಳಿಂದಲೂ ಕೂಡಿ ಕೊಂಡಿರುವ (ಕಾವ್ಯಪರವಾದ ಅರ್ಥಂ). ಜಾತ್ಯಲಂಕೃತಿಭ್ರಾಜಿತಂ = (1) ಉತ್ತಮಜಾತಿಗೆ ತಕ್ಕ ಅಲಂಕಾರಗಳಿಂದ ಪ್ರಕಾಶಮಾನವಾದ (2) ಜಾತಿ ಎಂಬ ಒಂದು ಬಗೆ ವೃತ್ತದಿಂದಲೂ. ಉಪಮಾದ್ಯಲಂಕಾರಗಳಿಂದಲೂ ಪ್ರಕಾಶಮಾನವಾದ. (ಕಾವ್ಯಪರವಾದ ಅರ್ಥಂ). ಕಿಱುದೊಡೆಗಳ್ — ಜಂಘೆಗಳು.

೮೧೪. (ಸಮುದ್ರ ಪರವಾಗಿ)—ಮೀನುಗಳು, ಕಮಲಗಳು, ಶಂಖ, ಮತ್ತು ಚಕ್ರವಾಕ ಪಕ್ಷಿಗಳು. (ಪಾದತಳದ ಪರವಾಗಿ) ಮೀನಾಬ್ಜಶಂಖ ಚಕ್ರರೇಖೆಗಳು ಈ ರೇಖೆಗಳು ಮಹಾಪುರುಷರಿಗೆ ಇವೆ.

೮೧೫. ಪೊಱರಿಪು = ಕೃಷ್ಣಮೃಗಶತ್ರು, ಸಿಂಹ. ಚಮರರುಹಂಗಳ್ = ಚಾಮರಗಳು.

---

## 37. ಅನ್ಯಮತ ಖಂಡನಂ.

೮೧೬. ನಿಧಾನಮಂ = ನಿಧಿಯನ್ನು. ಅಗುೞುತ್ತುಂ = ಅಗೆಯುತ್ತ ಧಾ. ಅಗುೞ್—ಖನನೇ. ಅಪವರ್ಗ ಮಾರ್ಗ = ಮೋಕ್ಷಮಾರ್ಗ. ತತ್ವನಿರ್ಣಯ ಜನಿತೋಕ್ತಿಯಲ್ಲಿ = ಪಂತತ್ವನಿರ್ಣಯದಿಂದ ಉಂಟಾದ ಮಾತಿನಲ್ಲಿ.

೮೧೭. ಮುಟ್ಟದ ಭಾವಂ = ತತ್ವವನ್ನು ಗ್ರಹಿಸದ ಮನಸ್ಸು. ಬಂದದ ಭವಂ = ಹೊಂದಬರತಕ್ಕ ಜನ್ಮವು. ನಿರಂಜನಂ = ನಿರ್ದೋಷಂ.

೮೧೮. ಅದಿರದ = ಭಯಪಡದ ಧಾ. ಅದಿರ್—ಕಂಪನೇ. ಈ ಪದ್ಯದಲ್ಲಿ ಪಾಪವನ್ನು ಹೋಗಲಾಡಿಸುವ ಉದ್ದೇಶದಿಂದ ನದೀಸಮುದ್ರಾದಿ ತೀರ್ಥಗಳಲ್ಲಿ ಸ್ನಾನ ಮಾಡುವುದೂ; ಶಸ್ತ್ರಾಗ್ನಿಗಳಿಂದಲೂ, ಪರ್ವತದ ಮೇಲಿಂದ ಬಿದ್ದು, ಸಾಯುವುದೂ; ನಿಷ್ಪ್ರಯೋಜನವೆಂಬ ಭಾವವು ಸೂಚಿತವಾಗಿದೆ

೮೧೯. ಲೋಕಂ = ಐಹಿಕಂ, ಈ ಲೋಕಕ್ಕೆ ಸಂಬಂಧಪಟ್ಟುದು. ಲೋಗರೋಲ್ = ಸಾಮಾನ್ಯರಂತೆ, ಏನೂ ತಿಳಿಯದ ಮೂಢರಂತೆ

೮೨೦. ಉೞ್ವ—ಧಾ. ಉೞ್—ವಿಲೇಖನೇ. ಉಣ್ಬಗುಳಂ = ಉಣ್ಣುವ ಅನ್ನದ ಅಗುಳನ್ನು, "ಕೞಿವಾಕಳ" ಎಂದಿರಬೇಕು. ಬೆಸಕೈವ = ಕೆಲಸಮಾಡುವ. ಬಱಿಸೂರೆಗೈವರ್ = ಅನ್ಯಾಯವಾಗಿ ಹಾಳುಮಾಡಿಕೊಳ್ಳುವರು.

೮೨೧. ಜನ್ನಿಗಿರೂವಂ = ಯಜ್ಞಾರ್ಥವಾದ ಪಶುವನ್ನು. ಪರಕೆಯಪೊನ್ನಂ = ಹರಕೆ ಕಟ್ಟಿದ ಚಿನ್ನದ ನಾಣ್ಯವನ್ನು. ಪೞಯಣಮಂ = ಪುರೋಡಾಶವಿಟ್ಟಿರುವ ಮರದ ಅಥವಾ ಲೋಹದ ಪಾತ್ರೆಯನ್ನು, ಹರಿವಾಣವನ್ನು.

೮-೨೨. ದೈವದಚಕ್ಕುಗಳ್ = ದೇವರ ವಿಗ್ರಹಾದಿಗಳು ಬರೆದಿರುವ ಯಂತ್ರಗಳು. ಕವರ್ತೆಗೊಂಡು = ಬಲಾತ್ಕಾರದಿಂದ ಹಿಡಿದುಕೊಂಡು. ಅಭಿನವ ಪಂಪನಪ್ರಯೋಗಂ :—ಕೀಳ್ವರಚಿತ್ತಮುಂ ಕವರ್ತೆಗೊಳ್ವ ಕವೀಂದ್ರ ವೃಂದಂ. ಅರಸರವಂದಿರಂ = ಅರಸರನ್ನು.

೮-೨೩. ಇಕ್ಕುವುದು = ಕೊಲ್ಲುವುದು—ಧಾ. ಇಕ್ಕು—ತ್ಯಾಗಹನನಯೋಃ. ಕೊಂಡಾಡುವ ದೇವಿ = ಶ್ಲಾಘನೀಯಳಾದ ದೇವತೆಯು.

೮-೨೪. ಮರುಗಿದಂ = ಸಂಕಟಪಟ್ಟನು. ಸೂತಿಮಸಗಿತ್ತು = ಹೆರಿಗೆಯ ಸಂಕಟವು ಪ್ರಾರಂಭಿಸಿತು. ಕೂರ್ತು = ಕೂರಿತು, ಕಠಿಣವಾಗಿ. ತೇಗಿದೊಡೆ = ನಿಟ್ಟುಸಿರು ಬಿಟ್ಟರೆ ಕರುವಿಗೆ ಕಾಳರಕ್ಕಸಿಯು = ದೊಡ್ಡ ಕಾಳರಾಕ್ಷಸಿಯು. ಕುತ್ತಮೋಗದೇ = ಕೊರತೆಯು ಹೋಗದಿರುವುದೇ ?

೮-೨೫. ಆನರಿಯದ ದೈವಮೋ = ನಾನು ತಿಳಿಯದೇ ಇರತಕ್ಕ ದೇವರೇ? ಉರುವುದನು = ಹತ್ತಿರಕ್ಕೆ ಬಂದುದನ್ನು.

೮-೨೬. ಕಾಪಿನರ್ = ಕಾಯುವರು.

೮-೨೭. ಕಳ್ಳಂ = ಮದ್ಯವನ್ನು. ಇರಿಸುಗು = ಇರಿಸುವುದು.

೮-೨೮. ನೆಮ್ಮಿದ = ಆಶ್ರಯಿಸಿದ. ಕುತ್ತಂ = ಆಧಿವ್ಯಾಧಿಗಳು. ಗಾಳಿಗರ್ = ಪಿಶಾಚಾದಿಗಳು. ನೆಲಮುಕ್ಕಜಕ್ಕಿ = ನೆಲಂ + ಉಕ್ಕ + ಜಕ್ಕಿ = ಒಂದು ವಿಧವಾದ ದೈವಂ. ಜಕ್ಕಿ = (ತ್ಸ.) ಯಕ್ಷೀ.

---

## ೩೪. ಸರೋವರ ವರ್ಣನೆ.

೮-೨೯. ಉಚ್ಚೈಶ್ಚಕೋರ ಪ್ರಸ್ವನಿತಂ = ಮೇಲಕ್ಕೆ ಹಾರುತ್ತಿರುವ ಪಕ್ಷಿಗಳಧ್ವನಿಯೊಡನೆ ಕೂಡಿದ. ವಾನೇಯ = ವನಸಂಬಂಧವಾದ.

೮-೩೦. ಪೂನೀರ್ = ಪನ್ನೀರನ್ನು. ಸಿಯ್ಯನಸಂ = ಹಾಲು. ಕ್ಷೋದಂ = ತೇಯ್ದಗಂಧಂ. ಮೃಗೋದ್ಭವ = ಮೃಗನಾಭಿ, ಕಸ್ತೂರಿ. ಮುಸ್ತಾಗ್ರಂಥಿ = ಕೊಣನಾರಿಗಡ್ಡೆ. ಗಂದಿಗಂ = ಸುಗಂಧ ದ್ರವ್ಯ ಮಾರುವವನು.

೮-೩೧. ರಯ್ಯನೆ = ರಯ್ಯೆಂಬದಾಗಿ ಶಬ್ದ ಮಾಡುತ್ತಾ.

೮-೩೨. ಗೋತ್ರಂ = ಕುಲಂ. ಬಯ್ಕೆ = ಕೋರಿಕೆ. ಬೆಳ್ಳಂಗೆಡೆದತ್ತೋ = ಬೆಳ್ಳಗೆ ಬಿದ್ದಿದೆಯೊ. ಧೀವರೆಯರ್ = ಬೆಸ್ತಗಿತ್ತಿಯರು.

೮೩೪. ತಣ್ಣಿಱಿ = ಒದ್ದೆಯಾದ ಸೀರೆಯು ನೆರಿಗೆ.

೮೩೫. ಪೊಣರ್ವಕ್ಕಿಯೊಕ್ಕಲುಂ = ಚಕ್ರವಾಕಗಳ ಹಿಂಡು. ಮಿಱುಗಿದುವು —ಧಾ. ಮಿಱುಗು—ಚಕಚಕಾಯಮಾನೇ.

೮೩೬. ನಳಿನಾಭಿನಳಿನಂ = ನಾಳವುಳ್ಳನಾಭಿ ಕಮಲವು. ಪುರುಡಿಸಿ = ಈರ್ಷ್ಯೆಪಟ್ಟು.

೮೩೭. ಸೀರ್ವೂವಂ = ಕಮಲವನ್ನು. "ಸರಸಿ.......ನಿಕರಂ" ಎಂಬುದು ಅಬ್ಜಾಕರಕರಿಗೆ ವಿಶೇಷಣಂ.

೮೩೯. ಪಗೆವಂ = ಹಗೆಯುವನ್ನು.

೮೪೦ ಕೀಲಣೆ = ಕಟ್ಟುವಿಕೆ. ಜಳಕನಾದ = ನಿರ್ಮಲವಾದ

೮೪೧ ಮೆಯ್ಗರೆದವೊಲ್ = ಅಡಗಿಕೊಂಡ ಹಾಗೆ

೮೪೨ ತಿಂಗಳ್ಕಲ್ಗಳ್ = ಚಂದ್ರಕಾಂತ ಶಿಲೆಗಳು. "ಬಸರ್ದ್ದೆನೆ" ಎಂದಿರಬಹುದು.

೮೪೩ ಅಪಹ್ನವಾಲಂಕಾರಂ.

## 39. ಮೃಗಯಾವರ್ಣನೆ.

೮೪೪ ಅಭಂಗಂ = ಪರಾಜಯವಿಲ್ಲದ. ಕಾ|| ಪಿರಿದುಂಸಮಾಸಮಾಗಿರೆ ವಿರಚಿಸುವುದು ತಾನದೋಜಂ. ಓಜೆ = ಓಜಸ್ (ತ್ಸ) "ಪದನ್ಯಾಸಸ್ಯಗಾಢತ್ವಂ ಓಜಃ" ರೀತಿ = ಗುಣಾಶ್ಲಿಷ್ಟಪದಸಂಘಟನೆ. ಬಳ್ಪು = ಗುಣೋತ್ಕರ್ಷಂ. ವರ್ಣಕಂ = ಕಾವ್ಯ. ಸೂತ್ರ. ೨೪೫.

ನಗರಾರ್ಣವಸರಿದಟವೀ |
ನಗಚಂದ್ರಾರ್ಕೋದಯರ್ತುಸಲಿಲಕ್ರೀಡಾ ||
ದಿಗಳಾದಿಯಾಗೆ ಸರಸೋ |
ಕ್ತಿಗಳಿಂವರ್ಣಿಸುಗೆವರ್ಣಕಂಗಳ ನದಱೊಳ್ ||

ವಸ್ತುಕಂ = ಸ್ವಭಾವೋಕ್ತಿಯೇ ಪ್ರಧಾನವಾದ ಕಾವ್ಯಂ. ಸರಸವ್ರಾತಾಂತರಂಗಂ = ರಸ ಸಮೂಹದೊಡನೆ ಕೂಡಿಕೊಂಡಿರುವ ಮನಸ್ಸುಳ್ಳ ಪಕ್ಕಣಂ = ಶಬರರತಾಣಂ. ಕಣ್ಣಪ್ಪಂ = ಕಣ್ಣಾಂತಿರುವ.

೮೪೫. ತಮಂಧವೃಂದಂ = ತಮೋಂಧವೃಂದ (ತ್ಸ), ಕಗ್ಗತ್ತಲೆ.

೮೪೬ ಕಲ್ಲಿ = ಅಂಗಿ, ಕಂಥೆ. ತಲೆಸುತ್ತುಗಳ್ = ರುಮಾಲು, ಪಾಗು. ಅದಟಿಂದಂ ಶೌರ್ಯದಿಂದ.

೮೪೭. ದೀಹದೇಣಂ = ಬೇಟೆಯಾಡುವ ಕಾಲದಲ್ಲಿ ತವ್ಮ ಜಾತಿಯ ಮೃಗಗಳನ್ನು ವಂಚಿಸಿ ಹಿಡಿಯುವ ಜಿಂಕೆ ಗೇಣ = ನಿಶಿತವಾಗಿ, ಉದ್ದವಾದ ಕತ್ತಿ. ಕೈಪೊಡೆ = ಬಾಣಪುಂಖ.

೮೪೯ ಬಿೞ್ತು = ದಿಗಲು ಬಿದ್ದು. ಮೇಪುದೊರೆದು = ಮೇಯುವುದನ್ನು ಬಿಟ್ಟು. ಬಗ್ರೊಡೆದು = ಗುಂಪಿನಿಂದ ಚದರಿ. ಎಕ್ಕಲಂ = ಕಾಡು ಹಂದಿ ಬೇಂಟೆವಱೆಯಬ್ಬರಂ = ಬೇಟೆಯ ತಮಟೆಯ ವಿಶೇಷ ಧ್ವನಿ.

೮೫೦. ಎಯ್ಯಮಿಗಂ = ಮುಳ್ಳುಹಂದಿ. ಪೆರ್ವರೆಗಳ್ = ಒಂದು ತರದ ಹೆಣ್ಣು ಜಿಂಕೆಗಳು.

೮೫೧. ಸೃಕ್ವದಿಂ = ಕಟುವಾಯಿಂದ. ಕೋಣಸಂ = ಮೃಗಪೋತಂ, ಮರಿ.

೮೫೨. ಮಲೆತಿರ್ಪ = ಧಾ. ಮಲೆ—ಔದ್ಧತ್ಯೇ. ಇಸು = ಬಾಣಪ್ರಯೋಗಮಾಡು.

೮೫೩. ಸಾರ್ದುವರ್ಕೆ = ಹತ್ತಿರಬಂದುವುಗಳಿಗೆ. ಕಕ್ಕುರಿಮಿಕ್ಕು = ಕರುಣೆಯಿಲ್ಲದೆ.

೮೫೪. ಸಂಯಂಕಟ್ಟುವ = ಬೀಳುವ ನೀರನ್ನು ಅಡ್ಡಗಟ್ಟುವ. ತೋಹಿಂಗೆ = ಅಡಗಿಕೊಂಡಿರುವ ಸ್ಥಳಕ್ಕೆ. ಬೆಳ್ಳಾರಂ ಮೃಗಜಾಲಿಕೆ, ಬಲೆ.

೮೫೫. ಎಳವೆಱೆ = ಬಾಲಚಂದ್ರಂ. ನೀಳ್ದಕೋಳಗೊಪ್ಪು = ಉದ್ದವಾದ ಕಾಲು ಗೊರಸು ಒಪ್ಪುತ್ತಿರಲು. ಪವ್ವಳಿಸು = ಆಕಸ್ಮಿಕವಾಗಿ ಬರು.

೮೫೬. ಜನಿತೋನ್ಮತ್ತಪ್ರಚಾರಂ = ಬಹಳ ಪ್ರಬಲವಾದ ನಡಿಗೆಯುಳ್ಳ. ಕುಕ್ಕುರಾನೀಕವುಂ = ನಾಯಿಗಳ ಸಮೂಹವನ್ನು. ಮಹಾರೌದ್ರಗೇಹಂ = ರೌದ್ರ ರಸಕ್ಕೆ ಆವಾಸಸ್ಥಾನಂ, ಅತ್ಯಂತ ಭಯಂಕರವಾದ ಎಂದು ತಾತ್ಪರ್ಯ.

೮೫೭ ಕಣಿಕಿಕ್ಕುತ = ಬಾಯಲ್ಲಿರುವ ಹುಲ್ಲಿನ ದಂಟನ್ನು ಬಿಸುಡುತ್ತ. ಹೊಮ್ಮಿ = ಎದ್ದು. ಒಕ್ಕಲಿಕ್ಕಿ = ಕೊಂದು. ಪೆಗರ್ಗರುಪಿನ = ಪ್ರಸಿದ್ಧರಾದ.

೮೫೮. ಉಗಿಬಗಿದು = ಸೀಳಿ.

೮೫೯. ಎಳವೊನಲ್ = ಚಿಕ್ಕ ಪ್ರವಾಹಂ, ಚಿಕ್ಕನದಿ. ತರ್ಗಲ್ = ಕುಸಿಯಲು. ಉಡಿಯಲ್—ಧಾ. ಉಡಿ—ಮೋಟನೇ. ಕೊಂಕಿಡುತುಂ = ವಕ್ರಗತಿಯಿಂದ ನಡೆಯುತ್ತಲು. ಪೆರ್ಮಡು ಬಱಿದೆನಿಸಲ್ = ನೀರಿಲ್ಲದ ದೊಡ್ಡ ಮಡುವೆನ್ನುವಂತಿರಲು. ಲುಲಾಯಂ = ಕಾಡುಕೋಣ.

೮೬೦. ಕಿಗ್ಗಣ್ಣಿನಿಂ = ಚಿಕ್ಕ ಕಣ್ಣಿನಿಂದ, ಇದರಂತೆ ಕಿಗ್ಗಟ್ಟು. ಜಿತಧಾನುಷ್ಕೋಗ್ರಬಾಣಂ = ಜಯಿಸಲ್ಪಟ್ಟ ಬಿಲ್ಲಾಳುಗಳ ಕ್ರೂರವಾದ ಬಾಣಗಳುಳ್ಳ.

೮೬೨. ಬರೆವರೆ = ಮುಂದೆ ಮುಂದೆ ಬರುತ್ತಿರಲು. ಪುರ್ಬಿಕ್ಕುತುಂ = ಹುಬ್ಬು ಹಾರಿಸುತ್ತಲೂ. ಕೆತ್ತುತೆ = ಅಲ್ಲಾಡಿಸುತ್ತ. ಧಾ. ಕೆತ್ತು —ಸ್ಪಂದನೇ. ಅಭೀಲಶೀಲಂ = ಅತ್ಯುಗ್ರ ಸ್ವಭಾವವುಳ್ಳ.

೮೬೪. ತೊನೆಯೆ = ಹಿಂದಕ್ಕೆ ಮುಂದಕ್ಕೆ ಅಲ್ಲಾಡುತ್ತಿರಲು, ಧಾ. ತೊನೆ ಆಂದೋಲನೇ. ನಟ್ಟಾಲಿ = ಕದಲದ ದೃಷ್ಟಿ. ಪೆಪ್ಪಳಿಸುತ್ತುಂ = ಭಯಪಡುಸುತ್ತಲೂ.

೮೬೫. ಆರ್ವ—ಧಾ ಆರು—ಉಚ್ಚೈರ್ಧ್ವಾನೇ. ಆರ್ಪಿನೊಳ್ = ಪರಾಕ್ರಮದಿಂದ.

೮೬೬. ಪಳಹ = ಪಟಹ (ತ್ಸ), ತಮ್ಮಟೆ. ಗೋರಿವೇಂಟೆ = ಮೃಗಗಳನ್ನು ಮೋಸಗೊಳಿಸಿ ಬಲೆಗೆ ಕೆಡಹುವ ಒಂದು ಬಗೆಯ ಬೇಟೆ. ತೋಹುವೇಂಟೆ = ಮೃಗಗಳನ್ನು ಮೋಸದಿಂದ ಹೊಡೆಯುವ ಬೇಟೆ. ಸೋಹುವೇಂಟೆ = ಮೃಗಗಳನ್ನು ಅಟ್ಟಿಕೊಂಡು ಹೋಗಿ ಆಡುವ ಬೇಟೆ.

---

## 40. ಜಿನದತ್ತ ಕಥೆ.

೮೬೮. ಭವ್ಯಜನಂ = ಜೈನರಲ್ಲಿ ಮೋಕ್ಷಗತ ಜೀವಗಳು.

೮೭೦. ನೇಸರ್ಪಟ್ಟುಬೞಿಕ್ಕಂ = ಸೂರ್ಯಾಸ್ತಮಾನವಾದ ಮೇಲೆ. ಪಾಸರೆಯುಂ = ಹಾಸರೆಗಲ್ಲನ್ನು. ತಳ್ವಿಲ್ಲದೆ = ತಡವಿಲ್ಲದೆ. ಉಳ್ಳಳ್ಕದ ಗಂಡಂ = ಧೀರಂ.

೮೭೧. ಮುಂದರಧೈರ್ಯಂ = ದೃಢವಾದ ಧೈರ್ಯವುಳ್ಳ. ಪಟ್ಟಿರ್ದಂ. ಧಾ. ಪಡು—ಶಯನೇ.

೮೭೨. ಪಲ್ಲಂಸುಲಿದು = ಹಲ್ಲನ್ನು ಚೆನ್ನಾಗಿ ಉಜ್ಜಿ. ಕಟ್ಟಾಳ್ತನದಿಂ = ಬಹಳ ಧೈರ್ಯದಿಂದ. ಪೂಣ್ಕೆ = ಶಪಥ, ಪ್ರತಿಜ್ಞೆ. ಧಾ. ಪೂಣ್ —ಪ್ರತಿಜ್ಞಾಯಾಂ.

೮೭೩. ಬಾಸಣಿಸಿದಂ = ಮುಚ್ಚಿದಂ.

೮೭೪. ಚರುವಂ = ಹವಿಸ್ಸನ್ನು.

೮೭೫. ನಿಳಿಂಪನಗನಿಭಧೈರ್ಯರ್ = ಮೇರು ಪರ್ವತಕ್ಕೆ ಸಮಾನಾದ ಧೈರ್ಯವುಳ್ಳ.

೮೭೬. ಅಳುರ್ವಾಗಲ್ = ವ್ಯಾಪಿಸುತ್ತಿರುವಾಗ. ನರವುಗಳ್ ತೆಗೆದು = ನರಗಳು ಬಿಟ್ಟು ಹೋಗಿ. ಬೆಬ್ಬಳಿಸಿ = ಗಾಭರಿಪಟ್ಟು, ತಳಮಳಗೊಂಡು. ಬೆಗಡುಗೊಂಡು = ಆಶ್ಚರ್ಯಪಟ್ಟು. ಸೆರಗು = ಸಂರಕ್ಷಣೆ, ಕಾಪಾಡುವಿಕೆ. ಸೆರಗು ಎಂಬುದಕ್ಕೆ ಪಂಪವೆಂಬ ಅರ್ಥವುಂಟು.

೮೭೭. ಕೋಳ್ಪಟ್ಟರಂತೆ = ಸರ್ವಸ್ವವನ್ನು ಹಾಳುಮಾಡಿಕೊಂಡವರಂತೆ. ಬಂದಿಸಿ = ನಮಸ್ಕರಿಸಿ. ದೇಹಾರಂ = ದೇವಾಗಾರಂ. (ತ್ಸ). ಬೀಯಂ = ವ್ಯಯಂ (ತ್ಸ). ತೀರ್ದರ್ = ಮಸಾಯಿದ್ದು.

೮೭೮. ಸಾರೆ = ಹತ್ತಿರ.

೮೮೦. ತಱುವಲಿತನಂ = ಬಾಲಭಾವಂ.

೮೮೧. ಅಡಹಡಿಸಿ = ಆತುರಪಟ್ಟು.

೮೮೨. ಧೂರ್ತಿಂ = ದುರುಳ ತನದಿಂದ. ಪಡಿಯಂ = ಕದವನ್ನು.

೮೮೩. ಪಡಿಯಂಕೆತ್ತು = ಕದವನ್ನು ಮುಚ್ಚಿ. ನಾಯಕನಪ್ಪೊಡಂ = ಪ್ರಮುಖನಾದರೂ. (?) ದಿಂಡಿನೆಡೆಯಂ = ಬಟ್ಟೆಯ ಮೂಟೆ ಇದ್ದ ಸ್ಥಲವನ್ನು. ಜಾಣ್ಗೆಟ್ಟು = ಬುದ್ಧಿ ಭ್ರಂಶವಾಗಿ. ಏಗುವೆಂ = ಏನುಮಾಡಲಿ. ಕಿಱಿದು = ಕಿರ್ಗಟ್ಟೆ. ಕುಸುಕುಱು = ಇಕ್ಕಟ್ಟಾದ ಗುಪ್ತವಾದ ಸ್ಥಲ. ಬಾದಣಂ = ವಾತಾಯನಂ (ತ್ಸ), ಗವಾಕ್ಷ. ಪೋಗಲಾಗ = ಹೋಗಲಾಗದು.

೮೮೫. ಪರತ್ರೆಯುಂ = ಪರಲೋಕವನ್ನು. ಬೇಳಾಗಿ = ಹುಚ್ಚು ಹಿಡಿದು. ಕೆಮ್ಮನೆ = ಸುಮ್ಮನೆ.

೮೮೭. ಗರಳಧರಂ = ಸರ್ಪಂ.

೮೮೮. ಸೇದೆಯ = ಬಳಲಿಕೆಯನ್ನು. ಸೇರ್ಪಡೆ = ಭಾವಿಸಲು.

೮೮೯. ನೀರಱ್ಕೆ = ಬಾಯಾರಿಕೆ. ಸೇದೆಯುಂ = ಸೇದುವ ಹಗ್ಗವನ್ನು.

೮೯೧. ಇಕ್ಕೆ = ಆವಾಸಸ್ಥಲಂ.

೮೯೫. ಅಭ್ಯಾಗತಪ್ರತಿಪತ್ತಿ = ಮನೆಗೆ ಬಂದವರಿಗೆ ವಿಶ್ವಾಸ ಪೂರ್ವಕವಾಗಿ ಮಾಡುವ ಮನ್ನಣೆ. ಪಡೆಪು = ಭಾಗ್ಯಂ.

೮೯೮. ಇಱಿಯದಿರೆ = ಬಗ್ಗದಿರಲು. ಕವರ್ದೊಡೆ = ಸುಲಿದರೆ, ಸರ್ವಸ್ವವನ್ನು ತೆಗೆದುಕೊಂಡರೆ.

೮೯೯. ಶ್ರೇಷ್ಠಿ = ಶೆಟ್ಟಿ (ದ್ಭ). ಜಲಯಾತ್ರೆ = ಸಮುದ್ರದ ಮೇಲೆ ಹಡಗಿನ ವ್ಯಾಪಾರ.

೯೦೦. ಫಲದಿಂ ತೀವಿದಪರಿಯಣಮುಂ = ಹಣ್ಣು ತುಂಬಿದ್ದ ತಟ್ಟೆಯನ್ನು.
೯೦೪. ಘೋರರೋಪಸರ್ಗಂಪಿಂಗುವಿನಂ = ಭಯಂಕರವಾದ ರೋಗ ನಿವಾರಣೆ ಯಾಗುವವರೆಗೂ.
೯೦೫. ನಿಗ್ರಹಂಗೆಯ್ಯಲೆಂದಿರ್ಪುದುಂ = ಶಿಕ್ಷಿಸಬೇಕೆಂದಿರುತ್ತಿರಲು. ಉಗ್ರಕರ್ಮಂಬುರುಹತವಿಗೆ = ಹೆಚ್ಚುತ್ತಿರುವ ಕ್ರೂರಕೃತ್ಯವುಳ್ಳವನಿಗೆ ಎಂದು ಭಾವವು. ಪಲವುಮಾತೇವುವು = ಹಲವು ಮಾತುಗಳಿಂದೇನು ಪ್ರಯೋಜನ.
೯೦೬. ಪೊಂಗೆ + ಎಬಗಂ = ಪೊಂಗೆಬಗಂ, ದ್ರವ್ಯಕ್ಕೆ ಆಶೆ ಪಡತಕ್ಕವನಲ್ಲ.
೯೦೭. ಬಟ್ಟೆ = ವರ್ತ್ಮ (ತ್ಸ), ಮಾರ್ಗಂ. ಅಱಿತಂ = ತಿಳಿವಳಿಕೆ.
೯೦೮. ಸುತ್ತುತಿರ್ಪೆ = ಮುತ್ತಿಗೆ ಹಾಕಿಕೊಂಡಿರುವ. ನಿರ್ವೃತಿ = ಮೋಕ್ಷಂ
೯೦೯. ನೆರಪುವ = ಸೇರಿಸುವ. ಕೂರ್ಮೆಯಿಂ = ಪ್ರೀತಿಯಿಂದ. ಜಾತರೂಪಧರಂ = ನಗ್ನ ದೀಕ್ಷೆಯನ್ನು ಧರಿಸುವನು. ಸನ್ನ್ಯಸನವಿಧಿಯಿಂ = ಸನ್ಯಾಸ ವಿಧಿಯಿಂದ. ಮುಡಿಪಿ = ಅಂತ್ಯವನ್ನು ಹೊಂದಿ.

---

## 41. ಮೌಢ್ಯವಿಡಂಬನಂ.

೯೧೨. ಅನ್ವಯದಿಂ = ಕುಲಕ್ರಮವಾಗಿ.
೯೧೫. ಮೆಯ್ಯುಗೆರ್ಚುವ = ಮೈಯ್ಯನ್ನು ಉಜ್ಜಿ ತೊಳೆಯುವ. ಬೆಲೆವೆಣ್ = ವೇಶ್ಯಾಸ್ತ್ರೀ. ಅಪ್ರುತಾಂಗನೆ = ಮೋಕ್ಷವೆಂಬ ಕಾಂತೆ.
೯೧೬. ಸವಳದೆ = ಒಂದು ಬಗೆಯ ವ್ರತದಿಂದ.
೯೧೭. ಈ ಪದ್ಯದಲ್ಲಿರುವ ಪದಗಳಿಗೆ ಹಾವಿನ ಪರವಾಗಿಯೂ, ತಪಸ್ವಿ ಪರವಾಗಿಯೂ ಎರಡು ಅರ್ಥಗಳಿರುವುವು. ಅಪದಸ್ಥಂ = ಹಾವಿನ ಪರವಾಗಿ (1) ಕಾಲಿನಿಂದ ನಡೆಯದಿರುವ. ತಪಸ್ವಿ ಪರವಾಗಿ (2) ಕಾಲೂರದೆ ಇರುವ ಅಂದರೆ ತಲೆಕೆಳಗಾಗಿ ತಪಸ್ಸು ಮಾಡುವ.

ದ್ವಿರಸನಂ—(1) ಎರಡು ನಾಲಗೆಯುಳ್ಳ, (2) ಎರಡು ನಾಲಗೆಯುಳ್ಳ ಅಂದರೆ ಬಾಯಲ್ಲಿ ಹೇಳಿದುದಕ್ಕೆ ತಪ್ಪಿ ನಡೆಯುವ.

ಮಿತ್ರದ್ವಿಷಂ—(1) ಸೂರ್ಯನನ್ನು ದ್ವೇಷಿಸುವ ಸರ್ಪಾಕೃತಿಯಾದ ರಾಹುವು ಸೂರ್ಯನನ್ನು ಅಮಾವಾಸ್ಯೆಯಲ್ಲಿ ಕಬಳ ಮಾಡುವುದೆಂಬ ಪೂರ್ವ ಕಥೆಯನ್ನು ಇಲ್ಲಿ ಅನ್ವಯಿಸಿಕೊಳ್ಳಬೇಕು, (2) ಸ್ನೇಹಿತನನ್ನು ದ್ವೇಷಿಸುವ.

ಛಿದ್ರಾನ್ವೇಷಿ—(1) ಬಿಲವನ್ನೇ ಹುಡುಕುತ್ತಿರುವ, (2) ಪರರಲ್ಲಿರುವ ಕೊರತೆಗಳನ್ನೇ ಹುಡುಕುತ್ತಿರುವ.

ಅತ್ಯಾಮಿಷದತ್ತಚಿತ್ತಂ—(1) ಬಹಳವಾಗಿ ತನ್ನ ಆಹಾರದಲ್ಲಿಯೇ ಕೊಡಲ್ಪಟ್ಟ ಮನಸ್ಸುಳ್ಳ, (2) ಆಶೆಯಲ್ಲಿ ಕೊಡಲ್ಪಟ್ಟ ಮನಸ್ಸುಳ್ಳ.

೯೨೦. ಮದ್ಯಪೇ ಸೌಹೃದಂ ನಾಸ್ತಿ = ಕಳ್ಗುಡಿಯುವವನಲ್ಲಿ ಸ್ನೇಹ ಭಾವವಿಲ್ಲವು. ಮದ್ಯಪಾಃ ಕಿನ್ನಕುರ್ವಂತಿ = ಕಳ್ಗುಡಿಯುವವರು ಏನುತಾನೇ ಮಾಡುವುದಿಲ್ಲ.

೯೨೧. ಮೊಱೆ = ದುಃಖ. ಕೃತಮಱಿಯಂ = ಮಾಡಿದ ಉಪಕಾರವನ್ನು ತಿಳಿಯನು.

೯೨೨. ಪರತ್ರಗಾಟಿಸಿ = ಮೋಕ್ಷಕ್ಕಾಸೆಪಟ್ಟು. ಸಿಗೋಪದೊಳ್ = ಬಂದುಬಗೆಯ ನರಕದಲ್ಲಿ.

೯೨೪. ನಗಲ್ವವಂಗೆ = ಆಡುವವನಿಗೆ.

೯೨೫. ಅಡೆಗೂಳ್ = ತಳಹತ್ತಿದ ಅನ್ನ.

೯೨೮. ಕಸವರಂ = ದ್ರವ್ಯಂ, ಹೊನ್ನು.

---

## 42. ವಸಂತೋದ್ಯಾನವರ್ಣನಂ.

೯೪೦. ಪೊರೆಯೇಱೆ = ಹೆಚ್ಚುತ್ತಿರಲು. ಬಿಱುಬು = ಬಿಱಿದಿರುವುದು. ಅಪ್ಪುಗೆಯ್ = ಅಂಗೀಕರಿಸು.

೯೪೧. ಪಱಿಯೆ = ಬಿಡಲು. ಮಾಧವಿ = ಮಲ್ಲಿಗೆಯ ಬಳ್ಳಿ. ಅವನಿ = ನದಿಯು, ಭೂಮಿಯು. ಬೆಱೆಯೆ ಕುಸುಮೇಷು = ಮನ್ಮಥನು ಅಹಂಕಾರವನ್ನು ತೋರಿಸಲು ಶ. ದ. ಧಾ. ಬೆಱೆ—ಅಹಂಕಾರಭಾವೇ.

೯೪೪. ರಸಭರಿತವಾಗಿ = (1) ಶೃಂಗಾರಾದಿ ನವರಸಗಳಿಂದ ತುಂಬಿ, (2) ರಸದಿಂದ ತುಂಬಿ. ಹರಿಸಂಯೋಗಿಯಾಗಿ = (1) ವಿಷ್ಣುವಿನೊಡನೆ ಕೂಡಿ, (2) ಗಿಣಿಗಳೊಡನೆ ಕೂಡಿ. ತ್ರೆಮುರಲ್ಲಿ = ಎತ್ತರವಾದ ಸ್ಥಳದಲ್ಲಿ. ಅರ್ಜುನಾಢ್ಯವಾಗಿ = (1) ಕುಂತೀಪುತ್ರನಾದ ಅರ್ಜುನನ ಸಂಪತ್ತುಳ್ಳುದಾಗಿ (2) ಹಸಿಯ ಹುಲ್ಲಿನಿಂದ ಭರಿತವಾಗಿ. ಸಸಿ = (1) ಚಂದ್ರ, (2) ಸಸ್ಯ. ಸುವರ್ಣ = (1) ಚಿನ್ನ, (2) ಬಿಳಿಯ ಬಣ್ಣ.

೯೩೪. ಕಳವಾಳಿ = ಭತ್ತದ ಪೈರುಗಳ ಸಮೂಹಂ. ಚೆಲ್ಲಂ = ವಿಲಾಸವನ್ನು. ಭ್ರಾಂತಿಮದಲಂಕಾರಂ.

೯೩೫. ಕಮ್ಮಂಗಳವೆ = ಸುವಾಸನೆಯಿಂದ ಕೂಡಿದ ಭತ್ತ. ಶ. ದ. ೧೬೬ನೆ ಪದ್ಯ ನೋಡು. ಕಟಕ್ಕನೆ = ಆಕಸ್ಮಿಕವಾಗಿ.

೯೩೬. ವಿಶ್ವತೋಮುಖಂ = ಈಶ್ವರಂ. ವಿಲಗಂ = ವೈಷಮ್ಯಂ.

೯೩೭. ದೇಸಿ = ವಿಲಾಸಂ. ನಲ್ವಣ್ಣಗಿನ್ನರಿಯುಂ = ಸೊಗಸಾದ ಬಣ್ಣವುಳ್ಳ ಕಿನ್ನರಿಯೆಂಬ ವಾದ್ಯ ವಿಶೇಷವನ್ನು. ಅರಲ್ವೆಂದರೊಳ್ = ಹೂವಿನ ಮಂಟಪದಲ್ಲಿ. ಪದ್ಮರಾಜಾಂಕಮಾಲೆಯು = ಪದ್ಮರಾಜ ಮುದ್ರಿಕೆಯುಳ್ಳ ಗಾನಮಾಲೆಯನ್ನು.

೯೩೮. ಹರಿದಂತದೊಳ್ = ದಿಗಂತ ಪ್ರದೇಶದಲ್ಲಿ.

೯೩೯. ಕಂಟಕಿಗಳ್ = (1) ಮುಳ್ಳುಳ್ಳವು, (2) ಲೋಕೋಪದ್ರವಕಾರಿಗಳು. ಅರ್ಥಾಂತರನ್ಯಾಸಾಲಂಕಾರ.

೯೪೦ ಕಂಪುಗುವ = ಸುವಾಸನೆಯನ್ನು ಹರಡುತ್ತಿರುವ. ಗುಡಿ = ಬಾವುಟ, ಧ್ವಜ.

೯೪೧. ಉಗ್ಗಡಣೆ = ಗಾನ ಮಾಡುವಾಗ ಉಗ್ಗಡಿಸುವಿಕೆ. ಪೂವಲಿಯ ಪುದುವಂ = ರಂಗವಲಿಯ ರಚನೆಯನ್ನು.

೯೪೨. ಗಿಳಿಯತೊಂಡುಬಂಡಿಂ ಬೆಟ್ಟಿತಾದ ನುಡಿಯಿಂ = ಗಿಣಿಮಾತುಗಳೆಂಬ ಬಣ್ಣಮಾತಿನಿಂದ ಪ್ರಬಲವಾದ ಮಾತಿನಿಂದ. ಬಗ್ಗಿಸುತೆ = ಕೂಗಾಡುತ್ತ, ಜರಬು ಮಾಡುತ್ತ.

೯೪೩. ಮಾಲತೀಮಾಧವೀಯಾನ್ವಿತದೆ = (1) ವಸಂತಕಾಲೀನವಾದ ಮಲ್ಲಿಗೆಯ ಪುಷ್ಪಗಳೊಡನೆ ಕೂಡಿಕೊಂಡಿರುವುದರಿಂದ, (2) ಭವಭೂತಿ ರಚಿತ ಮಾಲತೀಮಾಧವವೆಂಬ ಪ್ರಕರಣದೊಡನೆ ಕೂಡಿರುವುದರಿಂದ. ಯೋಗಿಕುಸುಮಾಂಜಲಿಯಿಂ = (1) ಸಮೃದ್ಧವಾದ ಪುಷ್ಪಾಂಜಲಿಯಿಂದ, (2) ಯೋಗಿ ಕುಸುಮಾಂಜಲಿ ಯೆಂಬ ಗ್ರಂಥದಿಂದ. ಇಂದ್ರಚಂದ್ರಾಂಕದಿಂ = (1) ಕುಟಜ ಮತ್ತು ಕಾಪಿಲ್ಲ ವೃಕ್ಷಗಳೆಂಬ ಭೂಷಣದಿಂದ, (2) ಇಂದ್ರ ಚಂದ್ರರೆಂಬ ವೈಯ್ಯಾಕರಣಿಗಳ ಗುರುತುಗಳಿಂದ. ಧ್ವನಿ = (1) ಶಬ್ದ, (2) ವ್ಯಂಗ್ಯಭೇದ. ಚಂಪಕೋತ್ಪಲವಿಶಾಲತ್ವದಿಂ = (1) ವಿಸ್ತಾರವಾದ ಸಂಪಗೆ ಮತ್ತು ನೈದಿಲೆ ಇವುಗಳಿಂದ, (2) ಚಂಪಕಮಾಲಾ, ಉತ್ಪಲಮಾಲಾ ವೃತ್ತ ಭೇದಗಳಿಂದ. ಶ್ರೀಹರ್ಷದಾಲಂಬದಿಂ = (1) ಸಂಪತ್ತು ಮತ್ತು ಸಂತೋಷ ಇವುಗಳ ಆಶ್ರಯದಿಂ

ದ, (2) ಶ್ರೀ ಹರ್ಷವೆಂಬ ಹೆಸರನ್ನು ಧರಿಸಿದ ಕವಿಯು ಆಲಂಬನದಿಂದ. ಆನಂದನಂ = ಮನಸ್ಸಿಗೆ ಸಂತೋಷವನ್ನುಂಟು ಮಾಡುವ. ಶ್ಲೇಷಾಲಂಕಾರಂ.

೯೪೪. ಪಚ್ಚಡಿಸಿ = ಹೊದೆದು, ಜೋಡಿಸಿ. ಹರಹಿಯಲ್ಲಿ = ವಿಸ್ತರಿಸಿದ ಹಾಸಿಕೆಯಲ್ಲಿ.

೯೪೬. ಹಿಕ್ಕಿ = ಬಿಡಿಸಿ. ಶ. ದ. ಧಾ. ಪಿಕ್ಕು—ವಿವರಣೆ. ಮಹಾಫಲಾಂಕರ್ಗೆ = ಸತ್ಕಾರ್ಯದಿಂದ ತಮ್ಮ ಗುಣವನ್ನು ತೋರಿಸಿಕೊಳ್ಳುವರಿಗೆ. "ಬ್ರುವತೇಹಿಫಲೇನಸಾಧವೋನತುಕಂಠೇನನಿಜೋಪಯೋಗಿತಾಂ" ನೈಷಧಚರಿತ್ರ. ಅರ್ಥಾಂತರನ್ಯಾಸಾಲಂಕಾರಂ.

೯೪೭. ಇಟ್ಟಳ = ಸನ್ದಣಿ, ಒಗ್ಗು. ಪಕ್ಕರಕ್ಕೆ = ಪಕ್ಷರಕ್ಷೆ. (ತ್ಭ)

೯೪೮. ಬಿಂಕಮಂಬೀರೆ = ವಿಲಾಸವನ್ನು ಪ್ರಕಟಪಡಿಸುತ್ತಿರಲು. ಮಿಳಿರ್ವ = ಜೋಲಾಡುತ್ತಿರುವ. ಬಿಸದ = ವಿಶದ. ಅಲರ್ವುಡಿ = ಪುಷ್ಪಪರಾಗಂ. ಮೊಳೆವ = ಧಾ. ಮೊಳೆ—ಪ್ರರೋಹಕ್ರಿಯಾಯಾಂ.

೯೪೯. ಫಲಪದಂಗಳನಱಿದಮುಕ್ತಕಾವಳಿಗಿದೇಂ ಚೋದ್ಯಮೋ = 1 ಪಾಪಪುಣ್ಯ ಫಲವಿಲ್ಲದಿರುವ ಮುಕ್ತರಿಗೆ ಇದೇನಾಶ್ಚರ್ಯವೆ ಎಂದು ಭಾವವು. (2) ಹಣ್ಣು ಬಿಡದಿರುವ ಮುತ್ತುಗದ ಮರಕ್ಕೆ ಇದೇನಾಶ್ಚರ್ಯವೆ? ಈ ವರ್ಣನೆಯ ಔಚಿತ್ಯವು ಬಹು ಚೆನ್ನಾಗಿರುವುದು.

೯೫೦. ರಿಕ್ಕಟಮೆ = ಸುಮ್ಮಗೆ. ಭ್ರಾಂತಿಮದಲಂಕಾರಂ.

೯೫೧. ಬಾಯ್ದೆರೆ = ತುಟಿ. ಬಳ್ವಿತ್ತು = ಬಳ್ಳಿಯ ಬೀಜ.

---

## 43. ಆತ್ಮಸ್ವರೂಪ.

೯೫೨. ಗರಟಿಗೆಗೆ = ಗಸ್ತಿಗೆ.

೯೫೪. ವಶ್ಯದೀಪವು ನಿಧಿಯನ್ನು ಕಂಡ ಕ್ಷಣವೇ ಕೆಳಕ್ಕೆ ಬಗ್ಗುವುದೆಂಬ ಪ್ರತೀತಿಯುಂಟು.

೯೫೫. ಆಂದೆ = ಹಂದಿಗೀರ.

೯೫೬. ಆಸನ್ನಭವ್ಯಂ = ಮೋಕ್ಷವನ್ನೈದುವುದಕ್ಕೆ ಸಮೀಪಿಸಿದ ಜೀವಂ.

೯೫೭. ಭೂತಚತುಷ್ಟಾವಯವದಿಂ = ಪೃಥಿವಿ, ಅಪ್ಪು, ತೇಜಸ್ಸು, ವಾಯು, ಇವುಗಳ ಸಂಘಾತದಿಂದುಂಟಾದ ಅವಯವದಿಂದ.

೯೫೯. ಅಡಗು = ಮಾಂಸ.

೯೬೦. ಕುದಿರೊಳ್ = ಹಗೆವು, ಗುಂಡಿಯಲ್ಲಿ. (ತ್ಸ) ಕೃದರ. ಸೊದೆ = ಸುಣ್ಣ, ಗಾರೆ.

೯೬೧. ತೊಲೆ = ತ್ರಾಸು.

೯೬೬. ಏದೊರೆಯಂ = ಎಂಥವನು.

೯೬೭. ನಿಃಪ್ರದೇಶಿಕಂ = ದೇಶಾತೀತನಾದ, ನಿರಂಜನ.

೯೭೦. ಅಲವರಲಾಗದು = ಆಸೆಪಡಬಾರದು. ಪರತ್ರೆಯಂ = ಪರಲೋಕವನ್ನು

---

## 44. ಧರ್ಮ ಪ್ರಶಂಸೆ.

೯೭೧. ಬಡ್ಡಣಂ = ರಾಶಿ.

೯೭೨. ಕಿಕ್ಕಿಱಿಗಿಱಿದು = ಗುಂಪಾಗಿ ಸೇರಿ.

೯೭೪. ಬಡೆ = ಬಡಿದು ಹಾಕು.

೯೭೫. ಅಱುಪನ = ನಾಶ ಮಾಡುವನ. ಅಱುಪುವ = ಅಪೇಕ್ಷಿಸುವ.

೯೭೬. ಬಾರಿಪರ್ = ತಡೆಯುವರು ? ಅಡ್ಡಿ ಮಾಡುವರು ? ಆನೆಗೋಲ = ದೊಡ್ಡ ಕೋಲೆ.

೯೭೭. ಪಡೆವಿನಮಿರ್ಪನಲ್ಲನು = ಪ್ರಾಪ್ತವಾಗತಕ್ಕ ಬಳ್ಳಿಯದನ್ನು. ಗೋಸಣೆ = ಘೋಷಣೆ (ತ್ಸ).

೯೭೮. ಮುತ್ತಂ = ಮುದುಕನು.

೯೭೯. ಪಂದೆ = ಹೇಡಿ. " ಬೞ್ದುಮಾಣೆಂಗುವೊ " ಎಂದು ಪಾಠಾಂತರ. ಮುಟ್ಟು = ಪದಾರ್ಥ.

೯೮೦. ಅಳುರದೆ—ವ್ಯಾಪಿಸದೆ ?

೯೮೨. ಲಾವಗೆ = ಹರಿತವಾಗಿ ಮುಳ್ಳಾವುಗೆಯಂತಿರುವ ಮೊಟ್ಟುವ ಸಾಧನ

---

## 45. ದೇಹಾನಿತ್ಯತೆ.

೯೮೪. ಜಲಗಂ = ಚಿನ್ನದ ಕಣಗಳು. ಉ. ಬಸವಪುರಾಣ " ಎಮಗೆ ತಾನಚ್ಚರಿಯ ನಿಧಿಯಿರಲು ಜಲಗಂ ಕರ್ಚುವರೆ."

೯೮೫. ಪವಣೊಳವೆ = ಮಿತಿಯುಂಟೆ ?

೯೯೧. ಆಜವಂಜವಸ್ಥಿತಿಗೆ = (?)

೯೯೬. ಪುದುವಾಳ್ವೆ = ಸೇರಿ ಸುಖವಾಗಿ ಬಾಳುವೆನು.

೯೯೮. ಆವರ್ಗಂ = ಆಧಾರಭೂತವಾದುದು.

೧೦೦೦. ಪಾಟಿಸಿದ = ವಿಸ್ತಾರವಾದ.

೧೦೦೧. ನೆರೆಯರಿವನೆರೆಯೆ = ಸಂಪೂರ್ಣಜ್ಞಾನವೆ. ಸಮಸಂದು = ಪ್ರಸಿದ್ಧವಾಗಿ.

೧೦೦೨. ಅಳ್ಳಿಯೊಳ್ = ಗಾಯದಿಂದ.

೧೦೦೩. ?

೧೦೧೨. ಅಳಿಪುವೆತ್ತು = ಅತ್ಯಂತ ಆಶೆಪಟ್ಟು. ಅಮಳಿ = ಸ್ತ್ರೀಯು.

೧೦೧೪. ಸತ್ತ್ವಗಂ = ಸತ್ವಕಂ, ಬಲ.

೧೦೧೬. ಚಿಳಿಚಿಮ = ಒಂದು ಬಗೆಯ ಮೀನು. ಲಟಕಟಿಸಿ = ಉದ್ವೇಗದಿಂದ ಚಲಿಸಿ. ತತ್ತಟಂ = ಆ ತೀರವನ್ನು. ಚಾಂಚಕಂ = ಗೊಂಚಲು. ಕುಹಳ = ವೀಳೆಯದೆಲೆಯ ಹಂಬು. ಅಚ್ಚಿಗೊಳಿಸುವ = ಕಕ್ಕುಳಿಸುವ. ಚೆಮ್ಮಾಗು = ಕೆಂಪಾದ ಮಾಗು. ಗುಳುಚ್ಚ = ಗರಿಯ ತುದಿ. ಪರಿತರ್ಪ = ಹರಿದು ಬರುತ್ತಿರುವ.